ಪುಸ್ತಕ ಪ್ರಪಂಚ

ಸಂಪುಟ ೫೧ ಆಗಸ್ಟ್ ೨೦೦೧ ಸಂಚಿಕೆ ೧೦



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಪುಸ್ತಕ ಪ್ರಪಂಚ
ಮಾಸಿಕ

ಪರಿವಿಡಿ

ಮುಖಚಿತ್ರ : 'ಸಿಸು' ಸಂಗಮೇಶ

PUSTAKA PRAPANCHA: Monthly

Published and printed by Karnataka State Adult Education Council,Mysore-6,
Price : Rupees Ten

ಬಿಡಿಪ್ರತಿ : ರೂ.೧೦

ವಾರ್ಷಿಕ ಚಂದಾ : ರೂ, ೧೦೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

ಪ್ರಕಟಣೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಚಂದಾದಾರರಲ್ಲಿ ಹಾಗೂ ಓದುಗರಲ್ಲಿ ಕ್ಷಮಾಯಾಚನೆ

ಸಂಪಾದನಾ ಕಚೇರಿಯ ನಿರ್ಲಕ್ಷ್ಯದಿಂದಾಗಿ, ಜುಲೈ ಸಂಚಿಕೆಯಲ್ಲಿ ಅಚಾತುರ್ಯವೊಂದು ನುಸುಳಿದೆ. ೨೦೦೦ನೆಯ ಇಸವಿ ಅಕ್ಟೋಬರ್ ತಿಂಗಳಲ್ಲಿ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಫರ್ಗುಸ್ ಬೋರ್ಡೆವಿಚ್ ಅವರ 'ದ ಕಂಟ್ರಿ ರನ್ ಬೈ ಕಿಡ್ಸ್' ಎಂಬ ಲೇಖನದ ಎರಡು ಭಾಷಾಂತರಗಳು 'ಮಕ್ಕಳ ರಾಜ್ಯ' (ಪುಟ ೩೫-೩೯) ಮತ್ತು 'ಹೊಸನಾಡ ಕಟ್ಟುತ್ತಿರುವ ಜವ್ವನಿಗರು' (ಪುಟ ೭೧-೭೫) ಎಂಬ ಹೆಸರಿನಲ್ಲಿ ಪ್ರಕಟಗೊಂಡಿವೆ. ಸಂಪಾದಕ ಮಂಡಲಿಯ ಮುಂದೆ ಲೇಖನಗಳನ್ನು ತರುವ ಮುನ್ನ ಪರಿಶೀಲನೆ ನಡೆಸಿ, ಜರಡಿ ಹಿಡಿಯಬೇಕಾದ್ದು ಕಚೇರಿ ಸಿಬ್ಬಂದಿಯ ಕರ್ತವ್ಯ.

ಈ ಪ್ರಮಾದದ ಅಂತಿಮ ಹೊಣೆಗಾರಿಕೆ ಪ್ರಧಾನ ಸಂಪಾದಕರಿಗೆ ಮತ್ತು ಸಂಪಾದಕ ಮಂಡಲಿಗೆ ಸೇರಿದ್ದು. ಆದ್ದರಿಂದ ನಾನು ಪ್ರಧಾನ ಸಂಪಾದಕನಾಗಿ ನನ್ನ ಮತ್ತು ಮಂಡಲಿಯ ಪರವಾಗಿ ಚಂದಾದಾರರ ಮತ್ತು ಓದುಗರ ಕ್ಷಮೆ ಯಾಚಿಸಬೇಕಾದ್ದು ನನ್ನ ಕರ್ತವ್ಯವೆಂದು ಈ ಮೂಲಕ ತಿಳಿಸಬಯಸುತ್ತೇನೆ.

ಒಂದೇ ಮೂಲದ ಎರಡು ಭಾಷಾಂತರಗಳ ತೌಲನಿಕ ಅಧ್ಯಯನಕ್ಕೆ ಈ ಲೇಖನದ್ವಯಗಳು ಉಪಯುಕ್ತವಾದಾವೆಂದು ನಾನು ನಂಬಿದ್ದೇನೆ. ಇದರಿಂದಾಗಿ ನಮ್ಮ ತಪ್ಪು ಸಮರ್ಥನೀಯವೆಂದು ಖಂಡಿತವಾಗಿಯೂ ನಾನು ತಿಳಿದಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತೇನೆ. ಇನ್ನು ಮುಂದೆ ಇಂಥ ಪ್ರಮಾದ ಸಂಭವಿಸದಂತೆ ಕಚೇರಿಯ ಸಿಬ್ಬಂದಿ ಹಾಗೂ ಸಂಪಾದಕ ಮಂಡಲಿ ಎಚ್ಚರಿಕೆ ವಹಿಸುತ್ತದೆಂದು ಭರವಸೆ ನೀಡುತ್ತೇನೆ.

ಪ್ರೌಢ ಶಿಕ್ಷಣ - ಒಂದು ಚಿಂತನೆ

ಮೂರ್‍ನಾಲ್ಕು ವರ್ಷಗಳ ಹಿಂದೆ ಆಗಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಶ್ರೀ ತ್ರಿಪಾಠಿಯವರನ್ನು ಆಕಸ್ಮಿಕವಾಗಿ ಭೇಟಿಯಾಗುವ ಸಂದರ್ಭವೊದಗಿತ್ತು. ಎಲ್ಲಿ ಹೋದರೂ, ಯಾರನ್ನು ಸಂಧಿಸಿದರೂ, ಶಿಕ್ಷಣದ ಗುಣಮಟ್ಟವನ್ನೂ, ಸಮಸ್ಯೆಗಳನ್ನೂ ಕುರಿತು ಚರ್ಚಿಸುವ ಕುತೂಹಲ ನನ್ನದು. ಪ್ರೌಢ ಶಿಕ್ಷಣ ಗುಣಮಟ್ಟದ ಕುಸಿತದ ಬಗೆಗಿನ ನನ್ನ ಅನುಭವಗಳನ್ನು ಅವರ ಮುಂದಿಟ್ಟೆ, ಆಗವರು ಹೇಳಿದರು : 'ಆ ವಿಷಯ ನನಗೂ ಗೊತ್ತು. ಇದೆತಾನೆ ನಿರ್ದೇಶಕರ ಸಭೆಯಿಂದ ಬರುತ್ತಿದ್ದೇನೆ. ರಾಜ್ಯದ ನಾಲ್ಕೈದು ಪ್ರೌಢಶಾಲೆಗಳ ಎಸ್ಸೆಸ್ಸೆಲ್ಸಿ ಫಲಿತಾಂಶ ಸೊನ್ನೆ. ಅದಕ್ಕೆ ಮುಖ್ಯಕಾರಣ ಉಪಾಧ್ಯಾಯರು. ಅವರ ವಾರ್ಷಿಕ ಬಡ್ತಿಯನ್ನು ಒಂದು ವರ್ಷ ತಾತ್ಕಾಲಿಕವಾಗಿ ತಡೆಹಿಡಿಯೋಣವೆಂದು ನಾನು ಸೂಚಿಸಿದೆ. ನಿರ್ದೇಶಕರೊಬ್ಬರೂ ನನ್ನ ಸಲಹೆಯನ್ನೊಪ್ಪಿಕೊಳ್ಳಲಿಲ್ಲ' ಎಂದು. ಆಗ ನನಗರಿವಾಯಿತು, ಶಿಕ್ಷಣ ಗುಣಮಟ್ಟದ ಕುಸಿತದಲ್ಲಿ ಅಧಿಕಾರಿಗಳೂ ಭಾಗಿಯಾಗಿದ್ದಾರೆಂದು.

ಚಾಮರಾಜನಗರ ತಾಲ್ಲೂಕಿನ ನವಿಲೂರು ಸರ್ಕಾರೀ ಪ್ರೌಢಶಾಲೆಯ ಈ ಸಲದ (೨೦೦೧) ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿಯೂ ಸೊನ್ನೆ ಫಲಿತಾಂಶ. 'ಶಿಕ್ಷಕರ ಬೇಜವಾಬ್ದಾರಿಯಿಂದಾಗಿ ಶಿಕ್ಷಣದ ಗುಣಮಟ್ಟ ನಶಿಸಿ ಹೋಗುತ್ತಿರುವುದಕ್ಕೆ ಇದು ಹಿಡಿದ ಕೈಗನ್ನಡಿಯಾಗಿದೆ. ಅಲ್ಲಿಯ ಎಂಟು ಮಂದಿ ವಿದ್ಯಾರ್ಥಿಗಳಿಗೆ ಒಬ್ಬ ಮುಖ್ಯೋಪಾಧ್ಯಾಯ, ನಾಲ್ಕು ಮಂದಿ ಶಿಕ್ಷಕರಿದ್ದರು.

ಶಿಕ್ಷಕರು ಶಾಲೆಗೆ ಸಮಯಕ್ಕೆ ಸರಿಯಾಗಿ ಬರುವುದಿಲ್ಲ, ಹಾಗೂ ಸಮಯಕ್ಕೆ ಸರಿಯಾಗಿ ಶಾಲೆ ಬಿಟ್ಟು ಮನೆಗೆ ಹೋಗುವುದಿಲ್ಲ. ಪಾಠ ಪ್ರವಚನ ಸರಿಯಾಗಿ ಮಾಡುವುದಿಲ್ಲದಿರುವುದೇ ಶಾಲೆಗೆ 0 ಫಲಿತಾಂಶ ಬರಲು ಕಾರಣ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಸರ್ಕಾರ ತಕ್ಷಣವೇ ಶಿಕ್ಷಕರ ವಿರುದ್ಧ ಅಗತ್ಯಕ್ರಮ ಕೈಗೊಳ್ಳದಿದ್ದರೆ ಶಾಲೆಗೆ ಬೀಗ ಜಡಿಯುವುದಾಗಿ ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ' ಎಂದು ೨೮.೬.೨೦೦೧ನೆಯ ದಿನಾಂಕದ ಪ್ರಜಾವಾಣಿ ಪತ್ರಿಕೆಯಲ್ಲಿ ವರದಿಯಾಗಿದೆ. ಇದು ಅತ್ಯಂತ ಶೋಚನೀಯ ಸಂಗತಿಯೂ ಹೌದು, ಧೈರ್ಯಾವಹ ವಿಚಾರವೂ ಹೌದು. ಉಪಾಧ್ಯಾಯರ ಕರ್ತವ್ಯಲೋಪದಿಂದಾಗಿ ಶೋಚನೀಯತೆ, ಗ್ರಾಮಸ್ಥರ ಪ್ರಜ್ಞಾಪ್ರಬುದ್ಧತೆಗಾಗಿ ಧೈರ್ಯ. ಶಿಕ್ಷಣ ಕ್ಷೇತ್ರ ಕುಲಗೆಟ್ಟಿದೆಯೆಂಬುದಕ್ಕೆ ಅನ್ಯಸಾಕ್ಷಿ ಅನಾವಶ್ಯಕ. ಇದಕ್ಕೆ ಅಧಿಕಾರಿಗಳು ಉಪಾಧ್ಯಾಯರಿಬ್ಬರ ಗುಂಪೂ ಹೊಣೆ. ಉಪಾಧ್ಯಾಯರ ಅವಜ್ಞೆ, ಕರ್ತವ್ಯಲೋಪ ಮತ್ತು ಮೋಸ ಅರ್ಥವಾಗಬೇಕಾದರೆ ದೇಜಗೌ ಸಂಪಾದಿಸಿರುವ 'ಮಂಡ್ಯ ಜಿಲ್ಲೆಯ ಸಮಗ್ರ ಶಿಕ್ಷಣಾಭಿವೃದ್ಧಿ ಸಮೀಕ್ಷೆ' ಯನ್ನು ಗಮನಿಸಬಹುದು.

ಶಿಕ್ಷಣಕ್ಷೇತ್ರ ಹದಗೆಟ್ಟಿದೆಯೆಂಬ ಸಂಗತಿ ಸರ್ಕಾರಕ್ಕೆ ಗೊತ್ತಿದೆ. ಆ ಬಗ್ಗೆ ವಿದ್ಯಾಸಚಿವರು ಕಾಳಜಿ ವಹಿಸಿ, ಹಲವು ಬದಲಾವಣೆಗಳನ್ನು ಕಾರ್ಯಗತಗೊಳಿಸುತ್ತಿರುವುದೂ ನಿಜವೇ. ಆದರೆ ಅವೆಲ್ಲ ಮೇಲ್ಮೈಯ್ಯ, ಹೊರಗೋಡೆಗಳ ಬಣ್ಣಗಾರಿಕೆ ಸಾರಣೆ ಕಾರಣೆಗಳಾಗಿವೆಯೇ ಹೊರತು, ಒಳಗಿನ ಕೊಳಕನ್ನು ಶುದ್ಧಗೊಳಿಸುವ, ಗುಣಮಟ್ಟವನ್ನು ಹೆಚ್ಚಿಸುವ ಹವಣುಗಳಾಗಿಲ್ಲ. ಪ್ರಾಯಶಃ ಅವರಿಗೆ ಸಲಹೆಕೊಡುವ ಅನ್ಯವಿಷಯ ತಜ್ಞರಿಗೆ ಶಿಕ್ಷಣಕ್ಷೇತ್ರದ ಸಮಸ್ಯೆಗಳ ಅರಿವಿರಲಾರದು.

ಉತ್ತಮ ಶಿಕ್ಷಣಕ್ಕೆ ಉತ್ತಮ ಪರಿಸರ ಅಗತ್ಯ. ಇಂಡಿಯಾದಂಥ ಸ್ವಾತಂತ್ರ್ಯಾನಂತರದ ಹೊಸರಾಷ್ಟ್ರದಲ್ಲಿ ಹೊಸ ಪರಿಸರ ಸೃಷ್ಟಿಯಾಗಬೇಕಾಗಿದೆ. ಸಾವಿರಾರು ವರ್ಷಗಳಿಂದ ನಾಡಿನ ಶೇಕಡ ೯೫ ಭಾಗ ಜನರಿಗೆ ವಿದ್ಯೆ ನಿಷೇಧವಾಗಿತ್ತು. ನಿರಕ್ಷರತೆ ಅಜ್ಞಾನಗಳ ಮಲಿನ ವಾತಾವರಣದಲ್ಲಿ ಬುದ್ಧಿಯ ವಿಕಾಸಕ್ಕಾಗಲಿ ಜ್ಞಾನ ಸಂಸ್ಕೃತಿಗಾಗಲಿ ಅವಕಾಶವುಂಟೆ? ಅವುಗಳಿಗೆಡೆಯಿರದ ದೇಶ ಅಂಧಕಾರಾವೃತವಾಗಿರುತ್ತದೆ. ಪರಕೀಯರ ಆಕ್ರಮಣಕ್ಕೆ ಇಂಡಿಯಾ ಪಕ್ಕಾದದ್ದೇ ಹೀಗೆ.

ಶಿಶುವಿಹಾರಗಳ ಮೂಲಕ ನಿರಕ್ಷರ ಕುಟುಂಬಗಳ ಹಾಗೂ ಹಳ್ಳಿಗಾಡಿನ ಮೂರು ವರ್ಷದ ಮಕ್ಕಳ ಓದಿಗೆ ಹಾಗೂ ಜ್ಞಾನಾರ್ಜನೆಗೆ ಅನುಕೂಲವಾದ ಪರಿಸರವನ್ನು ನಿರ್ಮಿಸಬೇಕಾದ್ದು ಸರ್ಕಾರದ ಮತ್ತು ಶ್ರೀಮಂತ ಸಮಾಜದ ಕರ್ತವ್ಯ. ಕ್ರೀಡೆಗಳ ಮುಖಾಂತರ ಭಾಷೆ ಮತ್ತು ಸರಳ ಲೆಕ್ಕಗಳನ್ನು ಸುಲಭವಾಗಿ ಕಲಿಸಬಹುದು. ಮಾಧ್ಯಮಿಕ ಶಿಕ್ಷಣ ಮುಗಿಯುವ ಹೊತ್ತಿಗೆ ಮಕ್ಕಳು ಮಾತೃಭಾಷೆಯಲ್ಲಿ ನಿರರ್ಗಳವಾಗಿ ಓದುವ, ಬರೆಯುವ, ಚರ್ಚೆಯಲ್ಲಿ ಭಾಗವಹಿಸುವ ಸಾಮರ್ಥ್ಯವನ್ನು ಪಡೆಯುವಂತಾಗಬೇಕು. ಒಂದು ಭಾಷೆಯಲ್ಲಿ ನಿಪುಣರಾದ ಮಕ್ಕಳಿಗೆ ಕುಶಲನಾದ ಉಪಾಧ್ಯಾಯ ಸಾದೃಶ್ಯಾತ್ಮಕವಾದ ವಿಶ್ಲೇಷಣೆ ನಿರೂಪಣೆಗಳ ಮೂಲಕ ಬೇರೆ ಭಾಷೆಗಳನ್ನು ಕಲಿಸಲು ಸಾಧ್ಯವಾಗುತ್ತದೆ. ಅವುಗಳ ಜತೆಗೆ ಗಣಿತ, ನಾಡಿನ ಸಂಸ್ಕೃತಿ, ಸರ್ವಧರ್ಮ ಪರಿಚಯ, ಇತಿಹಾಸ, ಸುತ್ತಮುತ್ತಣ ಪರಿಸರ ಮೊದಲಾದ ವಿಷಯಗಳನ್ನು ಕಲಿಸಬೇಕಾಗುತ್ತದೆ.

ನಾಡಿನ ಪ್ರತಿಯೊಬ್ಬ ಬಾಲಕನೂ ಕೊನೆಯಪಕ್ಷ ಎಸ್ಸೆಸ್ಸೆಲ್ಸಿ ಪರೀಕ್ಷೆಯನ್ನು ಮುಗಿಸು ವಂತಾಗಬೇಕು. ಆ ಹೊತ್ತಿಗವನು ಅಭಿವ್ಯಕ್ತಿ ಸಾಮರ್ಥ್ಯವನ್ನು, ಆಲೋಚನಾ ಶಕ್ತಿಯನ್ನು,

ಲೋಕಾನುಭವವನ್ನು, ಜ್ಞಾನಾಸಕ್ತಿಯನ್ನು, ಸ್ವಾವಲಂಬನ ಸತ್ತ್ವವನ್ನು, ಯುಕ್ತಿಯನ್ನು ಪಡೆಯುವಂತಾಗಬೇಕು. ಆಗಾಗ್ಗೆ ಆ ದರ್ಜೆಯ ಪಠ್ಯಕ್ರಮವನ್ನು ನವೀಕರಿಸಬೇಕು; ಅತ್ಯಾಧುನಿಕ ತಂತ್ರಜ್ಞಾನವನ್ನು ಕಲಿಸಬೇಕು. ಆರೋಗ್ಯ ಪೂರ್ಣ ಮನಸ್ಸು ಮತ್ತು ಶರೀರ ಮಾತ್ರ ಈ ಎಲ್ಲ ತೇಜಶ್ಶಕ್ತಿಗಳನ್ನು ಪಡೆಯಲು ಮತ್ತು ಧಾರಣೆ ಮಾಡಿಕೊಳ್ಳಲು ಸಮರ್ಥವಾಗುತ್ತವೆಂಬುದನ್ನು ಪ್ರಾಜ್ಞರು ತಿಳಿಯಬೇಕಾಗಿದೆ.

ಸ್ವಜನಶೀಲತೆ ಸೃಷ್ಟಿ ನಿಯಮ; ಆ ಶಕ್ತಿ ಪ್ರತಿಯೊಂದು ಮಗುವಿನಲ್ಲಿಯೂ ಇದೆ. ಶಾಲೆಗಳು ವಿದ್ಯೆಯ ಅಂಗಡಿಗಳಾಗಬಾರದು; ಉಪಾಧ್ಯಾಯರು ಗಿಣಿಗಳಾಗಬಾರದು. ಬೋಧನೆ ಸೃಜನಾತ್ಮಕವಾಗಿರಬೇಕು. ಶಾಲೆಗಳಲ್ಲಿ ವಿದ್ಯಾರ್ಥಿಗಳೇ ಕೇಂದ್ರ ವ್ಯಕ್ತಿಗಳಾಗಬೇಕು. ಅವರಿಗಾಗಿ ಆಡಳಿತಗಾರರು ಮತ್ತು ಉಪಾಧ್ಯಾಯರಿದ್ದಾರೆಂಬುದನ್ನು ಎಲ್ಲರೂ ಗ್ರಹಿಸಬೇಕು.

ಎಸ್ಸೆಸ್ಸೆಲ್ಸಿ, ಹೆಚ್ಚೆಂದರೆ ಪಿಯುಸಿ ಒಬ್ಬ ಪ್ರಜೆಯ ಅಂತಿಮ ವಿದ್ಯಾಘಟ್ಟವೂ ಆಗಬೇಕು; ಉನ್ನತ ಶಿಕ್ಷಣಕ್ಕೆ ಆಧಾರ ಭೂತವಾದ ಸೋಪಾನವೂ ಆಗಬೇಕು. ಈ ದೃಷ್ಟಿಯಿಂದ ಅವುಗಳ ಪಠ್ಯಕ್ರಮವನ್ನು ರೂಪಿಸಬೇಕು, ಗುಣಮಟ್ಟವನ್ನು ನಿಷ್ಕರ್ಷಿಸಿ, ಕಾಯ್ದುಕೊಳ್ಳಬೇಕು. ಈ ಗುಣಮಟ್ಟ ಮುಂದುವರಿದ ರಾಷ್ಟ್ರಗಳಲ್ಲಿ ಚಾಲ್ತಿಯಲ್ಲಿರುವ ಗುಣಮಟ್ಟಕ್ಕಿಂತ ಕಡಮೆಯಿರಬಾರದು. ಈ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕಾದವರು ಮುಖ್ಯವಾಗಿ ಉಪಾಧ್ಯಾಯರು ಮತ್ತು ಅಧಿಕಾರಿಗಳು. ದೇಶಾಭಿಮಾನ, ನೈತಿಕಶಿಸ್ತು, ಬೌದ್ಧಿಕ ಸಾಮರ್ಥ್ಯ, ನಿರಂತರ ಜ್ಞಾನ ಕುತೂಹಲ, ತಪಸ್ಸು, ಶಿಷ್ಯವಾತ್ಸಲ್ಯ, ಕರ್ತವ್ಯಪ್ರಜ್ಞೆ, ಈ ಗುಣಗಳಿಗೆ ಆಗರವಾಗಿರುವ ಉಪಾಧ್ಯಾಯರಿಂದ ಗುಣಮಟ್ಟದ ರಕ್ಷಣೆ ಸಾಧ್ಯ. ಇಂದಿನ ದಿನಗಳಲ್ಲಿ ಅಂಥವರು ಶೇಕಡ ೨೫ ಮಂದಿ ಸಿಕ್ಕಿದರೆ ಸಾಕು, ಸಮಾಜ ಹೆಮ್ಮೆಪಟ್ಟುಕೊಳ್ಳಬಹುದು.

ನನಗೆ ನಿಕಟ ಸಂಪರ್ಕವಿರುವ ಒಂದೆರಡು ಶಾಲೆಗಳ ಪರಿಸ್ಥಿತಿಯನ್ನು ಗಮನಿಸಿದ್ದಾದರೆ, ನಮ್ಮ ಶಿಕ್ಷಣ ಕ್ಷೇತ್ರದ ನ್ಯೂನತೆಗಳ ಗಂಭೀರ ಸ್ವರೂಪ ಮನವರಿಕೆಯಾದೀತು. ಸಾಮಾನ್ಯವಾಗಿ ಅಲ್ಲಿಯ ವಿದ್ಯಾರ್ಥಿಗಳು ಹಿಂದುಳಿದ ಮನೆಗಳಿಂದ ಬಂದವರು; ನಿರಕ್ಷರಿಗಳ ಮಕ್ಕಳು. ಅವರು ಬೆಳೆದ ಪರಿಸರ ಬೌದ್ಧಿಕ ಪ್ರಗತಿಗೆ ಅನುಕೂಲಕರವಾದದ್ದಲ್ಲ. ಪ್ರಾಥಮಿಕ ಶಾಲೆಯಲ್ಲಿ ಅವರಿಗೆ ಯೋಗ್ಯ ಶಿಕ್ಷಣ ದೊರೆತಿಲ್ಲ. ಕನ್ನಡ ವರ್ಣಮಾಲೆಯಾಗಲಿ, ಕಾಗುಣಿತವಾಗಲಿ, ಮಗ್ಗಿಯಾಗಲಿ ಅವರಿಗೆ ಗೊತ್ತಿಲ್ಲ. ಹತ್ತನೆಯ ತರಗತಿಯ ವಿದ್ಯಾರ್ಥಿಗಳಿಗೆ ಮೂಗು, ಕಿವಿ, ಹಲ್ಲು ಮೊದಲುಗೊಂಡು ಶರೀರದ ಅಂಗಾಂಗಗಳ ಇಂಗ್ಲಿಷ್ ಹೆಸರು ಗೊತ್ತಿಲ್ಲ. ಕಿಟಕಿ ಬಾಗಿಲು ಕುರ್ಚಿಗಳ ಹೆಸರು ಗೊತ್ತಿಲ್ಲ. ಶಾಲೆಯ ಆವರಣದಲ್ಲಿರುವ ಕೆಲವು ಗಿಡಮರಗಳ ಕನ್ನಡದ ಹೆಸರು ಸಹ ಗೊತ್ತಿಲ್ಲ, ಕರ್ನಾಟಕದ ಎಲ್ಲ ಜಿಲ್ಲೆಗಳ ಹೆಸರಾಗಲಿ, ಅವುಗಳ ಮುಖ್ಯ ಆಡಳಿತ ಕೇಂದ್ರಗಳಾಗಲಿ ಗೊತ್ತಿಲ್ಲ. ೧೩×೮ ಎಷ್ಟೆಂದರೆ ಅವರಿಗೆ ಬರದು. ಇಂಥ ವಿದ್ಯಾರ್ಥಿಗಳು ಮುಂದೆ ಕಂಪ್ಯೂಟರ್ ಯುಗದ ಸವಾಲುಗಳನ್ನೆದುರಿಸುವುದುಂಟೆ? ಇಷ್ಟಕ್ಕೆಲ್ಲ ಉಪಾಧ್ಯಾಯರ ಮತ್ತು ಮುಖ್ಯೋಪಾಧ್ಯಾಯರ ಅಶಿಸ್ತು, ಕರ್ತವ್ಯಚ್ಯುತಿ, ಅಲ್ಪಜ್ಞಾನ, ಬುದ್ಧಿಮಾಂದ್ಯ, ನಿರ್ಲಕ್ಷ್ಯಾದಿ ದೌರ್ಬಲ್ಯಗಳೇ ಕಾರಣವೆಂಬುದರಲ್ಲಿ ನನಗೆ ಸ್ವಲ್ಪವೂ ಸಂದೇಹವಿಲ್ಲ. ಇವರು ನಿಜವಾಗಿಯೂ ಬಿಎಡ್ ಪಾಸುಮಾಡಿದ್ದಾರೆಯೆ ಎಂಬ ಅನುಮಾನವೂ ಬರುತ್ತದೆ. ಕೆಲವು ಕನ್ನಡ ಉಪಾಧ್ಯಾಯರಿಗೆ ಕಾಗುಣಿತದ ಜ್ಞಾನವೂ ಇದ್ದಂತಿಲ್ಲ. ಜ್ಯೇಷ್ಠ ಎನ್ನುವುದನ್ನು ಜೇಷ್ಠ ಎಂದು ಬರೆಯುತ್ತಾರೆ. ಉಚ್ಚ

ಉಚ್ಚಾರಗಳ ಒತ್ತಕ್ಷರಗಳಿಗೆ ಮಹಾಪ್ರಾಣ ರೂಪಗಳನ್ನು ಬಳಸುತ್ತಾರೆ. ಬೌದ್ಧಿಕವಾಗಿ ತುಂಬ ಹಿಂದುಳಿದ ಮಕ್ಕಳನ್ನು ಪ್ರತಿಯೊಬ್ಬ ಉಪಾಧ್ಯಾಯರು ಹಂಚಿಕೊಂಡು, ಸ್ವಂತ ಮಕ್ಕಳಿಗಿಂತ ಹೆಚ್ಚಾಗಿ ಪ್ರೀತಿಸಿ, ಅವರ ಹಿಂದುಳಿಕೆಗೆ ಕಾರಣಗಳನ್ನರಿತುಕೊಂಡು, ಅವರಿಗೆ ವಿಶೇಷ ತರಬೇತಿ ನೀಡಬೇಕೆಂಬ ನಿಯಮವನ್ನು ಕಡ್ಡಾಯಗೊಳಿಸಬೇಕಾಗಿದೆ. ವೀಡಿಯೋ ಬಳಕೆಯ ಮೂಲಕ ಎಂಥ ಬುದ್ಧಿಮಂದರನ್ನೂ ಚುರುಕುಗೊಳಿಸಬಹುದಾಗಿದೆ. ಈ ಶಾಲೆಗಳಲ್ಲಿರುವ ವ್ಯಾಯಾಮ ಶಿಕ್ಷಕರ ಬಗ್ಗೆ ಹೇಳಿದಷ್ಟೂ ಕಡಮೆಯೇ. ಅವರ ಕ್ರೀಡಾಜ್ಞಾನದ ಮಟ್ಟವನ್ನು ಗಮನಿಸಿದಾಗ, ಪಠ್ಯಕ್ರಮದಿಂದ ಕ್ರೀಡೆಗಳನ್ನು ಕೈಬಿಟ್ಟು, ಅವುಗಳ ಬದಲಿಗೆ ಇತಿಹಾಸವನ್ನೊ ಇಂಗ್ಲಿಷನ್ನೊ ಕಲಿಸುವುದು ಮೇಲೆನಿಸುತ್ತದೆ. ವಿದ್ಯಾರ್ಥಿಗಳು ಕ್ರೀಡಾಂಗಣದಲ್ಲಿರುವಾಗ ಅವರು ಕೊಠಡಿಯಲ್ಲಿ ಹರಟೆ ಹೊಡೆಯುತ್ತ ಕುಳಿತಿರುತ್ತಾರೆ ಅಥವಾ ಹೇಳದೆ ಕೇಳದೆ ಹೊರಗೆ ಹೋಗಿರುತ್ತಾರೆ. ಅವರು ರಾಜಕೀಯ ಪುಢಾರಿಗಳನ್ನು' ಕಟ್ಟಿಕೊಂಡು , ಮುಖ್ಯೋಪಾಧ್ಯಾಯರನ್ನೂ, ಆಡಳಿತ ಮಂಡಲಿಯನ್ನೂ ಹೆದರಿಸುತ್ತಾರೆ. ಅಷ್ಟೇ ಅಲ್ಲ, ಕೆಲವು ಅಧಿಕಾರಿಗಳೂ ಅವರಿಗೆ ಸಾಮಿಲು . ಅನುಮಾನಾಸ್ಪದ ರೀತಿಯಲ್ಲಿ, ನ್ಯಾಯ ನಿಯಮಗಳನ್ನು ಗಾಳಿಗೆ ತೂರಿ, ಅಶಿಸ್ತನ್ನು ಅನರ್ಹತೆಯನ್ನು ಪೋಷಿಸುವಂತೆ ತೋರುತ್ತದೆ.

ಶೂನ್ಯ ಅಥವಾ ರಾಜ್ಯ ಸರಾಸರಿಗಿಂತ ಕಡಮೆ ಫಲಿತಾಂಶ ಬಂದಿರುವ ಶಾಲೆಗಳ ಉಪಾಧ್ಯಾಯರ ಮೇಲೆ ಶಿಸ್ತಿನ ಕ್ರಮವನ್ನು ಸರ್ಕಾರ ಜರುಗಿಸಬೇಕು. ಅವಶ್ಯವಾದರೆ ಶಿಕ್ಷಣಕ್ಕೆ ಸಂಬಂಧಿಸಿದ ಶಾಸನವನ್ನು ತಿದ್ದಬೇಕು. ಶಿಕ್ಷಕರು ಸ್ವತಂತ್ರರಾಗಿರಬೇಕೆಂಬ ವಿಷಯದಲ್ಲಿ ಅನುಮಾನವೇ ಇಲ್ಲ. ಆದರೆ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಂಡು, ಸದಾ ರಾಜಕೀಯದಲ್ಲಿ ತೊಡಗಿಕೊಂಡಿರುವ, ನಿರಂತರ ಜ್ಞಾನಾರ್ಜನೆಯಲ್ಲಿ ನಿರತರಾಗದ , ಶಿಕ್ಷಣೇತರ ಹವ್ಯಾಸಗಳನ್ನು ಅಂಟಿಸಿಕೊಂಡಿರುವ ಉಪಾಧ್ಯಾಯರನ್ನು ಶಾಲೆಯಿಂದಲೇ ಉಚ್ಚಾಟಿಸಬೇಕು. ಐದು ವರ್ಷಕ್ಕೊಮ್ಮೆಯಾದರೂ, ಎಲ್ಲ ಉಪಾಧ್ಯಾಯರಿಗೆ ಒಂದೊಂದು ತಿಂಗಳ ಮಟ್ಟಿಗಾದರೂ ನವೀನ ಶಿಕ್ಷಣ ನೀಡಬೇಕು. ಜಿಲ್ಲಾ ಕೇಂದ್ರದಲ್ಲಿರುವ ವಿದ್ಯಾಧಿಕಾರಿ ಶಾಲೆಗಳ ಕುಂದುಕೊರತೆ ಅವ್ಯವಹಾರಗಳ ಮೇಲೆ ಕಣ್ಣಿಡಲು ಸಾಧ್ಯವಾಗದು. ಅದರಿಂದಾಗಿ ರಾಜಕೀಯೇತರ ಸ್ಥಳೀಯ ಹಿರಿಯರನ್ನು ಮತ್ತು ನಿವೃತ್ತ ಅಧ್ಯಾಪಕರನ್ನು ಒಳಗೊಂಡ ಉಸ್ತುವಾರಿ ಸಮಿತಿಗಳನ್ನು ನೇಮಿಸಿ, ಆ ಸಮಿತಿಗಳ ಶಿಫಾರಸುಗಳನ್ನು ಕಾರ್ಯಗತಗೊಳಿಸುವಂತಾಗಬೇಕು. ಖಾಸಗಿ ಶಾಲೆಗಳ ಆಡಳಿತ ಮಂಡಲಿಗಳ ವ್ಯವಹಾರಗಳಲ್ಲಿ ಅಧಿಕಾರಿಗಳು ಅನಾವಶ್ಯಕವಾಗಿ ಮೂಗುತೂರಿಸಬಾರದು. ಹೈಸ್ಕೂಲುಗಳನ್ನು ನೆರೆಹೊರೆಯ ಕಾಲೇಜುಗಳಿಗೆ, ಮಾಧ್ಯಮಿಕ ಪ್ರಾಥಮಿಕ ಶಾಲೆಗಳನ್ನು ಅಕ್ಕಪಕ್ಕದ ಹೈಸ್ಕೂಲುಗಳೊಡನೆ ಜೋಡಿಸಿ, ಶೈಕ್ಷಣಿಕ ಗುಣಮಟ್ಟವನ್ನೆತ್ತರಿಸಲು ಪ್ರಯತ್ನಿಸಬೇಕು. ಶಿಕ್ಷಣ ಸರ್ಕಾರದ ಮಾತ್ರವಲ್ಲ, ಸಮಾಜದ ಜವಾಬ್ದಾರಿಯೂ ಹೌದೆಂಬುದನ್ನು ಸರ್ವರೂ ಮನಗಾಣಬೇಕಾಗಿದೆ. ಇಂಥ ಶೈಕ್ಷಣಿಕ ಸಮುದಾಯವನ್ನೇರ್ಪಡಿಸುವ ಮೂಲಕ ಆಧುನಿಕ ಅಂತರ್ಜಾಲ ತಂತ್ರಜ್ಞಾನವನ್ನಳವಡಿಸಿಕೊಳ್ಳಲು ಸಹ ಸಾಧ್ಯವಾಗುತ್ತದೆನ್ನುವುದನ್ನು ತಜ್ಞರು ಪರಾಂಬರಿಸಬೇಕಾಗಿದೆ.

ಸಾಮಾನ್ಯವಾಗಿ ಬಡವರ ಮತ್ತು ನಿರಕ್ಷರಿಗಳ ಕುಟುಂಬಗಳಿಂದ ಬಂದ ಮಕ್ಕಳಿರುವ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಕಡಮೆಯಾಗಿರುತ್ತದೆ. ಶಿಕ್ಷಕರು ಪ್ರಯತ್ನಿಸಿದರೆ, ಸರ್ಕಾರ

ಅಥವಾ ಸಮಾಜ ಆ ಶಾಲೆಗಳಿಗೆ ವಿಶೇಷ ಸೌಲಭ್ಯಗಳನ್ನೊದಗಿಸುವುದಾದರೆ, ಖಂಡಿತವಾಗಿಯೂ ಅವರ ಗುಣಮಟ್ಟವನ್ನೆತ್ತರಿಸಬಹುದು. ಆ ಮಕ್ಕಳಲ್ಲಿಯೂ ಅಂತಃಸ್ಥವಾದ ಶಕ್ತಿಯಿದ್ದೇ ಇದೆ. ಅವರವರ ಮನೋಧರ್ಮ ಅಭಿರುಚಿಗಳಿಗನುಗುಣವಾಗಿ ಅದನ್ನು ವಿಕಾಸಗೊಳಿಸುವ ಕಾರ್ಯ ಶಿಕ್ಷಕರಿಗೆ ಸೇರಿದ್ದು.

ಒಟ್ಟಿನಲ್ಲಿ ಶಿಕ್ಷಣದ ಗುಣಮಟ್ಟ ಬೋಧನದ ಗುಣಮಟ್ಟವನ್ನವಲಂಬಿಸಿದೆಯೆಂಬ ಮಾತು ಹುಸಿಯಲ್ಲ. ಮಕ್ಕಳ ಮರ್ಜಿ ಸ್ವಭಾವಗಳನ್ನನುಸರಿಸಿ, ಬೋಧನೋಪಾಯಗಳನ್ನು ಬಳಸಿ ಕೊಳ್ಳಬೇಕಾಗುತ್ತದೆ. ಬರಿಯ ಗಿಣಿಪಾಠದಿಂದ ಪ್ರಯೋಜನವಿಲ್ಲ. ಪ್ರಶ್ನೋತ್ತರ ನಾಟಕೀಯೋಪಾಯಗಳಿಂದ ಹಿಡಿದು ಕಥನೋಪಾಯದವರೆಗೆ ಎಲ್ಲ ಉಪಾಯಗಳನ್ನು ಬಳಸುವ ಚಾಕಚಕ್ಯತೆ, ಸಹನೆ ಹಾಗೂ ಪ್ರಯೋಗಶೀಲವುಳ್ಳ ಶಿಕ್ಷಕ ನಿಶ್ಚಯವಾಗಿಯೂ ಯಶಸ್ವಿಯಾಗಬಲ್ಲ. ನಾಯಕ ಶಕ್ತಿಯಿರುವ, ನೈತಿಕಧೈರ್ಯ ಹಾಗೂ ಆತ್ಮಪ್ರತ್ಯಯವಿರುವ ಶಿಕ್ಷಕನಿಗೆ ಅಸಾಧ್ಯವೆಂಬುದಿರಲಾರದು. ಯಾವ ಶಾಲೆಯ ವಿದ್ಯಾರ್ಥಿಗಳು ಮನೆಪಾಠಕ್ಕೆ ಹೋಗುತ್ತಾರೆಯೋ, ಆ ಶಾಲೆಯ ಆಡಳಿತ ಸಮರ್ಪಕವಲ್ಲ, ಉಪಾಧ್ಯಾಯರು ಶಕ್ತರಲ್ಲವೆಂದೇ ಭಾವಿಸಬಹುದಾಗಿದೆ.

ಆಧುನಿಕ ಪ್ರಪಂಚದ ಸವಾಲುಗಳನ್ನೆದುರಿಸಲು ಗಣಿತ ಮತ್ತು ವಿಜ್ಞಾನಗಳ ಪರಿಣತಿ ಅತ್ಯಾವಶ್ಯಕ. ಆ ವಿಷಯಗಳಿಗೆ ಸಂಬಂಧಿಸಿದ ಶಿಕ್ಷಕರನ್ನು ನೇಮಿಸುವಾಗ ಅರ್ಹತೆಗೆ ಹಾಗೂ ನೈಪುಣ್ಯಕ್ಕೆ ಒತ್ತುಕೊಡಬೇಕಾದ್ದು, ಹಿಂದುಳಿದ ಮಕ್ಕಳ ದೃಷ್ಟಿಯಿಂದಲೂ ಅತ್ಯಗತ್ಯ. ಇಂಗ್ಲಿಷಿನಲ್ಲಿ ಅರ್ಹತೆಯಿಲ್ಲದ ಬೋಧಕರ ನೇಮಕಾತಿಯಿಂದಾಗಿ ಹೈಸ್ಕೂಲಿನ ವಿದ್ಯಾರ್ಥಿಗಳು ಕಷ್ಟನಷ್ಟಗಳಿಗೆ ಗುರಿಯಾಗಬೇಕಾಗಿದೆ. ಇಂಗ್ಲಿಷನ್ನು ಐಚ್ಛಿಕವಾಗಿ ವ್ಯಾಸಂಗಮಾಡಿದ ಪದವೀಧರರ ಕೊರತೆ ಇರುವುದೂ ನಿಜ. ಈ ಸಮಸ್ಯೆಯ ಪರಿಹಾರಕ್ಕಾಗಿ ಮೂರು ಪರ್ಯಾಯೋಪಾಯಗಳನ್ನು ಸೂಚಿಸಬಹುದು : ೧. ಇಂಗ್ಲಿಷ್ ಕಡ್ಡಾಯವಾಗಿ ಪರೀಕ್ಷಾ ವಿಷಯವಾಗಬಾರದು. ಒಂದು ಪಕ್ಷ ಪರೀಕ್ಷಾ ವಿಷಯವಾದರೂ, ಅದರ ಅಂಕಗಳನ್ನು ಫಲಿತಾಂಶ ನಿರ್ಣಯಕ್ಕೆ ತೆಗೆದುಕೊಳ್ಳಬಾರದು; ೨. ಫಲಿತಾಂಶ ನಿರ್ಣಯದ ದೃಷ್ಟಿಯಿಂದ ಮೂರು ಭಾಷೆಗಳನ್ನು ಏಕಘಟಕವಾಗಿ ಪರಿಗಣಿಸಿ, ಒಂದೊಂದು ಭಾಷೆಗೂ ೨೫% ಅಂಕಗಳನ್ನೂ, ಒಟ್ಟಿನಲ್ಲಿ ೩೫% ಅಂಕಗಳನ್ನು ನಿಗದಿ ಮಾಡತಕ್ಕದ್ದು; ೩. ವಿಜ್ಞಾನ ಮೊದಲಾದ ಐಚ್ಛಿಕ ವಿಷಯಗಳಲ್ಲಿ ಒಟ್ಟಾರೆ ೭೫%ಕ್ಕಿಂತಲೂ ಹೆಚ್ಚು ಅಂಕಗಳು ಬಂದಿದ್ದು, ಇಂಗ್ಲಿಷಿನಲ್ಲಿ ಫೇಲಾಗಿದ್ದರೆ, ರಿಯಾಯಿತಿ ಕೊಟ್ಟು, ವಿದ್ಯಾರ್ಥಿಯನ್ನು ತೇರ್ಗಡೆಗೊಳಿಸುವುದು.

ರಾಷ್ಟ್ರಾಭ್ಯುದಯದ ದೃಷ್ಟಿಯಿಂದ, ಜಗತ್ತಿನ ಇತರ ರಾಷ್ಟ್ರಗಳಿಗೆ ಹೆಗಲೆಣೆಯಾಗಿ ತಲೆಯೆತ್ತಿಕೊಂಡು ಮೆರೆಯಬೇಕಾದ ಕಾರಣದಿಂದ, ದೇಶದ ಆಡಳಿತದಲ್ಲಿ ದಕ್ಷತೆ, ಶಿಸ್ತು, ನೈತಿಕತೆ, ಪ್ರಾಮಾಣಿಕತೆ ಮತಿ ಪ್ರಾಬಲ್ಯವೂ ಅತ್ಯಗತ್ಯ. ಬೇರೆ ಬೇರೆ ಇಲಾಖೆಗಳಲ್ಲಿ ಅವು ತುಸು ಕಡಮೆಯಾದರೂ ಹೇಗೋ ಆಡಳಿತ ನಡೆಯುತ್ತದೆ. ನ್ಯಾಯಾಲಯ, ಶಿಕ್ಷಣಕ್ಷೇತ್ರ ಮತ್ತು ಸೈನಿಕ ವಲಯಗಳಲ್ಲಿ ಪೂರ್ವೋಕ್ತ ಗುಣಗಳು ಕಿಂಚಿತ್ ಲೋಪವಾದರೂ ದೇಶದ ಬುಡವೆ ಅಲುಗಾಡುತ್ತದೆ. ಅದರಿಂದಾಗಿ ಅಮೆರಿಕಾ ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪ್ರಜೆಗಳು ಶಿಕ್ಷಣದ ಬಗ್ಗೆ ಅಪಾರ ಕಾಳಜಿ ವಹಿಸುತ್ತವೆ ; ಪ್ರಜಾಪ್ರಭುತ್ವವಿರುವ ರಾಷ್ಟ್ರಗಳಲ್ಲಂತು ಈ ಬಗ್ಗೆ ಪ್ರಜೆಗಳು ಸದಾ ಜಾಗೃತರಾಗಿರಬೇಕಾಗುತ್ತದೆ. ನಾನಾ ಜಾತಿ ಮತ ಜನಾಂಗಾದಿ ಬಾಹುಳ್ಯದಿಂದ ಗೊಂದಲ ಗೊಂಡಿರುವ ಭರತಖಂಡದಲ್ಲಂತು ಈ ಜಾಗೃತಿ ತೀವ್ರವಾಗಿರಬೇಕಾಗಿದೆ.

ನೇಪಾಳದ ದುರಂತ

೧.೬.೨೦೦೧ನೆಯ ತೇದಿ ನೇಪಾಳದ ಇತಿಹಾಸದಲ್ಲಿ ಮಹಾ ಕರಾಳ ದಿನ ; ನವ ಸಹಸ್ರಮಾನದ ಮೊತ್ತ ಮೊದಲ ಭೀಕರ ದುರಂತದ ದಿನ. ಮುಂದೆ ರಾಜನಾಗುವ ರಾಜಕುಮಾರನಿಂದಲೇ ಇಡೀ ಕುಟುಂಬ ನಿರ್ನಾಮಗೊಂಡ ಘೋರ ಘಟನೆ ಹಿಂದೆಲ್ಲಿಯೂ ನಡೆದಿರಲಾರದು. ಆ ಘೋರದುರಂತಕ್ಕೆ ಪ್ರಣಯ ವಿಫಲತೆ ಕಾರಣವೆಂದು ಮೇಲುನೋಟಕ್ಕೆ ಸಾಬೀತಾದರೂ, ಅಧಿಕಾರ ದಾಹ ಪ್ರತೀಕಾರ ಬುದ್ಧಿಗಳು ಹಿನ್ನೆಲೆಯಲ್ಲಿ ಕೆಲಸಮಾಡಿರಬಹುದೇ ಎಂಬುದು ಹಿಂದಿನಿಂದ ತಿಳಿಯಬೇಕಾಗಿದೆ. ಎಲ್ಲ ಕಾಲದಲ್ಲಿಯೂ ರಾಜ ಗೃಹಗಳು ಸಂಚು ಹೊಂಚುಗಳ, ಮೋಸಮಾಟಗಳ, ಗುನ್ನೆಗಸಣೆಗಳ, ಕುತ್ಸಿತ ಕುಯುಕ್ತಿಗಳ, ಗುಮಾನಿ ಗುಟ್ಟುಗಳ, ತೀಟೆ ತಿಸರಗಳ, ಸೇಡುಸೂಡುಗಳ ಬೀಡುಗಳಾಗಿರುವುದುಂಟಷ್ಟೆ. ಈಗಂತು ಅವುಗಳ ಸ್ಥಾನವನ್ನು ಸಚಿವಗೃಹಗಳು ಆಕ್ರಮಿಸಿಕೊಂಡಿವೆಯೆನ್ನುವುದಕ್ಕೆ ಒಂದು ತಿಂಗಳೊಳಗಾಗಿ ತಮಿಳುನಾಡಿನಲ್ಲಿ ನಡೆದ ಘಟನೆಗಳು ನಿದರ್ಶನಗಳಾಗಿವೆ, ಅಪಶಕುನಗಳ ಮುನ್ಸೂಚನೆಗಳಾಗಿವೆ.

ಪ್ರತಿ ಶುಕ್ರವಾರ ಅರಮನೆಯಲ್ಲಿ ರಾಜ ಬಂಧುಗಳಿಗೆ ಔತಣಕೂಟದ ಏರ್ಪಾಡೊಂದು ಸಂಪ್ರದಾಯವಾಗಿದೆ. ಆ ಸಮಯದಲ್ಲಿ ಸಾಮಾಜಿಕ ಮತ್ತು ಕೌಟುಂಬಿಕ ಸಮಸ್ಯೆಗಳನ್ನು ಚರ್ಚಿಸುವುದುಂಟು. ಸಿಂಹಾಸನದ ಉತ್ತರಾಧಿಕಾರಿ ದೀಪೇಂದ್ರ ರಾಣಾವಂಶದ ತಂದೆಯ ಮತ್ತು ಭಾರತೀಯ ಮೂಲದ ತಾಯಿಯ ಮಗಳು ಸುಂದರಿ ದೇವಯಾನಿಯನ್ನು ಮದುವೆಯಾಗುವ ತನ್ನ ನಿರ್ಧಾರವನ್ನು ಮತ್ತೆ ಮತ್ತೆ ದೊರೆ ಬೀರೇಂದ್ರ ಮತ್ತು ತಾಯಿ ಐಶ್ವರ್ಯರ ಮುಂದೆ ಒತ್ತಾಯ ಪೂರ್ವಕವಾಗಿ ಪ್ರಕಟಿಸುತ್ತಾನೆ. ರಾಣಿಗೆ ಆ ಸಂಬಂಧ ಬೇಡವಾಗಿ, ಬೇರೆ ಹೆಣ್ಣನ್ನು ಪ್ರಸ್ತಾಪಿಸು ತ್ತಾಳೆ. ಮೂವತ್ತು ವರ್ಷದ ಯುವಕನ ಮೇಲೆ ರಾಣಿ ತನ್ನ ನಿರ್ಣಯವನ್ನು ಹೇರಿದ್ದೇ ಯುಕ್ತವಲ್ಲ. ಆ ಯುವಕನಾದರೂ ಕಿರೀಟವನ್ನು ತಿರಸ್ಕರಿಸಿ, ತಾನೊಲಿದ ಹೆಣ್ಣನ್ನು ಮದುವೆಯಾಗಬಹು ದಿತ್ತು, ಇಂಗ್ಲೆಂಡಿನ ಎಡ್ವರ್ಡ್‌ನಂತೆ. ಕುಡಿದ ಅಮಲಿನಲ್ಲಿ, ನಿರಾಶೆಯ ವಿಷಣ್ಣತೆಯ ನಿಶೆಯಲ್ಲಿ ತಾನೇನು ಮಾಡುತ್ತಿದ್ದೇನೆಂಬುದೇ ದೀಪೇಂದ್ರನಿಗೆ ಅರಿವಾಗಲಿಲ್ಲವೆಂಬಂತೆ ಪತ್ರಿಕಾಮಾಧ್ಯಮ ಗಳು ಘೋಷಿಸಿವೆ. ಕೇವಲ ಕೆಲವೇ ನಿಮಿಷಗಳಲ್ಲಿ ಮಿಂಚಿಹೋದ ಘಟನೆಗಳನ್ನು ನಂಬುವುದೇ ಕಷ್ಟವಾಗಿದೆ. ಷೇಕ್ಸ್‌ಪಿಯರೀಯ ದುರಂತ ನಾಟಕಕ್ಕೆ ಇದು ಉತ್ತಮ ವಸ್ತುವಾಗುತ್ತದೆ. ಪತ್ರಿಕೆಗಳಲ್ಲಿ ಪ್ರಕಟವಾದ ಘಟನೆಗಳು ಇಂತಿವೆ :

ಆ ಘೋರ ರಾತ್ರಿ ವಿವಾಹ ಸಂಬಂಧವಾಗಿ ಪ್ರಖ್ಯಾತ ಈಟನ್ ಕಾಲೇಜಿನ ಸೌಜನ್ಯಶೀಲ ವಿದ್ಯಾರ್ಥಿ ದೀಪೇಂದ್ರ ಮತ್ತು ರಾಜ ರಾಣಿಯರೊಡನೆ ಬಿಸಿಬಿಸಿ ಮಾತುಗಳು ನಡೆಯುತ್ತವೆ. ಚಿಕ್ಕಪ್ಪನ ಮಗ ಪರಸ್ ಮತ್ತು ತಮ್ಮ ನಿರಂಜನ ದೀಪೇಂದ್ರನನ್ನು ಅವನ ಕೋಣೆಗೆ ಕರೆದೊಯ್ಯು ತ್ತಾರೆ. ಅನಂತರ ಪರಸ ತನ್ನ ಮನೆಗೆ ಹೊರಟು ಹೋಗುತ್ತಾನೆ. ದೀಪೇಂದ್ರ ಕೋಣೆಯಲ್ಲಿ ಮತ್ತಷ್ಟು ಮದ್ಯವನ್ನು ಸೇವಿಸಿ, ಸೈನಿಕ ವೇಷವನ್ನು ಧರಿಸಿ, ತಂದೆ ಬೀರೇಂದ್ರರೇ ತನಗೆ ಪ್ರೀತಿಯಿಂದ ಕಾಣಿಕೆ ಕೊಟ್ಟಿದ್ದ ಪಿಸ್ತೂಲನ್ನು ತೆಗೆದುಕೊಂಡು, ಭೋಜನ ಶಾಲೆಗೆ ಬಂದು ಮೊದಲು ತಂದೆಗೆ ಗುರಿಯಿಡುತ್ತಾನೆ. ಅನಂತರ ತೋಟದಲ್ಲಿದ್ದ ತಾಯಿ ತಂಗಿಯರ ಮೇಲೆ ಗುಂಡು ಹಾರಿಸುತ್ತಾನೆ. ಕೊನೆಗೆ ತಮ್ಮ ಮೊದಲು ಗೊಂಡು ಒಟ್ಟು ಹದಿಮೂರು ಮಂದಿ ಬಲಿಯಾಗುತ್ತಾರೆ. ಹದಿನೈದು ನಿಮಿಷದಲ್ಲಿ ಪ್ರಜಾವತ್ಸಲರೂ ಸುಸಂಸ್ಕೃತರೂ ಆದ ರಾಜ ಬೀರೇಂದ್ರರ ಕುಟುಂಬ

ನಿರ್ನಾಮವಾಗುತ್ತದೆ. ಅನಂತರ ದೀಪೇಂದ್ರ ತನ್ನ ಕಣತಲೆಗೆ ಗುಂಡಿಕ್ಕಿಕೊಳ್ಳುತ್ತಾನೆ.

ಫೋನ್ ಕರೆ ಬರಲಾಗಿ ಪರಸ್ ತನ್ನ ಮನೆಯಿಂದ ಬಂದು, ದೀಪೇಂದ್ರ ಮೊದಲಾದ ಕುಟುಕು ಜೀವವಿದ್ದವರನ್ನು ಆಸ್ಪತ್ರೆಗೆ ಸಾಗಿಸುತ್ತಾನೆ. ಬೇರೆ ಊರಲ್ಲಿದ್ದ ತಂದೆ ಗ್ಯಾನೇಂದ್ರರಿಗೆ ಸುದ್ದಿ ತಿಳಿಸಿ, ಹೆಲಿಕಾಪ್ಟರ್‌ನಲ್ಲಿ ಬರಮಾಡಿಕೊಳ್ಳುತ್ತಾನೆ. ಮಾರನೆಯ ಬೆಳಗ್ಗೆ ರಾಜನ ಖಾಸಾ ಪರಿಷತ್ತು ಸಭೆ ಸೇರಿ, ಕುಟುಕು ಜೀವವಿದ್ದ ದೀಪೇಂದ್ರ ರಾಜನೆಂದೂ, ಗ್ಯಾನೇಂದ್ರ ರಾಜ ಪ್ರತಿನಿಧಿಯೆಂದೂ ಘೋಷಿಸುತ್ತದೆ. ಸೋಮವಾರ ಬೆಳಗ್ಗೆ ದೀಪೇಂದ್ರನೂ ಸಾಯಲಾಗಿ, ಗ್ಯಾನೇಂದ್ರ ರಾಜನೆಂದು ಉದ್ಘೋಷಿಸುತ್ತದೆ. ಅಷ್ಟೇ ಅಲ್ಲ ಮುಂದಿನ ಒಂದು ಗಂಟೆಯೊಳಗಾಗಿ ಅವನಿಗೆ ರಾಜ್ಯಾಭಿಷೇಕವೂ ನಡೆದುಹೋಗುತ್ತದೆ. ಹತ್ಯಾಕಾಂಡವೊಂದು ಆಕಸ್ಮಿಕವೆಂದು ದೊರೆ ಉದ್ಘೋಷಿಸಿದರೂ ಜನರ ಕೋಪತಾಪಗಳನ್ನು ತಗ್ಗಿಸುವ ಸಲುವಾಗಿ, ದೊರೆ ವರಿಷ್ಠ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಅಧ್ಯಕ್ಷತೆಯಲ್ಲಿ ವಿಚಾರಣಾ ಸಮಿತಿಯನ್ನು ನೇಮಿಸುತ್ತಾರೆ. ಮೂರುದಿನಗಳಲ್ಲಿ ತೀರ್ಪುಕೊಡಬೇಕೆಂದವರು ಆದೇಶಿಸುತ್ತಾರೆ. ಸಮಿತಿ ಏಳೆಂಟು ದಿನಗಳಲ್ಲಿ, ದೀಪೇಂದ್ರನೇ ಕಗ್ಗೊಲೆಗೆ ಕಾರಣನೆಂದು ತೀರ್ಪು ನೀಡುತ್ತದೆ.

ಅರಮನೆಯ ಕಗ್ಗೊಲೆಗೆ ದೇವಯಾನಿಯೇ ಕಾರಣವೆಂಬ ಪ್ರತೀತಿ ತಪ್ಪುವಂತಿಲ್ಲ. ಘೋರ ಘಟನೆ ನಡೆದ ಎರಡು ಗಂಟೆಯೊಳಗಾಗಿ ಅವಳು ದೆಹಲಿ ಸೇರುತ್ತಾಳೆ. ಎರಡು ದಿನಗಳನಂತರ ಮಾಸ್ಕೋದಲ್ಲಿರುವ ಸೋದರಿಯ ಮನೆಗೆ ದೌಡಾಯಿಸುತ್ತಾಳೆ.

ವಿಚಾರಣಾ ಸಮಿತಿಯ ತೀರ್ಪನ್ನು ನಂಬದ ಜನ ಊಹಾಜಾಲವನ್ನು ನೇಯುತ್ತಾರೆ. ಇಂಥ ಭೀಕರ ಘಟನೆಯ ಅನ್ವೇಷಣೆ ಎಂಟು-ಹತ್ತು ದಿನಗಳಲ್ಲಿ ಮುಗಿಯಲು ಸಾಧ್ಯವೆ? ಹತ್ತೆ ಹದಿನೈದು ನಿಮಿಷಗಳ ಕಾಲ ನಡೆದಿರುವಾಗ, ಒಬ್ಬೊಬ್ಬರಾದರೂ ಅವಿತುಕೊಳ್ಳಲು ಹೆಣಗಾಡಲಿಲ್ಲವೆ? ಹತ್ಯಾಕಾಂಡಕ್ಕೆ ಮೊದಲೇ ಗ್ಯಾನೇಂದ್ರರ ಮಡದಿ ಜಾಗ ಬಿಟ್ಟರಲ್ಲವೆ? ಅಂಗರಕ್ಷಕರಾಗಲಿ ಕಾವಲು ಪಡೆಯಾಗಲಿ ಸೇವಕರಾಗಲಿ ಅಲ್ಲಿರಲಿಲ್ಲವೆ? ಎಲ್ಲರೂ ಏಕ್‌ದಂ ಜಾಗ ಖಾಲಿಮಾಡಿದರೆ? ಆಗ ಅಡುಗೆಯವರು ಎಲ್ಲಿದ್ದರು? ಭೋಜನ ಮುಗಿಯುವ ಮುನ್ನ ಜನರಿಗಿಷ್ಟವಾಗದ ಪರಸ್ ತನ್ನ ಮನೆಗೆ ಹೋದದ್ದೇಕೆ? ಹಲವು ಸಲ ಬೀರೇಂದ್ರರ ಉದಾರ ಆಡಳಿತ ನೀತಿಯನ್ನು ಪ್ರಜಾಪ್ರಭುತ್ವ ಸಮರ್ಪಣ ಮಾರ್ಗವನ್ನೊಪ್ಪದ ಗ್ಯಾನೇಂದ್ರ ಕೊಲೆಯ ಸಮಯದಲ್ಲಿ ಬೇರೆ ಊರಲ್ಲಿದ್ದುದುಂಟೆ? ಘಟನೆಗೆ ಒಂದು ಗಂಟೆ ಹಿಂದೆ ದೀಪೇಂದ್ರ, ದೇವಯಾನಿಯರು ನೃತ್ಯಮಂದಿರದಲ್ಲಿ ಪರಸ್ ಗಾಯನ ಶಾಲೆಯಲ್ಲಿದ್ದರೆಂಬುದು ನಿಜವೆ? ಪ್ರಜಾಪ್ರಭುತ್ವ ತತ್ವವನ್ನೊಪ್ಪಿಕೊಂಡದ್ದರಿಂದ, ತಮ್ಮ ಅಧಿಕಾರ ನಷ್ಟ ಮತ್ತು ಸವಲತ್ತುಗಳ ಹಾನಿಯಿಂದಾಗಿ ರಾಜಬಂಧುವರ್ಗದಲ್ಲಿ ಅಸಹನೆ ಮಾತ್ಸರ್ಯಗಳು ಮಸಗುತ್ತಿರಬೇಕಲ್ಲವೆ? ಕೊಲೆಯನಂತರ ನಡೆದ ಘಟನಾವಳಿಗಳ ವಿದ್ಯುದ್ ವೇಗ ಸಹ ಅನುಮಾನಾಸ್ಪದವಾಗಿದೆ ಯಲ್ಲವೆ? ಸಾಮಾನ್ಯವಾಗಿ ದೊರೆ ಸತ್ತ ಒಂದು ವರ್ಷದ ನಂತರ ಪಟ್ಟಾಭಿಷೇಕ ನಡೆಯಬೇಕಾದ ಸಂಪ್ರದಾಯವನ್ನು ಮುರಿದದ್ದೇಕೆ? ತಾನು ವ್ಯಾಸಂಗ ಮಾಡಿದ ಇಂಗ್ಲೆಂಡ್ ನೇಪಾಳಗಳ ಸುಪರಿಚಿತ ಜನರೂ ಗುರುಗಳೂ ದೀಪೇಂದ್ರನ ಗುಣಗಾನ ಮಾಡಿದ್ದುಂಟು. ಅಂಥವನು ಇಂಥ ಹೀನಕಾರ್ಯಕ್ಕಿಳಿಯುವುದುಂಟೆ? ಮೇಲಾಗಿ ಅವನ ಬೆನ್ನಿನ ಮೇಲೆ ಬಿದ್ದ ಗುಂಡೇಟನಿಂದಾಗಿ ಅವನು ಸತ್ತನೆಂಬ ಗಾಳಿಮಾತೂ ಇದೆ. ಈ ಎಲ್ಲ ಊಹಾಪೋಹಗಳು ನಿಜವಲ್ಲದಿರಬಹುದು. ಅವು ಸತ್ಯದೂರವೆಂದು

ಸಾಬೀತು ಮಾಡಬೇಕಾದ್ದು ಈಗಿನ ಅರಸರ ಕರ್ತವ್ಯ. ಅರಸೊತ್ತಿಗೆಯ ಬಗ್ಗೆ ವಿಶ್ವಾಸ ಮೂಡಿಸುವ ಸಕಲ ಪ್ರಯತ್ನಗಳು ಜರೂರಾಗಿ ನಡೆಯಬೇಕಾಗಿದೆ.

ಬೀರೇಂದ್ರರು ಕೆಲವು ಸಲ ಚೀನಾ ಕಡೆಗೆ ವಾಲಿದ್ದುಂಟು. ಇಂದಿನವರೂ ಪಾಕಿಸ್ತಾನ ಚೀನಾಗಳ ಕಡೆಗೆ ವಾಲಬಹುದೆಂಬ ಮಾತಿದೆ. ಆ ರಾಷ್ಟ್ರಗಳೊಡನೆ ಸ್ನೇಹ ಬೆಳೆಸುವುದು ತಪ್ಪಲ್ಲ. ಆದರೆ ಅವುಗಳ ಛಾಯಾನುವಾದಗಳೊ ಜೆರಾಕ್ಸ್ ಪ್ರತಿಗಳೊ ಆಗಬಾರದು. ಒಂದುಕಡೆ ಅರಸೊತ್ತಿಗೆಗೂ, ಮತ್ತೊಂದು ಕಡೆ ಕಮ್ಯೂನಿಸಮ್ ಹಾಗೂ ಲಷ್ಕರಿ ಆಡಳಿತಕ್ಕೂ ಸಂಬಂಧ ಸಾಧ್ಯವೆ? ನೇಪಾಳದ ಭವಿಷ್ಯ ಸಂಸ್ಕೃತಿ ಸಂಪ್ರದಾಯ ಸಮಾನತೆಯುಳ್ಳ ಭಾರತವನ್ನವಲಂಬಿಸಿದೆಯೆಂಬುದನ್ನು ಅಲ್ಲಿಯ ಬಂಧುಗಳು ಅರಿಯಬೇಕಾಗಿದೆ. ನೆರೆ ರಾಜ್ಯವಾದ ನೇಪಾಳದಲ್ಲಿ ಶಾಂತಿ ನೆಲಸಲಿ, ಅದು ಸದಾ ಅಭಿವೃದ್ಧಿ ಮುಖವಾಗಿರಲಿ ಎಂದು ಭಾರತದ ಪರವಾಗಿ ಪುಸ್ತಕ ಪ್ರಪಂಚ ಹಾರೈಸುತ್ತದೆ.

'ಸಿಸು' ಸಂಗಮೇಶರಿಗೆ ಕಂಬನಿಯ ಕಾಣಿಕೆ

ಶಿಶು ಸಾಹಿತ್ಯ ರಚನೆಯೊಂದನ್ನೇ ಜೀವನದ ಏಕೈಕ ಧ್ಯೇಯವಾಗಿಟ್ಟುಕೊಂಡು , ಬದುಕಿನ ಸರ್ವಸ್ವವೆಂದು ಸಂಕಲ್ಪಿಸಿಕೊಂಡು, ಮನಹೃದಯಗಳಿಗೆ ಹಚ್ಚಿಕೊಂಡು, ಏಕಾಗ್ರತೆಯಿಂದ ನಿರಂತರವಾಗಿ ದುಡಿದ ಅಗ್ರಮಾನ್ಯ ವ್ಯಕ್ತಿ ಬಿಜಾಪುರದ ಸಂಗಮೇಶ ಸಿದ್ಧರಾಮಪ್ಪನವರು. 'ಸಿಸು' (ಸಿದ್ಧರಾಮ-ಸುತ) ಕಾವ್ಯನಾಮದಿಂದಲೇ ಇಡೀ ಕರ್ನಾಟಕದಲ್ಲಿ ಪ್ರಖ್ಯಾತರಾದ ಅವರು ೨೯.೫.೨೦೦೧ರಂದು ತೀರಿಕೊಂಡದ್ದು, ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಭರಿಸಲಾಗದ ನಷ್ಟವಾಗಿದೆಯೆಂದರೆ , ಅದು ಕೇವಲ ಶಿಷ್ಟ ಸಂಪ್ರದಾಯಕ್ಕಾಗಿ ಹೇಳುವ ಮಾತಲ್ಲ, ವಾಸ್ತವ ಸತ್ಯವನ್ನು ದಾಖಲಿಸುವ ಕರ್ತವ್ಯ ಪ್ರಜ್ಞೆಯ ವಿಚಾರ.

ಹಿಂದಿನಿಂದ ಮಕ್ಕಳ ಸಾಹಿತ್ಯ ಕನ್ನಡದಲ್ಲಿ ಸುಸಮೃದ್ಧವಾಗಿ ಬೆಳೆದಿಲ್ಲ, ನಿಜ. ಪಂಚತಂತ್ರ, ಭೇತಾಳ ಪಂಚವಿಂಶತಿ, ಅರೇಬಿಯನ್ ನೈಟ್ಸ್ ಮೊದಲಾದ ಕನ್ನಡೇತರ ಗ್ರಂಥಗಳು ಕನ್ನಡಕ್ಕೆ ಭಾಷಾಂತರಗೊಂಡದ್ದುಂಟು. ಆ ಕಥೆಗಳಲ್ಲಿ ಮರಗಿಡ ಪಕ್ಷಿಪ್ರಾಣಿಗಳೆಲ್ಲವೂ ಮಾತಾಡುತ್ತವೆ. ಎಂ.ಎಸ್. ಪುಟ್ಟಣ್ಣನವರು ನೀತಿ ಚಿಂತಾಮಣಿಯನ್ನು ಬರೆದರು. ಎಸ್.ಜಿ.ನರಸಿಂಹಾಚಾರ್ಯ, ಕಲ್ಯಾಣಮ್ಮ, ಕಾರಂತ, ಕುವೆಂಪು, ರಾಜರತ್ನಂ, ಡೆಪ್ಯೂಟಿ ಚೆನ್ನಬಸಪ್ಪ, ಪಂಜೆ ಮಂಗೇಶರಾವ್, ಹೊಯ್ಸಳ, ಎಲ್.ಗುಂಡಪ್ಪ, ಬಿ.ಎ.ಸನದಿ, ಎಂಆರ್‌ಶ್ರೀ, ರುಕ್ಕಮ್ಮ, ಕಾವ್ಯಾನಂದ, ಸೀತಾರಾಮಭಟ್ಟ, ಬೋರೇಗೌಡ ಮೊದಲಾದವರು ಮಕ್ಕಳಿಗಾಗಿ ಸಾಕಷ್ಟು ಸಾಹಿತ್ಯವನ್ನು ರಚಿಸಿದ್ದರೂ, ಸಾಕಷ್ಟು ಬಂದಿಲ್ಲವೆಂಬ ಅತೃಪ್ತಿ 'ಸಿಸು' ಅವರನ್ನು ಕಾಡುತ್ತದೆ.

ಸಿಸು ಸಂಗಮೇಶ್ವರರು ಸ್ವಯಂ ಪ್ರಾಥಮಿಕ ಶಾಲೆಯ ಉಪಾಧ್ಯಾಯರಾಗಿ ಮಕ್ಕಳ ಮನೋಧರ್ಮ ಅಭಿರುಚಿ, ಆಸಕ್ತಿಗಳನ್ನು ಬಲ್ಲವರಾದುದರಿಂದ, ಮಕ್ಕಳ ಅಗತ್ಯಗಳು ಅವರಿಗೆ ಗೊತ್ತು, ಮಕ್ಕಳ ಸಾಹಿತ್ಯದ ಮುಖಾಂತರ ಮಕ್ಕಳಿಗೆ ಸೃಜನಾತ್ಮಕವಾದ ಪರಿಸರವನ್ನು ನಿರ್ಮಿಸುವ ಮೂಲಕ, ಅವರ ಜ್ಞಾನ ವಿಜ್ಞಾನ ವಿಕಾಸ ವಿಸ್ತಾರಗಳಿಗೆ, ಉತ್ತಮ ಆಲೋಚನಾನುಭವಗಳ ಜೊಮ್ಮುಗೆಗೆ ಅನುಕೂಲಾವಕಾಶ ಕಲ್ಪಿಸಬಹುದೆಂಬುದು ಅವರ ಹೇರಾಸೆ. ಅವರು ಹೋದಲ್ಲೆಲ್ಲ ತಾವು ಕಂಡುಂಡ ಅಭಿಪ್ರಾಯಗಳನ್ನು ಬೇಸರವಿಲ್ಲದೆ ಪ್ರಚುರಪಡಿಸಿದ್ದಾರೆ. ಮಕ್ಕಳ ಭವಿಷ್ಯ ಶೈಶವ ಬಾಲ್ಯಗಳ ಕಲಿವಿನ ಮಟ್ಟವನ್ನವಲಂಬಿಸಿದೆಯೆಂಬುದು ಅವರಿಗೆ ಗೊತ್ತು. ಮಕ್ಕಳ ಸಾಹಿತ್ಯ

ಸಿದ್ಧಾಂತಗಳು ಅವರಿಗೆ ಕರತಲಾಮಲಕ. ಅಷ್ಟೇ ಅಲ್ಲ, ಮಕ್ಕಳಿಗಾಗಿ ಅವರು ರಚಿಸಿದ ಸಾಹಿತ್ಯವೂ ಹೊರವಾಗಿದೆ. ಮಕ್ಕಳಿಗೆ ಆಕರ್ಷಣೆಯ ಆಹಾರದಂತಿರುವ ಸುಂದರ ಕತೆ ಕವಿತೆಗಳನ್ನು ರಚಿಸಿದ್ದಾರೆ. ಅವರ ನರನಾಡಿಗಳಲ್ಲಿ, ಕನಸು ನನಸುಗಳಲ್ಲಿ ಇಡೀ ಬದುಕಿನಲ್ಲಿ ಕೊನೆಗೆ ಮರಣದಲ್ಲಿ ಸಹ ಶಿಶು ಸಾಹಿತ್ಯಪ್ರಜ್ಞೆ ಸದಾ ಪ್ರವಹಿಸುತ್ತಿತ್ತೆಂಬುದನ್ನು ಕನ್ನಡನಾಡು ಮರೆಯಬಾರದು. ಈ ಪಂಕ್ತಿಗಳನ್ನು ಬರೆಯುವಾಗ ಸಿಸು ಅವರ ವಿನಯ ಮುಗ್ಧ ಮಾಧುರ್ಯ, ಮೃದುಮಧುರ ಸಂಭಾಷಣೆ, ಶಿಶು ಸಾಹಿತ್ಯ ಪ್ರೇಮದ ಪರಾಕಾಷ್ಠೆಯೇ ಮೂರ್ತಿವೆತ್ತಂತಿದ್ದ, ಹಿಂದಕ್ಕೆ ಚಾಚಿದ ದೀರ್ಘ ಕೇಶದ, ಉದ್ದನೆಯ ನೆಹರೂ ಬನೀನಿನ, ಕಾಲಿನತನಕ ಇಳಿಬಿದ್ದ ಕಚ್ಚೆಯ, ಕೋಲು ಮುಖದ ವ್ಯಕ್ತಿ ನನ್ನ ಮುಂದೆ ನಿಂತಂತೆ ಭಾಸವಾಗುತ್ತದೆ.

ಶಿಶು ಸಾಹಿತ್ಯ ಅಕಾಡೆಮಿಯನ್ನು ಸ್ಥಾಪಿಸಬೇಕೆಂಬ ಅವರ ಚಲ ಕೈಗೂಡದಿದ್ದುದು, ಮರಣಶಯ್ಯೆಯಲ್ಲಿಯೂ ಅವರನ್ನು ಕಾಡುತ್ತಿದ್ದಿರಬೇಕು. ಅದಕ್ಕಾಗಿ ಅವರು ಮಂತ್ರಿಗಳ ಮತ್ತು ನಾಯಕರ ಮನೆ ಬಾಗಿಲುಗಳನ್ನು ಕಾಯ್ದರು. ಗಣ್ಯರನ್ನು ವಿದ್ವಾಂಸರನ್ನು ಭೇಟಿಮಾಡಿ ಅಕಾಡೆಮಿಯ ಅಗತ್ಯವನ್ನು ಚರ್ಚಿಸಿದರು; ಆದರೂ ಅವರ ಆಸೆ ಈಡೇರಲಿಲ್ಲ. ಕೊನೆಗೆ ಹರಿಹರ ಕೇಂದ್ರವಾಗುಳ್ಳ 'ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯವೇದಿಕೆ' ಯನ್ನು ಮಿತ್ರರ ಸಹಾಯದಿಂದ ಪ್ರತಿಷ್ಠಾಪಿಸುತ್ತಾರೆ. ಅದು ಗರಿಕಟ್ಟಿಕೊಳ್ಳುವ ಮುನ್ನವೇ ಅವರು ಕೈಲಾಸವಾಸಿಯಾದದ್ದು ದುರ್ದೈವ. ವೇದಿಕೆಯ ಅಭ್ಯುದಯವನ್ನು ಅಲ್ಲಿಂದಲೇ ಸಾಧಿಸುತ್ತ, ಕನ್ನಡ ಮಕ್ಕಳ ಶ್ರೇಯಸ್ಸನ್ನು ಹಾರೈಸುತ್ತಾರೆಂದು ನಂಬ ಬಹುದಾಗಿದೆ.

ದೇಜಗೌ

ಅನುವಾದಕರಿಗೆ ಸೂಚನೆ

'ರೀಡರ್ಸ್ ಡೈಜಸ್ಟ್' ನಿಂದ ನೀವು ಅನುವಾದಿಸಬೇಕೆಂದು ಅಪೇಕ್ಷಿಸುವ ಲೇಖನದ, ಮತ್ತು ಆ ಲೇಖಕನ ಹೆಸರು ಮತ್ತು ಸಂಚಿಕೆಯ ವಿವರವನ್ನು ನಮಗೆ ಬರೆದು ತಿಳಿಸಿ ; ನಮ್ಮ ಲಿಖಿತ ಒಪ್ಪಿಗೆ ತಲಪಿದ ಬಳಿಕ ಅನುವಾದ ಕಾರ್ಯ ಮುಂದುವರಿಸಿ. ಈಚಿನ ದಿನಗಳಲ್ಲಿ ಒಂದೇ ಲೇಖನದ ಹಲವಾರು ಅನುವಾದಗಳು ಬರುತ್ತಿರುವುದರಿಂದ ಈ ಏರ್ಪಾಡು ಮಾಡಿದೆ.

ಸಂಪಾದಕರು 'ಪುಸ್ತಕ ಪ್ರಪಂಚ'

ಮೈಸೂರಿನಲ್ಲಿ ವಯಸ್ಕರ ಶಿಕ್ಷಣ

ಸಾ. ಮಂಚಯ್ಯ
ನಿವೃತ್ತ ನಿರ್ದೇಶಕರು
ಮನೆ ನಂ. ೧೯೯೨, ೩೫ ಬಿ ಕ್ರಾಸ್
೨೮ನೇ ಮೆಯಿನ್, ೪ನೇ ಬ್ಲಾಕ್
ಜಯನಗರ, ಬೆಂಗಳೂರು.

(ಕಳೆದ ಸಂಚಿಕೆಯಿಂದ)

ವಿದ್ಯಾಪೀಠಗಳು:

ವಿದ್ಯಾಪೀಠಗಳು ಅನೌಪಚಾರಿಕ ಶಿಕ್ಷಣ ಕೇಂದ್ರಗಳು ವಿದ್ಯಾಪೀಠಗಳ ತಾಯ್ನಾಡಾದ ಡೆನ್ಮಾರ್ಕ್ ದೇಶದಲ್ಲಿ ಆ ದೇಶದ ಆರ್ಥಿಕ ಪ್ರಗತಿಯನ್ನು ತೀವ್ರಗೊಳಿಸಿ ನಾಡಿನ ಅಭಿವೃದ್ಧಿಗೆ ಕಾರಣೀಭೂತವಾಗಿವೆ.

ಹದಿನೆಂಟನೆ ಶತಮಾನದ ಪ್ರಾರಂಭದಲ್ಲಿ ಡೆನ್ಮಾರ್ಕ್ ದೇಶ ಅನೇಕ ಕಷ್ಟ ನಷ್ಟಗಳಿಗೆ ಗುರಿಯಾಯಿತು. ೧೮೦೭ರಲ್ಲಿ ಇಂಗ್ಲೆಂಡಿನೊಡನೆ ನಡೆದ ಯುದ್ಧ ಅದರ ಪರಿಣಾಮವಾಗಿ ನಾರ್ವೆಯ ಪತನ, ಜೊತೆಗೆ ವ್ಯವಸಾಯ ಸುಧಾರಣೆಗಳ ಪ್ರಯೋಗ - ಇವು. ಇವುಗಳಿಂದಾಗಿ ಡೆನ್ಮಾರ್ಕ್ ದೇಶದ ಆರ್ಥಿಕ ಪರಿಸ್ಥಿತಿ ತುಂಬ ಹದಗೆಟ್ಟಿತು; ಅವುಗಳ ಅಸ್ತಿತ್ವಕ್ಕೆ ಭಂಗ ಬರುವಂತಾಯಿತು. ಯಾವ ದೇಶದಲ್ಲಿಯೇ ಆಗಲಿ ಇಂತಹ ವಿಷಮ ಪರಿಸ್ಥಿತಿ ಉದ್ಭವವಾದಾಗ ಭಗವಂತನ ಕೃಪೆಯೇ ಮೂರ್ತಿಗೊಂಡಂತೆ ಪ್ರವಾದಿಗಳು ಹುಟ್ಟುತ್ತಾರೆ. ದೇಜಗೌ ಅಂಥವರಲ್ಲಿ ಎನ್. ಎಫ್. ಎಸ್. ಗ್ರಂಟ್‌ವಿಗ್ಗನೂ ಒಬ್ಬ (೧೭೮೩-೧೮೭೨). ಡೆನ್ಮಾರ್ಕಿನ ನವೋದಯಕ್ಕೆ ಈತನೇ ಕಾರಣ. "ನಾಡಿನ ನಾಡಿಯನ್ನು ಪರೀಕ್ಷಿಸಿ, ದೋಷವನ್ನು ಗುರುತಿಸಿ, ಅದರ ಪರಿಹಾರಕ್ಕಾಗಿ ತನ್ನ ಜೀವಮಾನವನ್ನೆಲ್ಲಾ ಮುಡಿಪಾಗಿರಿಸಿದನು... ವಯಸ್ಕರಿಗೆ ಉಚಿತವಾದ ಮತ್ತು ಪರಿಣಾಮಕಾರಿಯಾದ ಶಿಕ್ಷಣವನ್ನು ವ್ಯವಸ್ಥೆ ಮಾಡುವುದರಿಂದ ಮಾತ್ರ ನಾಡಿನ ಪ್ರಗತಿ ಸಾಧ್ಯವೆಂದು ಸಾರಿದನು. ಸಮಗ್ರ ಜೀವನದ ಪೂರ್ಣ ವಿಕಾಸವೇ ಶಿಕ್ಷಣದ ಗುರಿಯೇ ಹೊರತು ಅಧಿಕಾರ ಸಂಪಾದನೆಯಲ್ಲ ಎಂದು ಸಾರಿದನೂ. ೧೮೪೯ರಲ್ಲಿ ಡೆನ್ಮಾರ್ಕ್ ತನ್ನ ಹೊಸ ರಾಜ್ಯಾಂಗವನ್ನು ಅಂಗೀಕರಿಸಿತು. ಅದರಲ್ಲಿ ಗ್ರಂಟ್‌ವಿಗ್ಗನ ಶಿಕ್ಷಣ ತತ್ವಗಳ ಅನುಷ್ಠಾನಕ್ಕೆ ಅವಕಾಶವನ್ನು ಕಲ್ಪಿಸಿತ್ತು. ಈ ನೀತಿಯ ಫಲವೇ ಡೆನ್ಮಾರ್ಕ್‌ನಲ್ಲಿ ಜನತಾ ಕಾಲೇಜುಗಳು ಪ್ರಾರಂಭವಾಗಲು ಕಾರಣವಾಯಿತು. ಆ ದೇಶದಲ್ಲಿ ಅವುಗಳನ್ನು ಫೋಕ್ ಸ್ಕೂಲ್ಸ್ ಎಂದು ಕರೆಯುವರು. ಯುವಕರು ವರ್ಷದಲ್ಲಿ ಐದು ತಿಂಗಳ ಕಾಲ ತಮ್ಮ ಹೊಲಗದ್ದೆಗಳನ್ನು ತೊರೆದು ಈ ಶಿಕ್ಷಣ ಕೇಂದ್ರಗಳಲ್ಲಿ ಶಿಕ್ಷಣ ಪಡೆದು ಅದರಿಂದ ಸ್ಫೂರ್ತಿ ಪಡೆದರು. ಈ ಕಾರ್ಯಕ್ರಮ ದೇಶದ ಆರ್ಥಿಕ ಸ್ವರೂಪವನ್ನೆ ಬದಲಿಸಿತು. ಇದರ ಪರಿಣಾಮ ದೇಶದ ಆರ್ಥಿಕವಾಗಿ ಅಭಿವೃದ್ಧಿ ಸಾಧಿಸಿತು. ಮೈಸೂರಿನ ವಯಸ್ಕರ ಶಿಕ್ಷಣ ಸಮಿತಿ ಈ ಸಂಸ್ಥೆಗಳು ಡೆನ್ಮಾರ್ಕ್‌ನಲ್ಲಿ ಸಾಧಿಸಿದ ಪ್ರಗತಿಯಿಂದ ಸ್ಫೂರ್ತಿಗೊಂಡು ಮೈಸೂರು ರಾಜ್ಯದಲ್ಲೂ ವಿದ್ಯಾಪೀಠಗಳನ್ನು ಪ್ರಾರಂಭಿಸಿತು.

ಡೆನ್ಮಾರ್ಕ್‌ನಲ್ಲಿ ಸಾಮಾನ್ಯವರ್ಗದ ೮೦೦೦ ಮಂದಿ ಯುವಕ ಯುವತಿಯರು ಈ ಶಿಕ್ಷಣ ಕೇಂದ್ರಗಳಲ್ಲಿ ತರಬೇತು ಪಡೆಯಲು ತಮ್ಮ ದುಡಿಮೆಯಲ್ಲಿ ಗಳಿಸಿದುದರಲ್ಲಿ ಸಾಕಷ್ಟು ಹಣವನ್ನು ಅಲ್ಲಿಯ ವೆಚ್ಚಕ್ಕಾಗಿ ಮಿಗಿಸಿಕೊಂಡು ಸ್ವಪ್ರೇರಣೆಯಿಂದ ಈ ಕೇಂದ್ರಗಳಿಗೆ ಬರುವರು.

ಮೈಸೂರಿನಲ್ಲಿ ಪ್ರಥಮ ವಿದ್ಯಾಪೀಠ ಬೆಂಗಳೂರಿನ ಸಮೀಪದ ವಿದ್ಯಾನಗರದಲ್ಲಿ

ಪ್ರಾರಂಭವಾದರೂ ಅದು ಅಲ್ಲಿ ಮುಂದು ವರಿಯಲಿಲ್ಲ. ಆದರೆ ಅದಕ್ಕೂ ಮೊದಲೆ ವಯಸ್ಕರ ಶಿಕ್ಷಣ ಸಮಿತಿ ಮೈಸೂರು ಜಿಲ್ಲೆಯ ನಂಜನಗೂಡಿನಲ್ಲಿ ೧೯೪೭ರಷ್ಟು ಹಿಂದೆಯೇ ಪ್ರಾಯೋಗಿಕವಾಗಿ ಒಂದು ವಿದ್ಯಾಪೀಠ ಪ್ರಾರಂಭಮಾಡಿತ್ತು. ಸಂಸ್ಥೆಯ ಕಾರ್ಯಚಟು ವಟಿಕೆಗಳು ಕೇಂದ್ರ ಸರ್ಕಾರದ ಗಮನ ಸೆಳೆದುವು. ಸಂಸ್ಥೆಯ ಚಟುವಟಿಕೆಗಳು ಪ್ರಗತಿ ಪಥದಲ್ಲಿ ಸಾಗುತ್ತಿರುವುದು ಯುನೆಸ್ಕೊ ಗಮನ ಸೆಳೆದುದು ಕೆಲವು ವೀಕ್ಷಕರನ್ನು ಕಳುಹಿತು. ವೀಕ್ಷಕರ ವರದಿಯಿಂದ ಸಂತುಷ್ಟ ವಾದ ಯುನೆಸ್ಕೊ ಈ ಸಂಸ್ಥೆಯನ್ನು "ಪೈಲಟ್ ಪ್ರಾಜೆಕ್ಟ್" ಆಗಿ ಅಂಗೀಕರಿಸಿತು. ನಂತರ ಸಂಸ್ಥೆ ಫೋರ್ಡ್ ಫೌಂಡೇಷನ್ ಮತ್ತು ಡೆನ್ಮಾರ್ಕ್ ದೇಶಗಳ ಗಮನ ಸೆಳೆದು ಆ ಮೂಲಕ ವಿದ್ಯಾಪೀಠಗಳನ್ನು ಪ್ರಾರಂಭಿಸಿತು. ಯುನೆಸ್ಕೊ ಸಂಸ್ಥೆಗೆ ಉಡುಗೆರೆ ಚೀಟಿ (ಗಿಫ್ಟ್ ಕೂಪನ್) ಕೊಟ್ಟಿತು.

ಫೋರ್ಡ್ ಫೌಂಡೇಷನ್ ವಿದ್ಯಾಪೀಠ ಯೋಜನೆಯುನ್ನು ಅಧ್ಯಯನ ಮಾಡಲು ತಜ್ಞರನ್ನು ಕಳುಹಿಸಿದುದಲ್ಲದೆ ಅರಿವುಗಳ ಚಟುವಟಿಕೆಗಳಿಂದ ತೃಪ್ತರಾಗಿ ಅವುಗಳ ಕಾರ್ಯಕ್ರಮ ಇನ್ನೂ ವ್ಯಾಪಕವಾಗಿ ನಡೆಯ ಬೇಕೆಂದು ಅಭಿಪ್ರಾಯಿಸಿ ಪ್ರತಿಜಿಲ್ಲೆಯಲ್ಲೂ ಒಂದು ವಿದ್ಯಾಪೀಠ ಪ್ರಾರಂಭಿಸಲು ಸಹಾಯ ನೀಡಿತು. ಈ ಉದ್ದೇಶದಂತೆ ಈಗ ರಾಜ್ಯದಲ್ಲಿ ೧೬ ವಿದ್ಯಾಪೀಠಗಳಿವೆ. ಕೆಲವು ಅಭಿವೃದ್ಧಿ ಯಾಗಿದ್ದವು ಮತ್ತೆ ಕೆಲವು ಅಭಿವೃದ್ಧಿಯ ವಿವಿಧ ಹಂತದಲ್ಲಿವೆ.

ದಿವಂಗತ ಎಸ್. ಬಾಲಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ರಚಿಸಿದ್ದ ವಿದ್ಯಾಪೀಠಗಳ ಉಪಸಮಿತಿಯು ವಿದ್ಯಾಪೀಠಗಳ ಜವಾಬ್ದಾರಿ ಮತ್ತು ಕಾರ್ಯಕ್ರಮಗಳನ್ನು ನಿರ್ಧರಿಸಿದೆ. ಈ ವರದಿಯಂತೆ ವಿದ್ಯಾಪೀಠಗಳಲ್ಲಿ ತರಬೇತು ಪಡೆಯುವವರು ೧೬ರಿಂದ ೨೫ರೊಳಗಿನ ವಯೋಮಿತಿಯಲ್ಲಿರಬೇಕು. ಏಕೆಂದರೆ ಮನುಷ್ಯನ ಜೀವನದಲ್ಲಿ ಇದೊಂದು ಮುಖ್ಯ ವಾದ ಘಟ್ಟ. ಬದುಕಿನ ರಹಸ್ಯ ಆಗ ತಾನೆ ಹೊಳೆಯಲು ಪ್ರಾರಂಭವಾಗುತ್ತಿರುತ್ತದೆ. ತನ್ನ ಜನ, ತನ್ನ ನಾಡು, ತನ್ನ ನುಡಿಯ ವಿಷಯ ವಾಗಿನ ಅಭಿಮಾನ ಆಗತಾನೆ ಮೊಳಕೆಯೊಡೆ ಯುತ್ತಿರುತ್ತದೆ. ಸಾಹಸ ಮನೋಭಾವನೆ ಆ ವಯಸ್ಸಿನವರಿಗೆ ಸಾಮಾನ್ಯ. ಆ ವಯಸ್ಸಿ ನವರು ಹಲವು ರೀತಿಯ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ಆದುದರಿಂದ ಅವರಿಗೆ ವಿದ್ಯಾಪೀಠಗಳಲ್ಲಿ ತರಬೇತು ನೀಡುವುದರಿಂದ ರಾಷ್ಟ್ರದ ಆರ್ಥಿಕಾಭಿವೃದ್ಧಿ ಯನ್ನು ತ್ವರಿತಗೊಳಿಸಬಹುದು.

ಇಂದು ವಿದ್ಯಾಪೀಠಗಳಲ್ಲಿ ತರಬೇತು ಪಡೆಯುವವರು ೧೫-೨೫ ವಯೋಮಿತಿ ಯಲ್ಲಿರಬೇಕು. ಅವರು ಕನಿಷ್ಠ ಆರನೆಯ ತರಗತಿಯವರೆಗೆ ಶಿಕ್ಷಣ ಪಡೆದಿರಬೇಕು. ಗರಿಷ್ಠ ಮಿತಿ ಪ್ರೌಢಶಿಕ್ಷಣ. ವಿದ್ಯಾಪೀಠಗಳಲ್ಲಿ ಆಸಕ್ತಿ ಹೊಂದಿರುವ ದೂರದರ್ಶಿತ್ವ ಇರುವ ಸಮರ್ಪಣಾ ಮನೋಭಾವ ಮತ್ತು ಆ ಯೋಜನೆಯಲ್ಲಿ ಪೂರ್ಣ ನಂಬಿಕೆ ಇರುವ ಕಾರ್ಯಕರ್ತರು ಇರಬೇಕು. ತರಬೇತು ಐದು ತಿಂಗಳ ಅವಧಿಯದು; ಬೋಧನಾ ಅವಧಿ ೫೬೦ ಗಂಟೆಗಳು. ಶಿಕ್ಷಣಾರ್ಥಿಗಳು ತಾವು ತೊಡಗಿರುವ ವೃತ್ತಿಗೆ ಸಂಬಂಧಿಸಿದಂತೆ ಹೆಚ್ಚಿನ ನೈಪುಣ್ಯತೆ ಪಡೆಯುವುದಕ್ಕೆ ಮತ್ತು ಕಾರ್ಯಾನುಭವಕ್ಕೆ ಹೆಚ್ಚು ಒತ್ತು ಕೊಡಬೇಕು. ಈಗಿನ ಪಠ್ಯಸೂಚಿ ಯಲ್ಲಿ ಲೋಕವ್ಯವಹಾರಕ್ಕೆ ಮತ್ತು ಜೀವನದ ಸಮಸ್ಯೆಗಳಿಗೆ ಸಂಬಂಧಿಸಿದ ವಿಷಯುಗಳಿಗೆ ಆದ್ಯತೆ ಕೊಟ್ಟಿದೆ. ಪಠ್ಯಸೂಚಿಯಲ್ಲಿರುವ ವಿಷಯಗಳು. ನಮ್ಮ ಸಂಸ್ಕೃತಿ, ಕನ್ನಡ ಸಾಹಿತ್ಯ

ಮತ್ತು ಅದರ ಇತಿಹಾಸ, ಸರಕಾರದ ವಿವಿಧ ಇಲಾಖೆಗಳು ಮತ್ತು ಸರ್ಕಾರದ ಯೋಜನೆಗಳ ಪರಿಚಯ, ಆಧುನಿಕ ಭಾರತ, ನಮ್ಮ ಸ್ವಾಭಾವಿಕ ಸಂಪತ್ತು, ಲಲಿತ ಕಲೆಗಳು, ಪೌರನೀತಿ, ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ, ವಯಸ್ಕರ ಶಿಕ್ಷಣ, ವ್ಯವಸಾಯ ಮತ್ತು ತೋಟಗಾರಿಕೆ, ಪಶುಪಾಲನೆ, ಗೃಹಕೈಗಾರಿಕೆಗಳು.

ನಮ್ಮ ವಿದ್ಯಾಪೀಠಗಳು ಡೆನ್ಮಾರ್ಕಿನ ಜನತಾ ಶಾಲೆಗಳ ಮಾದರಿಯಲ್ಲಿ ರೂಪಿತವಾಗಿದೆ. ಡೆನ್ಮಾರ್ಕ್ ಒಂದು ಚಿಕ್ಕ ದೇಶ, ದೇಶ ಚಿಕ್ಕದಾದರು ಅದರ ಕೀರ್ತಿ ಹಿರಿದಾಗಿದೆ. ಅದು ಇಂದು ಮುಂದುವರಿದ ದೇಶವಾಗಿದೆ. ಡೆನ್ಮಾರ್ಕ್ ನಮ್ಮ ಕರ್ನಾಟಕದ ಕಾಲು ಭಾಗದಷ್ಟಿದೆ. ಆ ಜನ ಮುಂದುವರಿಯಲು ಅಲ್ಲಿನ ಜನರ ಶ್ರದ್ಧೆ, ತ್ಯಾಗ, ಶ್ರಮ ಮತ್ತು ಸಾಹಸವೇ ಕಾರಣ ಎಂದರೆ ತಪ್ಪಾಗಲಾರದು. ಇಂತಹ ಜನಾಂಗದ ನಿರ್ಮಾಣಕ್ಕೆ ಹೆಸರಾಂತ ಸೇವೆ ಸಲ್ಲಿಸಿರುವ ಜನತಾ ಶಾಲೆಗಳೇ ಕಾರಣ. ಆ ಶಾಲೆಗಳು ನಮ್ಮ ರಾಜ್ಯದ ವಿದ್ಯಾಪೀಠಗಳ ಮೇಲೆ ಪ್ರಭಾವ ಬೀರಿವೆ. ಡೆನ್ಮಾರ್ಕಿನ ಜನತಾಶಾಲೆಗಳೇ ಮೈಸೂರಿನಲ್ಲಿ ವಿದ್ಯಾಪೀಠಗಳ ಆರಂಭಕ್ಕೆ ಸ್ಫೂರ್ತಿ.

ಡೆನ್ಮಾರ್ಕಿನ ಜನತಾ ಕಾಲೇಜುಗಳ ಜನನಕ್ಕೆ ಎನ್.ಎಫ್.ಎಸ್.ಗ್ರಂಟವಿಗ್ಗನೇ ಕಾರಣ ಎಂಬ ಅಂಶ ನಿಮಗಾಗಲೇ ತಿಳಿಸಿದೆ. ಡೆನ್ಮಾರ್ಕ್ ದೇಶದ ಆರ್ಥಿಕ ಪರಿಸ್ಥಿತಿ ಹದಗೆಟ್ಟಾಗ, ಆ ನಾಡಿನ ನಾಡಿಯನ್ನು ಪರೀಕ್ಷಿಸಿ, ದೋಷವನ್ನು ಗುರುತಿಸಿ ಅದರ ಪರಿಹಾರಕ್ಕೆ ಜೀವಮಾನವನ್ನೆಲ್ಲ ಮುಡುಪಾಗಿರಿಸಿದವನು ಈ ಮಹನೀಯ. ವಯಸ್ಕರಿಗೆ ಉಚಿತವಾದ ಮತ್ತು ಪರಿಣಾಮಕಾರಿಯಾದ ಶಿಕ್ಷಣವನ್ನು ವ್ಯವಸ್ಥೆಗೊಳಿಸುವುದರಿಂದ ಮಾತ್ರ ನಾಡಿನ ಪ್ರಗತಿ ಎಂದು ಸಾರಿದನು. ಶಿಕ್ಷಣದಗುರಿ ಸಮಗ್ರಜೀವನದ ಪೂರ್ಣವಿಕಾಸ ಎಂದು ಹೇಳಿದನು. ಇದೇ ಮಾತನ್ನೆ ನಮ್ಮ ದೇಶದ ಸ್ವಾಮಿ ವಿವೇಕಾನಂದರು ಬೇರೆ ರೀತಿಯಲ್ಲಿ ಅಂದರೆ 'ವ್ಯಕ್ತಿಯಲ್ಲಿ ಅಡಗಿರುವ ಪೂರ್ಣತ್ವನ್ನು ಹೊರತೆಗೆಯುವುದು' ಶಿಕ್ಷಣದಗುರಿ. ಗ್ರಂಟ್ ವಿಗ್ಗನ ವಿಚಾರ ಧಾರೆ ಜನತಾ ಕಾಲೇಜುಗ ಜನನಕ್ಕೆ ಕಾರಣವಾಯಿತು. ಕಳೆದ ಅರ್ಧ ಶತಮಾನದಲ್ಲಿ ಅಂದರೆ ೨೦ನೆ ಶತಮಾನ ಮೊದಲ ಅರ್ಧ ಶತಮಾನದಲ್ಲಿ ದೇಶದ ಕಾಲಭಾಗ ವಯಸ್ಕರು ಇಲ್ಲಿ ಕಲಿತು ಹೋಗಿರುತ್ತಾರೆ. ಆ ದೇಶದಲ್ಲಿನ ಸಹಕಾರ ಚಳುವಳಿಯ ಯಶಸ್ಸಿಗೆ, ಜನತಾ ಕಾಲೇಜುಗಳ ತರಬೇತಿ ಎಂದರೆ ತಪ್ಪಾಗಲಾರದು.

ಗ್ರಂಟ್ ವಿಗ್ಗನಿಗೆ ಜನಸಾಮಾನ್ಯರ ಬಗ್ಗೆ ಅನುಕಂಪವಿತ್ತು. ಮಾನವನ ಹಿರಿಮೆಯಲ್ಲಿ ಅವನಿಗೆ ಅಪಾರವಾದ ನಂಬುಗೆಯಿತ್ತು. ಪ್ರತಿಯೊಬ್ಬರೂ ದೇವರ ಮಕ್ಕಳು, ಆದ್ದರಿಂದ ಅವರಲ್ಲಿ ದೈವಾಂಶವಿದೆ. ಅವರಲ್ಲಿ ಸುಪ್ತವಾಗಿರುವ ದೈವಾಂಶ ಸಂಭೂತವಾದ ಗುಣಗಳು ಹೊರಹೊಮ್ಮಬೇಕು. ಅದಕ್ಕೆ ಸಾಕಷ್ಟು ಅವಕಾಶಗಳಿರಬೇಕು. ಈ ಅವಕಾಶಗಳನ್ನು ಕಲ್ಪಿಸುವುದೇ ವಿದ್ಯೆ, ವಿದ್ಯೆಯೊಂದೇ ಸಾಲದು. ಆ ವ್ಯಕ್ತಿಯಲ್ಲಿ ಸೇವಾ ಪ್ರಜ್ಞೆಯಿರಬೇಕು. ಓದಿಗೂ ಮತ್ತು ಜೀವನಕ್ಕೂ ನಿಕಟ ಸಂಪರ್ಕವಿರಬೇಕು. ಉಪಾಧ್ಯಾಯರು ವಿದ್ಯಾರ್ಥಿಗಳೊಂದಿಗೆ ನಿಕಟವಾದ ಬಾಂಧವ್ಯವನ್ನು ಹೊಂದಿರಬೇಕು. ಅವರ ಅಂತರಾಳವನ್ನು ಮುಟ್ಟುವಂತೆ ಪಾಠಪ್ರವಚನಗಳನ್ನು ತಾಯಿನುಡಿಯಲ್ಲೇ ಮಾಡಬೇಕು. ಹಾಗೂ ಅವರ ಆಸಕ್ತಿಗಳನ್ನರಿತು ಪಾಠಪ್ರವಚನಗಳನ್ನು ರೂಪಿಸಬೇಕು. ವಿದ್ಯೆ ಎಲ್ಲರಿಗೂ ಅಗತ್ಯ. ಎಲ್ಲರೂ ಸರಕಾರದ ವ್ಯವಹಾರದಲ್ಲಿ ತಮ್ಮ ಕಾಣಿಕೆಯನ್ನು ಸಲ್ಲಿಸಬೇಕು. ಸಾಮಾನ್ಯ ಶಾಲಾ

ಕಾಲೇಜುಗಳಲ್ಲಿ ಜೀವನಕ್ಕೆ ಬೇಕಾದ ಶಿಕ್ಷಣ ದೊರೆಯುವುದಿಲ್ಲ. ಮಾನವನ ಜೀವನದಲ್ಲಿ ೧೮ರಿಂದ ೨೦ ವಯಸ್ಸಿನ ಅವಧಿ ಬಳಿಕ ಪ್ರಾಮುಖ್ಯವಾದುದು ಈ ಅವಧಿಯಲ್ಲಿ ದೇಹ, ಬುದ್ಧಿ ಮತ್ತು ಹೃದಯ ಕೂಡಿ ಕೆಲಸಮಾಡುವ ಶಿಕ್ಷಣ ಬೇಕು ಎಂಬುದು ಅವನ ಅಭಿಪ್ರಾಯ . ಆತನ ಜೀವನ ಮತ್ತು ತತ್ತ್ವ ನಮಗೆಲ್ಲಾ ಮಾರ್ಗದರ್ಶನವಾಗಿದೆ.

ವಿದ್ಯಾಪೀಠಗಳೆಂದರೆ ನಮಗೆ ಜ್ಞಾಪಕ ಬರುವ ಇನ್ನೊಂದು ದೇಶ ಸ್ವೀಡನ್. ಅಲ್ಲಿನ ವಿದ್ಯಾಪೀಠಗಳು ಇಡೀ ಪ್ರಪಂಚದ ಕುತೂಹಲಾಸಕ್ತಿಗಳನ್ನು ಕೆರಳಿಸಿದೆ. ಅಲ್ಲಿನ ಶಿಕ್ಷಣ ವಿಧಾನಗಳನ್ನರಿಯಲು ಪ್ರತಿವರ್ಷವೂ ನಾನಾ ದೇಶಗಳಿಂದ ಶಿಕ್ಷಣ ತಜ್ಞರು ತಂಡತಂಡವಾಗಿ ಹೋಗುತ್ತಾರೆ. ಆ ದೇಶ ಒಂದರಲ್ಲಿಯೇ ೭೦ ವಿದ್ಯಾಪೀಠಗಳಿವೆ. ಪ್ರತಿ ವರ್ಷವೂ ಎಂಟು ಸಾವಿರ ವಿದ್ಯಾರ್ಥಿಗಳು ಅವುಗಳಿಂದ ಪ್ರಯೋಜನ ಪಡೆಯುತ್ತಿದ್ದಾರೆ. ವರ್ಷೇ ವರ್ಷೇ ಹೊಸ ಪೀಠಗಳು ಹೆಚ್ಚುತ್ತವೆ. ವಿದ್ಯಾರ್ಥಿಗಳ ಸಂಖ್ಯೆ ವರ್ಧಿಸುತ್ತಿದೆ. ಸ್ವೀಡನ್ನಿನ ಸ್ಟಾಕೆಹೋಮ್ ವಿಶ್ವವಿದ್ಯಾಲಯ ಪ್ರಖ್ಯಾತವಾದುದು. ಮಹತ್ವದ ಸಂಗತಿ ಎಂದರೆ ಈ ವಿದ್ಯಾಪೀಠ ವಿದ್ಯಾರ್ಥಿಗಳ ಹುರುಪು ಮತ್ತು ದೇಶಭಮಾನದಿಂದ ಜನಿತವಾದುದು. ಈ ಪೀಠದ ಆಡಳಿತ ವಿದ್ಯಾರ್ಥಿಗಳ ಕೈಯಲ್ಲಿದೆ. ಸ್ವೀಡನ್ನಿನ ಯುವ ಜನರ ಈ ಕಾರ್ಯ ನಮ್ಮ ದೇಶದ ಯುವ ಜನರಿಗೆ ಮಾರ್ಗದರ್ಶನವಾಗಿದೆ. ಅವರಿಂದ ನಮ್ಮ ಯುವ ಜನರು ಸಹ ಸ್ಫೂರ್ತಿ ಪಡೆಯಬೇಕಾಗಿದೆ. ಜನರ ಚುಚ್ಚುನುಡಿಗಳಿಗೆ ಗಮನ ಕೊಡದೆ ವಿದ್ಯಾರ್ಥಿಗಳು ಆರಂಭಿಸಿದ ರಾತ್ರಿ ಶಾಲೆಗಳು ವಿಶ್ವವಿದ್ಯಾಪೀಠವಾಗಿ ಪರಿಣಮಿಸಿ ಸಾವಿರಾರು ವಯಸ್ಕರ ಶಿಕ್ಷಣಾರ್ಥಿಗಳನ್ನು ಇಂದು ಒಳಗೊಂಡಿದೆ.

ಡೆನ್ಮಾರ್ಕ್, ನಾರ್ವೆ , ಸ್ವೀಡನ್ ದೇಶಗಳಲ್ಲಿ ಜನತಾ ಶಾಲೆಗಳು ಜನಜೀವನದ ಮೇಲೆ ವಿಶೇಷ ಪ್ರಭಾವವನ್ನು ಬೀರದಂತೆ, ನಮ್ಮ ದೇಶದ ವಿದ್ಯಾಪೀಠಗಳು ಜನಜೀವನದ ಮೇಲೆ ಪ್ರಭಾವ ಬೀರುವಂತಾಗಬೇಕು. ಮೂಢನಂಬಿಕೆಗಳು ಹೋಗಿ ನಮ್ಮ ದೇಶದ ರೈತ ಪ್ರಗತಿಪರ ರೈತನಾಗಬೇಕು. ಡೇನಿಷ್ ರೈತ ಮಾದರಿ ರೈತನಾದಂತೆ ನಮ್ಮ ದೇಶದ ರೈತನು ಮಾದರಿ ರೈತನಾಗಬೇಕು. ವಿದ್ಯಾಪೀಠಗಳಲ್ಲಿ ಯುವಕರು ಪಡೆದ ಶಿಕ್ಷಣ ನಮ್ಮ ಗ್ರಾಮಗಳ ಪ್ರಗತಿಗೆ ಕಾರಣವಾಗುವುದಾದರೆ, ಆಗ ಅವರು ಪಡೆದ ಶಿಕ್ಷಣ ಸಾರ್ಥಕವಾದಂತೆ. ಕರ್ನಾಟಕ ರಾಜ್ಯದ ವಿದ್ಯಾಪೀಠಗಳು ಅಂತರಾಷ್ಟ್ರೀಯ ಕೀರ್ತಿಯನ್ನು ಪಡೆದಿದ್ದುವು . ಆದರೆ ಇಂದು ಅದು ಕಳೆದು ಹೋದ ಸಂಗತಿ. ಇಂದು ಅವುಗಳನ್ನು ಪುನರುಜ್ಜೀವನಗೊಳಿಸಬೇಕಾಗಿದೆ. ಅದಕ್ಕಾಗಿಯೆ ನಿಗದಿತ ಅವಧಿಯಲ್ಲಿ ಯಶಸ್ವಿಯಾಗಿ ಕಾರ್ಯರೂಪಕ್ಕೆ ತರಬಹುದಾದಂತಹ ಅರ್ಥಪೂರ್ಣ ಯೋಜನೆ ಸಿದ್ಧಪಡಿಸಿ ಅನುಷ್ಠಾನಕ್ಕೆ ತರಬೇಕು. ಈ ಕಾರ್ಯಕ್ಕಾಗಿ ಡೇನಿಡಾ ಸಲಹೆ ಸಹಕಾರವನ್ನೂ ಪಡೆಯಬೇಕು.

ಪ್ರಾರಂಭದಲ್ಲಿ ವಿದ್ಯಾಪೀಠಗಳು ಜನಪ್ರಿಯವಾಗಿದ್ದು ಜನರನ್ನು ಆಕರ್ಷಿಸುತ್ತಿದ್ದುವು. ತರಬೇತು ಪಡೆದ ಸಮರ್ಪಣಾ ಮನೋಭಾವದ ಜನರು ನಿವೃತ್ತರಾದಂತೆ ಆಸ್ಥಾನಗಳನ್ನು ತುಂಬಲು ಅರ್ಹವ್ಯಕ್ತಿಗಳಿಲ್ಲದೆ ಅವುಗಳು ಇಂದು ಜೀವಚ್ಛವಗಳಂತಿವೆ.

ಕರ್ನಾಟಕ ರಾಜ್ಯದಲ್ಲಿ ಒಟ್ಟು ಹದಿನಾರು ವಿದ್ಯಾಪೀಠಗಳು ಕೆಲಸ ಮಾಡುತ್ತಿದ್ದು , ಇವುಗಳಲ್ಲಿ ನಾಲ್ಕು ವಿದ್ಯಾಪೀಠಗಳು ಮಹಿಳೆಯರಿಗಾಗಿ ಮೀಸಲಾಗಿದೆ. ಪ್ರಥಮ ವಿದ್ಯಾಪೀಠ ೧೯೪೭ರಲ್ಲಿ ನಂಜನಗೂಡಿನಲ್ಲಿ ಸ್ಥಾಪಿಸ

ಲಾಯಿತು. ಗ್ರಾಮಾಂತರ ಯುವ ಜನತೆಗೆ ವ್ಯವಸ್ಥಾಯ ಕೈಗಾರಿಕೆ ಮುಂತಾದ ಹಲವಾರು ವಿಷಯಗಳಲ್ಲಿ ತಮ್ಮ ಪರಿಸರದ ಹಿನ್ನೆಲೆಯಲ್ಲಿ ಶಿಕ್ಷಣ ನೀಡುವುದು, ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ನಾಯಕತ್ವವಹಿಸಿ, ಯಶಸ್ವಿಯಾಗಿ ಸಮಾಜ ಸೇವೆ ಸಲ್ಲಿಸಲು ಅಗತ್ಯವಾದ ಜ್ಞಾನ ನೀಡುವುದು ವಿದ್ಯಾಪೀಠಗಳ ಗುರಿಯಾಗಿದೆ.

ವಿದ್ಯಾಪೀಠದ ಯೋಜನೆಯು ಯುನೆಸ್ಕೋ, ಡೆನ್ಮಾರ್ಕ್ ಮತ್ತು ಫೋರ್ಡ್ ಫೌಂಡೇಷನ್‌ಗಳ ಅವರ ಗಮನ ಸೆಳೆಯಿತು. ಫೋರ್ಡ್ ಫೌಂಡೇಶನ್ ವಿದ್ಯಾಪೀಠದ ಅಧ್ಯಯನ ಮಾಡಲು ತಜ್ಞರನ್ನು ಕಳುಹಿಸಿ, ಈ ಕಾರ್ಯ ಇನ್ನೂ ವ್ಯಾಪಕವಾಗಿ ನಡೆಯಬೇಕೆಂಬ ದೃಷ್ಟಿಯಿಂದ ಜಿಲ್ಲೆಗೆ ಒಂದು ವಿದ್ಯಾಪೀಠ ಆರಂಭಿಸಲು ಧನ ಸಹಾಯ ಮಾಡಿತು. ಡೇನಿಷ್ ತಜ್ಞರು ಶಿವಾರಗುಡ್ಡ ಮತ್ತು ತುಂಗಾ ವಿದ್ಯಾಪೀಠಗಳಲ್ಲಿ ಕೆಲಸ ಕೈಗೊಂಡರು. ಇದರ ವೆಚ್ಚವನ್ನು ಡೇನಿಷ್ ದೇಶದ ಸಂಸ್ಥೆಯು ನೀಡಿತು.

ಕರ್ನಾಟಕ ರಾಜ್ಯದಲ್ಲಿ ವಿದ್ಯಾಪೀಠಗಳಿರುವ ಸ್ಥಳಗಳು :

೧. ಕೆಂಗೇರಿ- ಬೆಂಗಳೂರು ಜಿಲ್ಲೆ
೨. ನಂಜನಗೂಡು - ಮೈಸೂರು ಜಿಲ್ಲೆ
೩. ಯಗಚಿ- ಹಾಸನಜಿಲ್ಲೆ
೪. ನವಿಲಗಿರಿ- ಉತ್ತರ ಕನ್ನಡ ಜಿಲ್ಲೆ
೫. ಕಾವೇರಿ - ಮಂಡ್ಯ ಜಿಲ್ಲೆ
೬. ಕಾತರಾಳು- ಚಿತ್ರದುರ್ಗ ಜಿಲ್ಲೆ
೭. ಬಸವಕಲ್ಯಾಣ- ಬೀದರ್ ಜಿಲ್ಲೆ
೮. ಶಿವಾರಗುಡ್ಡ- ಮಂಡ್ಯಜಿಲ್ಲೆ
೯. ಬಂಥನಾಳ- ಬಿಜಾಪುರ ಜಿಲ್ಲೆ
೧೦. ಏನಿಗದೆಲೆ- ಕೋಲಾರ ಜಿಲ್ಲೆ
೧೧. ತುಂಗಾ - ಶಿವಮೊಗ್ಗ ಜಿಲ್ಲೆ
೧೨. ಪಂಪಾ- ಬಳ್ಳಾರಿ ಜಿಲ್ಲೆ
೧೩. ಚಾರಾ- ಉಡುಪಿ ಜಿಲ್ಲೆ
೧೪. ಹೊಯ್ಸಳ- ಚಿಕ್ಕಮಗಳೂರು ಜಿಲ್ಲೆ
೧೫. ವರದಾ- ಹಾವೇರಿ ಜಿಲ್ಲೆ
೧೬. ಶಿವಗಂಗಾ- ತುಮಕೂರು ಜಿಲ್ಲೆ

ಸಮಿತಿಯ ಇಂದಿನ ಸ್ಥಿತಿ :

ವಯಸ್ಕರ ಶಿಕ್ಷಣ ಸಮಿತಿ ಪೂರ್ಣ ಸ್ವಾಯತ್ತ ಸಂಸ್ಥೆಯಾಗಿದ್ದವರೆಗೆ ಗಣನೀಯ ಸೇವೆ ಸಲ್ಲಿಸಿತು. ವಿಶ್ವದ ಬೇರೆ ಬೇರೆ ರಾಷ್ಟ್ರಗಳ ಗಮನ ಸೆಳೆಯಿತು. ಆ ಸಂಸ್ಥೆಯ ಬೆಳವಣಿಗೆಗೆ ಕಾರಣರಾದ ಕೆಲವರು ಅಂದರೆ ಶ್ರೀಯುತರುಗಳಾ ಶ್ರೀನಿವಾಸರಾಯರು, ನ. ಭದ್ರಯ್ಯ ಮುಂತಾದವರು ಯುನೆಸ್ಕೊ ಸಂಸ್ಥೆಯಲ್ಲಿ ವಯಸ್ಕರ ಶಿಕ್ಷಣ ತಜ್ಞರೆಂದು ಪರಿಗಣಿಸಲ್ಪಟ್ಟು ವಿಶ್ವದ ಬೇರೆ ಬೇರೆ ರಾಷ್ಟ್ರಗಳಲ್ಲಿ ಅನಕ್ಷರತೆಯ ನಿರ್ಮೂಲನಕ್ಕೆ ಶ್ರಮಿಸಿದ್ದಾರೆ. ಆದರೆ ಸಮಿತಿಯ ಅಧ್ಯಕ್ಷಗಾದಿ ಅತೃಪ್ತ ರಾಜಕಾರಣಿಗಳನ್ನು ತೃಪ್ತಿಪಡಿಸುವುದಕ್ಕಾಗಿ ಇಲ್ಲವೆ ವರಿಷ್ಠರ ಕೃಪೆಗೊಳಗಾದವರನ್ನು ಕೂಡಿಸಲು ಉಪಯೋಗವಾಗಲು ಪ್ರಾರಂಭವಾದಾಗಿನಿಂದ ಸಂಸ್ಥೆ ಅದರ ಮೂಲಸ್ವರೂಪವನ್ನು ಕಳೆದುಕೊಂಡಿದೆ. ಆಗಲೂ ಒಬ್ಬೊಬ್ಬರು ಇದಕ್ಕೆ ಅಪವಾದವಾಗಿ ಒಳ್ಳೆಯ ಕೆಲಸಮಾಡಿದ್ದಾರೆ. ಅವರಲ್ಲಿ ಹೆಸರಿಸಬಹುದಾದವರು ಶ್ರೀಯುತರುಗಳಾದ ಎಂ. ಮಲ್ಲಿಕಾರ್ಜುನಸ್ವಾಮಿ ಮತ್ತು ಪಿ. ಎಸ್. ಜವರಪ್ಪಗೌಡರು.

ರಾಜ್ಯಪುನರ್ವಿಂಗಡಣೆಗೆ ಮೊದಲು ಮಹಾರಾಷ್ಟ್ರದಲ್ಲಿ ಕನ್ನಡ ಪ್ರದೇಶಕ್ಕೆ ಅನ್ವಯಿಸಿದಂತೆ ಕರ್ನಾಟಕಪ್ರಾಂತೀಯ ಸಮಾಜ ಶಿಕ್ಷಣ ಸಮಿತಿ ಒಂದಿತ್ತು. ೧೯೭೬ರಲ್ಲಿ ಆ ಸಮಿತಿಯನ್ನು ವಯಸ್ಕರ ಶಿಕ್ಷಣ ಸಮಿತಿಯಲ್ಲಿ ವಿಲೀನಗೊಳಿಸಿ ಅದನ್ನು ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಎಂದು

ಕರೆಯಲಾಯಿತು. ಅಲ್ಲಿಯವರೆಗೆ ಸಮಿತಿ ೧೦,೦೦೦೦೦ ಅಕ್ಷರಸ್ಥರನ್ನಾಗಿ ಮಾಡಿತ್ತು. ಸಮಿತಿ ವಯಸ್ಕರ ಶಿಕ್ಷಣ ಮಾಲೆ ಶೀರ್ಷಿಕೆಯಲ್ಲಿ ವಿವಿಧ ವಿಷಯಗಳಿಗೆ ಸಂಬಂಧಪಟ್ಟಂತೆ ೧೬೫ ಪುಸ್ತಕಗಳನ್ನೂ ಪುಸ್ತಕ ಭಂಡಾರ ಮಾಲೆಯಲ್ಲಿ ೪೧ ಪುಸ್ತಕಗಳನ್ನೂ ಇನ್ನಿತರ ೫೩ ಪುಸ್ತಕಗಳನ್ನೂ ಪ್ರಕಟಿಸಿದೆ. ಇವೆಲ್ಲವೂ ನವಸಾಕ್ಷರರಿಗಾಗಿಯೇ ಸಿದ್ಧಪಡಿಸಿದವುಗಳು.

೧೯೭೮ರ ರಾಷ್ಟ್ರೀಯ ಸಾಕ್ಷರ ಪ್ರಚಾರ ಯೋಜನೆ:

ರಾಷ್ಟ್ರ ಸ್ವಾತಂತ್ರ್ಯ ಪಡೆದಾಗ ಅಕ್ಷರಸ್ಥರ ಸಂಖ್ಯೆ ಬಹಳ ಕಡಿಮೆ ಇತ್ತು. ರಾಜ್ಯದಲ್ಲಿಯೂ, ವಯಸ್ಕರ ಶಿಕ್ಷಣ ಸಮಿತಿ ಅನಕ್ಷರತೆಯ ನಿರ್ಮೂಲನಕ್ಕಾಗಿ ೧೯೪೦ರಿಂದಲೂ ಶ್ರಮಿಸುತ್ತಿದ್ದರೂ ಪೂರ್ಣ ಯಶಸ್ಸು ದೊರೆಯದಿದ್ದು ಬೇರೆ ರಾಜ್ಯಗಳಿಗೆ ಹೋಲಿಸಿದಾಗ ಆ ರಾಜ್ಯಗಳಿಗಿಂತ ಶೇಕಡ ಅಕ್ಷರಸ್ಥರ ಪ್ರಮಾಣ ಹೆಚ್ಚಿದ್ದರೂ ಅನಕ್ಷರಸ್ಥರ ಪ್ರಮಾಣ ಗಣನೀಯ ಪ್ರಮಾಣದಲ್ಲಿತ್ತು. ಸ್ವಾತಂತ್ರ್ಯ ಗಳಿಸಿದಾಗ ಅನಕ್ಷರತೆಯ ನಿರ್ಮೂಲನಕ್ಕೆ ಪ್ರಾಮುಖ್ಯ ಕೊಟ್ಟರೂ ಸಂಪನ್ಮೂಲಗಳ ಕೊರತೆಯಿಂದಾಗಿ ಪಂಚವಾರ್ಷಿಕ ಯೋಜನೆ ಗಳಲ್ಲಿ ಅಗತ್ಯ ಪ್ರಮಾಣದ ಹಣ ಒದಗಿಸಲಾಗಲಿಲ್ಲ. ಈ ಉದ್ದೇಶಕ್ಕಾಗಿ ಪ್ರತಿ ಯೋಜನೆಯಲ್ಲಿಯೂ ಮೀಸಲಿರಿಸಿದ ಹಣದ ಗಾತ್ರವನ್ನು ನೋಡಿದಾಗ ಯೋಜನಾ ಆಯೋಗ ಇದಕ್ಕೆ ಸಂಬಂಧಿಸಿದಂತೆ ಉದಾರ ನಿಲುವು ತಳೆಯದಿದ್ದುದರಿಂದ ಅನಕ್ಷರತೆಯ ನಿರ್ಮೂಲನ ಪ್ರಯತ್ನದಲ್ಲಿ ನಿರೀಕ್ಷಿತ ಪ್ರಗತಿ ಸಾಧಿಸಲು ಸಾಧ್ಯವಾಗದೆ ಸ್ವಾತಂತ್ರ್ಯಗಳಿಸಿದ ಐದು ದಶಕಗಳ ನಂತರವೂ ವಿಶ್ವದಲ್ಲಿಯೇ ಅತಿ ಹೆಚ್ಚಿನ ಸಂಖ್ಯೆಯ ಅನಕ್ಷರಸ್ಥರ ದೇಶವಾಗಿ ಉಳಿದಿದೆ.

ಎರಡನೆಯದಾಗಿ ಅನಕ್ಷರತೆ ನಿರ್ಮೂಲನಕ್ಕಾಗಿ ಕಾಯದೆಯೇ ವಿಸ್ತರಣಾ ಕಾರ್ಯಕ್ರಮದ ಮೂಲಕ ಅಭಿವೃದ್ಧಿ ಸಾಧಿಸಬಹುದೆಂದು ಆಸೆ ಇಟ್ಟುಕೊಂಡಿದ್ದರು.

ಮೂರನೆಯದಾಗಿ ಸಾಮಾನ್ಯ ಶಿಕ್ಷಣ ನಿರ್ಲಕ್ಷಿಸಿದುದು ರಾಜ್ಯಾಂಗದ ನಿರ್ದೇಶನ ತತ್ವದಂತೆ ರಾಜ್ಯಾಂಗ ಅನುಷ್ಠಾನಕ್ಕೆ ಬಂದ ದಿನದಿಂದ ಹತ್ತು ವರ್ಷಗಳ ಅವಧಿಯೊಳಗೆ ೬ ರಿಂದ ೧೪ ವರ್ಷ ವಯೋಮಿತಿಯ ಎಲ್ಲ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ಜಾರಿಗೆ ತರುತ್ತೇವೆ ಎಂಬ ಘೋಷಣೆಯನ್ನು ಯಶಸ್ವಿಯಾಗಿ ಕಾರ್ಯರೂಪ ತರಲು ವಿಫಲರಾದುದರಿಂದ ಈ ವಯಸ್ಸಿನ ಲಕ್ಷೋಪಲಕ್ಷ ಮಕ್ಕಳು ಶಾಲೆಯ ಹೊರಗೇ ಉಳಿದು ಅನಕ್ಷರಸ್ಥರ ದಂಡನ್ನು ಹೆಚ್ಚಿಸಿದರು. ಇದಕ್ಕಾಗಿ ಗುರಿಯನ್ನು ಮುಂದೂಡುತ್ತಲೇ ಬಂದಿದ್ದೇವೆ.

ನಾಲ್ಕನೆಯದಾಗಿ ಯಾವುದೇ ಸಮುದಾಯದ ಚೈತನ್ಯ ಆ ಸಮುದಾಯವನ್ನು ಮುನ್ನಡೆಸುವ ನಾಯಕರನ್ನವಲಂಬಿಸಿದೆ. ಆದರೆ ಈ ನಾಯಕತ್ವಸ್ಥಾನ ಹಿಡಿದಿರುವವರು ಅಗತ್ಯ ಅರಿವಲ್ಲದವರು.

ಸಮಾಜ ಶಿಕ್ಷಣ ಯೋಜನೆಯ ಮೂಲಕ ಗ್ರಾಮೀಣ ಸಮುದಾಯದಲ್ಲಿ ಅಗತ್ಯ ಅರಿವು ಮತ್ತು ಅಗತ್ಯ ಕ್ರಿಯಾಶೀಲತೆ ಉಂಟುಮಾಡಬಹುದೆಂಬ ಆಲೋಚನೆಯೂ ಯಶಸ್ಸು ನೀಡಲಿಲ್ಲ. ಈ ಎಲ್ಲ ಕಾರಣಗಳಿಂದಾಗಿ ಇಂದೂ ಅನಕ್ಷರತೆ ಒಂದು ಬೃಹತ್ಸಮಸ್ಯೆಯಾಗಿಯೇ ಉಳಿದಿದೆ.

೧೯೬೭-೬೮ರಲ್ಲಿ ಮತ್ತೊಂದು ಯೋಜನೆ ಪ್ರಾರಂಭಿಸಿದರು. ಇದೇ ರೈತರ ಕ್ರಿಯಾತ್ಮಕ ಸಾಕ್ಷರತ ಯೋಜನೆ (Farmer's Functional Literacy Programme) ಈ ಯೋಜನೆ ರೈತರ ತರಬೇತಿಗಾಗಿ ರೂಪುಗೊಂಡ ಅಂತರ ಸಚಿವಾಲಯಗಳ ಯೋಜನೆ

(inter-Ministerial programme) ಇದರ ಮುಖ್ಯಗುರಿ ವಯಸ್ಕರ ಶಿಕ್ಷಣದ ಮೂಲಕ ರೈತರು ಉತ್ತಮ ಫಸಲು ನೀಡುವ ಬೀಜಗಳನ್ನು ಉಪಯೋಗಿಸುವುದನ್ನು ಪ್ರಚಾರ ಮಾಡುವುದು. ಈ ಯೋಜನೆಯಲ್ಲಿ ಸರ್ಕಾರದ ವಿವಿಧ ಇಲಾಖೆಗಳು ಸಹಕರಿಸಿ ಕೆಲಸ ಮಾಡ ಬೇಕಾಗಿತ್ತು. ಈ ಯೋಜನೆಯ ಮುಖ್ಯ ಉದ್ದೇಶ ರೈತರಿಗೆ ವೈಜ್ಞಾನಿಕ ಕೃಷಿಗೆ ಸಂಬಂಧಿಸಿದಂತೆ ಅವಶ್ಯಕ ಮಾಹಿತಿಯನ್ನು ಒದಗಿಸಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು. ಈ ಯೋಜನೆಯಲ್ಲಿ ಪ್ರತಿ ಜಿಲ್ಲೆಯಲ್ಲೂ ೬೦ ಕೇಂದ್ರಗಳಿದ್ದು ಪ್ರತಿ ಕೇಂದ್ರದಲ್ಲೂ ೩೦ ಅನಕ್ಷರಸ್ಥರಿರುತ್ತಿದ್ದರು. ೧೯೬೭-೬೮ರಿಂದ ಪ್ರಾರಂಭವಾಗಿ ಪ್ರತಿ ವರ್ಷವೂ ಈ ಕಾರ್ಯಕ್ರಮ ಒಂದೊಂದು ಜಿಲ್ಲೆಗೆ ವಿಸ್ತರಣೆ ಆಗಬೇಕಾಗಿತ್ತು. ಅದರಂತೆ ೧೯೭೮ರ ವೇಳೆಗೆ ರಾಜ್ಯದ ಒಂಬತ್ತು ಜಿಲ್ಲೆಗಳಲ್ಲಿ ಅನುಷ್ಠಾನದಲ್ಲಿತ್ತು. ಅವು ಬೆಂಗಳೂರು, ಬಳ್ಳಾರಿ, ತುಮಕೂರು, ಮಂಡ್ಯ, ಮಡಕೇರಿ, ಶಿವಮೊಗ್ಗ, ಬೆಳಗಾಂ, ಬಿಜಾಪುರ ಮತ್ತು ರಾಯಚೂರು ಜಿಲ್ಲೆಗಳು ಈ ಯೋಜನೆಯಲ್ಲಿ ೫೦೩೬೫ ಜನರು ಅಕ್ಷರಸ್ಥರಾಗಿದ್ದರು.

ಅನೌಪಚಾರಿಕ ಶಿಕ್ಷಣ ಯೋಜನೆ :

೧೯೭೪ರಲ್ಲಿ ''ಅನೌಪಚಾರಿಕ ಶಿಕ್ಷಣ ಯೋಜನೆ'' ಪ್ರಾರಂಭವಾಯಿತು. ಮಧ್ಯದಲ್ಲಿಯೇ ಶಾಲೆಯನ್ನು ಬಿಟ್ಟು ೧೫-೨೫ ವಯೋಮಿತಿಯಲ್ಲಿರುವ ಗ್ರಾಮೀಣ ಪ್ರದೇಶದ ಯುವಕರಿಗೆ ವಿವಿಧ ಕ್ಷೇತ್ರಗಳ ಚಟುವಟಿಕೆಗಳ ಬಗ್ಗೆ ಸಾಮಾನ್ಯ ಜ್ಞಾನ ನೀಡುವುದಕ್ಕಾಗಿ ಈ ಯೋಜನೆಯನ್ನು ವಿಸ್ತರಿಸಬೇಕಾಗಿತ್ತು. ಒಂದು ಜಿಲ್ಲೆಯ ಖರ್ಚನ್ನು ರಾಜ್ಯಸರ್ಕಾರವೂ ಒಂದು ಜಿಲ್ಲೆಯ ಖರ್ಚನ್ನು ಕೇಂದ್ರ ಸರ್ಕಾರವು ಭರಿಸಬೇಕಾ ಗಿತ್ತು. ಪ್ರತಿ ಜಿಲ್ಲೆಯಲ್ಲೂ ೩೦ ಕೇಂದ್ರಗಳನ್ನು ಪ್ರಾರಂಭಿಸಲು ಅವಕಾಶವಿದ್ದು ಪ್ರತಿಕೇಂದ್ರದಲ್ಲೂ ೩೦ ಅಭ್ಯರ್ಥಿಗಳಿರುತ್ತಿದ್ದರು. ೧೯೭೮ರ ವೇಳೆಗೆ ಈ ಯೋಜನೆ ನಾಲ್ಕು ಜಿಲ್ಲೆಗಳಲ್ಲಿ ಅನುಷ್ಠಾನದಲ್ಲಿತ್ತು. ಈ ಯೋಜನೆಯಂತೆ ತರಬೇತಾದವರು ೧೧೦೨೦.

ಮೇಲಿನ ಎರಡು ಯೋಜನೆಗಳನ್ನೂ ಕಾರ್ಯರೂಪಕ್ಕೆ ತರುವ ಜವಾಬ್ದಾರಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಗೆ ವಹಿಸಿತ್ತು. ೧೯೭೮-೭೯ನೇ ಸಾಲಿನ ಅಂತ್ಯದವರೆಗೂ ಈ ಎರಡು ಯೋಜನೆಗಳ ವ್ಯವಸ್ಥೆ , ಮಾರ್ಗದರ್ಶನ ಮತ್ತು ಮೇಲ್ವಿಚಾರಣೆ ಶಿಕ್ಷಣ ಇಲಾಖೆಯೇ ನಿರ್ವಹಿಸುತ್ತಿತ್ತು.

೧೯೭೭ನೇ ಭಾರತದ ಶಿಕ್ಷಣ ಇತಿಹಾಸದಲ್ಲೊಂದು ಮೈಲಿಗಲ್ಲು. ಆ ವರ್ಷ ಕೇಂದ್ರ ಸರ್ಕಾರ ವಯಸ್ಕರ ಶಿಕ್ಷಣ ಬಗ್ಗೆ ಖಚಿತ ನಿಲುವನ್ನು ತಳೆದು ಆರುವರ್ಷಗಳ ಅವಧಿಯಲ್ಲಿ ೧೦ಕೋಟಿ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿಮಾಡಲು ನಿರ್ಧರಿಸಿ ಆ ಬಗ್ಗೆ ರಾಷ್ಟ್ರೀಯ ನೀತಿಯನ್ನು ಘೋಷಿಸಿತು. ರಾಜ್ಯಸರ್ಕಾರಗಳೂ ಈ ಬಗ್ಗೆ ಅಗತ್ಯ ಕಾರ್ಯಕ್ರಮ ರೂಪಿಸಿಕೊಳ್ಳಬೇಕೆಂದು ಆದೇಶ ನೀಡಿತು.

ಮೇಲಿನ ಆದೇಶದಂತೆ ಸರಕಾರದ ಮಟ್ಟದಲ್ಲಿ ರಾಜ್ಯಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಆಡಳಿತ ಯಂತ್ರ ನಿರ್ಮಾಣ ಮಾಡಬೇಕಾಯಿತು. ಅದರಂತೆ ರಾಜ್ಯದಲ್ಲಿ ವಯಸ್ಕರ ಶಿಕ್ಷಣ ಇಲಾಖೆ ಅಸ್ತಿತ್ವಕ್ಕೆ ಬಂದಿತು.

೧೯೭೮-೭೯ನೇ ವರ್ಷವನ್ನು ಪೂರ್ವಸಿದ್ಧತೆಯ ವರ್ಷವೆಂದು ಸಾರಿ ಈ ಬೃಹತ್ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲು ರಾಜ್ಯ ಸರ್ಕಾರಕ್ಕೆ ತಿಳಿಸಿತು. ಆ ವರ್ಷ ಸಿಬ್ಬಂದಿ

ವೆಚ್ಚ ಬಿಟ್ಟು ಅಕ್ಷರ ಪ್ರಚಾರ ಕಾರ್ಯಕ್ಕೆ ಧನಸಹಾಯ ದೊರಕಲಿಲ್ಲ. ಈ ಇಲಾಖೆ ನಿರ್ಮಾಣಮಾಡಿ, ನಿರ್ದೇಶಕರೂ ನೇಮಕಗೊಂಡು ಅವರು ೨.೧೧.೭೮ರಂದು ಕರ್ತವ್ಯದ ಮೇಲೆ ಹಾಜರಾದರು- ಯೋಜನೆಯ ಕರಡೂ ಸಿದ್ಧವಾಯಿತು. ಅದರಂತೆ ರಾಜ್ಯದಲ್ಲಿ ೬೯ ಲಕ್ಷ ಅನಕ್ಷರಸ್ಥರನ್ನು ೫ ವರ್ಷದ ಅವಧಿಯಲ್ಲಿ ಅಕ್ಷರಸ್ಥರನ್ನಾಗಿ ಮಾಡಬೇಕೆಂದು ನಿರ್ಧಾರವಾಯಿತು.ಈ ಯೋಜನೆಯ ವೆಚ್ಚ ಸುಮಾರು ೨೯ ಕೋಟಿ ರೂಪಾಯಿಗಳು.

ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯ ಪ್ರಾರಂಭೋತ್ಸವ ೧೯೭೮ರ ಅಕ್ಟೋಬರ್ ತಿಂಗಳು ದಿನಾಂಕ ೨ರಂದು ಅಂದರೆ ಮಹಾತ್ಮ ಗಾಂಧಿಜಿ ಅವರ ಜಯಂತಿ ಅಂದು ಬೆಂಗಳೂರಿನಲ್ಲಿ ನಡೆಯಿತು. ಯೋಜನೆಗೆ ಸಾಕಷ್ಟು ಪ್ರಚಾರ ದೊರಕಿಸುವ ದೃಷ್ಟಿಯಿಂದ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸಮಾರಂಭಗಳನ್ನು ನಡೆಸಿದುದಲ್ಲದೆ ಈ ಕಾರ್ಯಕ್ಕಾಗಿ ಆಕಾಶವಾಣಿ ಮತ್ತು ಪತ್ರಿಕೆಗಳನ್ನೂ ಉಪಯೋಗಿಸಿಕೊಳ್ಳಲಾಯಿತು.

ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆ ಪ್ರಾರಂಭವಾದ ಮೇಲೆ ಅಲ್ಲಿಯವರೆಗೆ ಅನುಷ್ಠಾನದಲ್ಲಿದ್ದ ''ರೈತರ ಕ್ರಿಯಾತ್ಮಕ ಶಿಕ್ಷಣ'' ಮತ್ತು ''ಅನೌಪಚಾರಿಕ ಶಿಕ್ಷಣ'' ಯೋಜನೆಗಳನ್ನು ಒಂದೇ ಕಕ್ಷೆಯಲ್ಲಿ ತಂದು ಅದನ್ನು ಗ್ರಾಮೀಣ ಕ್ರಿಯಾತ್ಮಕ ಶಿಕ್ಷಣ'' ಎಂದು ಕರೆದು ರಾಜ್ಯದ ಹದಿಮೂರು ಜಿಲ್ಲೆಗಳಲ್ಲಿ ಅಂದರೆ ಬೆಂಗಳೂರು, ಮಂಡ್ಯ ಮೈಸೂರು, ಕೊಡಗು, ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು, ಶಿವಮೊಗ್ಗ, ಬೆಳಗಾಂ, ಬಿಜಾಪುರ, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಪ್ರಾರಂಭಿಸಲು ನಿರ್ಧರಿಸಲಾಯ್ತು. ಅದಕ್ಕೆ ಕೇಂದ್ರ ಸರ್ಕಾರದ ಅನುಮತಿ ಬಂದುದಲ್ಲದೆ ಈ ಯೋಜನೆಗೆ ಬೇಕಾದ ೭೬.೭ಲಕ್ಷರೂಗಳನ್ನು ೧೯೭೯-೮೦ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿತು. ರಾಜ್ಯ ಸರ್ಕಾರವೂ ಕೂಡ ತನ್ನ ಆಯವ್ಯಯ ಪಟ್ಟಿಯಲ್ಲಿ ಯೋಜನಾ ಶೀರ್ಷಿಕೆಯಲ್ಲಿ ಆ ಸಾಲಿನಲ್ಲಿ ೪೯.೫೯ ಲಕ್ಷ ರೂ.ಗಳನ್ನು ಒದಗಿಸಿತು. ಧನಸಹಾಯ ಬಿಡುಗಡೆ ಮಾಡುತ್ತಿದ್ದು ಕೆಲವು ವೇಳೆ ರಾಜ್ಯ ಸರ್ಕಾರಗಳಿಗೆ ಮಾಹಿತಿಯೇ ಇರುತ್ತಿರಲಿಲ್ಲ.

ಹೊಸಯೋಜನೆಯೊಂದರ ಪ್ರಾರಂಭ:

೧೯೯೦-೯೧ನೆ ವರ್ಷದಿಂದ ಹೊಸ ಯೋಜನೆಯನ್ನು ಕೇಂದ್ರ ಸರ್ಕಾರ ಪ್ರಾರಂಭ ಮಾಡಿತು. ಇದರ ಹೆಸರು ನ್ಯಾಷನಲ್ ಸಾಕ್ಷರತಾ ಮಿಷನ್. ಮಿಷನ್ ಎಂದರೆ ಇಲ್ಲಿ ಅರ್ಥ ಒಂದು ನಿರ್ದಿಷ್ಟಕಾರ್ಯ ಸಾಧನೆಗಾಗಿ ಗುರಿ ಮುಟ್ಟುವುದು. ಈ ಮಿಷನ್‌ನ ಗುರಿ ರಾಷ್ಟ್ರದಲ್ಲಿ ಅನಕ್ಷರತೆಯನ್ನು ನಿರ್ಮೂಲನ. ಈ ಉದ್ದೇಶಕ್ಕಾಗಿ ರಾಷ್ಟ್ರದ ಪ್ರತಿಜಿಲ್ಲೆಯಲ್ಲೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಈ ಯೋಜನೆಯ ಅನುಷ್ಠಾನದಲ್ಲಿ ಆಸಕ್ತರಾಗಿರುವ ಕೆಲವು ಸದಸ್ಯರನ್ನೊಳಗೊಂಡ ಸಮಿತಿ ರಚಿಸಬೇಕು. ಆ ಸಮಿತಿ ನೋಂದಾವಣೆ ಆಗಬೇಕು. ಆ ಸಮಿತಿಗೆ ಯೋಜನೆಯನ್ನು ರೂಪಿಸುವುದು ಮತ್ತು ಅನುಷ್ಠಾನಕ್ಕೆ ತರುವುದರಲ್ಲಿ ಪೂರ್ಣ ಸ್ವಾತಂತ್ರ್ಯ ಇರಬೇಕು ಎಂಬುದು ಯೋಜನೆಯ ಮುಖ್ಯ ಲಕ್ಷಣ. ಇದೊಂದು ಕೇವಲ ಸರ್ಕಾರದ ಕಾರ್ಯಕ್ರಮ ಅಲ್ಲ. ಜನತೆಯ ಕಾರ್ಯಕ್ರಮ ಎಂಬ ಭಾವನೆಯನ್ನು ಸಾರ್ವಜನಿಕರಲ್ಲಿ ಮೂಡಿಸಿ ಈ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತಂದು ದೇಶದಲ್ಲಿ ಅನಕ್ಷರತೆಯನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡುವುದು ಸರ್ಕಾರದ ಗುರಿ. ಈ ಯೋಜನೆಗೆ ಕೇಂದ್ರ ಸರ್ಕಾರ ಮೂರನೆ

ಎರಡು ಭಾಗ ರಾಜ್ಯ ಸರ್ಕಾರ ಮೂರನೆ ಒಂದು ಭಾಗ ಖರ್ಚನ್ನು ಭರಿಸಬೇಕಾಗಿತ್ತು. ಈ ಯೋಜನೆಯಲ್ಲಿ ಸಾಕ್ಷರೋತ್ತರ ಕಾರ್ಯ ಕ್ರಮವನ್ನೂ ಅಳವಡಿಸಿದೆ.

ಕರ್ನಾಟಕದಲ್ಲಿ ಎಲ್ಲ ಜಿಲ್ಲೆಗಳಲ್ಲೂ ಈ ಯೋಜನೆ ಮುಗಿದಿದೆ. ಮೌಲ್ಯಮಾಪನವೂ ಮುಗಿದಿದೆ. ಮೌಲ್ಯಮಾಪನ ಹೊರಗಿನ ಸಂಸ್ಥೆಗಳಿಂದ ಆಗಿದೆ.

ವಯಸ್ಕರ ಶಿಕ್ಷಣ ಇಲಾಖೆ ಅಸ್ತಿತ್ವಕ್ಕೆ ಬಂದ ಮೇಲೆ ವಯಸ್ಕರ ಶಿಕ್ಷಣ ಸಮಿತಿಯನ್ನು ಮುಂದುವರಿಸುವ ಅಗತ್ಯ ಇಲ್ಲ ಎಂಬ ವಾದ ಸರ್ಕಾರದ ಮುಖ್ಯಕಾರ್ಯದರ್ಶಿಗಳು ಅಧ್ಯಕ್ಷರಾಗಿದ್ದ ಚಾಲನೆ ಸಮಿತಿಯಲ್ಲಿ ಚರ್ಚೆಗೆ ಬಂದಿತು. ನಾಲ್ಕು ದಶಕಗಳಷ್ಟು ದೀರ್ಘಕಾಲ ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ದುಡಿದು ವಿಶ್ವ ಮಟ್ಟದಲ್ಲಿ ಖ್ಯಾತಿ ಪಡೆದಿದ್ದ ಸಂಸ್ಥೆಯನ್ನು ಕಡೆಗಣಿಸಿ ಮಂಗಳ ಹಾಡುವುದು ಸೂಕ್ತವಲ್ಲ ಎಂದು ವಾದಿಸಿ ಅದು ಮುಂದುವರಿಯು ವಂತೆ ಮಾಡಿದೆ.

ಈ ಯೋಜನೆಗೆ ಅಗತ್ಯವಾದ ಓದುವ ಸಾಮಗ್ರಿಗಳುಮತ್ತು ಬೋಧನಾ ಸಲಕರಣೆ ಗಳ ರಚನೆ, ಕಾರ್ಯಕರ್ತರ ತರಬೇತು ಯೋಜನೆಯ ಮೌಲ್ಯಮಾಪನ ಸಾಧನಗಳ ರಚನೆ ಮತ್ತು ಸಂಶೋಧನೆ ಅಗತ್ಯ. ಈ ಉದ್ದೇಶಕ್ಕಾಗಿ ವಯಸ್ಕರ ಶಿಕ್ಷಣ ಸಮಿತಿಯ ಅಧೀನದಲ್ಲಿ ರಾಜ್ಯ ಸಂಪನ್ಮೂಲ ಕೇಂದ್ರ ವನ್ನು ವ್ಯವಸ್ಥೆ ಮಾಡಿದೆ.

೧೯೭೮ ಅಕ್ಟೋಬರ್‌ನಲ್ಲಿ ೨೫೦೦ ಕಲಿಕಾ ಕೇಂದ್ರಗಳು ಪ್ರಾರಂಭವಾದವು. ೧೯೭೮-೮೦ನೇ ಸಾಲಿನಲ್ಲಿ ೭೭೬೨ ಕೇಂದ್ರಗಳು ಪ್ರಾರಂಭವಾದವು. ಈ ಕೇಂದ್ರಗಳಲ್ಲಿ ದಾಖಲಾದವರ ಸಂಖ್ಯೆ ೨೩೧೯೫೭. ೧೯೮೦-೮೧ನೇ ಸಾಲಿನಲ್ಲಿ ೪೩೭೩ ಕೇಂದ್ರಗಳು ಪ್ರಾರಂಭವಾಗಿ ಅವುಗಳಲ್ಲಿ ೧೨೫೮೫ ವಯಸ್ಕರು ಶಿಕ್ಷಣ ಪಡೆಯುತ್ತಿದ್ದರು. ೧೯೮೩ ರಲ್ಲಿ ಈ ಯೋಜನೆ ಅಂತ್ಯಗೊಂಡಿತು. ಈ ಯೋಜನೆ ಸ್ಥಗಿತಗೊಳ್ಳುವುದಕ್ಕೆ ಕಾರಣ ಯೋಜನೆಯಲ್ಲಿನ ನ್ಯೂನತೆಗಳು. ಅನೇಕ ಸ್ವಯಂಸೇವಾ ಸಂಸ್ಥೆಗಳು ಹಣ ದುರುಪ ಯೋಗ ಮಾಡಿಕೊಂಡವು. ಹಣಗಳಿಸುವ ಉದ್ದೇಶ ದಿಂದಲೇ ಕೆಲವು ಸಂಸ್ಥೆಗಳು ಅಸ್ತಿತ್ವಕ್ಕೆ ಬಂದುವು. ಅವುಗಳ ಕಾರ್ಯಕ್ರಮ ನಿಯಂತ್ರಣ ಕಠಿಣವಾಯಿತು. ಅದಕ್ಕೆ ಕಾರಣ ಅವುಗಳಿಗೆ ಕೇಂದ್ರ ಸರ್ಕಾರ ನೇರವಾಗಿ ಈ ಮೌಲ್ಯ ಮಾಪನದಂತೆ ಸಾಧನೆ ಕೆಲವು ಜಿಲ್ಲೆಗಳಲ್ಲಿ ಶೇಕಡ ೮೦ರಷ್ಟು ಸಾಕ್ಷರರಾಗಿದ್ದರೆ. ಕೆಲವು ಜಿಲ್ಲೆಗಳಲ್ಲಿ ಶೇಕಡ ೧೫ ರಿಂದ ೫೦ರ ಅಂತರದಲ್ಲಿ ಬೇರೆ ಬೇರೆ ರೀತಿಯ ಗುರಿಸಾಧನೆ ಆಗಿದೆ. ಕೆಲವು ಜಿಲ್ಲೆಗಳಲ್ಲಿ ಮಾತ್ರ ಶೇಕಡ ೭೦ರಿಂದ ೯೦ ರವರೆಗೆ ಗುರಿಸಾಧನೆ ಆಗಿದೆ.

ಈ ಯೋಜನೆಯ ಒಟ್ಟು ಅಂದಾಜುವೆಚ್ಚ ೫೭.೬೬ ಕೋಟಿ ರೂಪಾಯಿ. ಇದರಲ್ಲಿ ಕೇಂದ್ರದ ಪಾಲು ಮೂರನೇ ಎರಡು ಅಂದರೆ ೩೯.೭೦ ಕೋಟಿ; ರಾಜ್ಯದ ಪಾಲು ಮೂರನೇ ಒಂದು ಅಂದರೆ ೧೭.೯೬ ಕೋಟಿ. ಖರ್ಚಾ ಗಿರುವ ಒಟ್ಟು ಹಣ ಕೇದ್ರದ ಪಾಲು ೩೪.೨೪ ಕೋಟಿ; ರಾಜ್ಯದಪಾಲು ೧೭.೨ ಕೋಟಿ ರೂಗಳು. ಕೇಂದ್ರ ಇನ್ನೂಸುಮಾರು ೫ ಕೋಟಿ ಬಿಡುಗಡೆ ಮಾಡಬೇಕಾಗಿದೆ.

ಈ ಯೋಜನೆಯಂತೆ ೭೭.೧೬ ಲಕ್ಷ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವ ಗುರಿ ಇಟ್ಟುಕೊಂಡಿದ್ದರು . ಆದರೆ ಕೇವಲ ೪೧.೬೦ ಲಕ್ಷ ಜನರನ್ನು ಮಾತ್ರ ಅಕ್ಷರಸ್ಥರನ್ನಾಗಿ ಮಾಡಲು ಸಾಧ್ಯವಾಗಿದೆ. ಅಂದರೆ ನಮ್ಮ ಸಾಧನೆ ಕೇವಲ ಶೇಕಡ ೫೪. ಇಲ್ಲಿ ಗಮನಿಸ ಬೇಕಾದ ಒಂದು ಮುಖ್ಯ ಅಂಶ ಎಂದರೆ ನಮ್ಮ

ಗುರಿಸಾಧನೆಯನ್ನು ಬದಲಾಯಿಸುತ್ತ ಬಂದುದು. ನಮ್ಮ ಮೊದಲಗುರಿ ನೂರಕ್ಕೆ ನೂರರಷ್ಟಾದರು ಆ ಗುರಿ ಮುಟ್ಟಲು ಪ್ರಯತ್ನಿಸದೆ ಸಾಧಿಸಿದಷ್ಟಕ್ಕೆ ತೃಪ್ತಿಪಟ್ಟು ಕೊಳ್ಳುವ ಮನೋಭಾವ ನಮ್ಮದು. ನಾನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಕ್ಷರ ಬೆಳಕು ಸಮಿತಿಯ ಸದಸ್ಯನಾಗಿ ನನ್ನ ಅನುಭವಕ್ಕೆ ಬಂದ ಕೆಲವು ಅಂಶಗಳನ್ನು ತಿಳಿಸಲೇಬೇಕಾಗಿದೆ.

೧೯೭೭ರ ಯೋಜನೆಯನ್ನು ಶ್ರೀಸಾಮಾನ್ಯರು ಇದೊಂದು ಸರ್ಕಾರದ ಯೋಜನೆ, ನಮಗೂ ಇದಕ್ಕೂ ಸಂಬಂಧ ಇಲ್ಲ ಎಂಬ ಒಂದು ರೀತಿಯ ಔದಾಸೀನ್ಯ ಮನೋಭಾವ ಇತ್ತು. ಆ ರೀತಿಯ ಮನೋಭಾವ ಜನಸಾಮಾನ್ಯರಲ್ಲಿ ಮೂಡದಂತೆ ಮಾಡಬೇಕೆಂಬ ಉದ್ದೇಶದಿಂದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಯೋಜನೆಯಲ್ಲಿ ಆಸಕ್ತಿ ಇರುವ ಆಯ್ದ ಸದಸ್ಯರಿಂದ ಕೂಡಿದ ಒಂದು ಸಮಿತಿಯನ್ನು ರಚಿಸಿ ಅದನ್ನು ನೋಂದಾಯಿಸಿ ಇದೊಂದು ಸ್ವಯಂ ಸೇವಾ ಸಂಸ್ಥೆ ಸಾಕ್ಷರತಾ ಪ್ರಚಾರ ಯೋಜನೆಯನ್ನು ರೂಪಿಸಿಕೊಂಡು ಅನುಷ್ಠಾನಕ್ಕೆ ತರಲು ಈ ಸಮಿತಿಗೆ ಪೂರ್ಣ ಸ್ವಾತಂತ್ರ್ಯ ಇದೆ ಎಂದು ಸಾರ್ವಜನಿಕರು ತಿಳಿಯುವಂತೆ ಮಾಡುವುದು. ಆದರಿಂದಾಗಿ ಈ ಯೋಜನೆ ಅನುಷ್ಠಾನ ಹಂತದಲ್ಲಿ ನಿಯಂತ್ರಣದ ಕೊರತೆಯಿಂದಾಗಿ ನಿರೀಕ್ಷಿತ ಫಲ ನೀಡಲು ವಿಫಲವಾಯಿತು.

ಈ ಯೋಜನೆಯಂತೆ ಗ್ರಾಮ ಸಭೆಗಳನ್ನು ರಚಿಸಿ ಸಾಕ್ಷರತಾ ಪ್ರಚಾರದಲ್ಲಿ ಅವರ ಸಹಾಯ ಸಹಕಾರಗಳನ್ನು ಪಡೆಯಬೇಕೆಂಬುದು ಮತ್ತೊಂದು ಲಕ್ಷಣ. ಆದರೆ ಅನೇಕ ಕಡೆಗಳಲ್ಲಿ ಗ್ರಾಮ ಸಭೆಗಳೇ ನಡೆಯಲಿಲ್ಲ. ಗ್ರಾಮ ಸಭೆಗಳನ್ನು ರಚಿಸಲು ಪ್ರಯತ್ನಿಸಲೇ ಇಲ್ಲ.

ಸಾಕ್ಷರತಾ ಪ್ರಚಾರಕಾರ್ಯಕ್ರಮದಲ್ಲಿ ಯಶಸ್ಸು ಗಳಿಸಬೇಕಾದರೆ ಸ್ಥಳೀಯ ಮುಖಂಡರ ನೆರವು ಅಗತ್ಯ. ಅದನ್ನು ಪಡೆದು ಕೊಳ್ಳಲು ಪ್ರಯತ್ನಿಸಲೇ ಇಲ್ಲ.

ಅನಕ್ಷರಸ್ಥರ ಸಂಪರ್ಕ ಬೆಳಸಿಕೊಂಡು ಅವರಿಗೆ ಸಾಕ್ಷರತೆಯ ಅಗತ್ಯವನ್ನು ವಿವರವಾಗಿ ತಿಳಿಸಿ ಅವರ ಮನವೊಲಿಸಿಕೊಳ್ಳುವ ಪ್ರಯತ್ನಕ್ಕಿಂತ ಬೀದಿನಾಟಕ, ಸಾಕ್ಷರತಾ ಪ್ರಚಾರ ಗೀತೆಗಳನ್ನು ಹಾಡುವುದಕ್ಕೆ ಹೆಚ್ಚು ಪ್ರಾಮುಖ್ಯ ಕೊಟ್ಟು ಆ ಮೂಲಕ ಉತ್ಸಾಹದಾಯಕ ವಾತಾವರಣ ನಿರ್ಮಾಣ ಮಾಡಲು ಪ್ರಯತ್ನಿಸಿ ಯೋಜನೆಯ ಅನುಷ್ಠಾನದಲ್ಲಿ ಪೂರ್ಣ ಯಶಸ್ಸು ಗಳಿಸಲು ವಿಫಲರಾದರು.

ಮೇಲ್ವಿಚಾರಣೆ, ಮಾರ್ಗದರ್ಶನ ಮತ್ತು ನಿಯಂತ್ರಣ ಪರಿಣಾಮಕಾರಿಯಾಗಿರಲಿಲ್ಲ.

(ಮುಗಿಯಿತು)

ಬಿಡಾಲೋಪಾಖ್ಯಾನವು

ಡಾ. ಟಿ. ಶ್ರೀವೆಂಕಟರಮಣ,
ಪ್ರಾಧ್ಯಾಪಕರು
ಸಂಖ್ಯಾಶಾಸ್ತ್ರ ವಿಭಾಗ,
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು-೫೬೦೦೫೬

ಬೆಕ್ಕು ಒಂದು ಕುತೂಹಲಕಾರಿ ಪ್ರಾಣಿ . ಮನೆಯಲ್ಲಿ ಇದನ್ನು ಸಾಕುತ್ತಾರಾದರೂ, ಇದರದ್ದು ನಿಜವಾಗಿ ವ್ಯಾಘ್ರವಂಶ. ಮಾರ್ಜಾಲಕ್ಕೂ ಮಾನವನಿಗೂ ಇರುವ ಸಂಬಂಧದ ಕುರಿತು ಹಾಸ್ಯದ ಲೇಪವುಳ್ಳ ಶೈಲಿಯ ಹರಟೆ ಈ ಲೇಖನದಲ್ಲಿದೆ. ಇದನ್ನೋದಿ ಆನಂದಿಸಿ. ಬೆಕ್ಕಿಗೆ ಮಾತ್ರ ಈ ವಿಚಾರವನ್ನು ಸುತರಾಂ ತಿಳಿಸಬೇಡಿ!

ಲಿಡೋ ಚಿತ್ರಮಂದಿರದತ್ತ ಒಯ್ಯುವ ಮಹಾತ್ಮಾಗಾಂಧಿ ರಸ್ತೆಯಲ್ಲಿ ಮೊನ್ನೆ ನಾನು ಕಾಲ್ನಡಿಗೆಯಲ್ಲಿ ಸಾಗುತ್ತಿದ್ದೆ. ಒಂದು ಕುತೂಹಲಕಾರಿ ಪ್ರಕಟಣೆ ಕಣ್ಣಿಗೆ ಬಿತ್ತು. ನಗರ ಸಂಚಾರಿ ಪೊಲೀಸ್ ವಿಭಾಗದ್ದದು. ''ಬೆಕ್ಕಿಗೆ ಒಂಭತ್ತು ಜೀವಗಳಿರಬಹುದಾದರೂ ನಿಮಗಿರುವುದು ಒಂದೇ. ಜಾಗರೂಕರಾಗಿ, ಅಪಘಾತದಿಂದ ನಿಮ್ಮನ್ನು ರಕ್ಷಿಸಿಕೊಳ್ಳಿ !'' ಎಂದು ದಪ್ಪ ಅಕ್ಷರಗಳಲ್ಲಿ ರಸ್ತೆಯಂಚಿನ ಫಲಕದಲ್ಲಿ ಬರೆಯಲಾಗಿತ್ತು. ಜೊತೆಗೆ ಮಾರ್ಜಾಲವೊಂದು ರಸ್ತೆಯನ್ನು ಅಡ್ಡಹಾಯುವ ಚಿತ್ರವೂ ಅಲ್ಲಿತ್ತು. ನಾವು ಬೆಕ್ಕಿಗಿರುವ ಅವಸರದಿಂದ ಅಂಥ ದಾಟುವಿಕೆಯನ್ನು ಮಾಡಬಾರದೆಂಬ ಸಂದೇಶದೊಡನೆ, ಮುಂಜಾಗ್ರತೆಯ ವಿಚಾರವನ್ನದು ಸೂಚಿಸುತ್ತಿತ್ತು. ಕಳೆದ ಹತ್ತು ವರ್ಷಗಳಲ್ಲಿ ಬೆಂಗಳೂರಿನ ರಸ್ತೆಗಳಲ್ಲಿ ಅಡ್ಡಹಾಯುತ್ತ ಎಷ್ಟು ಬಿಡಾಲಗಳು ಜೀವಕಳೆದುಕೊಂಡವೆಂಬ ವಿವರ ನನ್ನ ಬಳಿಯಿಲ್ಲದ್ದರೂ, ಅಂಥ ಸಂಖ್ಯೆ ತೀರಕಡಿಮೆಯೆಂಬುದು ಮಾತ್ರ ನನಗೆ ಗೊತ್ತು. ಇದಕ್ಕೆ ಬೆಕ್ಕುಗಳ ಒಟ್ಟುಸಂಖ್ಯೆ ಕಡಿಮೆಯಿರುವುದು ಕಾರಣವೇ, ಅಪಘಾತಕ್ಕೊಳಗಾದ ಬೆಕ್ಕು ಟಪ್ಪನೆ ಎದ್ದು ಅದರ ಮುಂದಿನ ಜೀವಧಾರಣೆಮಾಡಿ ಓಡಿದ್ದು ಕಾರಣವೇ ಎಂಬುದು ವಿವೇಚಿಸಬೇಕಾದ ವಿಚಾರ. ಆದರೆ ಶ್ವಾನಗಳಷ್ಟು ಸಂಖ್ಯೆಯಲ್ಲಿ ಬೆಕ್ಕು ಬಸ್ಸು ಕಾರುಗಳ ಕೆಳಗೆ ಬೀಳದಿರುವುದು ನಾವು ಎಲ್ಲರೂ ಒಪ್ಪಲೇಬೇಕಾದ ಸಂಗತಿ. ನಾಯಿಗಳಿಗೆ ಒಂದಕ್ಕಿಂತ ಜಾಸ್ತಿ ಜೀವವಿಲ್ಲವೆಂದು ಮಾತ್ರ ಇದರಿಂದ ಸಿದ್ಧವಾಗುತ್ತದೆ. ನಾಯಿಗೂ ಬೆಕ್ಕಿಗೂ ಇರುವ ಮುಖ್ಯ ವ್ಯತ್ಯಾಸ ಇದೇ. ಈ ಬಗ್ಗೆ ಪೊಲೀಸ್ ವಿಭಾಗದ ಸಾಕ್ಷ್ಯಕೂಡ ಇರುವುದರಿಂದ ಇದನ್ನು ನಂಬದೆ ಇರಲಾಗದು.

ಬೆಕ್ಕಿಗೆ ಹಾಲು ಸಾಮಾನ್ಯವಾಗಿ ಬಹಳ ಇಷ್ಟ. ತೆನಾಲಿ ರಾಮಕೃಷ್ಣನ ಮಾರ್ಜಾಲವನ್ನು ಹೊರತುಪಡಿಸಿ. ಹಾಲಿಗೆ ಬೆಕ್ಕು ಇಷ್ಟವೇ, ಇಲ್ಲವೆ ಎಂಬುದಿನ್ನೂ ತಿಳಿದು ಬಂದಿಲ್ಲ. ಬೆಕ್ಕು ಹಾಲನ್ನು ಕದ್ದು ಕುಡಿಯುವುದು ಮತ್ತು ಅದರ ಪ್ರಸ್ತಾಪ ಹಳೆಯ ವಿಚಾರ. ಮಕ್ಕಳಿಗೆ ತಾಯಿ ಹಾಲಿನ ಶ್ರೇಷ್ಠತೆಯನ್ನು ತಿಳಿಯಪಡಿಸುತ್ತ, ಅದು ಬೆಕ್ಕಿಗೆ ಸಿಗದು ಎನ್ನುವುದರ ಪ್ರಸ್ತಾಪವೂ ಸೇರಿದೆ. ಅಂತೂ ಬೆಕ್ಕು-ಹಾಲುಗಳ ಸಂಬಂಧ ಅತ್ಯಂತ ಹಳೆಯದು. ಇಲಿಯ ಕಾಟವನ್ನು ತಪ್ಪಿಸಿಕೊಳ್ಳಲೆಂದು ಬೆಕ್ಕನ್ನು ಸಾಕಿದ ಸಂನ್ಯಾಸಿ, ಮುಂದೆ ತನ್ನ ಬೆಕ್ಕಿಗೆ ಹಾಲಿನ ಆವಶ್ಯಕತೆಯನ್ನು ಪೂರೈಸಲು ಹಸು ಸಾಕಿ, ಅದರ ಆರೈಕೆಗೆ ಸ್ತ್ರೀಯೊಬ್ಬಳನ್ನು ನೇಮಿಸಿಕೊಂಡು ಬಳಿಕ ನಿರ್ವಾಹವಿಲ್ಲದೆ ಸಂಸಾರಿಯಾದ ಕತೆಯೂ ಹಳೆಯುದೇ. ಅಂತೂ ಹಾಲಿಗಾಗಿ ಬೆಕ್ಕಿನ

ಒತ್ತಾಸೆ ಸಾಕಷ್ಟು ಮುಖ್ಯ ಘಟನೆಗಳಿಗೆ ನಾಂದಿಯಾದದ್ದಿದೆ.

ತಾಯಿಬೆಕ್ಕು ತನ್ನ ಮರಿಗಳನ್ನು ಆಗಾಗ ಮನೆಯಿಂದ ಮನೆಗೆ ಬದಲಾಯಿಸುತ್ತ ಅವುಗಳಿಗೆ ದೀರ್ಘಕಾಲಿಕ ವಸತಿ ವ್ಯವಸ್ಥೆಗೆ ಎಡೆಮಾಡಿಕೊಡುತ್ತದೆ. ಮರಿಗಳ ಮುದ್ದು ತುಂಟತನವನ್ನು ನೋಡಿ ಆನಂದಿಸಿದ ಗೃಹಸ್ಥರು ಅವನ್ನು ತಮ್ಮಲ್ಲೇ ಇಟ್ಟುಕೊಳ್ಳಲು ಬಯಸುವುದು ಅಪರೂಪವಲ್ಲ. ಕನ್ಯಾಪಿತೃಗಳು ಬೆಕ್ಕುಗಳ ಈ ಹವ್ಯಾಸದಿಂದ ಕಲಿತುಕೊಳ್ಳುವ ಪಾಠವಿದೆಯೇ ಎನ್ನುವುದು ಬುದ್ಧಿವಂತರಾದ ನಿಮ್ಮ ವಿವೇಚನೆಗೆ ಬಿಟ್ಟದ್ದು.

ಬೆಕ್ಕಿಗೆ ತಿನಿಸು ಹೆಚ್ಚು ಪರಿಮಾಣದಲ್ಲಿ ಬೇಕಿಲ್ಲ. "ಆತ ಉಂಡಿದ್ದು ಒಂದು ಬೆಕ್ಕಿನಷ್ಟು" ಎಂದು ಹೇಳುತ್ತಾರಲ್ಲ. ಮನೆಯೂಟವನ್ನು ಇತರ ಸ್ವಂತ ತಿನಿಸು ಆರ್ಜನೆಯಿಂದ ಪೂರಕವಾಗಿಸಿಕೊಳ್ಳುವ ಸ್ವಭಾವವೂ ಬೆಕ್ಕಿಗಿದೆ, ಕದ್ದು ಯಾ ತನ್ನ ಬೇಟೆ ಸಾಹಸವನ್ನು ಬಳಸಿ. ಮನುಷ್ಯರ ಸ್ವಭಾವ ಇದಕ್ಕೆ ವಿರುದ್ಧವಾದದ್ದು. ಮನೆಯಲ್ಲಿ ಹೊಟ್ಟೆಬಾಕತನವನ್ನು ಪ್ರದರ್ಶಿಸುವ ಮಹಾಶಯರು ಮತ್ತೆ ಗಣೇಶದರ್ಶನಿಗೂ ಹೋಗುತ್ತಾರಲ್ಲ! ಭಗವಂತ ಪ್ರತಿವ್ಯಕ್ತಿಗೂ 'ನಿನಗಿಷ್ಟು ಪರಿಮಾಣದ ಆಹಾರ' ಎಂದು ನಿಗದಿಪಡಿಸಿರುತ್ತಾನಂತೆ. ಅಷ್ಟನ್ನು ಬೇಗನೆ ಬೇಗನೆ ತಿಂದು ಮುಗಿಸಿ ಬೇಗನೆ ದೇವರಲ್ಲಿಗೆ ಮರಳುವ ಸ್ವಾತಂತ್ರ್ಯ ಆತನಿಗಿದ್ದೇ ಇದೆ! ಇಲ್ಲ, ನಿಧಾನವಾಗಿ ಆಹಾರವನ್ನು ತುಸುತುಸುವಾಗಿ ಮೆಲ್ಲುತ್ತ ಮಿತಾಹಾರಿಯಾಗಿ ದೀರ್ಘಾಯುಷ್ಯವನ್ನು ಸಂಪಾದಿಸುವ ಸ್ವಾತಂತ್ರ್ಯವೂ ಆತನಿಗಿದೆ (ಆಕೆಯೂ ಸೇರಿದಂತೆ)! ಅತಿಯನ್ನು ವರ್ಜಿಸು ಎನ್ನುವ ಪಾಠ ಮಾನವ ಬೆಕ್ಕಿನಿಂದ ಕಲಿಯಬೇಕಾದದ್ದು. ಒಂಭತ್ತು ಜೀವಗಳುಳ್ಳ ಬೆಕ್ಕು ಜಾಗರೂಕತೆಯಿಂದ ಇರುವಾಗ ಹುಲುಮಾನವರ ಮಾತೇನು?

ರಾಮರಾಯರ ಮನೆಗೆ ಒಂದು ಕಳ್ಳಬೆಕ್ಕು ಆಗಾಗ ಬರುತ್ತಿತ್ತು. ಇವರಿಗಿಷ್ಟವಾದ ತಿಂಡಿಯೇ ಅದಕ್ಕೂ ಇಷ್ಟ. ಅದೇ ಅವರಿಬ್ಬರಲ್ಲಿ ತಕರಾರಿನ ಸಂಗತಿ. ರಾಯರ ಅನುಮತಿಯಿಲ್ಲದೆ ಒಳನುಗ್ಗುತ್ತಿದ್ದುದರಿಂದ ಅದರ ಅಪರಾಧ ಗಂಭೀರ ಸ್ವರೂಪದ್ದು. ಒಂದು ಬೆಳಗ್ಗೆ ಈ ಕಳ್ಳಬೆಕ್ಕು ಅವರಲ್ಲಿ ಕಾಯಿಹೋಳಿಗೆ ಮೆಲ್ಲುತ್ತಿದ್ದುದನ್ನು ರಾಯರು ಕಂಡರು. ಬಹಳ ದಿನಗಳಿಂದ ಅವರೊಳಗೆ ಕುದಿಯುತ್ತಿದ್ದ ರೋಷ ಕಟ್ಟೆಯೊಡೆದು ಹೊರಬಂತು. ಕಾಯಿಹೋಳಿಗೆ ರಾಯರಿಗೆ ಅತ್ಯಂತ ಪ್ರಿಯ ವಾದ ತಿಂಡಿಗಳಲ್ಲೊಂದು (ಅಂಥವು ಅನೇಕ ಇದ್ದುವು!) ಎಂಬುದು ಅವರ ರೋಷಾಗ್ನಿಗೆ ತುಪ್ಪವನ್ನು ಎರೆದಂತಾಗಿತ್ತು. ಕೋಪಾವಿಷ್ಟ ರಾದ ರಾಮರಾಯರು ಹತ್ತಿರವೇ ಇದ್ದ ಮಣೆಯೊಂದನ್ನು ಎತ್ತಿ ಬೆಕ್ಕಿಗೆ ಗುರಿಯಿಟ್ಟು ಎಸೆದರು. ಟಪ್, ಆ ಬಡಪ್ರಾಣಿ ನೆಲಕಚ್ಚಿತು.

ಈಗ ರಾಯರ ಅಂತರಂಗದಲ್ಲಿ ಗೊಂದಲವುಂಟಾಯಿತು, ಅದೂ ತೀವ್ರವಾಗಿ. ಮಾರ್ಜಾಲ ಹತ್ಯೆ ಕುಂಭೀಪಾಕ ನರಕಕ್ಕೆ ನೇರವಾಗಿ ತಳ್ಳಲ್ಪಡಲು ಅರ್ಹತೆಯನ್ನು ಗ್ಯಾರಂಟಿಯಾಗಿ ಕೊಡುವಂಥದ್ದು. ರಾಯರಿಗೆ ತಿಳಿಯದ್ದೇ? ಅವರು ನೇರವಾಗಿ ಶ್ಯಾಮಾಶಾಸ್ತ್ರಿಯವರಲ್ಲಿಗೆ ನಡೆದರು. ಶಾಸ್ತ್ರಿಗಳು ಅವರ ಕುಲ ಪುರೋಹಿತರು. ಎಂಥೆಂಥ ಮಹಾಪಾತಕಗಳಿಂದಲೂ ಬಿಡಿಸಬಲ್ಲ ಪ್ರಾಯಶ್ಚಿತ್ತ ಕರ್ಮಗಳನ್ನು ತಿಳಿಸಬಲ್ಲವ

ರಾಗಿದ್ದರು ಅವರು. ಆದರೆ ಬಿಡಾಲಹತ್ಯೆ ಅವರ ಪರಿಚಿತ ದೋಷಗಳಲ್ಲಿ ಇರಲಿಲ್ಲ. ಶಾಸ್ತ್ರಿಗಳು ಬಹಳ ಯೋಚನೆ ಮಾಡಿ, ಲೆಕ್ಕಾಚಾರ ಹಾಕಿ, ಕೊನೆಗೆ ಮುಗುಳನಗುತ್ತ, ''ರಾಮಣ್ಣ ಅಪ್ಪಟ ಚಿನ್ನದ ಬೆಕ್ಕನ್ನು ಪ್ರಾಯಶ್ಚಿತ್ತವಾಗಿ ಯೋಗ್ಯ ಬ್ರಾಹ್ಮಣನಿಗೆ ದಾನಕೊಡು. ನಿನ್ನ ಪಾಪಕೃತ್ಯಕ್ಕೆ ಅದೇ ಪ್ರಾಯಶ್ಚಿತ್ತ. ಇನ್ನೇನೂ ನನಗೆ ತೋಚುತ್ತಿಲ್ಲ. ಚಿನ್ನದ ಬೆಕ್ಕಿನ ಗಾತ್ರ ಸತ್ತ ಬೆಕ್ಕಿನ ಕಾಲುಭಾಗವಾದರೂ ಇರಲಿ'' ಎಂದು ಅಪ್ಪಣೆ ಕೊಡಿಸಿದರು. ವಿಪ್ರವಾಕ್ಯಕ್ಕೆ ಮರುಪ್ರಶ್ನೆಯಿದೆಯೇ?

ಚಿಂತಾಮಗ್ನರಾದ ರಾಯರು ಮನೆಯತ್ತ ನಡೆದರು. ದಾರಿಯುದ್ದಕ್ಕೂ ಅವರಿಗೆ ಬೆಕ್ಕಿನ ಸಾವು, ಅದರ ಪರಿಹಾರದ ಕುರಿತೇ ಯೋಚನೆ. ಒಂದೆಡೆ ಗ್ಯಾರಂಟಿ ಕುಂಭೀಪಾಕ, ಅಲ್ಲಿಯ ಕುದಿಯುವ ಎಣ್ಣೆಯ ಬಾಂಡಲಿ, ಅದರಲ್ಲಿ ಯಮದೂತರು ಪಾಪಿಗಳನ್ನು ಮುಳುಗೆತ್ತುವ ದೃಶ್ಯ ಇನ್ನೊಂದೆಡೆ, ಸುವರ್ಣ ಮಾರ್ಜಾಲ ದಾನ, ಪಾಪದಿಂದ ಬಿಡುಗಡೆ, ಆದರೆ ಇರುವ ಮಿತಸಂಪತ್ತಿನ ಕರಗುವಿಕೆ, ಮಗಳ ಮದುವೆಗೆಂದು ಮೀಸಲಾಗಿಟ್ಟಿದ್ದ ಹಣದ ವ್ಯಯ. ಏನೂ ಮಾಡಲಾಗದ ಸಂದಿಗ್ಧ ರಾಯರ ಪಾಡು ನಮ್ಮ ಶತ್ರುಗಳಿಗೂ ಬರದಿರಲಿ!

ಮನೆ ತಲಪುವಷ್ಟರಲ್ಲಿ ರಾಯರು ಸುಸ್ತಾಗಿದ್ದರು, ದೈಹಿಕವಾಗಿಯೂ ಮಾನಸಿಕವಾಗಿಯೂ. ಶಾಸ್ತ್ರಿಗಳ ಅಪ್ಪಣೆ ಕಿವಿಯಲ್ಲಿ ಗುಂಯ್‌ಗುಟ್ಟುತ್ತಿತ್ತು. ನರಕವಾಸ ಯಾರಿಗೆ ಬೇಕಿತ್ತು. ಮನೆಜಗಲಿ ಹತ್ತಿದ ಶಾಸ್ತ್ರಿಗಳು ಕಿಟಕಿಯಲ್ಲಿ ಒಳಗೆ ಇಣುಕಿ ನೋಡಿದರು. ಅಲ್ಲಿ ಬೆಕ್ಕಿನ ಹೆಣವಿದ್ದ ಜಾಗದೆಡೆಗೆ ನೇರವಾಗಿ ಅವರ ದೃಷ್ಟಿ ಸರಿಯಿತು. ಹಾಂ, ಅಲ್ಲಿರಲಿಲ್ಲ ಆ ದರಿದ್ರ ಹೆಣ. ಏನಾಗಿರಬಹುದು? ಮನೆಯೊಡತಿ ಭಾಗೀರಥಿ ಆಗಲೇ ಏನಾದರೂ ಬೇರೆ ಏರ್ಪಾಡು ಮಾಡಿದ್ದರೇ?

ರಾಯರು ಮಡದಿಯನ್ನು ಕೂಗಿದರು. ''ಲೇ, ಆ ಬೆಕ್ಕಿನ ಶವ ಎಲ್ಲಿ ಹೋಯಿತು?'' ಅಷ್ಟರಲ್ಲಿ ಅಮ್ಮನವರು ನಸುನಗುತ್ತ ಹೊರಬಂದು ''ಯಾವ ಬೆಕ್ಕು? ಅದೇ? ನೀವು ಹೊರಟ ೫-೧೦ ನಿಮಿಷದಲ್ಲಿ ಅದು ಎದ್ದು ಹೊರಟು ಹೋಯಿತಲ್ಲ!'' ಎಂದರಾಕೆ. ಆ ಬಡಬೆಕ್ಕು ತನ್ನ ಹೆಚ್ಚುವರಿ ಎಂಟು ಜೀವಗಳಲ್ಲಿ ಒಂದನ್ನು ತರಿಸಿಕೊಂಡು ಓಡಿರಬೇಕು! ಈ ವಿಚಾರ ತಿಳಿದ ರಾಯರಿಗೆ ಹೋದ ಜೀವ ಬಂದಂತಾಯಿತು. ಅವರಿಗಿದ್ದದ್ದು ಒಂದೇ ಒಂದು ತಾನೇ? ಮಗಳ ಮದುವೆಗೆ ಈಗ ಹಣದ ತಾಪತ್ರಯವೂ ಇಲ್ಲ! ಆ ಮಾರ್ಜಾಲಕ್ಕೆ ಮನಸ್ಸಿನಲ್ಲೇ ವಂದಿಸಿದರು ರಾಯರು. ಶಾಸ್ತ್ರಿಗಳ ಕನಕ ಲಾಭಕ್ಕೆ ಸೊನ್ನೆ ಬಿದ್ದಿದ್ದು ಇಲ್ಲಿ ಅಮುಖ್ಯ ಹಾಗೂ ಅಪ್ರಸ್ತುತ ವಿಚಾರ. ಮತ್ತೆ ಮತ್ತೆ ಸತ್ತು ಬದುಕಬಲ್ಲ ಮಾರ್ಜಾಲ ಸಂತತಿ ವೃದ್ಧಿಯಾಗಲಿ!

ಭಾರತೀಯ ಮುಗ್ಧೆ ಅಮೆರಿಕದಲಿ ದಗ್ಧೆ

ರುಕ್ಮಿಣಿ ಮಾಲಾ
ಮನೆಸಂಖ್ಯೆ ೮ 'ಅತ್ರಿ' ಕಾಮಾಕ್ಷಿ-
ಆಸ್ಪತ್ರೆ ರಸ್ತೆ, ಸರಸ್ವತೀಪುರ
ಮೈಸೂರು-೫೭೦ ೦೦೯

ಅಮೆರಿಕದ ವರ (ಗಂಡು) ಎಂದೊಡನೆ ತಮ್ಮ ಹೆಣ್ಣು ಮಕ್ಕಳನ್ನು ಪೂರ್ವಾಪರ ವಿವೇಚನೆ ಇಲ್ಲದೇ ಮದುವೆ ಮಾಡಿ ಕಳಿಸುವ ತಂದೆ ತಾಯಿಯರಿಗೂ ಅಮೆರಿಕ ಕುರಿತು ಹೊಂಗನಸು ಕಾಣುತ್ತಿರುವ ವಧುಗಳಿಗೂ (ಹೆಣ್ಣು) ಇಲ್ಲಿದೆ ಒಂದು ಪಾಠ. ವಾಸ್ತವ ಜೀವನದಿಂದ ಆಯ್ದ ದುರಂತ ಘಟನೆ ಇದು. :ಸಂ

ಈಗಿನ ಕಾಲದ ಯುವಕ ಯುವತಿಯರಿಗೆ ಅಮೆರಿಕ ಎಂಬ ಹೆಸರು ಕೇಳಿದರೇ ರೋಮಾಂಚನ. ಇನ್ನು ಅಲ್ಲಿಗೆ ಹೋಗುವ ಸಂದರ್ಭ ಬಂದರೆ ಸ್ವರ್ಗಕ್ಕೆ ಎರಡೇ ಗೇಣು! ವರನಾಗುವಾತ ಹೊರದೇಶದಲ್ಲಿ ಇಂಜನಿಯರು, ವೈದ್ಯ, ಎಂದಷ್ಟೇ ಗೊತ್ತು ಕನ್ಯಾಪಿತೃಗಳಿಗೆ. ಹೆಚ್ಚು ವಿಚಾರಿಸದೆ ತಮ್ಮ ಮಗಳನ್ನು ವಿದೇಶದಲ್ಲಿರುವ ವರನಿಗೆ ಮದುವೆ ಮಾಡಿ ಕೊಡುತ್ತಾರೆ. ಅಲ್ಲಿ ಅವರಿಗೆ ಮೊದಲೇ ಮದುವೆಯಾಗಿ ಮಕ್ಕಳೂ ಇರುವ ಪ್ರಸಂಗಗಳೂ ಇವೆ. ಪರದೇಶ ದಲ್ಲಿರುವ ಭಾರತದವರೊಬ್ಬರು ಇಲ್ಲಿ (ಭಾರತ) ಮದುವೆಯಾಗಿ ಹೆಂಡತಿಯನ್ನು ಅಲ್ಲಿಗೆ (ಅಮೆರಿಕ) ಕರೆದುಕೊಂಡು ಹೋಗಿ ಚಿತ್ರಹಿಂಸೆ ನೀಡಿದ್ದನ್ನು, ಅಲ್ಲಿರುವ ಭಾರತೀಯರು ಕಣ್ಣಾರೆ ನೋಡಿದ್ದನ್ನು ಇತ್ತೀಚೆಗೆ ಅವರು ನಮ್ಮ ಮನೆಗೆ ಬಂದಾಗ ಹೇಳಿದರು. ಅವರು ಹೇಳಿದ್ದು ಕೇಳಿಯೇ ನಾನು ಬೆಚ್ಚಿಬಿದ್ದೆ. ಇನ್ನು ಹಿಂಸೆ ಅನುಭವಿಸಿದ ಆ ಯುವತಿಯ ಪಾಡೇನು? ಆ ವಿಷಯ ಎಲ್ಲರೂ ತಿಳಿದು ಕೊಳ್ಳಲೇ ಬೇಕಾದದ್ದೆಂದು ಅನಿಸಿತು. ನನ್ನ ಬಂಧುಗಳು ಹೇಳಿದ್ದಷ್ಟನ್ನೇ ನಾನು ಇಲ್ಲಿ ಅಕ್ಷರರೂಪಕ್ಕೆ ಇಳಿಸಿದ್ದೇನೆ (ಹೆಸರುಗಳನ್ನು ಬದಲಾಯಿಸಿದೆ.) ಇನ್ನು ಮುಂದೆ ಬರುವ ''ನಾನು, ನಾವು, ನಮಗೆ'' ಮುಂತಾದವು ಈ ಘಟನೆಯನ್ನು ಹೇಳಿದ ಅಮೆರಿಕ ನಿವಾಸಿ ಭಾರತೀಯ ಬಂಧುವನ್ನು ಕುರಿತು ಇವೆ.

* * *

ಶಂಕರ ೩೭ರ ತರುಣ. ಇಂಜನಿಯರು. ಅಮೆರಿಕದ ಪ್ರಸಿದ್ಧ ಸಂಸ್ಥೆಯಲ್ಲಿ ಕೆಲಸ. ಕೈತುಂಬ ಸಂಬಳ. ಅಲ್ಲಿಯ ಗ್ರೀನ್ ಕಾರ್ಡ್ ಲಭಿಸಿದೆ. ''ಅಮೆರಿಕೆಯಲ್ಲಿ ನೆಲೆಸಿರುವ ೩೭ ವರ್ಷದ ಭಾರತೀಯ ವರನಿಗೆ ಒಳ್ಳೆಯ ರೂಪವಂತೆ, ಗುಣವಂತೆಯಾದ ಉಚ್ಚ ಮನೆತನದ ವಧು ಬೇಕಾಗಿದೆ'' ಎಂದು ಭಾರತದ ಒಂದು ಆಂಗ್ಲ ಪತ್ರಿಕೆಯಲ್ಲಿ ಜಾಹೀರಾತು ಬಂತು. ಅದನ್ನು ನೋಡಿದ ಒಬ್ಬ ಕನ್ಯಾಪಿತೃ ಅಮೆರಿಕದಲ್ಲಿರುವ ನಮಗೆ ಕಾಗದದ ಮೂಲಕ ತಿಳಿಸಿ, ತಮ್ಮ ಮಗಳ ಜಾತಕ ಭಾವಚಿತ್ರ ಕಳಿಸಿ ಆ ತರುಣನಿಗೆ ಕೊಡಲು ಹೇಳಿದರು. ಅವನನ್ನು ನಮ್ಮ ಮನೆಗೆ ಊಟಕ್ಕೆ ಆಹ್ವಾನಿಸಿ, '' ಒಂದು ಜಾತಕ ಬಂದಿದೆ'' ಎಂದು ತಿಳಿಸಿದೆವು. ''ಹೌದು, ಮದುವೆ ಆಗಬೇಕೆಂದಿದ್ದೇನೆ'' ಎಂದಷ್ಟೇ ಹೇಳಿ ಹೋದ. ಜಾತಕ ಕೊಂಡೊಯ್ಯಲಿಲ್ಲ. ಸ್ವಲ್ಪ ದಿನ ಸಂದಾಗ, ಶಂಕರನಿಗೆ ಮೊದಲೇ ಮದುವೆಯಾಗಿ ವಿಚ್ಛೇದನವೂ ಆಗಿದೆ ಎಂಬ ಸುದ್ದಿ ಕೇಳಿ ಬಂತು. ಈ ವಿಷಯದ ನಿಜ ಅರಿಯಲು ಅವನನ್ನು ಪುನಃ ಊಟಕ್ಕೆ ಆಹ್ವಾನಿಸಿದೆವು. ''ಈ ಮೊದಲು ನಿಮಗೆ ಮದುವೆಯಾದದ್ದು ನಿಜವೇ?' ಎಂದು ಕೇಳಿದೆವು.

''ಒಂದು ವರ್ಷದ ಹಿಂದೆ ಮದುವೆ ಆಗಿದ್ದೆವು. ಈಗ ನಾವು ಸ್ನೇಹಿತರಾಗಿ ವಿಚ್ಛೇದನ ಪಡೆದಿದ್ದೇವೆ. ಈಗ ಅಣ್ಣ ನನಗೆ ಊರಲ್ಲೇ ಹುಡುಗಿ ನೋಡಿ ಇಟ್ಟಿದ್ದಾರೆ. ಅಲ್ಲೇ ಮದುವೆಯಾಗಿ ಅವಳನ್ನು ಕರೆದು ಕೊಂಡು ಬರುತ್ತೇನೆ,'' ಎಂದು ಹೇಳಿ ಹೋದ. ಹಾಗಾಗಿ ನಮ್ಮ ಬಂಧುಗಳು ಕಳುಹಿಸಿದ ಜಾತಕ ಅವನಿಗೆ ಕೊಡುವ ಪ್ರಸಂಗ ಬರಲಿಲ್ಲ. ಬರದೆ ಇದ್ದದ್ದು ಬಹಳ ಒಳ್ಳೆಯದಾಯಿತು ಎಂದು ನಮಗೆ ಆಮೇಲೆ ತಿಳಿಯಿತು. ಶಂಕರ ತಾಯಿನಾಡಿನಲ್ಲೇ ಮದುವೆಯಾಗಿ ಹೆಂಡತಿ ಮಲ್ಲಿಕಳನ್ನು ಅಮೆರಿಕೆಗೆ ಕರೆದು ತಂದ. ೨೪ರ ಹರೆಯದ ತರುಣಿ ಮಲ್ಲಿಕ ಹೊಂಗನಸು ಹೊತ್ತು ಅಮೆರಿಕೆಗೆ ಕಾಲಿಟ್ಟಳು. ಅವಳ ತಂದೆಗೆ ನಾಲ್ಕು ಜನ ಹೆಣ್ಣು ಮಕ್ಕಳಂತೆ.

ನಾವು ಹೊಸ ದಂಪತಿಗಳನ್ನು ಮನೆಗೆ ಊಟಕ್ಕೆ ಕರೆದು ಸನ್ಮಾನಿಸಿದೆವು. ಮಲ್ಲಿಕಳೂ ಹೊಸಪರಿಚಯವೆಂದು ಭಾವಿಸದೆ ನಮ್ಮೊಂದಿಗೆ ಬೆರೆತಳು. ಅವಳನ್ನು ನೋಡಿ ನನಗೂ ಖುಷಿ ಆಯಿತು. ಒಳ್ಳೆ ಹುಡುಗಿ ಎಂದೆನಿಸಿತು. ಅವಳಿಗೆ ಹೀಗೆಯೇ ಒಮ್ಮೊಮ್ಮೆ ದೂರವಾಣಿಸಿ ಮಾತಾಡುತ್ತಿದ್ದೆ. ಕಾಲ ಸರಿದಂತೆ, ಅವಳು ಗರ್ಭಿಣಿ ಎಂದು ಗೊತ್ತಾಗಿ ಅವಳಿಗೆ ಅಭಿನಂದನೆ ತಿಳಿಸಲು ದೂರವಾಣಿಸಿದೆ. ಆದರೆ ಎತ್ತಿದ್ದು ಶಂಕರ. ''ಮಲ್ಲಿಕ ಮಲಗಿದ್ದಾಳೆ, ಸುಸ್ತು ವಾಂತಿ ಎಲ್ಲ ಇದೆ'' ಎಂದ. ಸರಿ. ಎಬ್ಬಿಸು ವುದು ಬೇಡ, ಏನಾದರೂ ಸಹಾಯ ಬೇಕಾದರೆ ಕೇಳಿ ಎಂದು ಹೇಳಿದೆ, ''ಏನೂ ಬೇಡ, ನಾನೇ ಅಡುಗೆ ಮಾಡುತ್ತೇನೆ''ಎಂದ.

ಇದಾಗಿ ಕೆಲವು ದಿನಗಳಾದರೂ ಮಲ್ಲಿಕಳ ದೂರವಾಣಿ ಬರದಿರುವುದು ಕಂಡು ನನಗೆ ಆಶ್ಚರ್ಯವಾಯಿತು. ನಾನು ಅವಳನ್ನು ವಿಚಾರಿಸಿದ್ದರೂ ಅವಳೇಕೆ ದೂರವಾಣಿಸಲಿಲ್ಲ ಎಂದು ಚಿಂತೆಯಾಗಿ ನಾನೇ ಪುನಃ ದೂರವಾಣಿಸಿದೆ. ಈ ಸಲ ಅವಳೇ ಎತ್ತಿಕೊಂಡಿದ್ದಳು. ''ಈಗ ಚೆನ್ನಾಗಿದ್ದೇನೆ, ಆದರೆ ವಾಂತಿ ಸಂಕಟ ಇದೆ, ಮೊದಲು ಒಮ್ಮೆ ಗರ್ಭಹೋಗಿತ್ತು'' ಎಂದಳು. ಬೇರೇನು ಮಾತಾಡಲಿಲ್ಲ.

ಹೀಗೆ ದಿನಗಳುರುಳಿದಂತೆ ನಾನು ನನ್ನ ಸಂಸಾರದಲ್ಲೇ ಮಗ್ನಳಾಗಿ ಮಲ್ಲಿಕಳ ವಿಷಯ ಮರೆತೆ. 'ಮಲ್ಲಿಕಳು ಮನೆ ಬಿಟ್ಟು ಬಂದಿದ್ದಾಳೆ, ಶಂಕರ ಅವಳನ್ನು ಕೊಲೆ ಮಾಡಲು ಪ್ರಯತ್ನಿಸಿದ್ದನಂತೆ, ಅವಳು ಹೇಗೋ ತಪ್ಪಿಸಿಕೊಂಡು ಅಲ್ಲೇ ಪಕ್ಕದಲ್ಲಿರುವ ಅಮೆರಿಕನ್ನರ ಸಹಾಯ ದಿಂದ ಆರಕ್ಷಕರಿಗೆ ದೂರವಾಣಿಸಿ ತಿಳಿಸಿದಳಂತೆ ಪೊಲೀಸರು ಶಂಕರನನ್ನು ಬಂಧಿಸಿ ಹತ್ತು ದಿನ ಜೈಲಿನಲ್ಲಿಟ್ಟಿದ್ದಾರಂತೆ. ಈಗ ಮಲ್ಲಿಕಳು ಕೆಲವು ದಿನ ಒಬ್ಬೊಬ್ಬ ಸ್ನೇಹಿತರ ಮನೆಯಲ್ಲಿರುತ್ತಾಳೆ' ಎಂಬ ಸುದ್ದಿ ನನಗೆ ತಡವಾಗಿ ಬಂತು. ಅವಳನ್ನು ನೋಡಲು ಹೋದೆ. ನೋಡಿದ ಕೂಡಲೇ ಷಾಕ್ ಆಗಿ ಮಾತಾಡದೆ ಕುಳಿತೆ. ಏನೆಂದರೆ ಏನೂ ಮಾತಾಡಲಿಲ್ಲ. ಷಾಕ್‌ನಲ್ಲಿ ಮಾತೇ ಬರಲಿಲ್ಲ. ಮೂಕಳಾಗಿ ಅವಳನ್ನೇ ನೋಡುತ್ತ ಕುಳಿತೆ. ಅವಳ ಮೈಮೇಲೆ ಬಾಸುಂಡೆಗಳಿದ್ದುವು. ಮುಖದಲ್ಲಿ ಗಾಯ ವಿತ್ತು. ತುಂಬ ಇಳಿದು ಹೋಗಿದ್ದಳು. ಆ ದಿನ ಏನೂ ಮಾತಾಡದೆಯೇ ಮನೆಗೆ ಬಂದೆ. ಮರುದಿನ, ಮಲ್ಲಿಕ ನನಗೆ ದೂರವಾಣಿಸಿ ಅತ್ತುಬಿಟ್ಟಳು. ನಾನು ಅವಳನ್ನು ಮಾತಾಡಿಸದಿದ್ದನ್ನು ಕಂಡು, ಅವಳು ಮನೆ ಬಿಟ್ಟು ಬಂದದ್ದು ತಪ್ಪು ಎಂದು ಭಾವಿಸಿದ್ದೇನೆಂದು ತಪ್ಪು ಭಾವಿಸಿ ಅತ್ತುಕೊಂಡು ಗಂಡ ಕೊಟ್ಟ ಹಿಂಸೆಯಿಂದ ಹಿಡಿದು ಎಲ್ಲ ವಿಷಯ ತಿಳಿಸಿದಳು. 'ನಿನ್ನನ್ನು ನೋಡಿ ಷಾಕ್ ಆಗಿ ಮಾತೇ ಬರಲಿಲ್ಲ, ತಪ್ಪು

ತಿಳಿದುಕೊಂಡಿಲ್ಲ' ಎಂದು ಸಮಾಧಾನಿಸಿದೆ. ಒಂದು ವರ್ಷ ಈ ಹಿಂಸೆಯನ್ನು ಯಾಕೆ, ಹೇಗೆ ಸಹಿಸಿದೆ? ಯಾರಿಗೂ ಹೇಳದೆ ಸಹಿಸಿಕೊಂಡೇ ಬಾಳಿದ್ದೀಯಲ್ಲ ಎಂದು ಕೇಳಿದೆ. ಅದಕ್ಕವಳು ''ಏನು ಮಾಡುವುದು, ನನ್ನ ಇಬ್ಬರು ತಂಗಿಯರಿಗೆ ಮದುವೆಯಾಗಬೇಕು. ನಾನು ಗಂಡನನ್ನು ಬಿಟ್ಟು ಬಂದರೆ ಅವರಿಗೆ ಮದುವೆ ಯಾಗುವುದು ಕಷ್ಟ. ಅದಕ್ಕೆ ಏನೇ ಕಷ್ಟ ಬಂದರೂ ಸಹಿಸಿದೆ. ಕೊಲೆ ಮಾಡಲು ಬಂದಾಗ ಇನ್ನು ಇವನೊಡನೆ ಬಾಳಲು ಸಾಧ್ಯವಿಲ್ಲ ಎಂದರಿವಾಯಿತು ''ಎಂದು ಕಣ್ಣೀರು ಮಿಡಿದಳು.

ಶಂಕರ ಎಷ್ಟು ಧೂರ್ತ ಬುದ್ಧಿ ಉಪ ಯೋಗಿಸಿದ್ದಾನೆಂದರೆ ಮಲ್ಲಿಕಳ ಹೆಸರಿನಲ್ಲಿ ಯಾವುದೇ ಬ್ಯಾಂಕ್ ಖಾತೆ, ಕ್ರೆಡಿಟ್ ಕಾರ್ಡ್ ಇತ್ಯಾದಿ ಏನನ್ನೂ ಮಾಡಿಸಿರಲಿಲ್ಲ. ಸ್ವಂತ ಮನೆ ಖರೀದಿಸಿದ್ದು ಕೂಡ ಅವನೊಬ್ಬನ ಹೆಸರಿ ನಲ್ಲಿ ಮಾತ್ರ. ಅಲ್ಲಿ ಮನೆ ಖರೀದಿಸುವಾಗ ಗಂಡ ಹೆಂಡತಿ ಇಬ್ಬರೂ ಸಹಿ ಮಾಡಬೇಕು. ಮನೆ ಹುಡುಕಿ ಕೊಟ್ಟ ದಲ್ಲಾಳಿ ಈ ವಿಷಯ ಕೇಳಿದಾಗ 'ಅವಳಿಗೆ ಅಸೌಖ್ಯ. ಇಲ್ಲಿಗೆ ಬರಲು ಸಾಧ್ಯವಿಲ್ಲ, ಅವಳೇ ಒಪ್ಪಿಗೆ ಕೊಟ್ಟ ದ್ದಾಳೆ' ಎಂದು ಸುಳ್ಳು ಹೇಳಿದ್ದಾನೆ. ಮನೆಯಲ್ಲಿ ಮಲ್ಲಿಕ ಬೇರೆಯವರ ಸಣ್ಣ ಮಕ್ಕಳನ್ನು ನೋಡಿಕೊಂಡು ಕೆಲವು ಡಾಲರು ಸಂಪಾದಿ ಸುತ್ತಿದ್ದಳು. ಅದನ್ನೂ ಅವನೇ ಕಿತ್ತುಕೊಳ್ಳು ತ್ತಿದ್ದ. ಅವಳಿಗೆ ಆರ್ಥಿಕ ಸ್ವಾತಂತ್ರ್ಯ ಸಿಗದಂತೆ ಬಹಳ ಮುಂಜಾಗ್ರತೆ ವಹಿಸಿದ್ದ. ಇಷ್ಟೆಲ್ಲ ಪ್ರಕರಣವಾಗುವಾಗ ಮಲ್ಲಿಕಳ ವೀಸದ ಅವಧಿಯೂ ಮುಗಿಯುತ್ತ ಬಂತು. ಎರಡು ತಿಂಗಳು ಮಾತ್ರವಿತ್ತು. ಮುಂದೆ ಅವಳು ಇಲ್ಲಿ ಒಂದು ದಿನವೂ ನಿಲ್ಲುವಂತಿಲ್ಲ, ಭಾರತಕ್ಕೆ ಮರಳಲೇ ಬೇಕು. ನ್ಯಾಯಾಲಯದಲ್ಲೂ ದಾವೆ ಹೂಡುವಂತಿಲ್ಲ. ಶಂಕರ ಮದುವೆ ಯಾದದ್ದು ಭಾರತದಲ್ಲಿ. ಮಲ್ಲಿಕಳಿಗೆ ಮಕ್ಕಳಾದರೆ ಜೀವನಾಂಶ ಮತ್ತು ಅವರ ಹೊಣೆ ಹೊರ ಬೇಕಾಗುತ್ತದೆಂದು ಅವಳು ಗರ್ಭಿಣಿಯಾದಾಗ ಸಾಕಷ್ಟು ಹಿಂಸೆ ಕೊಡು ತ್ತಿದ್ದನಂತೆ. ಮಲ್ಲಿಕಳ ಹೊಟ್ಟೆಯಲ್ಲಿ ಅವಳಿ ಮಕ್ಕಳಿದ್ದರು. ಗರ್ಭಿಣಿ ಆದವರು ನಡೆದರೆ ಆರೋಗ್ಯಕ್ಕೆ ಬಹಳ ಒಳ್ಳೆಯದೆಂದು ಹೇಳಿ ಒಮ್ಮೆಗೇ ಅವಳನ್ನು ೫ ಮೈಲಿ ನಡೆಸಿದ್ದನಂತೆ, ಆಗ ಒಂದು ಮಗು ಹೋಯಿತಂತೆ, ಇನ್ನೊಂದನ್ನು ಉಳಿಸಲು ಔಷಧಿ ತಂದು ಕೊಡದೆ ಅದೂ ಹೋಯಿತಂತೆ.

ಮನೆಗೆ ಒಂದು ದಿನ ಅವನ ಸ್ನೇಹಿತನನ್ನು ಕರೆದುಕೊಂಡು ಬಂದು ಆಮ್ಲೆಟ್ ಮಾಡು ಎಂದಾಗ ಮಲ್ಲಿಕ, 'ನೀವು ಯಾವಾಗ ಮೊಟ್ಟೆ ತಿನ್ನಲು ಸುರುಮಾಡಿದ್ದು? ಹಿಂದೆ ಒಮ್ಮೆ ಮಾಂಸ ತಿನ್ನುವುದೇ ಇಲ್ಲ ಎಂದಿದ್ದೀ ರಲ್ಲವೇ?' ಎಂದು ಕೇಳಿದ್ದಕ್ಕೆ 'ನನಗೇ ಪ್ರಶ್ನೆ ಮಾಡುವಷ್ಟಾದೆಯಾ?' ಎಂದು ಹೇಳಿ ಆ ಸ್ನೇಹಿತನ ಎದುರೇ ಮಲ್ಲಿಕಳಿಗೆ ಬಾಸುಂಡೆ ಬರುವಂತೆ ಹೊಡೆದನಂತೆ. ಆ ಸ್ನೇಹಿತ ಅವರ ಮನೆಯಲ್ಲಿ ಎರಡು ತಿಂಗಳು ಇದ್ದನಂತೆ. ಆ ಸ್ನೇಹಿತ ಮಲ್ಲಿಕಳಿಗೆ ಏನಾದರೂ ಮಾಡಿದರೆ ಎಂದು ಭಯವಾಗಿ, ಆ ಭಯದಲ್ಲೇ ಎರಡು ತಿಂಗಳು ಬದುಕಿದಳಂತೆ. ಒಂದು ದಿನ ಆ ಸ್ನೇಹಿತ ಇರುವಾಗಲೇ ಕುರ್ಚಿ ತೆಗೆದು ಕೊಂಡು ಅದರಲ್ಲೇ ಮಲ್ಲಿಕಳ ತಲೆ ಒಡೆಯಲು ನೋಡಿದಾಗ ಅಲ್ಲಿಂದ ತಪ್ಪಿಸಿ ಕೊಂಡು ಬಂದು ಪೊಲೀಸರಿಗೆ ತಿಳಿಸಿದಳು. ಹಿಂದೆಯೂ ಹೀಗೆ ಹಿಂಸಿಸಿದಾಗ ದೊಡ್ಡ ಗಲಾಟೆ ಕೇಳಿ ಪಕ್ಕದ ಮನೆಯವರು ಆರಕ್ಷಕರಿಗೆ

ದೂರವಾಣಿಸಿದ್ದರಂತೆ. ಆಗ ಪೊಲೀಸರು ಬಂದಾಗ ಮಲ್ಲಿಕಳೇ 'ಏನಿಲ್ಲ, ನನ್ನ ತಾಯಿಗೆ ಅಸೌಖ್ಯವೆಂದು ಭಾರತದಿಂದ ಪತ್ರ ಬಂದಿತ್ತು. ಅದಕ್ಕೆ ಕಿರುಚಿದೆ' ಎಂದು ಸುಳ್ಳು ಹೇಳಿ ಅವರನ್ನು ಕಳಿಸಿ, ಶಂಕರನನ್ನು ಬಚಾವು ಮಾಡಿದ್ದಳಂತೆ. ಎಷ್ಟಾದರೂ ಭಾರತೀಯಳಲ್ಲವೇ? ಆ ಸಂಸ್ಕಾರ ಹುಟ್ಟಿನಿಂದಲೇ ಬಂದಿರುತ್ತದೆ. ಗಂಡ ಕುಡುಕನೇ ಇರಲಿ, ಎಷ್ಟೇ ಕಷ್ಟ ಕೊಟ್ಟು ಹಿಂಸಿಸಲಿ ಗಂಡನೇ ದೇವರಲ್ಲವೇ? ಅದನ್ನೇ ಅವಳ ತಲೆಗೆ ತುಂಬಿ ಬೆಳೆಸಿರುತ್ತಾರಲ್ಲವೇ? ಸಹಿಸಿ ಸಹಿಸಿ ಸಾಕಾಗಿ ಕೊನೆಗೆ ಅವನನ್ನು ಬಿಟ್ಟು ಬಂದಳು. ಇಷ್ಟೆಲ್ಲ ಆದರೂ ಅವಳಿಗೆ ಗಂಡನೆಂಬ ವಾಂಛೆ ಹೋಗಲಿಲ್ಲ. ಶಂಕರನಿಗೆ ದಿನಕ್ಕೊಮ್ಮೆ ದೂರವಾಣಿಸಿ ಅವನ ಸ್ವರ ಕೇಳಿದೊಡನೆ ಇಟ್ಟುಬಿಡುತ್ತಿದ್ದಳು. ಅವನ ಮಾತಾದರೂ ಕೇಳುತ್ತೇನೆ ಎಂಬ ದೌರ್ಬಲ್ಯದಿಂದ ಅವಳು ಮುಕ್ತಳಾಗಲಿಲ್ಲ.

ಅಲ್ಲಿ ಎಲ್ಲ ಸೇರಿ ಮಾತುಕತೆ ನಡೆಸಿ ಮಲ್ಲಿಕಳಿಗೆ ಹತ್ತು ಸಾವಿರ ರೂಪಾಯಿ ಪರಿಹಾರ ಕೊಡುವಂತೆ ಹೇಗೋ ಶಂಕರನನ್ನು ಒಪ್ಪಿಸಿದರು. ಹತ್ತುಸಾವಿರ ರೂಪಾಯಿ ಮಲ್ಲಿಕಳಿಗೆ ಕೊಟ್ಟು ಕೈತೊಳೆದ ಶಂಕರ. ಅಲ್ಲಿಗೆ ಮಲ್ಲಿಕಳ ವೀಸದ ಅವಧಿ ಮುಗಿದು ಭಾರತಕ್ಕೆ ಮರಳಲೇಬೇಕಾಯಿತು. ಆಗಷ್ಟೆ ಮಲ್ಲಿಕಳ ತಂಗಿಗೆ ಮದುವೆ ನಿಶ್ಚಯವಾಗಿತ್ತು. ಅಕ್ಕ ನಡತೆಗೆಟ್ಟವಳು ಎಂದು ವರನ ಕಡೆಯವರಿಗೆ ಚುಚ್ಚಿಕೊಟ್ಟು ಆ ಮದುವೆ ನಿಲ್ಲಿಸುವುದರಲ್ಲಿ ಶಂಕರ ಯಶಸ್ವಿಯಾದ. ಹಾಗೆ ಮಲ್ಲಿಕಳ ತಂಗಿಗೆ ನಿಶ್ಚಯವಾದ ಮದುವೆ ತಪ್ಪಿ ಆ ಮನೆಯವರು ನೊಂದು ಬಸವಳಿದರು.

ಇಂಥ ಧೂರ್ತನನ್ನು ಅಲ್ಲಿ ಕೆಲಸದಿಂದ ತೆಗೆದು ಹಾಕಲಿಲ್ಲವೇ? ಎಂದು ನಾನು (ಲೇಖಕಿ) ಕೇಳಿದಾಗ ''ಇಲ್ಲಿ, ಅವನು ಜೀವನದಲ್ಲಿ ಹೇಗೆ ಇರಲಿ, ಎಷ್ಟೇ ಲಂಪಟನಾಗಿರಲಿ, ಕಾರಾಗೃಹದಲ್ಲಿದ್ದು ಬಂದವನಾಗಿರಲಿ, ಅವನ ಹೊರಗಿನ ಜೀವನಕ್ಕೂ ಸಂಸ್ಥೆಗೂ ಸಂಬಂಧ ಎಲ್ಲ. ಸಂಸ್ಥೆಯ ಕೆಲಸಕ್ಕೆ ಅದರಿಂದೇನು ಬಾಧಕವಿಲ್ಲ, ಅವನು ಸಂಸ್ಥೆಯಲ್ಲಿ ಚೆನ್ನಾಗಿ ಕೆಲಸ ಮಾಡಿದರಾಯಿತು. ಅಷ್ಟೇ ಬೇಕಾಗಿರುವುದು ಅವರಿಗೆ. ಹಾಗಾಗಿ ಅವನ ಕೆಲಸ ಹೋಗಲಿಲ್ಲ'' ಎಂದು ಅವರು ಸಿಟ್ಟಿನಿಂದ, ವಿಷಾದ ಬೆರೆತ ಧ್ವನಿಯಲ್ಲಿ ಹೇಳಿದರು.

ಮಲ್ಲಿಕಳಿಗೆ ಸಹಾಯ ಮಾಡಿದ್ದಕ್ಕೆ ನಮಗೂ ಶಂಕರನ ಬೆದರಿಕೆ ಕರೆಗಳು ಬಂದುವು. ಆದರೆ ನಾವು ಅವನ ಬೆದರಿಕೆಗೆ ಸೊಪ್ಪು ಹಾಕಲಿಲ್ಲ. ನಾವೆಲ್ಲ ಈಗ ಅವನ ಸ್ನೇಹವನ್ನೇ ಬಿಟ್ಟಿದ್ದೇವೆ. ಅಂಥ ಭೂಪತಿಗೆ ಈಗ ಮೂರನೆ ಮದುವೆಯೂ ಆಯಿತೆಂದು ಇತ್ತೀಚೆಗೆ ನಮಗೆ ತಿಳಿಯಿತು. ಅವನಿಗೆ ಪುನಃ ಯಾರೋ ಹೆಣ್ಣು ಕೊಟ್ಟಿದ್ದಾರೆ. ಭಾರತದಲ್ಲಿ ಮದುವೆಯಾಗಿ ಹೆಂಡತಿಯನ್ನು ಕರೆದುಕೊಂಡು ಬಂದಿದ್ದಾನಂತೆ. ನಮ್ಮಿಂದ ಏನೂ ಮಾಡಲಾಗಲಿಲ್ಲ. ಅವನ ಮದುವೆ ನಿಲ್ಲಿಸ ಲಾಗಲಿಲ್ಲ. ಮದುವೆಯಾದನಂತರವೇ ನಮಗೆ ವಿಷಯ ಗೊತ್ತಾದದ್ದು. ಅವಳೀಗ ಗರ್ಭಿಣಿಯಂತೆ. ಆ ಹೆಂಡತಿಯನ್ನು ಇನ್ನು ಹೇಗೆ ನೋಡಿಕೊಳ್ಳುತ್ತಾನೊ ಗೊತ್ತಿಲ್ಲ. ಅವಳ ತಾಯಿ ಮನೆಯವರಿಗೆ ಈ ಯಾವ ವಿಷಯಗಳೂ ಗೊತ್ತಿರುವ ಸಾಧ್ಯತೆ ಇಲ್ಲ. ದೂರದ ಬೆಟ್ಟ ನುಣ್ಣಗೆ ಅಲ್ಲವೇ.

ಶಿವಾಜಿ : ಆರಂಭದ ದಿನಗಳು

ಟಿ.ಎಸ್.ಲಲಿತ
೭೦೨,೧ನೇ ಮಹಡಿ, ೧೭ನೇ
ಮುಖ್ಯರಸ್ತೆ, ಸರಸ್ವತಿಪುರ,
ಮೈಸೂರು-೫೭೦೦೦೯

ಮರಾಠರ ಭೋಸ್ಲೆ ಪಂಗಡದ ಮೂಲ, ಹಾಗೂ ಆ ಹೆಸರು ಹುಟ್ಟಿಕೊಂಡ ರೀತಿ ರಹಸ್ಯಮಯ, ಅವರು ಚಿತ್ತೂರಿನ ಹಾಗೂ ಉದಯಪುರದ ಸಿಸೋದಿಯಾ ರಾಣಾನ ವಂಶಸ್ಥರೆಂದೂ ಹೇಳುತ್ತಾರೆ. ೧೪ನೇ ಶತಮಾನದ ಮೊದಲ ಭಾಗದಲ್ಲಿ ಚಿತ್ತೂರು ಅಲ್ಲಾವುದ್ದೀನ್ ಖಿಲ್ಜಿಯಿಂದ ಹಾಳುಗೆಡವಲ್ಪಟ್ಟ ಮೇಲೆ, ಅವರ ಕುಟುಂಬದ ಗುಂಪೊಂದು ಬಹುಶಃ ದಕ್ಷಿಣಕ್ಕೆ ಬಂದಿರಬಹುದು. ಮರಾಠಾ ಇತಿಹಾಸಕ್ಕೆ ಸಂಬಂಧಪಟ್ಟಂತೆ, ಮುಂದೆ ದೌಲತಾಬಾದ್ ಎಂದು ಕರೆಯಲ್ಪಟ್ಟ ದೇವಗಿರಿಯ ಯಾದವರು, ವೆರುಲ್‌ನ ಭೋಸ್ಲೆಗಳು ಹಾಗೂ ಪಲಾರದ ಬಳಿಯ ಪಲ್ವನನ ನಿಂಬಾಳ್ಕರರು ಮುಂತಾದ ಮೂರು ಮರಾಠಾ ಕುಟುಂಬಗಳು ಶಿವಾಜಿಯ ಏಳಿಗೆಯೊಂದಿಗೆ ಸಂಬಂಧಿಸಿವೆ. ಅವರಲ್ಲಿ ಯಾದವರು ೧೩ನೇ ಶತಮಾನದ ಅಂತ್ಯದ ವೇಳೆಗೆ ದೆಹಲಿಯ ಅಲ್ಲಾವುದ್ದೀನ್ ಖಿಲ್ಜಿಯಿಂದ ವಶಮಾಡಿಕೊಳ್ಳಲ್ಪಟ್ಟ ದೇವಗಿರಿಯ ಹೆಸರಾಂತ ಆಡಳಿತಗಾರರ ವಂಶಸ್ಥರು. ಇವರು ಅಹಮದ್ ನಗರದ ನಿಜಾಮ್‌ಶಾಹಿಗಳ ಸೇವೆಗೆ ನಿಂತರು. ಈ ನಗರವನ್ನು ೧೬೦೦ರಲ್ಲಿ ಚಕ್ರವರ್ತಿ ಅಕ್ಬರ್ ಮುತ್ತಿ ವಶಪಡಿಸಿಕೊಂಡ. ನಿಜಾಮ್‌ಶಾಹಿ ರಾಜ್ಯ ನಾಶವಾಗುವುದರಲ್ಲಿದ್ದಾಗ ಸಮರ್ಥ ಸಂಘಟಕನಾದ ಅಬಿಸೀನಿಯಾ ರಾಜ್ಯದ ಮಂತ್ರಿ ಮಲ್ಲಿಕ್ ಅಂಬರ್ ಎಂಬಾತ ಅದರ ನೆರವಿಗೆ ಬಂದ. ಅಂಬರ್ ಹಿಂದುಗಳ ಸ್ನೇಹ ಸಂಪಾದಿಸಿ, ಅವರ ಅತ್ಯುತ್ತಮ ಪ್ರತಿಭೆ ಹಾಗೂ ಸಹಕಾರವನ್ನು ಯುದ್ಧ ಹಾಗೂ ಆಡಳಿತಗಳೆರಡಕ್ಕೂ ಉಪಯೋಗಿಸಿಕೊಂಡು, ಆ ರಾಜ್ಯದ ವರಮಾನವನ್ನು ಹೆಚ್ಚಿಸಿ, ಮೊಘಲರ ಮುನ್ನಡೆಯನ್ನು, ಕಾಲು ಶತಮಾನದವರೆಗೂ ಯಶಸ್ವಿಯಾಗಿ ತಡೆದ. ಈ ಭಾರಿ ರಾಜಕೀಯ ಹೋರಾಟದಲ್ಲಿ ಶಿವಾಜಿಯ ತಂದೆ ಷಾಹಾಜಿ ಹಾಗೂ ತಾತ ಮಾಲೋಜಿ ಇಬ್ಬರೂ ಮಲಿಕ್ ಅಂಬರನೊಂದಿಗೆ ನಿಕಟ ಸಂಪರ್ಕ ಹೊಂದಿ ಕ್ರಮೇಣ ತಮ್ಮ ಶಕ್ತಿಯರಿತು ಕಾಲಾಂತರದಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಿದರು.

ದೇವಗಿರಿಯ ಲಿಖೂಜಿ ಜಾಧವನಿಗೆ ಬುದ್ಧಿವಂತೆಯಾದ ಜೀಜಾಬಾಯಿ ಎಂಬ ಮಗಳಿದ್ದು, ೧೬೦೫ರಲ್ಲಿ ಮಾಲೋಜಿ ಭೋಸ್ಲೆಯ ಮಗ ಅದೃಷ್ಟದ ಕೆಚ್ಚೆದೆಯ ಸೈನಿಕ ಶಹಾಜಿಯನ್ನು ಮದುವೆಯಾಗಿದ್ದಳು. ಶಹಾಜಿ ಮೊಘಲರ ಧಾಳಿಯ ವಿರುದ್ಧ ಕುಸಿಯುತ್ತಿದ್ದ ನಿಜಾಮ್‌ಶಾಹಿಯನ್ನು ಎತ್ತಿ ಹಿಡಿಯುವಲ್ಲಿ ದೀರ್ಘಕಾಲ ಶ್ರಮಿಸಿದ.

ಪ್ರಾರಂಭದ ಹಂತಗಳಲ್ಲಿ ಮರಾಠರ ಇತಿಹಾಸ, ಮೂರು ತಲೆಮಾರುಗಳ ಮೊಘಲ್ ಸಾಮ್ರಾಟರು, ಭೋಸ್ಲೆ ಸಂತತಿಯ ಮೂರು ತಲೆಮಾರುಗಳನ್ನು ಹತ್ತಿಕ್ಕುವ ಒಂದು ಅವಿರತ ಹೋರಾಟವೆನಿಸಿದೆ. ಈ ಸತ್ವಪರೀಕ್ಷೆಯಲ್ಲಿ ಮಾಲೋಜಿ ಹಾಗೂ ಅವನ ಮಗ ಶಹಜಿ ಸಿದ್ಧಪಡಿಸಿದ ಭೂಮಿಕೆಯ ಪ್ರಯೋಜನವನ್ನು ಶಹಾಜಿ ಹಾಗೂ ಜೀಜಾಬಾಯಿಯ ಮಗ ಶಿವಾಜಿ ಪಡೆದ. ಜಹಾಂಗೀರ್

ಫವನ್ಸ್ ಜರ್ನಲ್ ಫೆಬ್ರವರಿ ೨೦೦೧ರ ಸಂಚಿಕೆಯಲ್ಲಿ ಪ್ರಕಟವಾದ ಜಿ.ಎಸ್.ಸರ್‌ದೇಸಾಯಿಯವರ "ಶಿವಾಜಿ ಇನ್ ಅರ್ಲಿ ಅಫ್ ಬ್ರಿಂಗಿಂಗ್" ಲೇಖನದ ಕನ್ನಡಾನುವಾದ

ಷಹಜಹಾನ್ ಹಾಗೂ ಔರಂಗಜೇಬ್ ದಖ್ಖನ್ ಅನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದರು. ಮೊಘಲ್ ಚಕ್ರವರ್ತಿಗಳ ಬಲದೊಂದಿಗೆ ಹೋಲಿಸಿದಲ್ಲಿ ಭೋಸ್ಲೆಗಳ ಸಂಪನ್ಮೂಲಗಳು ಕಡಿಮೆಯಿದ್ದರೂ, ಅವರು ದಖ್ಖನ್ನಿನ ರಕ್ಷಣೆಗೆ ನಿಂತರು. ತಾವು ಸಲ್ಲಿಸಿದ ಸೇವೆಗೆ ಬದಲಾಗಿ, ಭೋಸ್ಲೆಗಳು ಶೀಘ್ರವೇ ನಿಜಾಮ್‌ಶಾಹಿ ಅರಸರ ಮೆಚ್ಚಿನವರಾದರು. ಅವರನ್ನು ಅಂಬರ್ ಪ್ರೋತ್ಸಾಹಿಸಿ, ಮೊಘಲರನ್ನು ದೂರವಿಡಲು ಅವರ ಸೇವೆಯನ್ನು ಬಳಸಿಕೊಂಡ. ೧೬೨೪ರಲ್ಲಿ ಅಹಮದ್ ನಗರದ ಬಳಿಯ 'ಭಟವಾಡಿ'ಯ ಯುದ್ಧದಲ್ಲಿ ಮಲ್ಲಿಕ್ ಅಂಬರ್ ದೆಹಲಿ ಹಾಗೂ ಬಿಜಾಪುರದ ಜಂಟಿಸೇನೆ ತೀವ್ರ ಸೋಲನುಭವಿಸುವಂತೆ ಮಾಡಿದ. ಈ ಯುದ್ಧದಲ್ಲಿ ಪಾಲ್ಗೊಂಡ ಶಹಜಿ ಯಶಸ್ಸಿನೊಂದಿಗೆ ಅಮೂಲ್ಯ ಅನುಭವವನ್ನು ಗಳಿಸಿದ. ಮುಂದೆ ಅನೇಕ ವರ್ಷಗಳವರೆಗೆ ಶಹಜಿ ನಿಜಾಮ್‌ಷಾಹಿ ರಾಜ್ಯವನ್ನು ಬಲಿಷ್ಠ ಶಹಜಹಾನನ ವಿರುದ್ಧ ಸಮರ್ಥವಾಗಿ ರಕ್ಷಿಸಿದ. ಅನೇಕ ವರ್ಷಗಳ ಯುದ್ಧಾನಂತರ ಶಹಜಹಾನ್ ೧೬೩೬ರಲ್ಲಿ ಅಹಮದ್ ನಗರ ರಾಜ್ಯವನ್ನು ಅಳಿಸಿಹಾಕಿ ಶಹಜಿಯನ್ನು ತನ್ನ ತಾಯ್ನಾಡಿನಿಂದ ಹೊರಗಟ್ಟುವುದರಲ್ಲಿ ಯಶಸ್ವಿಯಾದ. ಅವನು ಮುಂದೆ ಮಹಾರಾಷ್ಟ್ರದಲ್ಲಿ ಜೀವಿಸುವುದಿಲ್ಲವೆಂಬ ಷರತ್ತಿನ ಮೇಲೆ ಬಿಜಾಪುರದ ಸುಲ್ತಾನನ ಸೇವೆಗೆ ಸೇರಿದ.

ಒಮ್ಮೆ ವಿಜಯನಗರದ ಹಿಂದೂ ರಾಜರಿಂದ ಆಳಲ್ಪಟ್ಟು ೧೫೬೫ರಲ್ಲಿ ಮುಸ್ಲಿಮರಿಂದ ಹಾಳುಗೆಡವಲ್ಪಟ್ಟ ಪ್ರದೇಶಗಳಲ್ಲಿ ಶಹಜಿಯ ಮುಂದಿನ ಜೀವನ ಕಳೆಯಿತು. ಮುಂದೆ ಶಹಜಿ ಬೆಂಗಳೂರು ಹಾಗೂ ಕನಕಗಿರಿಯಲ್ಲಿ ತನ್ನ ಸ್ಥಾನ ಭದ್ರಪಡಿಸಿಕೊಂಡನಂತರ, ಹಳೆಯ ವಿಜಯನಗರ ರಾಜ್ಯದ ಅನೇಕ ಹಿಂದೂ ಮುಖ್ಯಸ್ಥರೊಂದಿಗೆ ವ್ಯವಹರಿಸಬೇಕಾಯ್ತು. ಇಲ್ಲವನು ಹಿಂದೂಗಳ ಸ್ವಾತಂತ್ರ್ಯಪ್ರಿಯತೆ ಹಾಗೂ ಮುಸ್ಲಿಮರ ಆಕ್ರಮಣವನ್ನು ಎದುರಿಸುವ ರೀತಿಗಳನ್ನು ರೂಢಿಸಿಕೊಂಡ. ಶಹಜಿಯ ಪತ್ನಿ ಜೀಜಾಬಾಯಿ ತನ್ನ ಪೂರ್ವಜರಾದ ಯಾದವರ ಈ ಪದ್ಧತಿಗಳನ್ನು ಮೈಗೂಡಿಸಿಕೊಂಡವಳು. ಹಾಗಾಗಿ ಅವಳ ಮಗ ಶಿವಾಜಿ, ತನ್ನ ಬಾಲ್ಯದಿಂದಲೂ ಸ್ವಾತಂತ್ರದ ಬಗ್ಗೆ ಇದೇ ಉತ್ಸಾಹದಿಂದಲೇ ಪ್ರೇರಿತನಾಗಿದ್ದವನು. ಬಿಜಾಪುರದ ಸೇವೆಯಲ್ಲಿದ್ದ ಶಹಜಿ ೧೬೬೪ರಲ್ಲಿ ಬೇಟೆಯಾಡುವಾಗ ಅಪಘಾತವೊಂದರಲ್ಲಿ ಕೊನೆಯುಸಿರೆಳೆದ.

೧೬೩೦ರ ಫೆಬ್ರವರಿ ೧೯ರಂದು ಜುನ್ನಿರ್ ಬಳಿಯ ಶಿವನೇರಿ ಕೋಟೆಯಲ್ಲಿ ಶಿವಾಜಿ ಜನ್ಮತಳೆದ. ಜೀಜಾಬಾಯಿಯ ಆರು ಮಕ್ಕಳಲ್ಲಿ ಹಿರಿಯವನಾದ ಸಾಂಬಾಜಿ ಹಾಗೂ ಕಿರಿಯ ಶಿವಾಜಿ ಮಾತ್ರ ಉಳಿದು ಬೆಳೆದರು. ಶಹಜಿ ಹಾಗೂ ಅವನ ಮಾವ ಲಾಖುಜಿ ಆಗಾಗ್ಗೆ ಯುದ್ಧರಂಗದಲ್ಲಿ ಸಂಧಿಸುತ್ತಿದ್ದರು. ಕಾರಣ ಲಾಖುಜಿ ನಿಜಾಮ್‌ಷಾನನ್ನು ತೊರೆದು ಮುಘಲ್ ಚಕ್ರವರ್ತಿಯ ಜೊತೆ ಸೇರಿದ್ದ. ಸಾಧ್ವಿ ಜೀಜಾಬಾಯಿ, ಮಗು ಹುಟ್ಟುವ ಸಂದರ್ಭವಾದರೂ, ತನ್ನ ತಂದೆಯ ಮನೆಗೆ ಹೋಗಲು ನಿರಾಕರಿಸಿ ತನ್ನ ಗಂಡನ ವಿಧಿಯನ್ನೇ ಹಂಚಿಕೊಳ್ಳಲು ಅವನ ಅಧಿಕಾರದಲ್ಲಿದ್ದ ಶಿವನೇರು ದುರ್ಗದಲ್ಲಿ ಆಶ್ರಯ ಪಡೆದಳು. ಶಿವಾಜಿ ಹುಟ್ಟಿದ್ದು ಈ ದುರ್ಗದಲ್ಲಿಯೇ, ಅವಳ ಹಿರಿಯ ಮಗ ಸಾಂಬಾಜಿ, ತನ್ನ ತಂದೆಯೊಂದಿಗೆ ಬಿಜಾಪುರದ ಸೇವೆಯಲ್ಲಿ ತೊಡಗಿದ. ಅನಂತರ ಶಹಾಜಿ ಜೀಜಾಬಾಯಿಯನ್ನು ತ್ಯಜಿಸಿ ಸುಪಾದಲ್ಲಿನ ಮೊಹಿತೆ ವಂಶಸ್ಥ ತುಕಾಬಾಯಿಯನ್ನು ಎರಡನೆ ಹೆಂಡತಿಯಾಗಿ ಮದುವೆಯಾದ.

ಅವಳ ಮಗನೇ ಏಕೋಜಿ ಅಥವಾ ವೆಂಕೋಜಿ. ಮುಂದೆ ತಂಜಾವೂರು ರಾಜ್ಯದ ಸ್ಥಾಪಕ. ೧೬೩೬ರಲ್ಲಿ ಶಹಜಹಾನನ ಕಿರುಕುಳ ತಡೆಯದಾದಾಗ, ಶಹಜಿ, ತನ್ನ ಪಿತ್ರಾರ್ಜಿತ ಪೂನಾ ಜಹಗೀರನ್ನೂ, ಮಡದಿ ಜೀಜಾಬಾಯಿ ಹಾಗೂ ಮಗ ಶಿವಾಜಿಯನ್ನು ಬಿಜಾಪುರದ ಬುದ್ಧಿವಂತ ಅಧಿಕಾರಿ ಹಾಗೂ ಅದರ ರಕ್ಷಕನಾಗಿ ಸ್ತುತ್ಯರ್ಹ ಕಾರ್ಯ ನಡೆಸುತ್ತಿದ್ದ ದಾದಾಜಿ ಕೊಂಡದೇವನ ರಕ್ಷಣೆಗೊಪ್ಪಿಸಿ ತಲೆಮರೆಸಿಕೊಳ್ಳಬೇಕಾಯ್ತು.

ಶಿವಾಜಿಯ ಬಾಲ್ಯಜೀವನವೆಲ್ಲ ಅಪಾಯ ಹಾಗೂ ಸಾಹಸಗಳಿಂದೊಡಗೂಡಿದ್ದು, ಒಂಬತ್ತನೇ ವಯಸ್ಸಿನವರೆಗೂ ಮೊಘಲ್ ಚಕ್ರವರ್ತಿಯ ವಿರುದ್ಧ ತನ್ನ ತಂದೆ ನಡೆಸುತ್ತಿದ್ದ ಯುದ್ಧಗಳ ಅವಧಿಯಲ್ಲಿ ಆ ಪುಟ್ಟ ಬಾಲಕ ಹಾಗೂ ಅವನ ತಾಯಿ, ಸದಾ ಸೆರೆಸಿಕ್ಕುವ ಹಾಗೂ ಶಿಕ್ಷಿಸಲ್ಪಡುವ ಅಪಾಯದ ನಡುವೆ ಸ್ಥಳದಿಂದ ಸ್ಥಳಕ್ಕಲೆಯಬೇಕಾಗುತ್ತಿತ್ತು. ಶಹಜಹಾನನ ಸಿಪಾಯಿಗಳು ಜೀಜಾಬಾಯಿಯನ್ನು ಸೆರೆಹಿಡಿಯುವುದರಲ್ಲಿ ಯಶಸ್ವಿಗಳಾದರೂ ಅವಳು ಮಗನನ್ನು ಹಳ್ಳಿಯಾಚೆ ರಹಸ್ಯವಾಗಿ ಅಡಗಿಸಿಡುವುದರಲ್ಲಿ ಯಶಸ್ವಿಯಾದಳು. ಮುಂದೆ ಹೆಚ್ಚು ಮೌಲ್ಯದ ದಂಡತೆತ್ತಾಗ ಅವಳ ಬಿಡುಗಡೆಯಾಯ್ತು. ೧೬೩೬ರ ಒಪ್ಪಂದದ ತರುವಾಯವೇ ತಾಯಿ, ಮಗ ಪುಣೆಯಲ್ಲಿ ಸುರಕ್ಷಿತ ನೆಲೆ ಕಂಡರು. ಆಗ ಅವರಿಗಾಗಿ ದಾದಾಜಿ ಕೊಂಡದೇವ ಕಟ್ಟಿದ ಮನೆಯೇ ಮುಂದೆ 'ಲಾಲ್ ಮಹಲ್' ಎಂದು ಇತಿಹಾಸದಲ್ಲಿ ಹೆಸರಾಯ್ತು. ಶಿವಾಜಿ ಇಲ್ಲಿ ೧೦ ವರ್ಷ ಗಳಿದ್ದು ಬಳಿಕ ಹೊಸದಾಗಿ ನಿರ್ಮಿಸಿದ ರಾಯ್‌ಗಢಕ್ಕೆ ಹೋದ. ಅದವನ ಜಾಗೀರಿನ ಮೊದಲ ರಾಜಧಾನಿಯಾಯ್ತು. ೧೬೬೦ರಲ್ಲಿ ಅಲ್ಲಿಯೇ ಅವನ ಪಟ್ಟಾಭಿಷೇಕವಾಯ್ತು.

ಜೀವನದಲ್ಲೊಂದು ನೆಲೆಕಂಡಾಗ, ಅಂದಿನ ಪದ್ಧತಿಯಂತೆ ಶಿವಾಜಿಯ ವಿದ್ಯಾಭ್ಯಾಸ ನಡೆಯಿತು. ಓದು, ಬರಹ, ಗಣಿತದೊಂದಿಗೆ ರಾಮಾಯಣ ಮಹಾಭಾರತಗಳ ಅಭ್ಯಾಸ, ಹರಿಕೀರ್ತನೆ ಹಾಗೂ ಭಕ್ತಿ ಸಂಗೀತದ ಬಗ್ಗೆ ಒಲವಿದ್ದ ಶಿವಾಜಿ, ಪುಣೆಯ ಬಳಿ ನೆಲಸಿ, ಬೋಧಿಸುತ್ತಿದ್ದ ಸಂತ ತುಕಾರಾಮನ ಪ್ರವಚನಗಳಿಗೆ ಹೋಗುತ್ತಿದ್ದ. ಶಿವಾಜಿ ಉತ್ತಮ ವಿದ್ಯಾಭ್ಯಾಸ ಪಡೆದದ್ದು ಇಂದಿನಂತೆ ತರಗತಿ ಹಾಗೂ ಪುಸ್ತಕಗಳ ಮೂಲಕವಲ್ಲದೆ, ವಿಶಾಲ ವಿಶ್ವದಲ್ಲಿ ವೈಯಕ್ತಿಕ ಸಂಪರ್ಕಗಳ ಮೂಲಕ ಹಾಗೂ ದಿನನಿತ್ಯದ ಅನುಭವಗಳ ಮೂಲಕ. ಕಣ್ಣಾರೆ ಕಂಡು ಕಿವಿಯಾರೆ ಕೇಳಿದ ಮುಸ್ಲಿಮರ ದೌರ್ಜನ್ಯಗಳ ಫಲವಾಗಿ, ಶಿವಾಜಿ ತನ್ನ ಧರ್ಮದ ಬಗ್ಗೆ ಆಳವಾದ ಪ್ರೀತಿ ಮೂಡಿಸಿ ಕೊಂಡಿದ್ದ. ಮುಂದೆ ತನ್ನ ಸೈನಿಕರು ರಾಮಾಯಣದ ಯುದ್ಧದ ಅಧ್ಯಾಯಗಳನ್ನೋದುವುದನ್ನು ಕಡ್ಡಾಯಗೊಳಿಸಿದ.

ಶಿವಾಜಿಯ ಯಶಸ್ಸಿಗೆ ಕಾರಣವಾದವು, ತನ್ನ ತಾಯೊಂದಿಗೆ ಹಂಚಿಕೊಂಡ ಕಷ್ಟಗಳ ಸರಮಾಲೆ. ತನ್ನ ಕ್ಷತ್ರಿಯ ಮೂಲದೊಂದಿಗೆ ದೇವಗಿರಿಯ ತನ್ನ ಪೂರ್ವಜರ ರಾಜವಂಶದ ವಿವಿಧ ನೆನಪುಗಳೊಂದಿಗೆ ಮದುವೆಯಾದಾಗಿನಿಂದ ಕಷ್ಟಗಳ ಮೂಸೆಯಲ್ಲಿ ಗಟ್ಟಿಗೊಂಡು ಗಂಡನಿಂದ ಪರಿತ್ಯಕ್ತಳಾದ ಛಲದ ಈ ಮಹಿಳೆ ತನ್ನ ಮಗನಲ್ಲಿ ಪ್ರತಿಭಟನೆ ಹಾಗೂ ಆತ್ಮಸಮ್ಮಾನವನ್ನು ತುಂಬಿ ರಕ್ಷಿಸುವ ದೇವಿಯ ಸ್ಥಾನವಡೆದಳು. ಅವಳ ಜೀವನದ ಆಸೆ, ಗುರಿ ಎಲ್ಲವೂ ಈಗ ತನ್ನ ಮಗನ ಹಿತಾಸಕ್ತಿ ಹಾಗೂ ಒಳ್ಳೆಯ ಅದೃಷ್ಟದ ಬಗ್ಗೆ ಕೇಂದ್ರಿಕೃತವಾಗಿತ್ತು. ಶಹಜಿ ಅನೇಕ ವರ್ಷಗಳವರೆಗೂ ಅತ್ಯಂತ ಬಲಶಾಲಿ ಚಕ್ರವರ್ತಿಯನ್ನೆದುರಿಸಿದ್ದ. ಅದೇ ಕಾರ್ಯ ಇಂದು ಮಗನದಾಯ್ತು.

ನಿರಂತರವಾಗಿ ಅದ್ಭುತ ಯೋಜನೆಗಳನ್ನು ರೂಪಿಸುತ್ತಿದ್ದ ತಾಯಿ, ಮಗನ ಕಾರ್ಯವನ್ನು ದಾದಾಜಿಕೊಂಡದೇವ ಮನಃಪೂರ್ವಕವಾಗಿ ಬೆಂಬಲಿಸುತ್ತಿದ್ದ. ಜೊತೆಗೆ ಪುಣೆ ಜಾಗೀರನ ಮೇಲ್ವಿಚಾರಣೆಯ ಬಗ್ಗೆ ಗಳಿಸಿಕೊಂಡ ತನ್ನವೇ ಯುಕ್ತಿ ಹಾಗೂ ಎಚ್ಚರಿಕೆಗಳನ್ನು ಶಿವಾಜಿಗೆ ಕಲಿಸಿದ. ಇವನ್ನೆ ಶಿವಾಜಿ ತನ್ನ ಕ್ಷೇತ್ರದಲ್ಲಿ ಪ್ರಯೋಗಿಸಿದ. ದಾದಾಜಿ ಕೇವಲ ಒಬ್ಬ ಗುಮಾಸ್ತ ಅಥವಾ ಉತ್ತಮ ಕರಣಿಕನಾಗದೆ ಅತ್ಯಂತ ಶಿಸ್ತಿನ ವ್ಯಕ್ತಿ ಹಾಗೂ ತನ್ನ ಕೈಕೆಳಗಿನವರಿಂದ ಉತ್ತಮ ಕೆಲಸ ತೆಗೆಯಬಲ್ಲವನೂ ಆಗಿದ್ದ. ಅಂದಿನ ರಾಜಕೀಯದಲ್ಲಿ ಪಳಗಿ, ಶ್ರೇಷ್ಠ ವ್ಯಕ್ತಿ ಎನಿಸಿ ರಾಷ್ಟ್ರೀಯ ಸಂಪನ್ಮೂಲಗಳನ್ನು ಉತ್ಸಾಹದೊಂದಿಗೆ ಸಂಘಟಿಸುತ್ತಿದ್ದ. ಹಿಂದೂಗಳ ಕಗ್ಗೊಲೆ ಮಾಡುವ ವಿದೇಶಿ ದಬ್ಬಾಳಿಕೆಯ ಬಗ್ಗೆ ತೀವ್ರ ದ್ವೇಷ. ಭೋಸ್ಲೆ ವಂಶದ ವಿಶ್ವಾಸಾರ್ಹ ಸ್ನೇಹಿತನಾಗಿ ಸಲಹೆಗಾರನಾಗಿ, ದೀರ್ಘಸೇವೆ ಸಲ್ಲಿಸಿದ. ದುಡಿವ ರೈತರ ಬಗ್ಗೆ ಆಳವಾದ ಪ್ರೀತಿ ಹೊಂದಿ, ಅವರ ಸ್ಥಿತಿಯನ್ನು ಉತ್ತಮ ಪಡಿಸಲು ತೀವ್ರ ಆಸಕ್ತಿ ಹೊಂದಿದ್ದ.

ತನ್ನ ಜೀವನದಲ್ಲಿ, ಮಾರ್ಗದರ್ಶನಕ್ಕಾಗಿ ತರುಣ ಶಿವಾಜಿ ತನ್ನ ತಾಯಿ ಹಾಗೂ ದಾದಾಜಿಯ ಮೇಲೆ ಅವಲಂಬಿತನಾಗಿದ್ದ. ಮಾಳವದ ಗುಡ್ಡ ಪ್ರದೇಶಗಳು ಪ್ರತ್ಯೇಕವಾಗಿದ್ದು ಸಾಹಸಕಾರ್ಯಗಳಿಗೆ ಉತ್ತಮ ಅವಕಾಶವನ್ನು ಒದಗಿಸಿದುವು. ಮಳೆ, ಚಳಿ, ಬಿಸಿಲು ಹಾಗೂ ರುದ್ರ ಪ್ರಕೃತಿಯ ನಡುವಿನ ಜೀವನ ಬಾಲಕನ ಶರೀರ ಹಾಗೂ ಮನಸ್ಸನ್ನು ಸದೃಢಗೊಳಿಸಿತ್ತು. ಕುದುರೆ ಸವಾರಿ, ಕುಸ್ತಿ, ಭರ್ಜಿ ಆಟಗಳು, ಕತ್ತಿವರಸೆ , ಭಯಾನಕ ಪ್ರವಾಹದ ನಡುವೆ ಈಜುವಿಕೆ ದಿನ ನಿತ್ಯದ ಕ್ರೀಡೆಗಳೆನಿಸಿ, ಬಾಲ್ಯದಿಂದಲೂ ಮಾನವ ಹಾಗೂ ಪ್ರಕೃತಿಯೊಂದಿಗಿನ ಅವನ ಸಂಬಂಧ ಅವನನ್ನು ದರ್ಬಾರಿನ ಆಡಂಬರದ ಜೀವನ ಹಾಗೂ ದುರಾಚರಣೆಗಳಿಂದ ದೂರವಿಟ್ಟಿತು.

ತನ್ನ ಓರಿಗೆಯವರೊಂದಿಗೆ ಸ್ನೇಹ ಬೆಳಸಿ, ಅವರೊಂದಿಗೆ ಗುಡ್ಡಗಾಡುಗಳಲ್ಲಿ ಸಂಚರಿಸಿ, ರಕ್ಷಣೆಗೆ ಬೇಕಾದ ಕ್ರಮಗಳನ್ನು ಕೈಕೊಳ್ಳುತ್ತಿದ್ದ. ರಕ್ಷಣೆ ಹಾಗೂ ಜೀವನದ ಆವಶ್ಯಕತೆಗಳಿಗಾಗಿ ವೇಷ ಮರೆಸುವ ಕಲೆ ಆ ದಿನಗಳಲ್ಲಿ ಸಿದ್ಧಿಸಿತ್ತು. ಸ್ವಯಂ ಶಿವಾಜಿ ಪಶುಪಕ್ಷಿಗಳ ಸ್ವರವನ್ನು ಅತ್ಯುತ್ತಮವಾಗಿ ಅನುಕರಿಸಬಲ್ಲವನಾಗಿದ್ದ. ಅವನ ತೀವ್ರ ಓಡಾಟಗಳು ರಹಸ್ಯಮಾರ್ಗಗಳನ್ನು ಕಂಡು ಹಿಡಿದುಕೊಳ್ಳುವ ದಖ್ಖನ್ ಪ್ರಸ್ಥಭೂಮಿಯ ದೀರ್ಘ ಸಹ್ಯಾದ್ರಿ ಶ್ರೇಣಿಯ ಭದ್ರವಾದ ನೆಲೆಗಳ ಬಗ್ಗೆ ಅರಿವು ಹೊಂದುವ ಉದ್ದೇಶ ಹೊಂದಿರುತ್ತಿದ್ದುವು. ಸದಾ ಎಚ್ಚರಿಕೆಯ ಕಣ್ಣು ಕಿವಿಗಳೊಂದಿಗೆ ಅವನು ಜನಗಳ ಮನೋಭಾವನೆ ಅವರ ಸುಖ ದುಃಖ , ಕಸುಬು, ಸಂಪನ್ಮೂಲಗಳು, ಅವರ ಅವಶ್ಯಕತೆ ಹಾಗೂ ಅನುಕೂಲಗಳ ಬಗ್ಗೆ ಅದ್ಭುತ ಅರಿವು ಹೊಂದಿದ್ದ. ಇದಕ್ಕಾಗಿ ಕಾಲ್ನಡಿಗೆ ಹಾಗೂ ಕುದುರೆ ಸವಾರಿಯ ಮೂಲಕ ದೂರದಂತರಗಳನ್ನು ಕ್ರಮಿಸಬಲ್ಲವನಾಗಿದ್ದ.

ಶಿವಾಜಿಯನ್ನು ನಿಜವಾದ ಅರ್ಥದಲ್ಲಿ ಜನತೆಯ ಸ್ವಾಮಿಯನ್ನಾಗಿಸುವುದು ದಾದಾಜಿಯ ಮೊದಲ ಧ್ಯೇಯವಾಗಿತ್ತು. ಸಭೆಯ ಮುಂದೆ, ಗ್ರಾಮ ಪಂಚಾಯಿತಿಗಳಲ್ಲಿ ಹಾಗೂ ಸಾರ್ವಜನಿಕ ಸಂದರ್ಭಗಳಲ್ಲಿ ಹೇಗೆ ಉತ್ತಮ ಉಡುಪು ಧರಿಸಬೇಕು, ಹೇಗೆ ವರ್ತಿಸಬೇಕೆನ್ನುವ ಬಗ್ಗೆಯೂ ಅಮೂಲ್ಯ ಸಲಹೆಗಳನ್ನು ನೀಡುತ್ತಿದ್ದ. ತಮ್ಮೆಲ್ಲ ಅವಶ್ಯಕತೆಗಳ ಪೂರೈಕೆಗಾಗಿ ಹಾಗೂ ತೊಂದರೆಗಳ ನಿವಾರಣೆಗಾಗಿ ಶಿವಾಜಿಯನ್ನು ಪ್ರಜೆಗಳು ಸಂಪರ್ಕಿಸಬೇಕೆನ್ನುವುದು ಅವನಿಚ್ಛೆಯಾಗಿತ್ತು.

''ಬೂಟುಶಾಯಿ'' ಅಳಿಲಮರಿ

ಮುಳಿಯ ಸರಸ್ವತೀ
ನಂ.೩, ೮ನೇ ಬ್ಲಾಕ್, ಎಸ್ ಬಿಎಂ
ಕಾಲೋನಿ, ಶ್ರೀರಾಂಪುರ, ೨ನೇ ಹಂತ,
ಮೈಸೂರು-೫೭೦ ೦೨೩

ಏಪ್ರಿಲ್ ತಿಂಗಳ ಒಂದು ತಣ್ಣಗಿನ ಮುಂಜಾವು. ಅರಿಜೋನಾದಲ್ಲಿರುವ ನಮ್ಮ ಪಶುಕ್ಷೇತ್ರದಲ್ಲಿ ನಾನೂ ನನ್ನ ಇಬ್ಬರು ಪುಟ್ಟ ಹುಡುಗಿಯರೂ ಆಸಕ್ತಿಯಿಂದ ಅಳಿಲುಗಳ ಬಿಲವನ್ನೊಂದನ್ನು ನೋಡುತ್ತಿದ್ದೆವು. ಬಿಲದ ಪಕ್ಕದಲ್ಲಿಯೇ ಅಳಿಲುಗಳ ಗುಂಪು ಅತ್ತಿಂದಿತ್ತ ಓಡಾಡುತ್ತಿತ್ತು. ಆ ಬಿಲಕ್ಕೆ-ಅದೊಂದು ಮಣ್ಣಿನ ದಿನ್ನೆ-ಮಕ್ಕಳು 'ಚಂದ್ರಬಿಂಬ' ಎಂದು ಹೆಸರಿಟ್ಟಿದ್ದರು.

ಕೆಲವು ತಿಂಗಳ ಹಿಂದೆ ಆ 'ಚಂದ್ರಬಿಂಬ' ವನ್ನು ನಾವು ಪತ್ತೆಹಚ್ಚಿದ್ದಾಗ, ಇನ್ನೂ ೫ ತುಂಬದ ನನ್ನ ಮಗಳು 'ಬೆಕೀ' ಹಾಗೂ ೨ ವರ್ಷದ 'ಜೇಮೀ' ಆದರ ಬಗೆಗೆ ಅನೇಕ ಕಲ್ಪನೆಯ ಕಥೆಗಳನ್ನು ಹೆಣೆದಿದ್ದರು- ಬಿಲದೊಳಗೆ ನಮ್ಮಂಥದೇ ಒಂದು ಸಂಸಾರ ನೆಲಸಿರಬೇಕು ; ಅಮ್ಮ, ಅಪ್ಪ, ತಮ್ಮಂಥವೇ ಪುಟ್ಟ ಮಕ್ಕಳು ಎಲ್ಲ ಇರಬೇಕು-ಎಂದೆಲ್ಲ. ಈಗ ನೋಡಿದರೆ ಅವರ ಕಲ್ಪನೆಯ ಕಥೆ ನಿಜವಾಗಿತ್ತು. ಅಮ್ಮ ಅಳಿಲು, ಅಪ್ಪ ಅಳಿಲು, ಎರಡು ಪುಟಾಣಿ ಮರಿಗಳು ತಮ್ಮ ಮೂತಿ ಹೊರ ಹಾಕಿ ನಮ್ಮನ್ನೇ ದಿಟ್ಟಿಸುತ್ತಿದ್ದುವು.

ಒಮ್ಮೆ ಪಾಪ, ಆ ಸಣ್ಣ ಮರಿಗಳ ಪೈಕಿ ಒಂದು, ಗೂಡಿನಿಂದ ಬಹಳ ದೂರ ಬಂದು ಬಿಟ್ಟಿತು. ಕಳ್ಳಿ ಗಿಡವೊಂದರ ಗುಲಾಬಿ ಬಣ್ಣದ ಹೂವನ್ನು ಅದು ಕಡಿದು ತಿನ್ನುತ್ತಿರುವಾಗ ಒಂದು ಗಿಡುಗ ಹಾರಿ ಬಂದು ಅದರ ಮೇಲೆರಗಿ, ಅದನ್ನು ಕಚ್ಚಿಕೊಂಡು ಗಗನಕ್ಕೇರಿತು.

ಹೊಸಬಗೆಯ ಮುದ್ದು ಪ್ರಾಣಿ : ''ಅಮ್ಮಾ ಅಲ್ಲಿ ನೋಡು, ಮೇಲೆ'' ಬೆಕೀ ಜೋರಾಗಿ ಕಿರುಚಿದಳು. ಆಗಸದಲ್ಲಿ ಇನ್ನೆರಡು ಗಿಡುಗಗಳು ಅಳಿಲಮರಿಗಾಗಿ ಮೊದಲ ಗಿಡುಗದ ಮೇಲೆ ಧಾಳಿ ಇಡುತ್ತಿದ್ದುವು. ಅವುಗಳ ಕಚ್ಚಾಟದಲ್ಲಿ, ನೋಡ ನೋಡುತ್ತಿದ್ದಂತೆಯೇ ಅಳಿಲಮರಿಯನ್ನು ಗಿಡುಗವು ಬಿಟ್ಟುಬಿಟ್ಟಿತು. ಗ್ರೀಷ್ಮಕಾಲದಲ್ಲಿ ಉದುರುವ ಎಲೆಯಂತೆ ಆ ಮರಿ ಜೋರಾಗಿ ಕಂಪಿಸುತ್ತ ಬಂದು ನೆಲದ ಮೇಲೆ ಬಿತ್ತು.

ಬೆಕೀ ಓಡಿಹೋಗಿ ಬಿದ್ದಿದ್ದ ಮರಿಯ ಬಳಿಯಲ್ಲಿ ಮೊಣಕಾಲೂರಿ ಕುಳಿತು ''ನೋಡಮ್ಮಾ, ಪಾಪ ತುಂಬ ರಕ್ತ ಬರುತ್ತಿದೆ'' ಎಂದು ಬಿಕ್ಕ ತೊಡಗಿದಳು. ನಾನೂ ಜೇಮಿಯೊಡನೆ ಅಲ್ಲಿಗೆ ಓಡಿದೆ. ನನ್ನ ಕಣ್ಣುಗಳನ್ನು ನನಗೇ ನಂಬಲಾಗುತ್ತಿರಲಿಲ್ಲ. ಬಾಲ ತುಂಡಾದ ಆ ಅಳಿಲಮರಿ ಯಾಂತ್ರಿಕ ಬೊಂಬೆಯಂತೆ ನಡುಗುತ್ತಿತ್ತು. ಆಗ ಬೆಕೀ-''ಅಮ್ಮಾ, ಇದನು ಮನೆಗೆ ಕೊಂಡು ಹೋಗೋಣ. ನೀನು ಇದಕ್ಕೆ ಆರೈಕೆ ಮಾಡುತ್ತೀಯಾ? ಇದಕ್ಕೆ 'ಶಶಿಕಿರಣ (Moon beam)' ಎಂದು ಹೆಸರಿಡೋಣ ಆಗದೆ?'' ಎಂದು ಮೆದುವಾಗಿ ಕೇಳಿದಳು.

ಗಾತ್ರದಲ್ಲಿ ಒಂದು ಅಕ್ರೋಟಗಿಂತಲೂ ಸಣ್ಣಗಿದ್ದ ಆ ಪುಟ್ಟ ತುಪ್ಪಳದ ಚಂಡನ್ನು ಕೈಗೆತ್ತಿಕೊಂಡು ನನ್ನನ್ನು ಹಿಂಬಾಲಿಸುವಂತೆ ಮಕ್ಕಳಿಗೆ ಆದೇಶಿಸಿದೆ.

ಮನೆಗೆ ಹೋಗಿ, ಜೇಮಿಯ ಒಂದು

ಫೆಬ್ರವರಿ ೧೯೬೮ರ 'ರೀಡರ್ಸ್ ಡೈಜೆಸ್ಟ್' ನಲ್ಲಿ ಪ್ರಕಟವಾದ ಪೆನ್ನಿ ಪೋರ್ಟರ್ ಅವರ 'ಸ್ಕ್ವಿರಲ್ ದ್ಯಾಟ್ ಸ್ಲೆಪ್ಟ್ ಇನ್ ಎ ಶೂ' ಎನ್ನುವ ಲೇಖನದ ಭಾಷಾಂತರ

ಹಳೆಯ ಬೂಟಿನ ಒಳಗೆ ಆ ಮರಿಯನ್ನು ಬೆಕೀ ಮಲಗಿಸಿದಳು. ಹೆಚ್ಚಿನ ಸುರಕ್ಷತೆಗಾಗಿ ಆ ಬೂಟನ್ನು ನಾನು ಒಂದು ಹಳೆಯ ಕಾರ್ಡಬೋರ್ಡ ಡಬ್ಬದೊಳಗಿಟ್ಟೆ. ಅಳಿಲಮರಿಯೀಗ ನಮ್ಮ ಹೊಸ ಮುದ್ದು ಸಾಕುಪ್ರಾಣಿ. ಊಟದ ವೇಳೆಗೆ ಎಲ್ಲರೂ ಸೇರಿದಾಗ 'ಶಶಿಕಿರಣ' ಹೆಣ್ಣುಮರಿ ಎಂದು ಬೆಕೀ ತನ್ನ ಐವರು ಒಡಹುಟ್ಟಿದವರಿಗೆ ಘೋಷಿಸಿದಳು. ಅದಕ್ಕೆ ಹೊಟ್ಟೆಯ ಕೆಳಗೆ ಎರಡು ಸಣ್ಣ ಸಣ್ಣ ಚುಕ್ಕಿಗಳಿವೆ-ಹಾಗಾಗಿ ಅದು ಹೆಣ್ಣು ಎಂಬ ವಿವರಣೆಯನ್ನೂ ನೀಡಿದಳು.

ಬೆಕೀಗೆ ತನ್ನ ಹೊಸ ಸಂಪತ್ತನ್ನು ಪ್ರದರ್ಶಿಸುವ ಸಂಭ್ರಮ. ಅವಳು ಆ ಬೂಟನ್ನು ಅಪ್ಪನ ತೊಡೆಯ ಮೇಲಿಟ್ಟು-''ನೋಡಪ್ಪಾ, ಇದು ಶಶಿಕಿರಣ. ಅಮ್ಮ ಇದಕ್ಕಾಗಿ 'ಟ್ವೀಟಿ'ಯ ಪಂಜರ ಕೊಡುತ್ತಾಳಂತೆ'' ಎಂದಳು.

''ಈ ಹೆಗ್ಗಣಕ್ಕಾ?'' -ಎಂದು ನನ್ನ ಪತಿ ಬಿಲ್ ಹುಬ್ಬುಗಂಟಿಕ್ಕಿದ.

''ಇದು ಹೆಗ್ಗಣ ಅಲ್ಲಾ. ಇದು ಅಳಿಲ ಮರಿ'' ಎನ್ನುವಾಗಿ ಬೆಕೀಯ ಕರಿಗಣ್ಣುಗಳು ಮಿಂಚಿದುವು.

''ಅಳಿಲು, ಇಲಿ, ಹೆಗ್ಗಣ-ಎಲ್ಲ ಒಂದೇ. ಅವು ತಿನಿಸು ಚೀಲಗಳನ್ನು ತೂತು ಮಾಡುತ್ತವೆ. ಕೊಳವೆಗಳ ಹೊರಗವಚವನ್ನು ತಿಂದು ಹಾಕುತ್ತವೆ. ತಂತಿಗಳನ್ನು ಕಡಿದು ಚೂರು ಚೂರು ಮಾಡುತ್ತವೆ,'' ಎಂದು ಆಕ್ಷೇಪಿಸಿದ ಬಿಲ್.

ಶಶಿಯ ವಾಸ ನಮ್ಮ ಮನೆಯಲ್ಲಿ ಸುಲಭ ಸಾಧ್ಯವಿಲ್ಲವೆಂದು ನಾನು ನಿಟ್ಟುಸಿರುಬಿಟ್ಟೆ.

ಆ ರಾತ್ರಿ ಬೆಕೀ ಮತ್ತು ನಾನು ಪಂಜರವೊಂದರೊಳಗೆ ಸೆಡಾರ್ ಮರದ ಮೃದುವಾದ ಚಕ್ಕೆಗಳನ್ನು ಹರವಿದೆವು. ಜ್ಯಾಮ್ ಬಾಟಲಿಯ ಮುಚ್ಚಳದಲ್ಲಿ ಸ್ವಲ್ಪ ನೀರು, ಕಾಳುಗಳನ್ನು ತುಂಬಿಸಿ ಆ ಪಂಜರದಲ್ಲಿಟ್ಟು, ಬಳಿಕ ಅಳಿಲ ಮರಿಯಿದ್ದ ಬೂಟನ್ನು ಅದರೊಳಗಿರಿಸಿದೆವು. ಅದಾದನಂತರ, ''ಇನ್ನು ಮೇಲೆ ಗಿಡುಗಗಳ ಭಯಾನಕ ಸ್ವಪ್ನಗಳ ಬದಲು ಸಂಗೀತ ಸಹಿತವಾದ ಸುಸ್ವಪ್ನಗಳನ್ನು ಶಶಿ ಅನುಭವಿಸಬಹುದು'' ಎನ್ನುತ್ತ ಬೆಕೀಯ ವಾದ್ಯಪೇಟಿಯನ್ನು ಗೂಡಿನ ಮೇಲಿಟ್ಟೆವು.

ಸುರಂಗ ತಜ್ಞ: ಎರಡು ದಿನ ಕಳೆದವು. ''ಶಶಿಕಿರಣ ಬೂಟಿನಿಂದ ಅದೇಕೆ ಹೊರಗೆ ಬರುವುದಿಲ್ಲ?'' -ಬೆಕೀಯ ಪ್ರಶ್ನೆ.

''ಬಹುಶಃ ಅದಕ್ಕೆ ಗಿಡುಗನ ಭೀತಿ ಇನ್ನೂ ಹೋಗಿರಲಿಕ್ಕಿಲ್ಲ''-ಅಳಿಲಮರಿ ಸತ್ತಿರದಿರಲಿ ಎಂದು ಮನಸ್ಸಿನಲ್ಲೇ ಎಣಿಸಿಕೊಳ್ಳುತ್ತ ನಾನೆಂದೆ. ಮುಂದೇನು ಮಾಡಬೇಕೆಂದು ಮುದ್ದುಪ್ರಾಣಿಗಳ ಅಂಗಡಿಗೆ ಫೋನ್ ಮಾಡಿ ಕೇಳಿದಾಗ,- 'ಕಡಲೆಕಾಯಿ ಬೆಣ್ಣೆ ಸವರಿದ ಸೇಬು ಹಣ್ಣಿನ ತುಂಡುಗಳನ್ನು ಅದರ ಮುಂದಿಟ್ಟು ಅದನ್ನು ಪುಸಲಾಯಿಸಿ' ಎಂದು ಅಲ್ಲಿಂದ ಸಲಹೆ ಬಂತು.

ಅಂತೂ ಇಂತೂ ಶಶಿಕಿರಣ ಹೊರ ಬಂದಾಗ ''ಎಷ್ಟು ಮುದ್ದಾಗಿದೆ ಅಮ್ಮಾ!'' ಎಂದು ಮಗಳು ಬೆಕೀ ಕುಣಿದಾಡಿದಳು. ಅಳಿಲಮರಿ ಸೇಬಿನ ತುಂಡುಗಳನ್ನು ಗೂಡಿನೊಳಕ್ಕೆ ಕೊಂಡೊಯ್ದು ಚಕ್ಕೆಗಳ ಅಡಿಯಲ್ಲಿ ಶೇಖರಿಸಿಡುವುದು, ಅನಂತರ ಅವುಗಳಿಗಾಗಿ ಹುಡುಕುವುದು ಇತ್ಯಾದಿ ಮಾಡತೊಡಗಿತು. ಆಗ 'ಚಂದ್ರಬಿಂಬ' ದ (ಅದರ ಹಳೆಯ ಬಿಲ) ಹಾಗೆಯೇ ಇರುವ ಇನ್ನೊಂದು ಚಿಕ್ಕ ಗೂಡನ್ನು ಅದಕ್ಕೆ ಕಟ್ಟಿಕೊಟ್ಟರೆ ಆಗ ಅದು ಇನ್ನೂ ಹೆಚ್ಚು ಖುಶಿ ಪಡಬಹುದೇನೋ ಎಂದು ನನಗೆ ಅನಿಸಿತು. ಹಾಗೆ ಬೆಕೀ ಮತ್ತು ನಾನು ಪಂಜರದೊಳಗೆ ಒಂದಿಷ್ಟು ಮಣ್ಣು ಹಾಕಿ

ಅದರೊಳಗೆ ಆ ಪುಟ್ಟ ಬೂಟನ್ನು ಹೂತಿಟ್ಟೆವು. ಅಳಿಲಮರಿಯ ಮಿಂಚುಗಣ್ಣುಗಳು ನಮ್ಮ ಕೆಲಸವನ್ನು ಆಸಕ್ತಿಯಿಂದ ಪರೀಕ್ಷಿಸುತ್ತಿದ್ದುವು. ಗುಂಡಗಿನ ಕಲ್ಲುಗಳು ಮತ್ತು ಕಾಡುಹೂವುಗಳಿಂದ ನನ್ನ ಮಗಳು ಆ ಪುಟ್ಟ 'ಚಂದ್ರಬಿಂಬ'ವನ್ನು ಅಲಂಕರಿಸುತ್ತಿದ್ದರೆ ಶಶಿಕಿರಣ ಅದರಲ್ಲಿ ಸುರಂಗಕೊರೆಯಲಾರಂಭಿಸಿತು. ಅಲ್ಲಿಂದ ಅದು ಹೊರಬರಲು ಹವಣಿಸುತ್ತಿರುವಾಗ ಬೆಕೀ ''ಇಲ್ಲಿಯಾದರೆ ನೀನು ಹೆದರಬೇಕಾಗಿಲ್ಲ'' ಎಂದು ಅದಕ್ಕೆ ಆಶ್ವಾಸನೆ ನೀಡಿದಳು.

ಆತ್ಯಾಕರ್ಷಕ ಲಿಲಿಪುಟ್: ಸುರಕ್ಷಿತ ನಿಜ. ಆದರೆ ಎಷ್ಟು ದಿನ -ನನ್ನನ್ನು ನಾನೇ ಕೇಳಿಕೊಂಡೆ. ಏಕೆಂದರೆ ಇತರ ಪ್ರಾಣಿಗಳು ಅದನ್ನು ನೋಡುತ್ತಿದ್ದ ಪರಿಯೇ ಬೇರೆ. ಅದರ ಚಿಲಿಪಿಲಿ ಧ್ವನಿ ಡಜನ್‌ಗಟ್ಟಲೆ ಬೆಕ್ಕುಗಳನ್ನು ಆಕರ್ಷಿಸತೊಡಗಿತು. ಎಷ್ಟು ಸಲ ಆ ಪರಭಕ್ಷಕಗಳ ಪಂಜರಗಳನ್ನು ಅಳಿಲಮರಿಯ ಪಂಜರದ ಸಲಾಕೆಗಳಿಂದ ಬೇರ್ಪಡಿಸಿದೆನೋ ನನಗೇ ಗೊತ್ತು. ಮಕ್ಕಳಿಗಾದರೋ ಅದೊಂದು ಬರೀ ಆಟದ ವಸ್ತುವಾಗಿತ್ತು. ಹದಿಹರೆಯದ ನಮ್ಮ ಮಕ್ಕಳು ಶಶಿಗೆ ಅನೇಕ ಚೇಷ್ಟೆಗಳನ್ನು ಕಲಿಸಿದರು . ಜೆನ್ನಿ ಅದನ್ನು ಊಟದ ಮೇಜಿನ ಮಧ್ಯದಲ್ಲಿಟ್ಟರೆ ಅದು ಉಪ್ಪು, ಕಾಳುಮೆಣಸಿನ ಪುಡಿಯ ಡಬ್ಬಗಳೆಡೆಯಲ್ಲಿ ಕಣ್ಣುಮುಚ್ಚಾಲೆ ಆಡತೊಡಗಿತು. ಎಮ್ಮೀ ಅದನ್ನು ತೆಗೆದು ಸಕ್ಕರೆ ಡಬ್ಬದ ಮುಚ್ಚಳದ ಮೇಲೆ ಕೂರಿಸಿದರೆ, ಬಡ್ ಅದಕ್ಕೆ ತನ್ನ ತಟ್ಟೆಯಿಂದ ಬೀನ್ಸ್ ಕಾಳುಗಳನ್ನು ತಿನ್ನಿಸುತ್ತಿದ್ದ.

ಕಾಲಕ್ರಮೇಣ ನಾನೂ ಕೂಡ ಈ ಅಳಿಲಮರಿಯ ಕಣ್ಣುಗಳಲ್ಲಿಯ ಮಿಂಚುವ ಚುರುಕುತನಕ್ಕೆ ಮರುಳಾಗತೊಡಗಿದೆ. ಅದನ್ನು ಪಂಜರದ ಹೊರಗೆ ತೆಗೆದು ನನ್ನ ಜಾಕೆಟ್ಟಿನ ಜೇಬಿನಲ್ಲಿ ಇಟ್ಟುಕೊಂಡು ಒಯ್ಯುತ್ತಿದ್ದೆ. ಈ ಪುಟ್ಟ 'ಲಿಲಿಪುಟ್ ' ನನ್ನ ಅಂಗೈಮೇಲೆ ಕುಳಿತು, ತನ್ನ ಕತ್ತನ್ನು ಕೊಂಕಿಸಿ ತದೇಕ ದೃಷ್ಟಿಯಿಂದ ನನ್ನನ್ನೇ ದಿಟ್ಟಿಸಿ ಚಿಲಿಪಿಲಿಗೊಡುವ ಪರಿ ಅತ್ಯಾಕರ್ಷಕವಾಗಿರುತ್ತಿತ್ತು.

ಜುಲೈ ತಿಂಗಳ ಹೊತ್ತಿಗೆ ಶಶಿಕಿರಣ ೫ ಅಂಗುಲದಷ್ಟು ಬೆಳೆದಿತ್ತು. ಬಾಲವಿಲ್ಲದಿದ್ದರೂ ಅದು ಆರೋಗ್ಯವಂತವಾಗಿತ್ತು. ಬೆಕೀ ಅದನ್ನು ತನ್ನ 'ಬಾರ್ಬೀ' ಗೊಂಬೆಯ ಪೋಷಾಕಿನಲ್ಲಿ ಸಿಂಗರಿಸಿ ಆಟದ ಮೋಟಾರುಕಾರಿನಲ್ಲಿ ಕುಳ್ಳಿರಿಸಿ ಕರೆದೊಯ್ಯುವಾಗಲಂತೂ ಅದೊಂದು ಕಾಡುಪ್ರಾಣಿ ಎಂದು ಅನಿಸುತ್ತಲೇ ಇರಲಿಲ್ಲ.

ಆದರೆ ಅಕ್ಟೋಬರ್ ತಿಂಗಳು ಸಮೀಪಿಸುತ್ತಿದ್ದಂತೆಯೇ ಅದರ ಮುಖದಲ್ಲಿ ಕಂಡು ಬರುತ್ತಿರುವ ಔದಾಸೀನ್ಯ , ನಮಗೆ ಅಪರಿಚಿತವಾದ ವನ್ಯ ವಾತಾವರಣಕ್ಕೆ ಅದು ಸೇರಿದ್ದು ಎಂಬುದನ್ನು ನೆನಪಿಸುವಂತಾಯಿತು. ಶಶಿ, ಕ್ರಮೇಣ ಕಣ್ಣು ಮುಚ್ಚಿಕೊಂಡು, ನೀರಸತೆಯಿಂದ ತನ್ನ ಬೂಟುಮನೆಯೊಳಗೆಯೇ ಹೆಚ್ಚಿನ ಸಮಯ ಕಳೆಯತೊಡಗಿತು. ಒಂದು ದಿನ ನಾನು ಅದನ್ನು ಎತ್ತಿ ಅಪ್ಪಿಕೊಂಡು ''ದಯವಿಟ್ಟು ಇಲ್ಲಿ, ನಮ್ಮಲ್ಲಿ ಕೊನೆಯುಸಿರು ಎಳೆಯಬೇಡ'' ಎಂದು ಪಿಸುಗುಟ್ಟಿದೆ.

ಶಶಿ ಎಲ್ಲಿ?: ಅಳಿಲಮರಿಯನ್ನು ಅದರ ಬಿಲವಾದ 'ಚಂದ್ರಬಿಂಬ'ಕ್ಕೆ ರವಾನಿಸಬಹುದೇ'' ಎಂದು ಒಂದು ದಿನ ಬೆಳಗ್ಗೆ ಸ್ಥಳೀಯ ವನ್ಯಪಶುತಜ್ಞರೊಬ್ಬರನ್ನು ಫೋನಿನ ಮೂಲಕ ಸಂಪರ್ಕಿಸಿ ಪ್ರಶ್ನಿಸಿದೆ. ''ಇಷ್ಟು ಕಾಲದ ನಂತರ ಈ ಅಳಿಲನ್ನು ಕಂಡ ಸಹಚರರು ಅದರ ಗುರುತು ಹಿಡಿಯಲಾರರು. ಹಾಗಾಗಿ ವಸಂತದವರೆಗೆ ಕಾಯುವುದು ಒಳಿತು. ಆಗ ಗಂಡಳಿಲುಗಳು ಸಂಗಾತಿಗಳನ್ನು ಹುಡುಕುತ್ತಿರುವಾಗ ನಿಮ್ಮ

ಶಶಿಗೂ ಒಂದು ಅವಕಾಶ ಸಿಗಬಹುದು'' ಎಂದು ಅವರು ಅಭಿಪ್ರಾಯ ಪಟ್ಟರು.

ಇದಾದ ಸ್ವಲ್ಪವೇ ದಿನಗಳಲ್ಲಿ ಒಂದು ಬೆಳಗ್ಗೆ ಪಂಜರದ ಬಾಗಿಲು ತೆರೆದಿದ್ದುದು ಕಂಡು ಬಂತು. ''ಶಶಿ ಸುಮ್ಮನೆ ಮಲಗಿತ್ತು. ಅದಕ್ಕೆ ಜೀವ ಇದೆಯೋ ಇಲ್ಲವೋ ಎಂದು ನೋಡಲು ಪಂಜರದ ಬಾಗಿಲು ತೆರೆದು ಅದನ್ನು ಮೆತ್ತಗೆ ಅಮುಕಿದಾಗ ನನ್ನ ಕೈಯಿಂದ ತಪ್ಪಿಸಿಕೊಂಡು ಹೊರಗೆ ಓಡಿ ಹೋಯಿತು.'' -ಎಂದು ಜೇಮಿ ವಿವರಣೆ ಕೊಟ್ಟ.

ಶಶಿಕಿರಣ ಹೀಗೆ ಪಂಜರದ ಹೊರಗಿದ್ದಾಗ, ಇದೇ ಅವಕಾಶಕ್ಕೇ ಕಾಯುತ್ತಿದ್ದ ಬೆಕ್ಕುಗಳು ಅದನ್ನು ಸುಮ್ಮನೆ ಬಿಟ್ಟಾವೇ ಎಂದು ನಮಗೆಲ್ಲ ತುಂಬಾ ಚಿಂತೆಯಾಯಿತು.

ದುಃಖಾರ್ತಳಾದ ನನ್ನ ಮಗಳು ಬೆಕೀ ಯಂತೂ ಮನೆಯ ಒಳಗೆ, ಹೊರಗೆ, ಪಾತ್ರೆಗಳ ಅಡಿಯಲ್ಲಿ, ಪುಸ್ತಕಗಳ ಕಪಾಟಿನ ಹಿಂದೆ, ಎಲ್ಲ ಕಡೆಯಲ್ಲೂ ''ಬಾ, ಬಾ, ಶಶಿಪುಟ್ಟಾ ಬಾ...''ಎಂದು ಅದನ್ನು ಹುಡುಕುತ್ತ ಅಲೆಯುತ್ತಿದ್ದಳು. ಆದರ ಪಂಜರದ ಬಳಿಯಲ್ಲಿ ಕಡಲೇಕಾಯಿ ಬೆಣ್ಣೆ, ಕೆಂಪು ಜೆಲ್ಲಿ ಬೀನ್ಸ್, ಬೀಫ್ ಮಾಂಸದ ಸೀಳುಗಳು ಇತ್ಯಾದಿ ಅದರ ಪ್ರೀತಿಯ ತಿನಿಸುಗಳ ಆಮಿಷವನ್ನೊಡ್ಡಿ ಅಳಿಲನ್ನು ಆಕರ್ಷಿಸಲು ಪ್ರಯತ್ನಿಸಿದೆವು.

ಹೀಗೆ ಎರಡು ತಿಂಗಳು ಕಳೆದವು. ಶಶಿಯ ಸುಳಿವಿಲ್ಲ. ಅದೊಂದು ರಾತ್ರಿ ಮಕ್ಕಳೆಲ್ಲ ಮಲಗಿದ್ದರು. ನನ್ನ ಪತಿ ಬಿಲ್ ಅಗ್ಗಿಷ್ಟಿಕೆಯ ಮೇಲೆ ಸೌದೆಯ ತುಂಡೊಂದನ್ನು ಒಡ್ಡುತ್ತಿದ್ದ.

''ಅಮ್ಮಾ, ಅಪ್ಪಾ ಶಶಿ ಸಿಕ್ಕಿತು. ನಮ್ಮ ಕಪಾಟಿನೊಳಗೆ ಜೇಮಿಯ ಇನ್ನೊಂದು ಬೂಟಿನೊಳಗೆ ಮಲಗಿ ನಿದ್ದೆ ಮಾಡಿದೆ'' ಎಂದು ಹಠಾತ್ತನೆ ಬೆಕೀ ಬಂದು ಆನಂದ ತುಂದಿಲಳಾಗಿ ಹೇಳಿದಳು. ಸಂತೋಷಾತಿರೇಕ ದಿಂದ ಅವಳ ಕಣ್ಣುಗಳು ಮಿನುಗುತ್ತಿದ್ದವು.

''ಹೂಂ, ಶಶಿಕಿರಣ ದೀರ್ಘನಿದ್ದೆ ಯಲ್ಲಿದೆ'' ಎಂದು ಬಿಲ್ ಬೂಟಿನೊಳಕ್ಕೆ ಬೆರಳು ತೂರಿ ಅಳಿಲಮರಿ ಇದ್ದುದನ್ನ ಖಚಿತ ಪಡಿಸಿಕೊಂಡ.

ಮಾರ್ಚ್ ತಿಂಗಳು ಅಡಿಯಿಡುತ್ತಿದ್ದಂತೆಯೇ ಅರಿಜೋನಾ ಮರುಭೂಮಿಯಲ್ಲಿ ಹೊಸ ಧ್ವನಿಗಳು ತುಂಬಿದುವು. ಶಶಿಯ ಪಂಜರವನ್ನು ನಾನು ಮನೆಯ ಜಾಲಿಬಾಗಿಲ ಬಳಿಯಿಟ್ಟೆ. ಅಲ್ಲಿ ಅದಕ್ಕೆ ಪಕ್ಷಿಗಳ ಕಲರವ, ಒಣಹುಲ್ಲಿನ ಮೂಲಕ ಬೀಸುವ ಗಾಳಿಯ ಸುಂಯ್ ಸುಂಯ್ ನಾದ-ಎಲ್ಲವನ್ನೂ ಕೇಳಲಾಸ್ಪದ ವಿತ್ತು. ತನ್ನ ಗಲ್ಲಮೀಸೆಯನ್ನು ನೀವಿಕೊಳ್ಳುತ್ತಾ, ಮೈಯನ್ನು ಒಪ್ಪಗೊಳಿಸುತ್ತಾ ಬಾಗಿಲ ಬಳಿಯೇ ಶಶಿ ಶಾಂತವಾಗಿ, ನೀರವತೆಯಿಂದ ಕುಳಿತಿರು ತ್ತಿತ್ತು. ಹೀಗಿರುವಾಗ ಕಡೆಗೊಂದು ದಿನ ಅದರ ತೀಕ್ಷ್ಣಸ್ವರ ಕೇಳಿತು. ಅದನ್ನು ಮುಕ್ತಗೊಳಿಸುವ ಕಾಲ ಕೊನೆಗೂ ಬಂತೆಂದು ಆಗ ನನಗೆ ಅರಿವಾಯಿತು. ನಾನೇ ಅದನ್ನು 'ಚಂದ್ರಬಿಂಬ' ದ ಬಳಿಗೆ ಕೊಂಡೊಯ್ದು ಬಿಡುತ್ತೇನೆ. ಯಾಕೆಂದರೆ ಅದರ ಬಳಿ ಹಾವುಗಳು ಮತ್ತಿತರ ಕ್ರೂರ ಪ್ರಾಣಿಗಳು ಹೊಂಚು ಹಾಕುತ್ತಿರ ಬಹುದು ಎಂದು ಮಕ್ಕಳಿಗೆ ನಾನು ಆಶ್ವಾಸನೆ ಕೊಟ್ಟೆ.

ಮಧುಚಂದ್ರ: ಶಶಿಯನ್ನು ಕೊಂಡೊಯ್ಯುವ ಮೊದಲು ಬೆಕೀ ಅಡುಗೆ ಮನೆಯಲ್ಲಿ ಅದರ ಬೂಟನೊಳಗೆ ಕೆಂಪು ಜೆಲ್ಲಿ ಬೀನ್ಸನ್ನು ತುಂಬಿಡುತ್ತಿದ್ದುದನ್ನು ಕಂಡೆ. ಅವಳನ್ನೇ ಗಮನಿಸುತ್ತಿದ್ದ ಬಿಲ್ ''ಏನಮ್ಮಾ ಮಾಡುತ್ತಿದ್ದೀ?'' ಎಂದು ಕೇಳಿದ. ಅದಕ್ಕೆ ಬೆಕೀ-

''ಅಮ್ಮ ಈ ಬೂಟನ್ನು 'ಚಂದ್ರಬಿಂಬ' ದ

ಮೇಲಿಡುತ್ತಾಳೆ. ಶಶಿಗೆ ಕೆಂಪು ಬಣ್ಣ ಅಂದರೆ ಪ್ರಾಣ '' ಎನ್ನುತ್ತಿದ್ದಂತೆಯೇ ಅವಳ ಕಣ್ಣುಗಳು ತುಂಬಿಬಂದು ಕಪೋಲಗಳು ತೇವಗೊಂಡವು.''ಅಪ್ಪಾ ಶಶಿ ಇಲ್ಲಿಂದ ಹೋಗುವುದು ನನಗೆ ಇಷ್ಟವೇ ಇಲ್ಲ . ನಾನದನ್ನು ತುಂಬ ಪ್ರೀತಿಸುತ್ತೇನೆ''.

''ಮಗೂ, ಶಶಿಕಿರಣ ಒಂದು ಕಾಡು ಪ್ರಾಣಿ. ಅದು ಕಾಡಿನಲ್ಲಿರುವ ಅದರ ಸ್ವಂತ ಸಂಸಾರದೊಡನೆ ಇರುವುದು ಸಹಜ ಮಾತ್ರವಲ್ಲ ಅಗತ್ಯ ಕೂಡಾ''.

''ಆದರೆ ಅದು ನನ್ನನ್ನು ಮರೆತೇ ಬಿಟ್ಟರೆ?''

''ಇಲ್ಲಮ್ಮಾ, ಪ್ರಾಣಿಗಳು ತಮ್ಮನ್ನು ಪ್ರೀತಿಸಿದವರನ್ನು ದಯೆ ತೋರಿದವರನ್ನು ಎಂದಿಗೂ ಮರೆಯುವುದಿಲ್ಲ''- ಮಗಳನ್ನು ಅಪ್ಪಿಕೊಂಡು ಬಿಲ್ ಸಮಜಾಯಿಸಿದ.

ನಾನು ಶಶಿಯನ್ನು ಜೇಬಿನಿಂದ ಹೊರತೆಗೆದು ಕೆಳಗಿರಿಸುತ್ತಿದ್ದಂತೆಯೇ 'ಚಂದ್ರಬಿಂಬ'ದೊಳಗಿಂದ ಇನ್ನೊಂದು ಅಳಿಲು ಮೂತಿ ಹೊರಚಾಚಿ ಕುಯ್ಞ್ಗುಟ್ಟಿತು. ಶಶಿಕಿರಣ ತನ್ನ ಹಿಂಗಾಲುಗಳ ಮೇಲೆ ಕುಳಿತು ಮಾರುತ್ತರ ಕೊಟ್ಟಿತು. ದಪ್ಪನೆಯ ತುಪ್ಪಳದ ಹೊದಿಕೆಯಿದ್ದ ಆ ಗಂಡಳಿಲು ಬಾಲವನ್ನು ಕುಣಿಸುತ್ತ, ಅತ್ತಿಂದಿತ್ತ ಓಡುತ್ತಾ ಶಶಿಯ ಪರಿಚಯಮಾಡಿಕೊಳ್ಳಲು ಹಾತೊರೆಯುವಂತೆ ತೋರುತ್ತಿತ್ತು.

ಅಸಹಾಯಕ ಸ್ಥಿತಿಯಲ್ಲಿ ಮರಿಯಾಗಿ ನಮಗೆ ದೊರೆತ ಈ ಕಿರುದೇಣಿಗೆ ನಮ್ಮ ಇಡೀ ಸಂಸಾರವನ್ನೇ ಮಂತ್ರಮುಗ್ಧವನ್ನಾಗಿಸಿದ ಪ್ರಕೃತಿಯ ಮಾಯೆಗೆ ಅಚ್ಚರಿ ಪಡುತ್ತ, ಕೊನೆಯ ಬಾರಿಗೊಮ್ಮೆ ಮುದ್ದಿನ ಶಶಿಯ ತಲೆಯನ್ನು ನೇವರಿಸಿದೆ.

''ನೋಡು ಶಶಿ ನಿನ್ನ ಗೆಳೆಯ ನೀನೆಷ್ಟು ಅಂದವಾಗಿದ್ದೀಯಾ ಅಂದುಕೊಳ್ಳುತ್ತಿದ್ದಾನೆ'' ಎಂದು ಮೆಲ್ಲಗೆ ಅಂಗೈ ಬಿಡಿಸಿ ಶಶಿಯ ಕಿವಿಯಲ್ಲಿ ಉಸುರುತ್ತ ಅದನ್ನು ಕೆಳಗೆ ಬಿಟ್ಟೆ, ''ಹೋಗು ಪುಟ್ಟಾ, ನಿನ್ನನ್ನು ಪಡೆದುಕೊಂಡು ಅವನು ಧನ್ಯನಾಗಲಿ'' ಎಂದು ಹರಸಿದೆ.

ಆ ಅಳಿಲು ಶಶಿಯನ್ನು ನೋಡುತ್ತಲೇ ಓಡಿ ಬಂದು ಅದನ್ನು 'ಮುದ್ದಿಸಿದ'. ಅಂದರೆ ಅದು ವನ್ಯಪ್ರಾಣಿಗಳು ಘ್ರಾಣಪೂರ್ವಕ ತಮ್ಮ ಸಂಗಾತಿಗಳನ್ನು ಗುರುತಿಸಿದ ಪ್ರಾಕೃತಿಕ ವಿಧಾನ ಅಷ್ಟೆ. ಅನಂತರ ತಮ್ಮ ಹೊಸ ಸಂಸಾರವನ್ನು ಆರಂಭಿಸಲು ಎರಡೂ ಅಳಿಲುಗಳು ಸರಕ್ಕನೆ ಬಿಲದೊಳಕ್ಕೆ ಧಾವಿಸಿ ಕಣ್ಮರೆಯಾದುವು.

ಮನಸ್ಸಿನಲ್ಲಿ, ಮಾತಿನಲ್ಲಿ, ಕೆಲಸದಲ್ಲಿ ಯಾರನ್ನೂ ನೋಯಿಸದಿರುವುದು; ಎಲ್ಲರನ್ನೂ ಪ್ರೀತಿಸುವುದು; ಎಲ್ಲರಿಗೂ ಒಳ್ಳೆಯದನ್ನು ಬಯಸುವುದು-ಇದೇ ಅಹಿಂಸಾಧರ್ಮ.

-ಮಹಾತ್ಮ ಗಾಂಧೀಜಿ

ರಣನೀತಿ

ಮಾಧವರಾವ್ ಮುಧೋಳ್
೧೬೯೧, ೧೭ನೇ ಮುಖ್ಯರಸ್ತೆ
ಜೇ.ಪಿ.ನಗರ, ೨ನೇ ಹಂತ
ಬೆಂಗಳೂರು-೫೬೦ ೦೭೮

ಲಕ್ಷ್ಮೀನಾರಾಯಣರು ಹಾಸಿಗೆಯ ಮೇಲೆ ಪಾರ್ಶ್ವ ಬದಲಾಯಿಸುತ್ತಲೇ ಇದ್ದರು. ನಿದ್ರೆ ಅವರ ಕಣ್ಣುಗಳಿಂದ ಅದೆಷ್ಟೋ ದೂರ ಹೋಗಿತ್ತು.

ಕೂಡಿಬಾಳೋಣ ಕೂಡಿಮಡಿಯೋಣ ವೆಂದು ಅಗ್ನಿ ಸಾಕ್ಷಿಯಾಗಿ ಏಳು ಸುತ್ತು ತಿರುಗಿ ಪ್ರತಿಜ್ಞೆಮಾಡಿದರೂ, ಭಗವಂತನ ಆಜ್ಞೆ ಬಂದರೆ ಎಲ್ಲವನ್ನೂ ಬಿಟ್ಟು ತೆರಳಲೇ ಬೇಕಾಗುವುದು. ಅವರ ಪತ್ನಿ ಪ್ರಪಂಚ ದೊಡನೆ ಹೋರಾಡಲು ಅವರೊಬ್ಬರನ್ನೇ ಬಿಟ್ಟು ಹೊರಟು ಹೋಗಿದ್ದಳು. ಆ ವಸ್ತುವಿನ ಬೆಲೆ ಅದು ಕಳೆದುಹೋದಾಗಲೇ ಗೊತ್ತಾಗು ವುದು.

ಅವರಿಗೆ ತಮ್ಮ ಪತ್ನಿಯ ನೆನಪು ಇಂದು ಬಂದಂತೆ, ಇಷ್ಟು ತೀಕ್ಷ್ಣವಾಗಿ ಎಂದೂ ಬಂದಿರಲಿಲ್ಲ. ಮತ್ತೆ ಮತ್ತೆ ಅವರು ಸೊಳ್ಳೆ ಪರದೆ ಸರಿಸಿ ನೋಡುವರು, ಮತ್ತೆ ಮತ್ತೆ ಮಲಗಲು ಪ್ರಯತ್ನಿಸುವರು. ಇವರು ಕಸಿವಿಸಿ ಪಡುವುದನ್ನು ನೋಡಿ, ನಿದ್ರಾದೇವಿಗೇ ಕೊನೆಗೂ ಕರುಣೆ ಬಂದಿತು.

ಅವರು ಕಣ್ಣು ತೆರೆದಾಗ ಸೂರ್ಯ ಮೇಲಕ್ಕೆ ಬಂದಿದ್ದ. ಅವನ ಕಿರಣಗಳು ಕಿಟಕಿ ಯಿಂದ ತೂರಿ ಅವರು ಮಲಗಿದ ಮಂಚದ ವರೆಗೆ ಬಂದಿದ್ದವು. ಅವರು ಗಡಬಡಿಸಿ ಎದ್ದರು. ಬಟ್ಟೆ ಸರಿಪಡಿಸಿಕೊಂಡರು. ನೇರ ಬಚ್ಚಲ ಮನೆಯ ಕಡೆಗೆ ನಡೆದರು. ನೋವಿ ನಿಂದ ಅವರ ತಲೆ ಸಿಡಿಯುವಂತಾಗಿತ್ತು. ಕಣ್ಣುಗಳು ಭಾರವಾಗಿದ್ದುವು. ದೇಹದ ಪ್ರತಿ ಕೀಲುಗಳು ನೋಯುತ್ತಿದ್ದುವು. ಅವರು ತಮ್ಮಷ್ಟಕ್ಕೆ ತಾವೇ ಬಹಳ ನಿಶಕ್ತನಾಗಿದ್ದೇನೆಂದು ಭಾವಿಸಿ, ಒಂದು ಕ್ಷಣ ತಾವು ಮುದುಕನಾಗಿ ಬಿಟ್ಟೆನೇ? ಎಂದೂ ಚಿಂತಿಸಿದರು. ಮರುಕ್ಷಣ ದಲ್ಲಿಯೇ ಈ ವಿಚಾರವನ್ನು ತಲೆಯಿಂದ ಕೊಡಹಿ ಬಚ್ಚಲ ಮನೆಯನ್ನು ಹೊಕ್ಕರು.

ಬಹಳ ಹೊತ್ತಿನವರೆಗೆ ಅವರು ಸ್ನಾನ ಮಾಡುತ್ತಿದ್ದರು. ಬಿಸಿನೀರಿನ ಸ್ನಾನ ಅವರ ದೇಹಕ್ಕೂ ಸಂಧಿಗಳಿಗೂ ಆಪ್ಯಾಯಮಾನ ವಾಗಿತ್ತು. ಬಚ್ಚಲಮನೆಯಿಂದ ಹೊರಗೆ ಬರುತ್ತಲು ತಮ್ಮಷ್ಟಕ್ಕೆ ತಾವೇ ಮೈಯೆಲ್ಲ ಬಹಳ ಲಘುವಾಗಿದೆ ಎಂದು ಕೊಂಡರು. ಆದರೆ ತಲೆಯ ಭಾರ ಇನ್ನೂ ಇತ್ತು. ಆಹ್ನೀಕ ಪೂಜೆ ಗಳನ್ನು ಮುಗಿಸಿ ನಾಷ್ಟಾ ಪೂರೈಸಿ, ಎರಡು ಕಪ್ಪು ಬಿಸಿ ಬಿಸಿ ಟೀ ಕುಡಿದು, ವೀಳೆದೆಲೆ ಬೀಡಾ ಬಾಯಿಯಲ್ಲಿ ಇಟ್ಟುಕೊಂಡು ತೋಟದತ್ತ ಸಾಗಿದರು.

ತಮ್ಮ ತೋಟವೆಂದರೆ ಅವರಿಗೆ ಪಂಚ ಪ್ರಾಣ. ಅದರಲ್ಲಿಯ ಪ್ರತಿ ಮರವನ್ನೂ ತಮ್ಮ ಸಂತಾನವೆಂದೇ ತಿಳಿಯುತ್ತಿದ್ದರು. ಮಕ್ಕಳಂತೆ ಅವುಗಳನ್ನು ಜೋಪಾನಮಾಡಿ ಬೆಳೆಸಿದ ಮೇಲೆ ಹಾಗೇಕೆ ತಿಳಿಯಬಾರದು! ಎತ್ತೆತ್ತರವಾಗಿ ಬೀಸಾಗಿ ಬೆಳೆದ ಮರಗಳು ಫಲಗಳಿಂದ ಭಾರವಾಗಿ ಬಾಗಿ ಒಂದಕ್ಕೊಂದು ಮುದ್ದಿಸು

ಉರ್ದುಪತ್ರಿಕೆ ''ಆಜ್‌ಕಲ್'' ನಲ್ಲಿ ಪ್ರಕಟವಾದ ಶ್ರೀ ಸಾಜಿದ್ ಹಮೀದ್ ಅವರ 'ರಣನೀತಿ' ಎಂಬ ಕಥೆಯ ಭಾವಾನುವಾದ

ವಂತೆ ತಾಗಿದಾಗ ಅವರ ಕಣ್ಣುಗಳು ಮಿಂಚು ತಳೆಯುತ್ತಿದ್ದುವು ದೇಹದಲ್ಲಿ ಕಾವೇರಿದಂತಾಗು ತಿತ್ತು. ತೋಟ ಸರ್ಕಾರದ ಕಾಡಿನ ಮಧ್ಯ ದಲ್ಲಿತ್ತು. ಅದರ ಎರಡೂ ದಂಡೆಗಳಿಗೆ ಜುಳು ಜುಳು ಹರಿಯುತ್ತಿರುವ ಝರಿಗಳಿದ್ದುವು. ಸೂರ್ಯನ ಪ್ರಖರ ಕಿರಣಗಳಿಂದ ಅಡಿಕೆಯ ಸಸಿಗಳು ಮರಗಳು ಕಮರಿ ಹೋಗಬಾರ ದೆಂದು ನಾಲ್ಕೂ ದಿಕ್ಕಿಗೂ ಸದಾ ಹಸಿರು ಇರುವ ಗಿಡಗಳನ್ನು ನೆಡಿಸಿದ್ದರು.

ತೋಟದಲ್ಲಿ ಕೇವಲ ನಾಲ್ಕೇ ಆಳುಗಳು ಕೆಲಸ ಮಾಡುತ್ತಿದ್ದುದನ್ನು ಕಂಡು ಅವರಿಗೆ ಆಶ್ಚರ್ಯವಾಯಿತು. ''ಉಳಿದ ಆಳುಗಳು ಎಲ್ಲಿ?'' ಎಂದು ಕೇಳಿದಾಗ, ''ಕರಿಯನ ಜೊತೆಗೇನೇ ಅವರೂ ಹೊರಟು ಹೋದರು'' ಎಂದು ಉತ್ತರ ಬಂದಿತು.

''ಹಾಗೆಂದರೇನು?''

''ಹೋದರು ಎಂದರೆ, ಅವರು ತಿರುಗಿ ಬರುವುದಿಲ್ಲ'' ಎಂದು ಮನದಲ್ಲಿಯೇ ನಗುತ್ತ ಯಾವನೋ ಉತ್ತರ ಕೊಟ್ಟನು. ಅವರಿಗೆ ವಿಪರೀತ ಕೋಪ ಬಂದಿತು. ತೋಟದ ಎಲ್ಲ ಕೆಲಸ ಅರ್ಧಂಬರ್ಧ ಹಾಗಿಯೇ ಉಳಿದಿತ್ತು. ಮರಗಳಿಗೆ ಮಣ್ಣು ಏರಿಸ ಬೇಕಿತ್ತು. ಹುಲ್ಲು ಕುಯ್ಯಬೇಕಿತ್ತು. ತೆನೆಗಳ ಮೇಲೆ ಔಷಧಿ ಸಿಂಪಡಿಸಬೇಕಿತ್ತು. ಗೊಬ್ಬರ ಇಡಬೇಕಿತ್ತು. ಇಷ್ಟೆಲ್ಲ ಈ ನಾಲ್ಕು ಆಳು ಗಳಿಂದ ಆಗದ ಕೆಲಸ, ಕರಿಯನ ಮೇಲೆ ಅವರಿಗೆ ವಿಪರೀತ ಕೋಪ ಬಂದಿತ್ತು. ಆದರೆ ಸಹನೆಯಿಂದಿರುವುದನ್ನು ಬಿಟ್ಟರೆ ಅವರಿಗೆ ಬೇರೆ ಮಾರ್ಗ ವಿರಲಿಲ್ಲ.

ಅಡಿಕೆಯ ತೋಟ ಹದಿನೈದು ಎಕರೆ ಭೂಮಿಯನ್ನು ಆವರಿಸಿಕೊಂಡಿತ್ತು. ಅದನ್ನು ನೋಡಿಕೊಂಡು ಹೋಗಲು ಅತಿ ಕಡಿಮೆ ಯೆಂದರೆ ಹತ್ತು ಆಳುಗಳು ಇಡೀ ವರ್ಷ ದುಡಿಯಬೇಕಿತ್ತು. ಆಳುಗಳು ವಾಪಸ್ಸು ಬರದಿದ್ದರೆ ತೋಟವನ್ನು ನೋಡಿಕೊಳ್ಳುವುದು ಆಗುವುದಿಲ್ಲೆಂದು ಅವರ ಮನಸ್ಸಿಗೆ ಸಂಕಟವಾಗ ತೊಡಗಿತು . ಪೈರು ನಾಶವಾಗಿ ಹೋಗುವು ದಲ್ಲದೆ, ತೋಟವೂ ಹಾಳಾಗಿ ಹೋಗುವು ದೆಂದು ಚಡಪಡಿಸಿದರು. ಹಳ್ಳಿಗಳಲ್ಲಿ ರಸ್ತೆಗಳು ಆಗುತ್ತಿದ್ದಂತೆ ಆಳುಗಳ ಕ್ಷಾಮವುಂಟಾಗಿತ್ತು. ತಾವು ಕಾಯಮ್ಮಾಗಿ ಇಟ್ಟುಕೊಂಡ ಜೀತದಾಳು ಗಳೇ ಕೆಲಸ ಬಿಟ್ಟು ಹೊರಗಡೆಗೆ ಹೋದರೆ , ಮತ್ತೆಲ್ಲಿಂದ ಕೂಲಿ ಆಳುಗಳನ್ನು ತರುವುದು?

ಹತ್ತು ವರ್ಷದ ಕೆಳಗೆ ಎಂಟು ಎಕರೆ ತೋಟ ಮಾಡಿದ್ದು ಈಗ ಅದು ಸುಮಾರಾಗಿ ಎರಡ ರಷ್ಟಾಗಿತ್ತು. ಕಾರಣ ಏನೇ ಇರಲಿ ತೋಟ ಎರಡರಷ್ಟು ಮಾಡುವುದರಲ್ಲಿ ಏನೆಲ್ಲ ಮಾಡಬೇಕಾಯಿತೆನ್ನುವುದು ಅವರ ಮನಸ್ಸಿಗೇ ಗೊತ್ತು. ಸ್ವಲ್ಪ ಶ್ರಮ ಮತ್ತು ಸ್ವಲ್ಪ ಚತುರತೆ ಯಿಂದ ಪ್ರತಿವರ್ಷ ತೋಟಕ್ಕೆ ಹೊಂದಿದ ಸರ್ಕಾರಿ ಭೂಮಿಯನ್ನು ಯಾರ ಅರಿವಿಗೂ ಬಾರದಂತೆ ಯಾರೂ ಕೇಳದಂತೆ ಒತ್ತುವರಿ ಮಾಡಿ ತಮ್ಮ ತೋಟಕ್ಕೆ ಸೇರಿಸಿಕೊಳ್ಳುತ್ತಿದ್ದರು. ಉಪ್ಪು ಉಂಡದಕ್ಕೆ ಕೃತಜ್ಞತೆ ತೋರಬೇಕೆಂದೆಣಿಸಿ ಒಮ್ಮೆ ಯಾರೋ ಅವರ ವಿರುದ್ಧ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ದೂರಕೊಟ್ಟರು. ಮತ್ತೆ ಕೇಳಬೇಕೆ? ಪ್ರತಿ ನಿತ್ಯ ಒಬ್ಬರಲ್ಲ ಒಬ್ಬ ಅಧಿಕಾರಿಗಳು ಅವರ ಮನೆ ಬಾಗಿಲು ತಟ್ಟುವು ದಕ್ಕೆ ಪ್ರಾರಂಭಿಸಿದರು. ನಿಜ ಹೇಳಬೇಕೆಂದರೆ ಅವರ ಕಣ್ಣೀರು ಕಪಾಳಕ್ಕೆ ಬಂದುವು. ಸ್ವಲ್ಪ ತಮ್ಮ ಪ್ರಭಾವದಿಂದಲೂ ವಶೀಲಿಯಿಂದಲೂ ಕೊಂಚ ಜಾತಿಮತದ ನೆರವಿನಿಂದಲೂ ಸ್ವಲ್ಪ ಕೊಟ್ಟು ಕೊಡಿಸುವುದರ ಮೂಲಕವೂ ಹೇಗೋ ಪಾರಾದರು. ಇಲ್ಲದಿದ್ದರೆ ಪಡೆದುದಕ್ಕಿಂತ

ಕೊಡುವುದೇ ಹೆಚ್ಚಾಗುತ್ತಿತ್ತು. ಇಷ್ಟೆಲ್ಲ ಶ್ರಮ ಪಟ್ಟು ಬೆಳೆಸಿದ ತೋಟವನ್ನು ಹೀಗೆಯೇ ಬೀಳು ಬಿಡುವುದಕ್ಕಾಗುತ್ತದೆಯೆ? ಹಾಗೆ ನೋಡಿದರೆ ಅವರ ಜೀವನಕ್ಕೆ ಈ ತೋಟವೇ ಮೂಲ ಆಧಾರವಾಗಿತ್ತು.

ಸರ್ಕಾರದವರು ತನಗೆ ಮೂರು ಎಕರೆ ಭೂಮಿ ಕೊಟ್ಟಿದ್ದಾರೆ ಅದಕ್ಕೆ ತನಗೆ ಕೆಲಸಕ್ಕೆ ಬರುವುದಕ್ಕಾಗುವುದಿಲ್ಲೆಂದು, ಕರಿಯಾ ನಿನ್ನೆ ಹೇಳಿದಾಗಲೆ ಅವರ ಕಣ್ಣುಗಳು ಕೆಂಡ ದಂತಾಗಿದ್ದವು . ವಂಶಪಾರಂಪರ್ಯವಾಗಿ ಗತವಾಗಿ ಕೈಕಟ್ಟಿಕೊಂಡು, ತಲೆ ತಗ್ಗಿಸಿ, ದೃಷ್ಟಿ ಕೆಳಗೆ ಮಾಡಿ ನಿಂತು ಕೊಳ್ಳುವವರು, ಹೀಗೆ ಬಿಚ್ಚು ಮಾತನಾಡಿದರೆ ಯಾರಿಗೆ ತಾನೇ ಕೋಪಬರುವುದಿಲ್ಲ? ಅದು ಹೇಗೋ ಅವರು ಆಗ ಸಂಯಮದಿಂದಿದ್ದರು. ಒಳ್ಳೆಯ ದಾಯಿತು! ಇಲ್ಲದಿದ್ದರೆ ರಕ್ತಪಾತವಾಗುವುದ ರಲ್ಲಿ ತಡವಾಗುತ್ತಿರಲಿಲ್ಲ. ''ನಿನ್ನ ಮನಸ್ಸಿಗೆ ಬಂದಂತೆ ಮಾಡು'' ಎಂದು ಬಿಟ್ಟಿದ್ದರು. ತನ್ನ ಜೊತೆಗೆ ಅವನು ಬೇರೆ ಆಳುಗಳನ್ನು ಕರೆದುಕೊಂಡು ಹೋಗುವನೆಂದು ಅವರಿಗೇನು ಗೊತ್ತು! ಇದ್ದಕ್ಕಿದ್ದಂತೆಯೇ ಅವರಿಗೆ ಪಂಚಾಯಿತಿ ರಾಜ್ಯದ ಮೇಲೆ ಎಲ್ಲಿಲ್ಲದ ಕೋಪ ಬರತೊಡಗಿತು. ಇದೆಲ್ಲಾ ಇವರು ಮಾಡಿದ ಕಿತಾಪತಿಯೇ ಇಲ್ಲದಿದ್ದಲ್ಲಿ ಆಳು ಗಳು ಒಡೆಯರ ಎದುರು ನಿಂತು ಮಾತ ನಾಡುವ ಧೈರ್ಯವೆ? !

ತೋಟವನ್ನು ಪರೀಕ್ಷಿಸಿ ಮನೆಗೆ ತಿರುಗಿ ದಾಗ ಅವರು ಸಾಕಷ್ಟು ಚಿಂತಾಮಗ್ನರಾಗಿ ದ್ದರು. ಕೈಕಾಲು ಮುಖ ತೊಳೆದು ಮಜ್ಜಿಗೆ ಕುಡಿದು ವೃತ್ತಪತ್ರಿಕೆ ಹಿಡಿದು ಪಡಸಾಲೆಗೆ ಬಂದು ಕುಳಿತರು. ಅವರ ಕಣ್ಣುಗಳೇನೊ ವೃತ್ತಪತ್ರಿಕೆ ನೋಡುತ್ತಿದ್ದುವು. ಆದರೆ ಚಿತ್ತ ಬೇರೊಂದೆಡೆಗಿತ್ತು. ಕರಿಯನಿಗೆ ಹೇಗೆ ಪಾಠ ಕಲಿಸಬೇಕು ಎಂದು ಯೋಚಿಸುತ್ತಿದ್ದರು. ಕಾಲ ಬದಲಾಗಿದೆ. ಕೂಲಿ ಆಳುಗಳನ್ನು ಹತೋಟಿ ಯಲ್ಲಿಟ್ಟುಕೊಳ್ಳುವುದು ಅಷ್ಟು ಸುಲಭ ವಲ್ಲೆಂಬುದು ಅವರಿಗೆ ಗೊತ್ತಿದ್ದಿತು.

ಯೋಚಿಸುತ್ತ ಯೋಚಿಸುತ್ತ ಮಧ್ಯಾಹ್ನ ವಾಯಿತು. ಮನಸ್ಸಿಲ್ಲದ ಮನಸ್ಸಿನಿಂದ ಹೊಟ್ಟೆಗಿಷ್ಟು ಹಾಕಿಕೊಂಡರು. ಅವರಿಗೆ ಒಂದೇ ಒಂದು ಚಿಂತೆ. ಕರಿಯನನ್ನು ಹೇಗಾದರೂ ರಾಜಿಪಡಿಸಿಕೊಳ್ಳಬೇಕು. ಅದೂ ಹೇಗೆಂದರೆ ಸಮಸ್ಯೆಯೂ ಬಗೆ ಹರಿಯಬೇಕು, ಪ್ರತಿಷ್ಠೆಯೂ ಉಳಿದಿರಬೇಕು. ಉಂಡನಂತರ ವಿರಮಿಸಿ ಬೇಕೆಂದು ತಮ್ಮ ರೂಮಿನೊಳಕ್ಕೆ ಹೋಗಿದ್ದರು. ರಾತ್ರಿಯೆಲ್ಲ ಜಾಗರಣೆ ಮಾಡಿದ್ದರೂ ಅವರಿಗೆ ನಿದ್ರೆ ಬಂದಿರಲಿಲ್ಲ. ಅದು ಅವರ ಪ್ರತಿಷ್ಠೆಯ ಮತ್ತು ಕುಟುಂಬದ ಭವಿಷ್ಯಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿದ್ದುದರಿಂದ ನಿದ್ರೆಯಾದರು ಹೇಗೆ ಬಂದೀತು? ಹಾಗೇ ಕಣ್ಣು ಮುಚ್ಚಿಕೊಂಡು ಸ್ವಲ್ಪ ಸಮಯ ಹಾಸಿಗೆಯ ಮೇಲೆ ಬಿದ್ದು ಕೊಂಡಿದ್ದರು. ಗೋಡೆಗೆ ಹಾಕಿದ ಗಡಿಯಾರ ನಾಲ್ಕು ಗಂಟೆಯಾಯಿತೆಂದು ಸೂಚಿಸಿದಾಗ ಅವರು ಪಡಸಾಲೆಗೆ ಬಂದು ಕುಳಿತುಕೊಂಡರು. ತಲೆ ಇನ್ನೂ ನೋಯುತ್ತಲೇ ಇತ್ತು. ಅವರು ಸೊಸೆಯನ್ನು ಕರೆದು ಚಹ ಮಾಡಲು ಹೇಳಿದರು. ಚಹ ಬರುವವರೆಗೆ ಅಡಕೆ ಕತ್ತರಿಸುತ್ತ ಕುಳಿತಿದ್ದರು. ಚಹ ಕುಡಿದ ಮೇಲೆ ಅವರಿಗೆ ವಿರಾಮವೆನಿಸಿತು. ಬೀಡಾ ಬಾಯಿ ಯಲ್ಲಿ ಇಟ್ಟುಕೊಂಡು ಆರಾಮ ಕುರ್ಚಿಯ ಮೇಲೆ ಅಡ್ಡಾದರು. ಅವರ ಮೆದುಳಿನಲ್ಲಿ ಎಷ್ಟೋ ಹಂಚಿಕೆಗಳು ಮೂಡುತ್ತಲೂ ಮುಳುಗುತ್ತಲೂ ಇದ್ದುವು.

ಈ ಮಧ್ಯೆ ಅವರ ಮಗ ಗಣಪತಿ ಪಟ್ಟಣಕ್ಕೆ

ಹೋದವನು ವಾಪಸ್ಸು ಬಂದ. ನಿತ್ಯದ ರೂಢಿಗೆ ವಿರುದ್ಧ ಅವನ ಅಪ್ಪಾಜಿ ಪಡಸಾಲೆಯಲ್ಲಿ ಆರಾಮ ಕುರ್ಚಿಯ ಮೇಲೆ ಅಡ್ಡಾದುದನ್ನು ನೋಡಿ ಗಾಬರಿಗೊಂಡ. ಇಷ್ಟೊತ್ತಿನಲ್ಲಿ ಅವರು ತಮ್ಮ ಕೋಣೆಯಲ್ಲಿ ಇರಬೇಕಿತ್ತಲ್ಲ! ಇದನ್ನು ಯೋಚಿಸುತ್ತ ಮೆತ್ತಗೆ ಹೆಜ್ಜೆ ಇಡುತ್ತ ಒಳಗೆ ಬಂದ. ವಿಷಯವೇನೆಂದು ಹೆಂಡತಿಯನ್ನು ಕೇಳಿದ. ವಿಶೇಷವೇನೂ ಇಲ್ಲವೆಂದು ಹೆಂಡತಿ ಉತ್ತರಿಸಿದಳು. ಅವನು ನಿಟ್ಟುಸಿರು ಬಿಟ್ಟ. ಅವನಿಗೆ ಬಹಳ ಹಸಿವೆಯಾಗಿತ್ತು. ಹೆಂಡತಿಗೆ ಊಟಕ್ಕೆ ಬಡಿಸಲು ಹೇಳಿ ತಾನು ಕೈಕಾಲು ಮುಖ ತೊಳೆಯಲು ಹೊರಟು ಹೋದ. ಊಟವಾದಮೇಲೆ ಚಹ ಕುಡಿದ. ತಿರುಗಿ ಶಕ್ತಿ ಬಂದಂತಾಯಿತು. ವಿಷಯ ಏನಿರಬಹುದೆಂದು ಚಿಂತಿಸತೊಡಗಿದ. ತನ್ನಿಂದೇನಾದರು ಎಲ್ಲಾದರು ತಪ್ಪಾಗಿರಲಿಕ್ಕಿಲ್ಲವೇ ಹೀಗೆ ಅವನು ಮತ್ತೇನನ್ನೋ ಯೋಚಿಸುತ್ತಿರುವಾಗ ಅಪ್ಪಾಜಿಯ ಕರೆ ಬಂದಿತು. ತ್ವರಿತವಾಗಿ ಎದ್ದು ಅಪ್ಪಾಜಿಯವರ ಸಮ್ಮುಖದಲ್ಲಿ ಉಪಸ್ಥಿತನಾದ. ಕುಳಿತುಕೊ ಎಂದು ಅವರು ಹೇಳಿದಾಗ ಅವನಿಗೆ ಹೋದ ಜೀವ ಮರಳಿ ಬಂದಂತಾಯಿತು. ಹಾಗಾದರೆ ತನ್ನ ಮೇಲೆ ಅವರಿಗೆ ಕೋಪವಿಲ್ಲ. ಮತ್ತೆ ಬೇರೆ ಏನೋ ವಿಷಯವಿದೆ ಅಂದುಕೊಂಡ. ಅವರು ಹೇಳಿದುದನ್ನು ಚಿತ್ತವಿಟ್ಟು ಕೇಳಲು ಸಿದ್ಧವಾಗಿ ಕುಳಿತ. ಸ್ವಲ್ಪ ಸಮಯ ಮೌನ ಆವರಿಸಿತ್ತು. ಹೇಗೆ ಪ್ರಾರಂಭಿಸಬೇಕೆಂಬುದು ಅವರಿಗೆ ತಿಳಿಯದಾಗಿತ್ತು. ಗಣಪತಿಯನ್ನು ಈಗಲೂ ಅವರು, ಚಿಕ್ಕಮಗುವೆಂದೇ ಭಾವಿಸುತ್ತಿದ್ದರು. ಹಾಗೆ ನೋಡಿದರೆ ಈಗ ಅವನು ಎರಡು ಮಕ್ಕಳ ತಂದೆ. ಹೇಗೆ ಹೇಳುವುದೆಂದು ಪೂರ್ವ ವಿಚಾರ ಮಾಡುತ್ತಿದ್ದರು. ಅವರು ಇದೂವರೆಗೆ ಯಾರೊಡನೆಯೂ ಯಾವ ವಿಷಯದ ಮೇಲೂ ಚರ್ಚಿಸಿರಲಿಲ್ಲ. ಇದು ಅವರ ಸ್ವಭಾವವಾಗಿತ್ತು ; ಹುಟ್ಟುಗುಣವಾಗಿತ್ತು. ಆದರೆ ಇಂದು ಅವರಿಗೆ ಅನಿವಾರ್ಯವಾಗಿತ್ತು. ಅವರು ವಿವರವಾಗಿ, ಕರಿಯಾ ಮತ್ತು ಇತರ ಕೂಲಿ ಆಳುಗಳು ಬಾರದಿದ್ದುದರ ಕಾರಣವನ್ನು ಹೇಳಿದರು. ಮತ್ತು ಈ ಸಮಸ್ಯೆಗೆ ಹಾವೂ ಸಾಯಬೇಕು ಕೋಲೂ ಮುರಿಯಬಾರದು ಎಂಬ ಹಾಗೆ ಪರಿಹಾರ ಹುಡುಕಬೇಕು ಎನ್ನುವುದನ್ನು ಮಗನ ತಲೆಯಲ್ಲಿ ತುಂಬಿದರು.

ಇಡೀ ರಾತ್ರಿ ಇಬ್ಬರೂ ತಮಗೆ ಹೊಳೆದ ಹಾಗೆ ಸಮಸ್ಯೆಗೆ ಪರಿಹಾರವನ್ನು ಹುಡುಕುತ್ತಿದ್ದರು. ಗಣಪತಿಗೆ ತನ್ನ ಸ್ವಂತಿಕೆಯನ್ನು ಪ್ರತಿಷ್ಠಾಪಿಸುವುದಕ್ಕೆ ಇದೊಂದು ಸುವರ್ಣಾವಕಾಶವಿತ್ತು. ಆದರೆ ಅವನಿಗೆ ಅನುಭವ ವಿರಲಿಲ್ಲ. ಸ್ವಲ್ಪ ಅಲಕ್ಷ್ಯತನವೂ ಇದ್ದಿತು. ಆದುದರಿಂದ ಅವನು ಒಂದು ಹಂತದ ಆಚೆ ಯೋಚಿಸದಾದನು.

ಬೆಳಿಗ್ಗೆ ತಂದೆ ಮಗ ಇಬ್ಬರೂ ಕೂಡಿಯೇ ನಾಷ್ಟಾ ಮಾಡಿದರು. ಅದಾದ ತಕ್ಷಣ ಅವನನ್ನು ಅವರು ಕೋಣೆಯ ಒಳಗೆ ಕರೆದೊಯ್ದರು. ''ಏನು ವಿಚಾರ ಮಾಡಿದ್ದಿ?'' ಎಂದು ಕೇಳಿದರು. ಗಣಪತಿ ಅಳಕುತ್ತಳಕುತ್ತ, ''ಕರಿಯನಿಗೆ ಹೆಚ್ಚಿನ ಕೂಲಿ ಆಶೆ ತೋರಿಸಿ ವಾಪಸ್ಸು ಕರೆಸಿಕೊಳ್ಳಬಹುದು, ಇದರ ಹೊರತು ಬೇರಾವ ಉಪಾಯವಿಲ್ಲ.'' ಎಂದು ಹೇಳತೊಡಗಿದ. ಮಗನ ಭೋಳೇತನ ಕಂಡು ಅವರು ಮುಗುಳು ನಗದೇ ಇರದಾದರು. ಏಕೆಂದರೆ ಈ ವ್ಯವಹಾರ ಬರಿಯ ಹಣದ್ದಾಗಿರಲಿಲ್ಲ. ಸ್ವಾಭಿಮಾನ ಮತ್ತು ಸ್ವಾತಂತ್ರ್ಯದ್ದಾಗಿತ್ತು. ಗಣಪತಿಯನ್ನು ನೋಡುತ್ತ ಅವರು, ''ಇಷ್ಟೇ ಮಾತಾಗಿದ್ದರೆ ನಾನೆಲ್ಲಿ ಇಷ್ಟು ಚಿಂತೆಗೊಳಗಾಗುತ್ತಿದ್ದೆ? '' ಎಂದು ಮಗನ

ಮುಖವನ್ನೇ ನೆಟ್ಟ ದೃಷ್ಟಿಯಿಂದ ನೋಡುತ್ತಿದ್ದರು. ಗಣಪತಿಯ ಮುಖದ ಮೇಲೆ ಬೆವರಿನ ಹನಿಗಳು ಕಾಣಿಸಿಕೊಂಡವು, ''ಈ ಸಮಸ್ಯೆ ನೀನು ತಿಳಿದಷ್ಟು ಹಗುರವಾಗಿಲ್ಲ'' ಎನ್ನುತ್ತ ತಾವೂ ಕರಿಯನನ್ನು ಮಣಿಸಲು ಮಾಡಿಕೊಂಡಿದ್ದ ವ್ಯೂಹ ರಚನೆಯ ವಿವರವನ್ನು ಹೇಳ ತೊಡಗಿದರು. ಆ ರಣನೀತಿಯಿಂದ ತಮ್ಮ ಹರಿಗೋಲು ಹೊಳೆದಾಟಿ ದಡ ಮುಟ್ಟುವುದೆಂಬ ವಿಶ್ವಾಸ ಅವರಿಗಿತ್ತು.

ರಾತ್ರಿ ಬಹಳ ಹೊತ್ತಿನವರೆಗೆ ತಮ್ಮ ಹಂಚಿಕೆಯನ್ನು ಕುರಿತು ಮತ್ತೊಮ್ಮೆ ಸಾದ್ಯಂತವಾಗಿ ಯೋಚಿಸಿದರು. ಇದರಲ್ಲಿ ಇನ್ನಾವ ಕುಂದೂ ಇಲ್ಲವೆಂಬುದು ಅವರಿಗೆ ಖಾತ್ರಿಯಾದ ಮೇಲೆ ಸಮಾಧಾನದಿಂದ ಹಾಸಿಗೆಯ ಮೇಲೆ ಮಲಗಿದರು.

ಬೆಳಗಾಗುತ್ತಲೆ ಆಹ್ನೀಕ ಪೂಜೆಗಳು ಮುಗಿದ ಅನಂತರ ಲಕ್ಷ್ಮೀನಾರಾಯಣರು ಮಗನನ್ನು ಕರೆದುಕೊಂಡು ತೋಟದ ಕಡೆಗೆ ನಡೆದರು. ದಾರಿಯುದ್ದಕ್ಕೂ ಮಗನಿಗೆ ತಮ್ಮ ಹಂಚಿಕೆಯ ಬಗ್ಗೆ ಇನ್ನಷ್ಟು ವಿವರಗಳನ್ನು ಹೇಳುತ್ತಲೂ ಮುಖ್ಯಾಂಶಗಳನ್ನು ಮನದಟ್ಟು ಮಾಡಿಸುತ್ತಲೂ ಸಾಗಿದರು. ಅದರಲ್ಲಿ ಅವನು ಯಾವ ಪಾತ್ರ ವಹಿಸಬೇಕೆಂಬುದನ್ನೂ ಅವನಿಗೆ ತಿಳಿಸಿ ಹೇಳಿದರು. ತೋಟದಲ್ಲಿ ಸ್ವಲ್ಪ ಸಮಯ ಕಳೆದ ಅನಂತರ ಗಣಪತಿಯನ್ನು ಅಲ್ಲಿಯೇ ಬಿಟ್ಟು ಅವರು ಕರಿಯಾನ ಕುಟೀರದತ್ತ ನಡೆದರು.

ಕರಿಯಾ ಅದೇತಾನೇ ಮನೆಗೆ ಬಂದಿದ್ದ. ಅವರು ಬರುತ್ತಿರುವುದನ್ನು ನೋಡಿ ಓಡೋಡಿ ಬಂದು ಕೈಜೋಡಿಸಿ ನಮಸ್ಕರಿಸಿ ಅಡಿಯಿಂದ ಮುಡಿಯವರೆಗೆ ಪ್ರಶ್ನೆಯಾಗಿಯೇ ನಿಂತುಕೊಂಡ. ಲಕ್ಷ್ಮೀನಾರಾಯಣರ ಕಣ್ಣುಗಳಲ್ಲಿ ಮಿಂಚು ಮರುಕಳಿಸಿತು. ಕ್ಷೇಮ ಸಮಾಚಾರವನ್ನು ಕೇಳಿ ಬಹಳ ಕಳಕಳಿಯ ಆತ್ಮೀಯ ಧ್ವನಿಯಲ್ಲಿ, ''ಕರಿಯಾ ! ನಿನ್ನ ಆ ಭೂಮಿ ಎಲ್ಲಿದೆ? ಸ್ವಲ್ಪ ನಾವೂ ನೋಡೋಣವೆ? '' ಎಂದರು.

ಈ ಅನಿರೀಕ್ಷಿತ ಪ್ರಶ್ನೆಗೆ ಕರಿಯಾ ತಡಬಡಿಸಿದ. ''ಏಕಾಗಬಾರದು ಬುದ್ಧಿ! ನಡೆಯಿರಿ. ಇಲ್ಲಿಯೇ ಸಮೀಪದಲ್ಲಿಯೇ ಇದೆ'' ಎಂದ.

ಭೂಮಿ, ಸ್ವಯಂ ಭೂ ಪೊದೆಗಳಿಂದ ಮುಚ್ಚಲ್ಪಟ್ಟಿತ್ತು. ಸ್ವಲ್ಪ ಹೆಚ್ಚು ಕಡಿಮೆ ಕಷ್ಟಪಟ್ಟು ಪ್ರಯತ್ನಿಸಿದರೆ ಕೃಷಿಯೋಗ್ಯವಾಗಬಹುದಿತ್ತು. ಕರಿಯಾ ಶ್ರಮಜೀವಿ. ಅವನಿಗೆ ಕಾಲಾವಕಾಶ ಕೊಟ್ಟರೆ ಅವನು ಕೈಗೆ ಸಿಕ್ಕನು ಎಂದು ಯೋಚಿಸಿ. ಅವರು ಅವನ ಧೈರ್ಯವನ್ನು ಕುಗ್ಗಿಸುತ್ತ, ''ಇದು ಬರಿ ಬಂಜರು ಭೂಮಿ, ಇದರ ಮೇಲೆ ಸಾಕಷ್ಟು ಶ್ರಮ ಪಡಬೇಕಾಗುತ್ತದೆ ಕರಿಯಾ !''ಎಂದರು.

''ಹೌದು ಬುದ್ಧಿ!! ಅದೇನೊ ಸರಿ. ನಾವು ಗಂಡಹೆಂಡಿರು ಜೀವದ ಹಂಗುದೊರೆದು ಶ್ರಮಿಸುತ್ತೇವೆ. ಈ ಭೂಮಿಯನ್ನು ಕೃಷಿಯೋಗ್ಯ ಮಾಡಿಯೇ ವಿಶ್ರಮಿಸಿಕೊಳ್ಳುತ್ತೇವೆ'' ಎಂದನು. ಕರಿಯಾನಿಗೆ ತನ್ನ ಮೇಲಿದ್ದ ಆತ್ಮವಿಶ್ವಾಸವನ್ನುಕಂಡು ಅವರ ಹಣೆಯ ಮೇಲೆ ಗೆರೆಗಳು ಮೂಡಿದುವು. ಮತ್ತು ಮನದಲ್ಲಿ, ''ನಾವು ನಿನಗೆ ಮಾಡಲು ಬಿಟ್ಟರಲ್ಲವೆ? ನೀನು ಮಾಡುವುದು? '' ಎಂದು ಅಂದು ಕೊಂಡರು. ಆದರೆ, ''ಹಾಂ !ಹಾಂ !! ಯಾಕಾಗಬಾರದು ಶ್ರಮ ದಿಂದ ಯಾವುದು ಸಾಧಿಸುವುದಿಲ್ಲ?'' ಎಂದು ತುಟಿಯಿಂದ ನುಡಿಯುತ್ತ ಸುತ್ತಮುತ್ತಲೂ ಪರಿಶೀಲಿಸಿದಂತೆ ಮಾಡಿ,

''ಕರಿಯಾ ! ನಿನ್ನ ಮನೆ ಎಲ್ಲಿದೆ?'' ಎಂದು

ಕೇಳಿದರು.

''ಅಲ್ಲಿ. ಆ ಗುಡಿಸಲು ಕಾಣುತ್ತದಲ್ಲ ಬುದ್ಧಿ! ಅದೇ''

''ಏನಂದಿ? ನೀನು ಇಂಥ ಗುಡಿಸಿಲಿನಲ್ಲಿರುವಿಯಾ?''

''ಹೌದು ಬುದ್ಧಿ! ಎಷ್ಟೋ ವರ್ಷಗಳಿಂದ ಈ ಗುಡಿಸಿಲಿನಲ್ಲಿಯೇ ಇರುತ್ತ ಬಂದಿರುವೆವು''

''ಎಷ್ಟೋ ವರ್ಷಗಳ ಮಾತು ಬೇರೆ. ಈಗ ನೀನು ಜಮೀನ್ದಾರನಾಗಿರುವೆ. ಒಳ್ಳೆಯ ಗಟ್ಟಿ ಮನೆಯನ್ನು ಏಕೆ ಕಟ್ಟಿಸಿಕೊಳ್ಳಬಾರದು?''

''ಭಗವಂತನ ಕೃಪೆ ಇದ್ದರೆ, ಬೆಳೆಯೂ ಸರಿಯಾಗಿ ಕೈಗೆ ಬಂದರೆ ಮನೆಯನ್ನು ಕಟ್ಟಿಸಿಕೊಳ್ಳಬಹುದು ಬುದ್ಧಿ!''

'' ಈ ಭಗವಂತ, ಭಗವಂತ ಎಂದು ಏನು ಪುನಃ ಪುನಃ ಹೇಳುತ್ತಿದ್ದೀಯೇ? ನಿನಗಿಂತಲೂ ನನಗೆ ಭಗವಂತ ಹೆಚ್ಚಿಗೆ ಗೊತ್ತು. ಪೂರ್ತಿ ವರ್ಷ ಮುಗಿದ ಮೇಲೆ ಬೆಳೆ ಕೈಗೆ ಅದು ಹೇಗೋ ಬಂದೀತು? ಅಲ್ಲಿಯವರೆಗೆ ನೀನು ಈ ಗುಡಿಸಿಲಿನಲ್ಲಿರುವುದು ನನಗೆ ಚೆನ್ನಾಗಿ ಕಾಣುವುದಿಲ್ಲ. ನಿನ್ನ ಶುಭ ಚಿಂತಕ ನೆಂದು ಈ ಮಾತನ್ನು ಹೇಳುತ್ತಿದ್ದೇನೆ. ಇಲ್ಲವಾದರೆ ಈ ಸಲಹೆ ಕೊಡುತ್ತ ತಿರುಗುವುದು ನನಗೇನು ಬೇಕಾಗಿದೆ? ನಿನಗೆ ನನ್ನ ಮೇಲೆ ವಿಶ್ವಾಸವಿದ್ದರೆ, ಸಂಜೆಗೆ ನನ್ನ ಮನೆಗೆ ಬಂದು ನನ್ನನ್ನು ಕಾಣು. ನನ್ನಲ್ಲಿ ಸ್ವಲ್ಪ ಹಣ ಉಳಿದುಕೊಂಡಿದೆ ಅದನ್ನು ನಾನು ನಿನಗೆ ಸಾಲ ಕೊಡುವೆ. ನಿನಗೆ ಅನುಕೂಲವಾದಾಗ ಹಣ ವಾಪಸ್ಸು ಕೊಡು. ಹಾಂ! ನೋಡು!! ನಿನ್ನಿಂದ ನಾನು ಬಡ್ಡಿ ತೆಗೆದುಕೊಳ್ಳುವುದಿಲ್ಲ.''

''ಹೀಗೆಂದು ಹೇಳಿ ಅವರು ತಿರುಗಿ ಬಂದರು. ಬರುತ್ತಿರುವಾಗ ಅವರ ಮುಖದ ಮೇಲೆ ಸಮಾಧಾನದ ಕಳೆಯಿತ್ತು. ತುಟಿಗಳ ಮೇಲೆ ನಂಜಿನ ಮುಗುಳು ನಗೆಯಿತ್ತು. ಬಡ್ಡಿ ತೆಗೆದುಕೊಳ್ಳುವುದಿಲ್ಲೆಂಬ ಮಾತನ್ನು ಕರಿಯನ ಹೆಂಡತಿಯ ಕಿವಿಗೆ ಚೆನ್ನಾಗಿ ಬೀಳುವಂತೆ ಬೇಕೆಂದೇ ಗಟ್ಟದನಿಯಲ್ಲಿ ಅವರು ಹೇಳಿದ್ದರು. ಹೆಂಗಸರ ದುರ್ಬಲತೆಯನ್ನು ಅವರು ಚೆನ್ನಾಗಿ ಅರಿತಿದ್ದರು.

ಕರಿಯಾನ ಮನಸ್ಸಿನಲ್ಲಿ ಆತಂಕಗಳೇಳತೊಡಗಿದವು. ಲಕ್ಷ್ಮೀನಾರಾಯಣರು ಅಕಸ್ಮಾತ್ತಾಗಿ ಇವನನ್ನು ಕಾಣಲು ಬಂದುದು, ಬಡ್ಡಿಇಲ್ಲದೆ ಸಾಲ ಕೊಡುವ ಮಾತನಾಡಿದುದು , ಮೊದಲಾದವುಗಳು ಅವನಿಗೆ ಸ್ವಲ್ಪ ವಿಚಿತ್ರವೇ ಅನಿಸಿದುವು. ಇದರಲ್ಲಿ ಕಿಂಚಿತ್ ಆದರೂ ಏನಾದರು ಆತಂಕ ಅವಶ್ಯ ಇದ್ದೇ ಇದೆ. ಅವರ ಪಟ್ಟು, ವರಸೆಗಳು ಅವನಿಗೆ ಚೆನ್ನಾಗಿ ಗೊತ್ತಿದ್ದುವು. ಬಹಳ ಕಷ್ಟಪಟ್ಟು ಅವರ ಹಿಡಿತದ ಕೊಂಡಿಯಿಂದ ತನ್ನನ್ನು ಬಿಡಿಸಿಕೊಂಡು ಸ್ವತಂತ್ರನಾಗಿದ್ದ. ಸಾಲ ತೆಗೆದುಕೊಂಡ ಮೇಲೆ ಮತ್ತೆ ಅವರ ಕಪಿಮುಷ್ಟಿಯಲ್ಲಿ ಸಿಕ್ಕಿ ಹಾಕಿಕೊಂಡು ಇಡೀ ಜೀವನ ಗುಲಾಮಗಿರಿಯಲ್ಲಿಯೇ ಕಳೆಯಬೇಕಾಗುವುದು ಎಂಬುದು ಅವನಿಗೆ ಗೊತ್ತಿದ್ದಿತು. ಅದು ಏನೇ ಆಗಲಿ ಸಾಲ ತೆಗೆದುಕೊಂಡು ನಾನು ಮತ್ತೆ ಅವರ ಬಳಿಯಲ್ಲಿ ಸಿಕ್ಕಿಕೊಳ್ಳುವ ಮೂರ್ಖತನ ಮಾಡುವುದಿಲ್ಲೆಂದು ನಿಶ್ಚಯಿಸಿಕೊಂಡನು.

ಆದರೆ , ಲಕ್ಷ್ಮೀನಾರಾಯಣರ ಪಟ್ಟು ಯಶಸ್ವಿಯಾಗಿತ್ತು. ಅವರ ನಿರೀಕ್ಷೆಯಂತೆ ಬಡ್ಡಿ ಇರದೆ ಸಾಲ ಕೊಡುವ ಮಾತು ಕರಿಯಾನ ಮಡದಿಯ ಕಿವಿಗೆ ರಸದೌತಣವಾಗಿ ಪರಿಣಮಿಸಿತ್ತು. ಅವಳಾಗಲೇ ಕನಸು ಕಟ್ಟ ತೊಡಗಿದ್ದಳು. ಅವಳು, ''ಬುದ್ಧಿಯವರು ಏಕೆ ಬಂದಿದ್ದರು?'' ಎಂದು ಕೇಳಿದಾಗ, ಕರಿಯಾ

ಎಲ್ಲ ಮಾತುಗಳನ್ನೂ ಇದ್ದಕ್ಕಿದ್ದಹಾಗೆ ವಿವರಿಸಿ ಹೇಳಿದ. ಹಾಗೂ ತಾನು ಸಾಲ ಎಂದೂ ತೆಗೆದುಕೊಳ್ಳುವುದಿಲ್ಲೆಂಬ ತನ್ನ ನಿರ್ಧಾರ ವನ್ನೂ ತಿಳಿಸಿದ. ಸ್ವಲ್ಪ ಸಮಯದವರೆಗೆ ಇಬ್ಬರೂ ಮೌನವಾಗಿದ್ದರು. ಆಗ ಮಾತಿಗಿಂತ ಮೌನವೇ ಮಾತಾಡುತಿತ್ತು. ಆ ಮೌನವನ್ನು ಮುರಿದು ಅವನ ಹೆಂಡತಿ, ''ಬಡ್ಡಿ ಇರದ ಸಾಲವನ್ನು ತೆಗೆದುಕೊಳ್ಳುವುದರಲ್ಲಿ ಆಕ್ಷೇಪ ವೇನಿದೆ? ಅವರೇ ಸ್ವತಃ ಮುಂದುವರೆದು ಹೇಳಿದ್ದಾರೆ. ನೀನು ಹೋಗದಿದ್ದಲ್ಲಿ ಮೂರು ಎಕರೆ ಭೂಮಿ ಸಿಕ್ಕಾಕ್ಷಣ ತನ್ನಷ್ಟಕ್ಕೆ ತಾನು ಜಮೀನ್ದಾರನೆಂದೇ ತಿಳಿದುಕೊಂಡಿದ್ದಾನೆ ಅಂದು ಕೊಂಡಾರು. ನಾವು ಸಾಲ ತೆಗೆದು ಕೊಂಡರೆ ಅವರ ಸ್ವಾಭಿಮಾನಕ್ಕೂ ಸಮಾಧಾನ ವಾಗುವುದು. ನಮ್ಮ ಅವಶ್ಯಕತೆಯೂ ಪೂರೈಸು ವುದು. ನಾವೇನು ಇಡೀ ಜೀವನ ವನ್ನು ಈ ಗುಡಿಸಿಲಿನಲ್ಲಿಯೇ ಕಳೆಯುವುದೇ? ಮಳೆ ಯಲ್ಲಂತೂ ಇದರ ಮಾಳಿಗೆ ಇಪ್ಪತ್ನಾಲ್ಕು ಗಂಟೆ ಸೋರುತ್ತಾಲೇ ಇರುತ್ತದೆ. ನನಗಂತೂ ಬೇಜಾರಾಗಿ ಹೋಗಿದೆ. ನದಿಯಲ್ಲಿದ್ದು ಕೊಂಡು ಮೊಸಳೆಯೊಡನೆ ವೈರ ಕಟ್ಟಿಕೊಳ್ಳು ವುದು ಜಾಣತನವಲ್ಲೆಂದು ನನಗನಿಸುತ್ತದೆ. ಮುಂದೆ ನಿಮ್ಮ ಮರ್ಜಿ'' ಎಂದು ನುಡಿದಳು.

ಕರಿಯಾ ಅಲ್ಪಸ್ವಲ್ಪ ಓದಿ ಬರೆದ ತನ್ನ ಹೆಂಡತಿಯ ಮಾತನ್ನು ಕೇಳಿ, ಶಾಂತ ಚಿತ್ತನಾಗಿ ವಿಚಾರ ಮಾಡಿದ. ಅವಳ ಮಾತಿನಲ್ಲಿ ಸ್ವಲ್ಪ ತಥ್ಯ ಇದೆಯೆಂದು ಅವನಿಗನಿಸಿತು. ನದಿ ಯಲ್ಲಿದ್ದುಕೊಂಡು ಮೊಸಳೆಯೊಡನೆ ವೈರವೆ? ಬೇಡಪ್ಪ ಬೇಡ. ಇದಕ್ಕಿಂತಲೂ ಹೆಚ್ಚಿನ ಮೂರ್ಖತನ ಇನ್ನೆಲ್ಲಿ ಬಂತು? ಒಳ್ಳೆಯದು ಕೆಟ್ಟುದರಲ್ಲಿ ಅವರೇ ಅಲ್ಲವೇ ತಮಗೆ ನೆರವಾಗುವವರು. ಅವರೊಡನೆ ಏನು ಪೈಪೋಟಿ? ಎಂದುಕೊಂಡು ಹೆಂಡತಿ ಎದುರು ಶಸ್ತ್ರವನ್ನಿಟ್ಟ. ಸೂರ್ಯ ತನ್ನ ತಾಯಿಯ ಮಡಿಲು ಸೇರುತ್ತಿರುವಾಗ , ಕರಿಯಾ ತನ್ನ ಹಳೆಯ ಒಡೆಯನ ಮನೆಯತ್ತ ಸಾಗಿದ.

ಲಕ್ಷ್ಮೀನಾರಾಯಣರು ಪ್ರಪಂಚವನ್ನು ಕಂಡಿದ್ದವರು. ಕರಿಯಾ ಬರುವ ದಾರಿಯನ್ನು ತಾವು ತಾಳ್ಮೆಗೆಟ್ಟು ಕಾಯುತ್ತಿದ್ದಾರೆಂದು ತೋರುವುದು ಅವರಿಗೆ ಬೇಕಾಗಿರಲಿಲ್ಲ. ಅದಕ್ಕೇ ಅವರು ಹೊರಗೆ ಪಡಸಾಲೆಯಲ್ಲಿ ಕುಳ್ಳಿರದೆ ತಮ್ಮ ಕೋಣೆಯಲ್ಲಿ ಬಿರಾಜಮಾನ ರಾಗಿದ್ದರು. ಕರಿಯಾ ಬರುತ್ತಿದ್ದಾನೆಂಬ ಸುದ್ದಿ ತಿಳಿದಾಗ ಅವರ ಮನಸ್ಸು ಸಂತೋಷದಿಂದ ಹಿರಿಹಿರಿ ಹಿಗ್ಗಿತು. ಆದರೆ ಅವರು ತಮ್ಮ ಮುಖದ ಮೇಲೆ ಅದರ ಛಾಯೆಯನ್ನು ಕಿಂಚಿತ್ತೂ ತೋರ್ಪಡಿಸಲಿಲ್ಲ. ಸ್ವಲ್ಪ ಸಮಯದ ಅನಂತರ ಪಡಸಾಲೆಗೆ ಬಂದರು. ಕರಿಯಾ ನಮಸ್ಕರಿಸುತ್ತಲೂ ತಲೆಯಲ್ಲಾಡಿಸಿಯೇ ಉತ್ತರಿಸಿ, ಅವನನ್ನು ಕೈ ಹಿಡಿದು ಕೂರಿಸಿದರು. ಈ ಸುವರ್ಣಾವಕಾಶವನ್ನು ಅವರು ಹಾಗೆಯೇ ಕಳೆದುಕೊಳ್ಳಲು ಬಯಸಿರಲಿಲ್ಲ. ಅದಕ್ಕಾಗಿ ಒಂದು ಸಂಕ್ಷಿಪ್ತ ಭಾವೋದ್ರಿಕ್ತ ಭಾಷಣವನ್ನೇ ಮಾಡಿದರು.

''ಕರಿಯಾ! ನೀನು ಹಿಂದೆ ನಮ್ಮ ನಂಬುಗೆಯ ಆಳಾಗಿ ಇದ್ದವನು. ಈಗ ಆ ಸಂಬಂಧವಿರದಿದ್ದರೂ ನಾನು ನಿನ್ನ ಶುಭ ಚಿಂತಕನಾಗಿರುವ ದೃಷ್ಟಿಯಿಂದ ನಿನ್ನ ವಿಷಯಕ್ಕೆ ಯೋಚಿಸಲು, ನಿನ್ನ ಪ್ರಗತಿಯ ಮಾರ್ಗ ಸುಗಮವಾಗಿಸಲು ನನಗೆ ಅಧಿಕಾರವಿದೆ. ನಿನ್ನ ಗುಡಿಸಲ ನೋಡಿದ ಮೇಲೆ ನಿನಗಾಗಿ ನಾನು ಏನೂ ಮಾಡಲಿಲ್ಲೆಂದು ನಾಚಿಕೆಯಾಗುತ್ತದೆ. ನನ್ನ ಆತ್ಮ ನನ್ನನ್ನು ಹಿಂಡುತ್ತಿದೆ. ಅದರಿಂದಾಗಿ ನಾನು ನಿನಗೆ ಸಾಲ ಕೊಡುವ ಮಾತನ್ನು

ಆಡಿದೆ. ನೀನು ನನ್ನಿಂದ ಸಾಲ ಪಡೆದರೆ ನನ್ನ ಮನಸ್ಸಿಗೆ ಶಾಂತಿಯಾಗುವುದು. ನಾನೂ ನಿನಗೆ ಕೃತಜ್ಞನಾಗುವೆ'' ಎನ್ನುತ್ತ ತಮ್ಮ ಕಣ್ಣುಗಳನ್ನು ಒರಿಸಿಕೊಂಡರು.

ಇದನ್ನು ಕಂಡು ಕರಿಯಾನ ಕಣ್ಣುಗಳಲ್ಲಿ ನೀರು ತುಂಬಿದವು. ಅವನೇನೋ ಹೇಳಬೇಕೆಂದಿದ್ದ. ಆದರೆ ಅವನಿಂದ ಹೇಳುವುದಾಗಲಿಲ್ಲ. ಅವನ ಸ್ಥಿತಿಯನ್ನು ಕಂಡು ಲಕ್ಷ್ಮೀನಾರಾಯಣ ಭಟ್ಟರು ತನ್ನ ಬಾಣ ಸರಿಯಾಗಿ ಗುರಿ ಮುಟ್ಟಿದೆಯೆಂದುಕೊಂಡರು. ಅವರು ಅವನ ಬೆನ್ನು ತಟ್ಟಿ, ಗಣಪತಿಯನ್ನು ಕರೆದರು. ಗಣಪತಿ ಈ ಕರೆಯ ನಿರೀಕ್ಷೆಯಲ್ಲೇ ಇದ್ದ. ಕೂಡಲೇ ಹೊರಗೆ ಓಡಿ ಬಂದ, ಅವನಿಗೆ, ಅವರು ಹಣವನ್ನು ತರಲು ಹೇಳಿದರು. ಅವನು, ತಂದ ರೂಪಾಯಿಗಳನ್ನು ಕರಿಯಾನ ಹಸ್ತದಲ್ಲಿಡುತ್ತ ''ಈಗ ನನ್ನ ಮನಸ್ಸಿನ ಭಾರ ಇಳಿಯಿತು. ಎಣಿಸಿಕೊ. ಇಪ್ಪತ್ತು ಸಾವಿರ ಇದೆ'' ಎಂದರು. ಒಟ್ಟಿಗೇ ಇಷ್ಟು ರೂಪಾಯಿಗಳನ್ನು ಕರಿಯಾ ಎಂದೂ ಮುಟ್ಟಿರಲೂ ಇಲ್ಲ. ಅವನ ಹೃದಯ ಜೋರಾಗಿ ಬಡಿದುಕೊಳ್ಳುತ್ತಿತ್ತು. ಕಣ್ಣುಗಳು ಶ್ರದ್ಧೆಯ ಭಾರದಿಂದ ಕೆಳಗೆ ಬಾಗಿದ್ದುವು.

ರೂಪಾಯಿಗಳನ್ನು ತೆಗೆದುಕೊಂಡು ಅವನು ಮನೆಗೆ ಮರಳಿದಾಗ ಅವನ ಹೆಂಡತಿ ಕಾತರತೆಯಿಂದ ಅವನ ದಾರಿಯನ್ನು ಕಾಯುತ್ತಿದ್ದಳು. ಅವನು ಒಳಗೆ ಬರುತ್ತಲೂ ಪ್ರಶ್ನೆಗಳ ಸುರಿಮಳೆಯನ್ನೇ ಮಾಡಿದಳು. ಅವನ ಸ್ಥಿತಿ ಇನ್ನೂ ಸ್ತಿಮಿತಕ್ಕೆ ಬಂದಿರಲಿಲ್ಲ. ಸಂತೋಷದ ಭರದಲ್ಲಿ ಅವನ ನಾಲಿಗೆ ಅವನ ಚಿತ್ತದ ಸ್ವಾಧೀನದಲ್ಲಿರಲಿಲ್ಲ. ಮೊದಲನೆಯದಾಗಿ ಯಾವ ಷರತ್ತೂ ಇಲ್ಲದೆ, ಬಡ್ಡಿಯೂ ಇಲ್ಲದೆ ರೂಪಾಯಿಗಳು ಸಿಕ್ಕಿದ್ದು, ಎರಡನೆಯ ಮುಖ್ಯ ಮಾತೆಂದರೆ, ಬುದ್ಧಿಯವರು ಕಾಗದದ ಮೇಲೆ ಅವನ ಹೆಬ್ಬೆರಳಿನ ಗುರುತನ್ನೂ ಹಾಕಿಸಿಕೊಳ್ಳದಿದ್ದುದು. ಇಂಥ ದೇವರ ಸಮಾನ ವ್ಯಕ್ತಿಯ ಬಗ್ಗೆ ಸಂಶಯ ಪಟ್ಟುಕೊಂಡುದಕ್ಕೆ ಮನದಲ್ಲೇ ತನ್ನನ್ನು ತಾನೇ ಹಳಿದುಕೊಂಡ. ಹೆಂಡತಿ ಅವನ ವಿಷಯವೆಲ್ಲವನ್ನೂ ಕೇಳಿ, ''ಎಲ್ಲಾ ದೇವರ ಲೀಲೆ! ದುಷ್ಟರು ಶಿಷ್ಟರಾಗುವುದು, ಶಿಷ್ಟರು ದುಷ್ಟರಾಗುವುದಕ್ಕೆ ತಡವಾಗುವುದಿಲ್ಲ'' ಎಂದಳು.

ದಿವಸಗಳು ಉರುಳುತ್ತ ಹೋದುವು. ಕರಿಯಾ ಮತ್ತು ಅವನ ಹೆಂಡತಿ ಹಗಲಿರುಳು ಶ್ರಮವಹಿಸಿ ದುಡಿದರು. ತಮ್ಮ ಭೂಮಿಯ ಒಂದು ಅಂಚಿನಲ್ಲಿ ಗಟ್ಟಿಯಾದ ಮನೆಯನ್ನು ಕಟ್ಟಿಸತೊಡಗಿದರು. ಮಳೆಗಾಲ ಪ್ರಾರಂಭವಾಗುವ ಮೊದಲೇ ಮನೆಯ ಕಟ್ಟಡ ಮುಗಿಯಲೆಂದು, ಕೆಲವು ಹೆಚ್ಚಿನ ಕೂಲಿ ಕೆಲಸದವರನ್ನೂ ನಿಯಮಿಸಿಕೊಂಡರು. ಮನೆಯ ಗೋಡೆಗಳು ಪೂರ್ತಿ ಎದ್ದುವು. ಇನ್ನೂ ಮಾಳಿಗೆ, ಬಾಗಿಲು, ಕಿಟಕಿಗಳ ಕೆಲಸ ಉಳಿದಿತ್ತು. ತೆಗೆದುಕೊಂಡಿದ್ದ ರೂಪಾಯಿಗಳೆಲ್ಲವು ಖರ್ಚಾಗಿ ಮುಗಿದು ಹೋದವು. ಮತ್ತೆ ಹತ್ತು ಸಾವಿರದ ವ್ಯವಸ್ಥೆಯಾಗಿದ್ದರೆ ಮನೆಯ ಕಟ್ಟಡ ಪೂರ್ತಿಯಾಗಿಬಿಡುತ್ತಿತ್ತು. ಆದರೆ ಮತ್ತೆ ಇಷ್ಟು ಹಣ ಬರುವುದು ಎಲ್ಲಿಂದ? ಗಂಡ ಹೆಂಡಿರು ಈಗೇನು ಮಾಡುವುದೆಂದು ತಲೆಹಿಡಿದುಕೊಂಡು ಚಿಂತಿಸತೊಡಗಿದರು. ಮಾಳಿಗೆಯ ಕೆಲಸ ಪೂರ್ಣವಾಗದಿದ್ದಲ್ಲಿ ಗೋಡೆಗಳೆಲ್ಲ ಮಳೆಗಾಲದಲ್ಲಿ ಕುಸಿದು ಬೀಳುವವು. ಮಾಡಿದ ಕೆಲಸವೆಲ್ಲ ನೀರಿನಲ್ಲಿ ತೊಳೆದುಕೊಂಡು ಹೋಗುವುದು. ಕೊನೆಗೆ ಬುದ್ಧಿಯವರ ಹತ್ತಿರ ಇನ್ನಿಷ್ಟು ಸಾಲ ಕೇಳುವುದನ್ನು ಬಿಟ್ಟರೆ ಗತ್ಯಂತರ ಎಲ್ಲೆಂದು ನಿರ್ಧರಿಸಿದರು. ಬುದ್ಧಿಯವರು

''ಇಲ್ಲ'' ಎನ್ನುವುದಿಲ್ಲೆಂಬ ಬಗ್ಗೆ ಅವರಿಗೆ ಸಂಪೂರ್ಣ ವಿಶ್ವಾಸವಿತ್ತು.

ಕರಿಯಾನ ದುರ್ದಶೆಯನ್ನು ಕೇಳಿ ಲಕ್ಷ್ಮಿನಾರಾಯಣರು ವಿಷಾದಿಸಿದರು. ಅವರ ಹತ್ತಿರ ಈಗ ಸಧ್ಯ ಹಣವಿರಲಿಲ್ಲ. ಅದಕ್ಕಾಗಿ ಕ್ಷಮೆ ಯಾಚಿಸಿದರು. ಆದರೆ ಇಷ್ಟು ಮಾತ್ರ ಹೇಳುವುದನ್ನು ಮರೆಯಲಿಲ್ಲ. ''ನನ್ನ ಹತ್ತಿರ ತಟ್ಟು ತಡಿಕೆಗಳು ಬಿದ್ದಿವೆ. ಬೇಕಾದರೆ ತೆಗೆದುಕೊಂಡು ಹೋಗಬಹುದು. ಇನ್ನೂ ಒಂದು ಸಲಹೆಯೆಂದರೆ, ಮಳೆಗಾಲವೂ ಪ್ರಾರಂಭವಾಗಿದೆ. ಇನ್ನೇನು ಮಳೆಯೂ ಬೀಳಬಹುದು. ರೂಪಾಯಿಗಳ ವ್ಯವಸ್ಥೆ ಮಾಡುವುದು ಇಷ್ಟು ಬೇಗ ಸಾಧ್ಯವಾಗಲಿಕ್ಕಿಲ್ಲ. ಹಳ್ಳಿಯ ಮನೆ ಮಾಡುವುದಕ್ಕೆ ಯಾವನು ಮರ ಖರೀದಿಸುತ್ತಾನೆ? ಒಬ್ಬಿಬ್ಬರು ಕೆಲಸದಾಳು ಗಳನ್ನು ಕರೆದುಕೊಂಡು ಹೋಗು. ಹತ್ತಿರ ವಿರುವ ಕಾಡಿನಲ್ಲಿ ನಾಲ್ಕಾರು ಮರಗಳನ್ನು ಕುಯ್ದುಕೊ. ನಿನ್ನ ಅವಶ್ಯಕತೆ ಪೂರೈಸುವುದು. ಇನ್ನುಳಿಯಿತು, ಫಾರೆಸ್ಟ ಗಾರ್ಡರ ವಿಚಾರ. ನಾನು ಅದನ್ನು ಸಂಭಾಳಿಸಿಕೊಳ್ಳುವೆ'' ಎಂದು ಹೇಳಿದರು. ಅವರ ಅಭಿಪ್ರಾಯ ಕರಿಯಾನ ಮನಸ್ಸಿಗೆ ಹಿಡಿಸಿತು. ಅವನು ಕೃತಜ್ಞತಾ ಭಾವದಿಂದ ಅವರನ್ನು ನೋಡಿದ. ಪಾದ ಮುಟ್ಟಿ ನಮಸ್ಕರಿಸಿ ಅವರ ಆಶೀರ್ವಾದ ಪಡೆದು ಮನೆಗೆ ಮರಳಿದ.

ಲಕ್ಷ್ಮೀನಾರಾಯಣರ ಹಂಚಿಕೆ ಸುಮಾರಾಗಿ ಯಶಸ್ವಿಯಾಗಿ ಬಿಟ್ಟಿತ್ತು. ಶವಪೆಟ್ಟಿಗೆಗೆ ಕೊನೆಯ ಮೊಳೆ ಹೊಡೆಯುವುದೊಂದು ಬಾಕಿ ಇತ್ತು. ಆ ಗಳಿಗೆಯನ್ನು ಅತ್ಯಂತ ಕಾತರತೆ ಯಿಂದ ಕಾಯುತ್ತಿದ್ದರು.

ಕರಿಯಾನ ಪ್ರತಿಯೊಂದು ಚಲನವಲನ ವನ್ನು ಚಾಚೂ ತಪ್ಪದೆ ಎಚ್ಚರದಿಂದ ಗಮನಿಸಿ ಅದನ್ನು ತಮಗೆ ತಿಳಿಸಲು ಗಣಪತಿಯನ್ನು ಅವನ ಹಿಂದೆಯೇ ಬಿಟ್ಟಿದ್ದರು. ಸರ್ಕಾರದ ಅರಣ್ಯದಲ್ಲಿಯ ಮರಗಳನ್ನು ಕಡಿಸಿ ಕರಿಯಾನ ಗುಡಿಸಿಲಿಗೆ ಹಲಗೆ ಚೌಕಟ್ಟು ಮೊದಲಾದವು ಗಳು ಬಂದು ಬೀಳುತ್ತಲು , ಗಣಪತಿ ತಕ್ಷಣ ತಮ್ಮ ತಂದೆಗೆ ವಿಷಯ ತಿಳಿಸಿದ. ಲಕ್ಷ್ಮೀ ನಾರಾಯಣರು ಒಂದು ಕ್ಷಣವನ್ನೂ ವ್ಯರ್ಥ ಮಾಡಿಕೊಳ್ಳಲಿಲ್ಲ. ಕೂಡಲೆ, ''ಫಾರೆಸ್ಟ ಆಂಟಿ ಸ್ಮಗಲಿಂಗ್ ಸ್ಕ್ವಾಡಿನೊಡನೆ '' ದೂರವಾಣಿ ಯಿಂದ ಸಂಪರ್ಕಿಸಿ, ಕರಿಯಾನ ವಿರುದ್ಧ ದೂರು ನಮೂದಿಸಿದರು. ಮತ್ತು ಅವರು ಕೂಡಲೇ ಬಂದರೆ ಅವನನ್ನು ಮಾಲು ಸಹಿತ ಪ್ರತ್ಯಕ್ಷ ಹಿಡಿಯಬಹುದೆಂದೂ ತಿಳಿಸಿದರು. ಸ್ಕ್ವಾಡಿ ನವರಿಗೆ ಹುಡುಕುವುದರಲ್ಲಿ ಯಾವ ತೊಂದರೆಯೂ ಆಗಬಾರದೆಂದೂ ಕರಿಯಾನ ಗುಡುಸಲಿನ ಚಕ್ಕುಬಂದಿಯನ್ನು ಅವರಿಗೆ ಸರಿಯಾಗಿ ತಿಳಿಸಿದರು.

ಸ್ಕ್ವಾಡು ತಕ್ಷಣ ಚಲಿಸಿತು.

ಕರಿಯಾ ತನ್ನ ಗುಡಿಸಲಿನಲ್ಲಿ ಭವಿಷ್ಯದ ಸುಂದರ ಸ್ವಪ್ನವನ್ನು ಕಾಣುತ್ತ ಇನ್ನೇನು ನಿದ್ರಾಂಗನೆಯನ್ನು ಆಲಂಗಿಸಬೇಕು, ಅಷ್ಟರಲ್ಲಿ ಯಾರೋ ಬಾಗಿಲು ಬಡೆಯುವ ಸಪ್ಪಳ ವಾಯಿತು. ಇಷ್ಟು ರಾತ್ರಿಯಲ್ಲಿ ಯಾರು ಬರುತ್ತಾರೆ? ಎಂದು ಯೋಚಿಸುತ್ತ, ಕಡ್ಡಿಗೀರಿ ಕಂದೀಲು ಬೆಳಗಿಸಿದ. ಬಾಗಿಲಿನ ಫಡಕು ತೆರೆಯುತ್ತಲು ಟಾರ್ಚಿನ ತೀಕ್ಷ್ಣ ಬೆಳಕಿನಿಂದ ಅವನ ಕಣ್ಣುಗಳು ಚಿವುಗಣ್ಣಾದುವು. ಅವನು ಕಣ್ಣು ತಿಕ್ಕುತ್ತಾ ನೋಡತೊಡಗಿದ. ಖಾಕಿ ಸಮವಸ್ತ್ರ ಧರಿಸಿದ ನವತರುಣರು ಅವನೆದುರಿಗೆ ನಿಂತಿದ್ದರು. ಅವರನ್ನು ನೋಡುತ್ತಲು ಅವನ ಜಂಘಾಬಲವೇ ಉಡುಗಿತು. ಕಕ್ಕಾವಿಕ್ಕಿಯಾಗಿ ನಿಂತುಕೊಂಡ. ಒಬ್ಬ ಸಿಪಾಯಿ ಮುಂದು ವರೆದು, '' ಕರಿಯಾ ನೀನೇ ಅಲ್ಲವೆ?'' ಎಂದು

ಕೇಳಿದ. ಅವನು, ''ಹೌದೆಂದು'' ತಲೆತಗ್ಗಿಸಿ ಒಪ್ಪಿಕೊಂಡ. ಆಗ ಸಿಪಾಯಿಗಳು ''ನಿನ್ನ ಗುಡಿಸಲಿನ ತಲಾಷಿ ತೆಗೆದುಕೊಳ್ಳಬೇಕಾಗಿದೆ'' ಎಂದು ಉತ್ತರಕ್ಕೂ ಕಾಯದೆ, ಅವನನ್ನು ಬದಿಗೊತ್ತಿ ಸ್ಕ್ವಾಡಿನ ಸಿಬ್ಬಂದಿಯವರೊಂದಿಗೆ ಗುಡಿಸಿಲಿನ ಒಳಗೆ ನುಗ್ಗಿ ಶೋಧನೆಯನ್ನು ನಡೆಸಿದರು. ಕೆಲವು ನಿಮಿಷಗಳೂ ಕಳೆದಿರಲಿಲ್ಲ. ಕುಯ್ದಿಟ್ಟ ಮರವನ್ನು ವಶಪಡಿಸಿಕೊಂಡರು. ಯಾವ ತಡೆಯೂ ಇಲ್ಲದೆ ಕರಿಯಾನನ್ನು ದಸ್ತಗಿರಿ ಮಾಡಿದರು.

ಅವನನ್ನು ದಸ್ತಗಿರಿ ಮಾಡಿದ ಸಮಾಚಾರ ಕಾಡ್ಗಿಚ್ಚಿನಂತೆ ಊರಲ್ಲೆಲ್ಲ ಹರಡಿತು. ರಾತ್ರಿಯ ಹನ್ನೊಂದು ಗಂಟೆಯಾಗಿದ್ದರೂ ಜನ ಒಬ್ಬೊಬ್ಬರಾಗಿ ಬಂದು ಸೇರ ತೊಡಗಿದರು. ಅವರಲ್ಲಿ ಗಣಪತಿಯೂ ಸೇರಿದ್ದ. ಅವನು ಅಪರಾಧದ ಸ್ಥಳದಲ್ಲಿ ನಡೆಯುವ ಚಲನವಲನವನ್ನು ಮೌನವಾಗಿ ಅವಲೋಕಿಸುತ್ತಿದ್ದ. ಸ್ಕ್ವಾಡಿನ ಅಧಿಕಾರಿ ತನ್ನ ಅಧೀನ ಕಾರ್ಯಕರ್ತರಿಗೆ ಲಿಖಿತ ವ್ಯವಹಾರ ಪೂರೈಸಲು ಹೇಳಿ ಒಂದು ಮೂಲೆಯಲ್ಲಿ ನಿಂತು ಸಿಗರೇಟು ಹೊತ್ತಿಸಿದ. ಅಧಿಕಾರಿಯೊಬ್ಬರೇ ನಿಂತಿರುವ ಆ ಅವಕಾಶದ ಲಾಭ ಪಡೆದು ಗಣಪತಿ ಅವರ ಹತ್ತಿರ ಬಂದು, ''ಕೊನೆಗೂ ತಾವು ಅವನನ್ನು ಬಂಧಿಸೇ ಬಿಟ್ಟಿರಿ. ತನ್ನ ಕೂದಲನ್ನೂ ಯಾರೂ ಕೊಂಕಿಸುವುದಿಲ್ಲೆಂದು ಬಹಳ ಜಂಭ ಕೊಚ್ಚಿಕೊಳ್ಳುತ್ತಿದ್ದ. ತಾವು ಪ್ರಾಮಾಣಿಕರು! ಕರ್ತವ್ಯದಕ್ಷರು ಆದ ಅಧಿಕಾರಿಗಳು ಅದರಿಂದಾಗಿ ಅವನ ಆಟ ಏನೂ ನಡೆಯಲಿಲ್ಲ. ಅದೆಷ್ಟೋ ಜನ ಅವನನ್ನು ಮಾಲು ಸಹಿತ ಹಿಡಿದಿದ್ದರೂ ಕೂಡಾ ಅವನನ್ನು ಬಿಟ್ಟು ಬಿಟ್ಟಿದ್ದರು.. ತಾವು ಅವನಿಗೆ ಯಾವ ದಯವನ್ನೂ ತೋರಿಸಬೇಡಿ. ದಯ ತೋರಿಸಿದರೆ ಇಡಿ ಅರಣ್ಯವೇ ಸ್ವಚ್ಚವಾಗಿ ಹೋಗುವುದರಲ್ಲಿ ತಡ ಹಿಡಿಯುವುದಿಲ್ಲ'' ಎಂದು ಮೆತ್ತಗೆ ಉಸಿರಿದ. ಅಧಿಕಾರಿಗಳು ತಮ್ಮ ಹೊಗಳಿಕೆಯನ್ನು ಕೇಳಿ ಇವನ ಮಾತಿನಲ್ಲಿ ಅಲ್ಪಸ್ವಲ್ಪ ಸತ್ಯ ಇದೆ ಎಂದುಕೊಂಡರು. ಅದರಿಂದಾಗಿ ಕರಿಯಾನಿಗೆ ಯಾವ ರೀತಿಯ ರಿಯಾಯತಿಯನ್ನೂ ತೋರಿಸುವುದಿಲ್ಲೆಂದು ಗಣಪತಿಗೆ ಮನವರಿಕೆ ಮಾಡಿ ಕೊಟ್ಟರು. ಅಧಿಕಾರಗಳ ಆಶ್ವಾಸನೆ ಸಿಕ್ಕುತ್ತಲು ಗಣಪತಿ ಮೆಲ್ಲಗೆ ಅಲ್ಲಿಂದ ನುಸುಳಿಕೊಂಡು ನೇರ ಮನೆಗೆ ಬಂದು, ಎಲ್ಲ ವಿಷಯವನ್ನೂ ಸಾದ್ಯಂತವಾಗಿ ತನ್ನ ಅಪ್ಪಾಜಿ ಎದುರು ವಿವರಿಸಿದ. ಮಗನ ಚಾಕಚಕ್ಯತೆ ಕಂಡು ಅವರಿಗೆ ಸಂತೋಷವಾಯಿತು. ಅವನು ಬಹು ಬೇಗ ಬದುಕುವ ಕಲೆ ಸಾಧಿಸಿಕೊಳ್ಳುವನೆಂಬ ವಿಶ್ವಾಸ ಅವರಿಗೆ ಮೂಡಿತು.

ಲಕ್ಷ್ಮೀನಾರಾಯಣರು ತುಂಬಾ ಜಾಗರೂಕತೆಯಿಂದಿದ್ದರು. ಅವರ ಬುದ್ಧಿ ಚುರುಕಾಗಿ ಕೆಲಸ ಮಾಡತೊಡಗಿತು. ರುಜುಪಡೆಯ ಬೇಕಾದ ಷರತ್ತುಗಳು, ಸ್ಟಾಂಪ್ ಪೇಪರ್ ಮತ್ತು ಇತರ ದಸ್ತಾವೇಜ ಕಾಗದಗಳನ್ನು ಮೇಜಿನ ಮೇಲೆ ಓರಣವಾಗಿರಿಸಿದರು. ಸಕಾಲಕ್ಕೆ ಅವುಗಳನ್ನು ಹುಡುಕುತ್ತ ಕೂಡಬಾರದೆಂದು ಅವರ ಮುಂದಾಲೋಚನೆ. ಗಣಪತಿಗೆ ಯಾರಾದರು ಬಂದರೆ ತಮಗೆ ಕೂಡಲೇ ತಿಳಿಸಲು ''ತಾಕೀದು ಮಾಡಿದರು. ತಮ್ಮ ಮಂಚದ ಮೇಲೆ ದಿಂಬಟ್ಟುಕೊಂಡು ವಾಲಿ ಕಣ್ಣು ಮುಚ್ಚಿಕೊಂಡರು. ತಮ್ಮ ಮೆದುಳಿಗೆ ಸ್ವಲ್ಪ ಸಮಯ ವಿಶ್ರಾಂತಿಕೊಡ ಬೇಕೆಂದಿದ್ದರು. ಅದೇ ಕ್ಷಣದಲ್ಲಿ ಊರಿನ ಕೆಲವು ಜನರು ಅವರನ್ನು ಕಾಣಲು ಬಂದಿದ್ದಾರೆಂದು ಮಗ

ತಿಳಿಸಿದನು. ಅವರು ಕೋಣೆಯಲ್ಲಿ ದೀಪವನ್ನು ಹತ್ತಿಸಿ ನೀರಿನಿಂದ ಗಂಟಲು ಗುಳುಗುಳು ಮಾಡಿಕೊಂಡರು. ''ಸಭ್ಯರನ್ನು ಎಚ್ಚರಿಸುವುದಕ್ಕೆ ಇದೂ ಒಂದು ಸಮಯವೆ?'' ಎಂದು ಗೊಣಗುತ್ತಲೇ ಹೊರಗೆ ಪಡಸಾಲೆಗೆ ಬಂದು ವಿಷಯವೇನೆಂದು ಕೇಳಿ,''ಇಷ್ಟು ರಾತ್ರಿಯಲ್ಲಿಅದೇನು ಆಕಾಶ ಕಳಚಿ ಬಿದ್ದಿದೆ?'' ಎಂದರು. ''ಕರಿಯಾನನ್ನು ದಸ್ತಗಿರಿ ಮಾಡಿದ್ದಾರೆಂದು'' ನೆರೆದ ಜನ ಹೇಳಿದರು. ಅವರು ಬೆಚ್ಚಿದವರಂತೆ ನಟಿಸಿ, ''ಕರಿಯಾನನ್ನೇ?... ಯಾರು?.. ಏಕೆ'' ಎಂದು ಕೇಳಿದರು. ಜನರು ನಡೆದ ಎಲ್ಲ ವಿಷಯವನ್ನು ಮೊದಲಿನಿಂದ ಕೊನೆಯವರೆಗೆ ಹೇಳುತ್ತಲು, ಅವರು ತಲೆಯನ್ನು ಗಟ್ಟಿಯಾಗಿ ಹಿಡಿದುಕೊಂಡು ಕುಳಿತು ಬಿಟ್ಟರು. ಬಂದವರಲ್ಲೊಬ್ಬ ವೃದ್ಧರು, ''ಏನು ಆಗ ಬೇಕಿತ್ತೋ ಆಗಿ ಹೋಗಿದೆ. ಕರಿಯಾನ ಬಾಳು ಮತ್ತು ಊರಿನ ಗೌರವ ಈಗ ತಮ್ಮ ಕೈಯಲ್ಲಿದೆ'' ಎಂದು ಹೇಳಿದರು. ಮೊದಮೊದಲು ಅವರ ಮಾತನ್ನು ಕೇಳಿಯೂ ಕೇಳದಂತೆ,''ಅವನು ಪ್ರತ್ಯಕ್ಷ ಅಪರಾಧ ಮಾಡುತ್ತಿದ್ದಾಗ ಸಿಕ್ಕಿ ಹಾಕಿಕೊಂಡಿದ್ದಾನೆ. ಅದರಿಂದಾಗಿ ನನ್ನಿಂದಾ ಏನೂ ಮಾಡಲು ಸಾಧ್ಯವಿಲ್ಲ'' ಎಂದು ಹೇಳಿದರು. ಆದರೆ ಜನರ ಒತ್ತಾಯ ಹೆಚ್ಚಿ, ಅಂಗಲಾಚುವಿಕೆ ಮುಂದುವರೆದಾಗ, ಎಲ್ಲ ಜನರೂ ತಮ್ಮೊಡನೆ ಇದ್ದರೆ ತಾವೂ ಏನಾದರು ಮಾಡುವುದಾಗಿ ಒಪ್ಪಿಕೊಂಡರು.ಇನ್ನೂ ಈ ಮಾತುಗಳು ಸಾಗಿದ್ದಾಗಲೇ ಸ್ಕ್ವಾಡಿನ ಜೀಪು ಅವರ ಮನೆಯ ಎದುರಿಗೆ ಬಂದು ನಿಂತಿತು. ಸ್ಕ್ವಾಡಿನ ಸಿಬ್ಬಂದಿಯ ಜವಾನ ಜೀಪಿನಿಂದಿಳಿದು ಅವರ ಹತ್ತಿರ ಬಂದು ಲಕ್ಷ್ಮೀನಾರಾಯಣ ಭಟ್ಟರು ಯಾರೆಂದು ಕೇಳಿದನು. ಅವರು ಮುಗುಳು ನಕ್ಕರು. ಇಂಥ ಪರಿಸ್ಥಿತಿಯನ್ನು ಅವರು ಅನೇಕ ಬಾರಿ ಎದುರಿಸಿದ್ದರು. ''ಹೌದು! ನಾನೇ ಲಕ್ಷ್ಮೀನಾರಾಯಣ ಭಟ್ಟ'' ಎನ್ನುತ್ತ ಜೀಪಿನ ಹತ್ತಿರ ಬಂದರು. ಅಧಿಕಾರಿ ಜೀಪಿನಲ್ಲಿ ಕುಳಿತು ಸಿಗರೇಟು ಸೇದುತ್ತಿದ್ದರು. ಅಧೀನನೊಬ್ಬ, ''ಲಕ್ಷ್ಮೀನಾರಾಣ ಭಟ್ಟರು ಬಂದಿದ್ದಾರೆ'' ಎಂದು ಹೇಳಿದ. ಆಗ ಅಧಿಕಾರಿಗಳು, ''ಏನು ಕರಿಯಾ ತಮ್ಮಲ್ಲಿ ಕೆಲಸ ಮಾಡುತ್ತಿದ್ದನೆ?'' ಎಂದು ಕೇಳಿದರು. ''ಹಾಂ! ಮೊದಲಿಗೆ ಮಾಡುತ್ತಿದ್ದ. ಈಗ ಇಲ್ಲ''.

''ನಾವು ಅವನನ್ನು ಮರಗಳ ಸ್ಮಗಲಿಂಗ್ ಅಪರಾಧಕ್ಕಾಗಿ ದಸ್ತಗಿರಿ ಮಾಡಿದ್ದೇವೆ. ಸಾಕಷ್ಟು ಮರವನ್ನು ಅವನ ಗುಡಿಸಲಿಂದ ವಶಮಾಡಿಕೊಂಡಿದ್ದೇವೆ. ಈ ವಶಪಡಿಸಿಕೊಂಡ ಮಾಲನ್ನು ತಮ್ಮ ಸುಪರ್ದಿಗೆ ಕೊಡಬೇಕೆಂದಿದ್ದೇವೆ'' ಎಂದರು.

''ತಮ್ಮ ಆಜ್ಞೆಯನ್ನು ಶಿರಸಾವಹಿಸುತ್ತೇನೆ. ತಾವು ದಯವಿಟ್ಟು ಬಡವನ ಮನೆಯೊಳಗೆ ದಯಮಾಡಿಸಿ. ವಿವರವಾಗಿ ಮಾತನಾಡೋಣ'' ಎಂದರು. ಅಧಿಕಾರಿಗಳಿಗೆ ವಶಪಡಿಸಿಕೊಂಡ ಮಾಲನ್ನು ಅವರ ಸುಪರ್ದಿಗೆ ಕೊಡಬೇಕಿತ್ತು. ಅದಕ್ಕಾಗಿ ಮನಸ್ಸಿಲ್ಲದ ಮನಸ್ಸಿನಿಂದ ಜೀಪಿನಿಂದ ಇಳಿದು ಅವರ ಜೊತೆ ನಡೆದರು.

ಕಾಗದ ಪತ್ರದ ಲಿಖಿತ ವ್ಯವಹಾರ ಮುಗಿಯುವವರೆಗೆ ಇವರ ಮಾತು ನಡದೇ ಇತ್ತು. ಚಹದ ಮೇಲೆ ಚಹ ಕುಡಿಯುವುದೂ ಸಾಗಿತ್ತು. ಮಾತು ಮಾತಿನಲ್ಲಿ ಲಕ್ಷ್ಮೀನಾರಾಯಣ ಭಟ್ಟರು ಅಧಿಕಾರಿಗಳಿಗೆ ಅವರ ತೀರ್ಪನ್ನು ದಯವಿಟ್ಟು ಪುನರಪಿ ಪರಾಂಬರಿಸಬೇಕೆಂದೂ ವಿನಂತಿಸಿಕೊಂಡರು. ಹಾಗೂ ತಾವೂ ತಿಳಿದಂತೆ ಕರಿಯಾ ಸ್ಮಗಲರ್ ಅಲ್ಲ. ಅವನೊಬ್ಬ ಹಳ್ಳಿಯ ಸರಳ ಬಡಪಾಯಿ. ಸ್ವಂತಮನೆಯ ಕಟ್ಟಡಕ್ಕಾಗಿ

ಅವನು ಮರವನ್ನೇನೊ ಅವಶ್ಯ ಕಡಿಸಿದ್ದಾನೆ. ಅಪರಾಧಿಯೂ ಆಗಿದ್ದಾನೆ. ಅದು ನಿಜ. ಆದರೆ ಅವನು ಸಾಂಪ್ರದಾಯಿಕ ಸ್ಮಗಲರ್ ಅಲ್ಲ. ಅದಕ್ಕಾಗಿ ಅಧಿಕಾರಿಗಳು ಅವನ ಬಗ್ಗೆ ದಯವಿಟ್ಟು ರಿಯಾಯಿತಿ ತೋರಿಸಬೇಕು. ತಾವು ಬಯಸಿದರೆ ಕರಿಯಾ ಕಟ್ಟುತ್ತಿದ್ದ ಮನೆಯನ್ನು ಇನ್ನೊಮ್ಮೆ ಪರೀಕ್ಷಿಸಬಹುದು ಎಂದು ಹೇಳಿದರು. ಜನರೂ ಅವರ ಮಾತನ್ನು ಅನುಮೋದಿಸಿದರು. ಮೊದಲಿಗಂತೂ ಅಧಿಕಾರಿಗಳು ಕರಿಯಾನಿಗೆ ಯಾವ ರಿಯಾಯತಿಯನ್ನೂ ಕೊಡುವುದಿಲ್ಲೆಂದು ಪಟ್ಟು ಹಿಡಿದರು. ಅವರು ತಮಗೆ ತಿಳಿಸಿದ ವರದಿಯ ಪ್ರಕಾರ ಕರಿಯಾ ಭಯಾನಕ ಸ್ಮಗಲರ್ ಇರುವನೆಂದರು. ಆದರೆ ಅಧಿಕಾರಿಗಳನ್ನು ಖುಷಿಪಡಿಸುವುದಾಗಿ ಜನರಿಗೆ ಕಾಣದಂತೆ ಲಕ್ಷ್ಮೀನಾರಾಯಣರು, ಸನ್ನೆ ಸಂಕೇತಗಳಿಂದ ಅಧಿಕಾರಿಗಳಿಗೆ ತಿಳಿಪಡಿಸಿದಾಗ, ಅಧಿಕಾರಿಗಳು ಸ್ವಲ್ಪ ಮೃದುವಾದರು. ಅವರು ಮೃದುವಾಗುತ್ತಿರುವುದನ್ನು ಕಂಡು ಜನಕ್ಕೆ ಧೈರ್ಯಬಂದಿತು. ಆಗ ಲಕ್ಷ್ಮೀನಾರಾಯಣರ ಮುಖವೂ ಗೆಲುವಾಯಿತು. ಕೊನೆಗೆ ಕರಿಯಾ ಮರದ ಮೌಲ್ಯವನ್ನು ಟ್ಯಾಕ್ಸ್ ದಂಡ ಸಹಿತ. ಸಂದಾಯ ಮಾಡುವುದಕ್ಕೆ ಒಪ್ಪಿದರೆ ಮಾತ್ರ ಇತ್ಯರ್ಥ ಸಾಧ್ಯ, ಇಲ್ಲದಿದ್ದರೆ ಇಲ್ಲವೆಂದು ನಿರ್ಣಯಿಸಲಾಯಿತು.

ಕರಿಯಾನ ಹತ್ತಿರ ಹಣವೆಲ್ಲಿ ಬರಬೇಕು? ಅದು ಏನು ಮಾಡಬೇಕೋ ತಾವೇ ದಯವಿಟ್ಟು ಮಾಡಿರೆಂದು ಲಕ್ಷ್ಮೀನಾರಾಯಣರನ್ನು ಜನರು ಪ್ರಾರ್ಥಿಸಿಕೊಂಡರು. ಕರಿಯಾನನ್ನು, ಅವರ ಕಡೆಗೆ ತಳ್ಳಿ, ''ಹೋಗು ಅವರ ಪಾದವನ್ನು ಹಿಡಿದು ಬೇಡಿಕೊ. ಇಲ್ಲದಿದ್ದರೆ ಜೇಲಿಗೆ ಹೋಗುವಿ'' ಎಂದು ಗದರಿಸಿದರು. ಲಕ್ಷ್ಮೀನಾರಾಯಣರ ಎದೆಯುಬ್ಬಿ ಮತ್ತಷ್ಟು ಅಗಲವಾಯಿತು. ಅವರು, ಕರಿಯಾನನ್ನು ಹೇಗಾದರು ಉಳಿಸುವೆನೆಂದು ಜನರಿಗೆ ಹೇಳಿ, ಅಧಿಕಾರಿಗಳಿಂದ ಅಪ್ಪಣೆ ಪಡೆದು, ಕರಿಯಾನನ್ನು ಕೋಣೆಯ ಒಳಗೆ ಕರೆದುಕೊಂಡು ಹೋದರು. ಕೋಣೆ ಗಂಧದ ಕಡ್ಡಿಯ ಸುವಾಸನೆಯಿಂದ ತುಂಬಿದ್ದಿತು. ಅವರು ಕರಿಯಾನ ಹೆಬ್ಬೆಟ್ಟಿನ ಗುರುತನ್ನು ಸಿದ್ಧಪಡಿಸಿಟ್ಟ ಷರತ್ತುಗಳ ಮೇಲೆ; ಸ್ಟಾಂಪ್‌ಪೇಪರ್ ಮತ್ತು ಇತರ ದಸ್ತಾವೇಜುಗಳ ಮೇಲೆ, ಹಾಕಿಸಿಕೊಂಡು, ತಮ್ಮ ಕುಟುಂಬದ ಭವಿಷ್ಯವನ್ನು ಭದ್ರಮಾಡಿಕೊಂಡು ಹೊರಗೆ ಬಂದರು. ಆಗ ಅವರ ಕಣ್ಣುಗಳು, ತಮ್ಮ ರಣನೀತಿ, ಯಶಸ್ವಿಯಾಯಿತೆಂಬ ಗೆಲುವನ್ನು ಸೂಸುತ್ತಿದ್ದುವು. ಆದರೆ ಕರಿಯಾನ ಕಣ್ಣಂಚಿನಲ್ಲಿ, ಸರ್ವನಾಶ ಕಂಬನಿಯಾಗಿ ತೊಟ್ಟಕ್ಕುತ್ತಿತ್ತು

ಮಕ್ಕಳಲ್ಲಿ ಶ್ವಾಸನಾಳದ ಸೋಂಕು

ಡಾ. ಸಿ. ಎಸ್. ಕಮಲ
೧೪೯೮/೨೪ ''ಶ್ರೀ ಹರಿಕೃಪ''
ರಾಮಯ್ಯರ್ ರಸ್ತೆ, ಕೃಷ್ಣಮೂರ್ತಿಪುರಂ
ಮೈಸೂರು-೫೭೦೦೦೪

ಮಕ್ಕಳಲ್ಲಿ ಮಾರಕವೆನಿಸಿಕೊಂಡಿರುವ ಹತ್ತು ಖಾಯಿಲೆಗಳಲ್ಲಿ ಶ್ವಾಸನಾಳದ ಸೋಂಕು ಮತ್ತು ಅತಿಸಾರ ಅತಿ ಮುಖ್ಯವಾದ ಖಾಯಿಲೆಗಳು. ಮಕ್ಕಳ ಆಸ್ಪತ್ರೆಯ ದೈನಂದಿನ ಹೊರ ರೋಗಿಗಳ ಸಂಖ್ಯೆಯಲ್ಲಿ ಶೇ ೩೦ರಷ್ಟು ಮತ್ತು ದಾಖಲಾಗಿರುವವರ ಸಂಖ್ಯೆಯಲ್ಲಿ ಶೇ ೩೦ ರಷ್ಟು ಮಕ್ಕಳಿಗೆ ಅಲ್ಪಕಾಲದ (acute) ಶ್ವಾಸನಾಳದ ಸೋಂಕು ಇರುತ್ತದೆ. ಹಾಗೂ ಮಕ್ಕಳ ಒಟ್ಟು ಮರಣ ಸಂಖ್ಯೆಯಲ್ಲಿ ಶೇ ೧೫ -೩೦ರಷ್ಟು ಭಾಗ ಈ ಸೋಂಕಿನಿಂದಾಗುತ್ತದೆ. ಶ್ವಾಸಕೋಶ ಖಾಯಿಲೆಗಳೆಲ್ಲವೂ ಮಾರಕವಲ್ಲ. ಇವುಗಳಲ್ಲಿ ನ್ಯೂಮೋನಿಯ ಖಾಯಿಲೆಯು ಮುನ್ನೆಚ್ಚರಿಕೆ ತೆಗೆದುಕೊಳ್ಳದಿದ್ದರೆ ಖಂಡಿತ ವಾಗಿಯೂ ಮಾರಕವಾಗುತ್ತದೆ. ಈ ಸೋಂಕಿನ ಮರಣ ಸಂಖ್ಯೆಯನ್ನು ಕಡಿಮೆ ಮಾಡಲು ವಿಶ್ವ ಆರೋಗ್ಯ ಸಂಸ್ಥೆ ''ಅಲ್ಪಕಾಲದ ಶ್ವಾಸನಾಳ ಸೋಂಕಿನ ಯೋಜನೆಯನ್ನು''(ARI Programme) ಹಾಕಿ ಕೊಂಡಿದ್ದು, ನಮ್ಮ ದೇಶ ಇದನ್ನು ಹಮ್ಮಿಕೊಂಡಿದೆ.(National ARI Programme) ಇದರ ಪ್ರಕಾರ ತಜ್ಞರು ಸಂಶೋಧನೆ ನಡೆಸಿ, ತರಬೇತಿಯಿಂದ ಜನಸಾಮಾನ್ಯರೂ ಈ ಮರಣಾಂತಕ ನ್ಯುಮೋನಿಯ ಖಾಯಿಲೆಯನ್ನು ಪ್ರಾರಂಭ ಹಂತದಲ್ಲೇ ಸುಲಭವಾಗಿ ಗುರುತಿಸಬಹುದಾದ, ಅತಿ ಮುಖ್ಯ ರೋಗ ಚಿಹ್ನೆಗಳನ್ನು ವಿವರಿಸಿದ್ದಾರೆ. ಇದರಿಂದ ಶೀಘ್ರ ಮತ್ತು ತಕ್ಕ ಚಿಕಿತ್ಸೆ ಸಾಧ್ಯವಾಗಿದೆ.

ಶ್ವಾಸಕೋಶ ಖಾಯಿಲೆಗಳು ದೊಡ್ಡವರಿಗೆ ಕೂಡ ಬರಬಹುದಾದರೂ , ಮಕ್ಕಳಲ್ಲಿ ಇವುಗಳ ದುಷ್ಪರಿಣಾಮ ಹೆಚ್ಚು. ಮಕ್ಕಳ ಶ್ವಾಸನಾಳ ದೊಡ್ಡವರದ್ದಕ್ಕಿಂತ ಮೊಟಕು , ಚಿಕ್ಕ ಒಳಸುತ್ತಳತೆಯುಳ್ಳದ್ದು ಮತ್ತು ಅವರ ರೋಗನಿರೋಧಕ ಶಕ್ತಿ ಇನ್ನು ಪಕ್ವವಾಗಿಲ್ಲದಿರುವುದು ಈ ಹೆಚ್ಚಿನ ತೀವ್ರತೆಗೆ ಮುಖ್ಯ ಕಾರಣಗಳು.

ಶ್ವಾಸನಾಳದ ಸೋಂಕನ್ನು 'ಅಲ್ಪಕಾಲದ' ತೀವ್ರತೆಗೇರಬಹುದಾದ (acute) ಸೋಂಕು ಮತ್ತು ಧೀರ್ಘ ಅಥವಾ ಬೇರೂರಿದ (chronic) ಶ್ವಾಸಕೋಶದ ಸೋಂಕು ಎಂದು ವಿಂಗಡಿಸಿದೆ. ಈ ಅಲ್ಪಕಾಲದ ಸೋಂಕನ್ನು ಮಾತ್ರ ಇಲ್ಲಿ ವಿವರಿಸಿದೆ.

ಶ್ವಾಸನಾಳದ ಸೋಂಕನ್ನು ಮೇಲಿನ ಮತ್ತು ಕೆಳಗಿನ ಶ್ವಾಸನಾಳಗಳ ಸೋಂಕೆಂದು ಅಸ್ಪಷ್ಟವಾಗಿ ವಿಂಗಡಿಸಿದೆ. ಕೆಳಶ್ವಾಸನಾಳಗಳ ಸೋಂಕು ಅತಿ ತೀವ್ರತೆಗೇರಬಹುದು. ಮೇಲು ಶ್ವಾಸನಾಳಗಳ ಸೋಂಕು ಸಾಧಾರಣವಾಗಿ ಸ್ವತಃ ಅಪಾಯಕಾರಿಯಲ್ಲ. ಮೂಗು , ಕಿವಿ, ಗಂಟಲು, ಸೈನಸಸ್‌ಗಳ ಸೋಂಕು ಮೇಲು ಶ್ವಾಸನಾಳಕ್ಕೆ ಸಂಬಂಧಪಟ್ಟಿದ್ದು. ಧ್ವನಿನಾಳ ಮತ್ತು ಅದರ ಕೆಳಗಿನ ಶ್ವಾಸನಾಳಗಳ ಸೋಂಕನ್ನು ಕೆಳನಾಳ ಸೋಂಕೆಂದು ಕರೆದಿದೆ.

ಶ್ವಾಸಕೋಶದ ಉರಿಯೂತ (ನ್ಯೂಮೋನಿಯ)

ಶ್ವಾಸಕೋಶದ ಉರಿಯೂತ ಒಂದು ತೀವ್ರತರವಾದ ಶ್ವಾಸಕೋಶ ಖಾಯಿಲೆ. ಬಹಳಷ್ಟು ಮಟ್ಟಿಗೆ ಇದು ರೋಗಾಣುವಿಂದ (bacteria) ಉಂಟಾಗುತ್ತದೆ. ಕೆಲವು ಬಾರಿ ವೈರಸುಗಳೂ ಇದಕ್ಕೆ ಕಾರಣವಾಗಬಹುದು. ಅಪೌಷ್ಟಿಕತೆ ಇರುವ ಮಕ್ಕಳಲ್ಲಿ, ದಡಾರ

ಬಂದ ಮಕ್ಕಳಲ್ಲಿ ಈ ಖಾಯಿಲೆಯ ತೀವ್ರತೆ ಬಹಳ ಹೆಚ್ಚು. ಇದು ಒಂದು ಕಡೆಯ ಶ್ವಾಸಕೋಶದಲ್ಲಿ ಬರಬಹುದು ಅಥವಾ ಎರಡೂ ಕಡೆಯ ಶ್ವಾಸಕೋಶದಲ್ಲಿ ಬರಬಹುದು. ಸಾಮಾನ್ಯವಾಗಿ ಮಕ್ಕಳಲ್ಲಿ ಎರಡೂ ಶ್ವಾಸಕೋಶಗಳಲ್ಲೂ ಬರುತ್ತದೆ. ಈ ಖಾಯಿಲೆಯ ಚಿಕಿತ್ಸೆ ತಡವಾದರೆ ೨-೩ ದಿನಗಳಲ್ಲಿ ಮರಣಾಂತಕವಾಗಬಹುದು. ಪ್ರಾರಂಭದಲ್ಲೇ ಇದನ್ನು ಗುರುತಿಸಿ ಚಿಕಿತ್ಸೆ ಮಾಡಿಸಿದರೆ ಬಹಳಷ್ಟು ಮಕ್ಕಳ ಸಾವನ್ನು ತಡೆಯಬಹುದು. ಮಕ್ಕಳ ತಾಯಂದಿರು ಕೂಡ ಇದನ್ನು ಪ್ರಾರಂಭದಲ್ಲೇ ಸುಲಭವಾಗಿ ಗುರುತಿಸ ಬಹುದು. ಆದರಿಂದ ಈ ಖಾಯಿಲೆಯ ಲಕ್ಷಣಗಳನ್ನು ತಿಳಿದಿರಬೇಕು.

ಕೆಮ್ಮಲು ಸಾಧಾರಣವಾಗಿ ಎಲ್ಲ ತರಹದ ಶ್ವಾಸನಾಳಗಳ ಖಾಯಿಲೆಯಲ್ಲಿ ಬರುವ ಚಿಹ್ನೆ. ನ್ಯುಮೊನಿಯ ಇರುವ ಮಕ್ಕಳಲ್ಲಿ ಈ ಕೆಮ್ಮಲಿನ ಜೊತೆಗೆ ಹೆಚ್ಚಾದ ಉಸಿರಾಟದ ವೇಗ ಮತ್ತು ಮಗು ಉಸಿರಾಡಲು ಕಷ್ಟ ಇರುತ್ತದೆ. ಆದ್ದರಿಂದ ತಾಯಂದಿರು ಕೆಮ್ಮಲಿರುವ ಮಕ್ಕಳಲ್ಲಿ ಈ ಎರಡು ಮುಖ್ಯವಾದ ಚಿಹ್ನೆಗಳ ಬಗ್ಗೆ ವಿಶೇಷ ಗಮನ ಕೊಡಬೇಕು. ಉಸಿರಾಟದ ವೇಗ ತಿಳಿಯಲು ಮಗು ೧ ಮಿನಿಟಿಗೆ ಎಷ್ಟು ಬಾರಿ ಉಸಿರಾಡುತ್ತದೆ ಎಂದು ಎಣಿಸಬೇಕು. ಇದನ್ನು ಮಗು ತಾಯಿ ಮಡಿಲಲ್ಲಿ ಶಾಂತವಾಗಿ ಮಲಗಿದ್ದಾಗ, ಮಾಡಬೇಕು. ಅಂಗಿಯನ್ನು ಮೇಲಕ್ಕೆ ಸರಿಸಿ ಕೆಳಎದೆಯ ಭಾಗ ಅಥವಾ ಹೊಟ್ಟೆಯ ಭಾಗವನ್ನು ಗಮನಿಸಬೇಕು. ಇದರ ಒಂದು ಸಲದ ಮೇಲೆ ಕೆಳಗಿನ ಅಲುಗಾಟಕ್ಕೆ ಒಂದು ಉಸಿರೆಂದು ಎಣಿಸಬೇಕು. ಹೀಗೆ ಒಂದು ಇಡೀ ಮಿನಿಟಿಗೆ ಎಷ್ಟು ಬಾರಿ ಮಗು ಉಸಿರಾಡಿತು ಎಂಬುದನ್ನು ಗುರುತಿಟ್ಟು ಕೊಳ್ಳಬೇಕು. ಮಗುವಿನ ಉಸಿರಾಟದ ವೇಗದಲ್ಲಿ ಸಹಜವಾಗಿ ಅದರ ವಯಸ್ಸಿನ ಪ್ರಕಾರ ಸ್ವಲ್ಪ ವ್ಯತ್ಯಾಸ ಇರುವುದಾದ ಕಾರಣ ಈ ಕೆಳಗೆ ತಿಳಿಸಿರುವಂತೆ ಉಸಿರಿನ ವೇಗ ಹೆಚ್ಚಿದೆ ಎಂದು ನಿರ್ಣಯಿಸಬೇಕು.

ಒಂದು ಮಿನಿಟಿಗೆ :

೨ ತಿಂಗಳಿನ ಮಕ್ಕಳಲ್ಲಿ ಉಸಿರಿನ ವೇಗ ೬೦ ಕ್ಕಿಂತ ಹೆಚ್ಚಿದ್ದರೆ

೨ತಿಂಗಳಿಂದ ೧೨ ತಿಂಗಳೊಳಗಿನ ಮಕ್ಕಳಲ್ಲಿ ಉಸಿರಿನವೇಗ ೫೦ಕ್ಕಿಂತ ಹೆಚ್ಚಿದ್ದರೆ

೧೨ ತಿಂಗಳಿಂದ ೫ ವರ್ಷದೊಳಗಿನ ಮಕ್ಕಳಲ್ಲಿ ಉಸಿರಿನ ವೇಗ ೪೦ಕ್ಕಿಂತ ಹೆಚ್ಚಿದ್ದರೆ

ಮಗುವಿನ ಉಸಿರಾಟದ ವೇಗ ಹೆಚ್ಚಾಗಿದೆಯೆಂದು ತಿಳಿಯಬೇಕು. ಇದು ಮಗುವಿನಲ್ಲಿ ನ್ಯುಮೋನಿಯ ಖಾಯಿಲೆಯನ್ನು ಸೂಚಿಸುತ್ತದೆ.

ಕೆಮ್ಮಲಿರುವ ಮಗುವಿನಲ್ಲಿ ಈ ಅತಿಯಾದ ಉಸಿರಾಟದ ವೇಗದ ಜೊತೆಯಲ್ಲಿ ಮಗು ಉಸಿರಾಡಲು ಕಷ್ಟಪಡುತ್ತಿದ್ದರೆ, ಅದು ತೀವ್ರತರವಾದ ನ್ಯುಮೋನಿಯವನ್ನು ಸೂಚಿಸುತ್ತದೆ. ಈ ಸ್ಥಿತಿಯಲ್ಲಿ ಮಗು ಉಸಿರಾಡು ವಾಗ ಮಗುವಿಗೆ ಪಕ್ಕೆ ಸೆಳೆತವಿರುತ್ತದೆ. ಇದನ್ನು ಸುಲಭವಾಗಿ ಗುರುತಿಸಬಹುದು.

ಖಾಯಿಲೆಯ ತೀವ್ರತೆ ಇದಕ್ಕಿಂತ ಉಲ್ಬಣ ಸ್ಥಿತಿಯಲ್ಲಿದ್ದರೆ, ಮಗುವು ಮುಲುಗುತ್ತಿದ್ದು, ಅದಕ್ಕೆ ಮಾತನಾಡಲೂ, ಅಳಲೂ ಶಕ್ತಿ ಇರುವುದಿಲ್ಲ. ಆಹಾರ ನೀರು ಕೂಡ ತೆಗೆದುಕೊಳ್ಳಲಾಗುವುದಿಲ್ಲ, ಬಾಯಿ, ತುಟಿ, ಕೈಕಾಲು ಬೆರಳು ತುದಿಗಳು ನೀಲಿಗಟ್ಟುವುದು, ಸೆಳವು, ಮಂಪರು ಕಾಣಿಸಿಕೊಳ್ಳುತ್ತವೆ. ಮಗುವಿನ ನ್ಯುಮೋನಿಯ ಖಾಯಿಲೆ ಇಷ್ಟು ಉಲ್ಬಣ ಸ್ಥಿತಿಯಲ್ಲಿದ್ದಾಗ ವೈದ್ಯರಿಗೆ ತೋರಿಸಿದರೆ, ಚಿಕಿತ್ಸೆ ಮಾಡಿದರೂ ಮಗುವಿನ ಜೀವ ಉಳಿಯುವುದು ಕಷ್ಟ. ಆದ್ದರಿಂದ, ಮಗುವಿಗೆ ಕೆಮ್ಮಲು, ಜ್ವರ ಬಂದಾಗ ಮಗುವಿನ

ಉಸಿರಾಟದ ಬಗ್ಗೆ ವಿಶೇಷ ಗಮನವಿಟ್ಟಿದ್ದು, ಉಸಿರಾಟದ ವೇಗ ಹೆಚ್ಚಾಗಿದೆ ಎನಿಸಿದ ಕೂಡಲೆ ಮಗುವನ್ನು ವೈದ್ಯರಿಗೆ ತೋರಿಸಿ ಸಲಹೆಪಡೆಯಬೇಕು. ಖಾಯಿಲೆಯ ಪ್ರಾರಂಭ ಹಂತದಲ್ಲೇ ಸರಿಯಾದ ಚಿಕಿತ್ಸೆ ಮಾಡಿದರೆ ನ್ಯುಮೋನಿಯ ಖಾಯಿಲೆ ಸಂಪೂರ್ಣವಾಗಿ ಗುಣವಾಗುತ್ತದೆ.

ಗಮನಾರ್ಹ ವಿಷಯವೆಂದರೆ. ೧. ಮೊಲೆ ಹಾಲು ಕುಡಿಯುವ ಮಕ್ಕಳಲ್ಲಿ ಶ್ವಾಸಕೋಶ ಖಾಯಿಲೆಗಳು ಕಡಿಮೆ. ೨. ಅಪೌಷ್ಟಿಕತೆ ಇದ್ದಲ್ಲಿ ಈ ಖಾಯಿಲೆ ಬರುವ ಸಂಭವ ಮತ್ತು ಇದರ ದುಷ್ಪರಿಣಾಮಗಳೂ ಹೆಚ್ಚು. ೩. ನಿಯತಕಾಲದಲ್ಲಿ ರೋಗ ನಿರೋಧಕ ಲಸಿಕೆಗಳನ್ನು ಕೊಡಿಸಿದರೆ ಈ ಖಾಯಿಲೆ ಬರುವ ಸಂಭವ ಕಡಿಮೆಯಾಗು ತ್ತದೆ.

ಸಾಮಾನ್ಯ ನೆಗಡಿ :

ಇದು ಅತ್ಯಂತ ಸಾಮಾನ್ಯವಾಗಿ ಬರುವಂತಹ ಮೂಗು ಮತ್ತು ಗಂಟಲು ಕುಹರದ ಸೋಂಕು. ಚಿಕ್ಕಮಕ್ಕಳಲ್ಲಿ ಒಂದು ವರ್ಷಕ್ಕೆ ೫ ರಿಂದ ೮ ಬಾರಿಯಾದರೂ ಬರುತ್ತದೆ. ಇದು ವೈರಸುಗಳಿಂದ ಉಂಟಾಗುವ ಒಂದು ರೋಗ. ಮೂಗಿನ ಒಳನಯ ಚರ್ಮದಲ್ಲಿ ಊತ, ರಕ್ತದ ಒತ್ತಡ ಮತ್ತು ಹೆಚ್ಚು ಲೋಳೆಯನ್ನುಂಟು ಮಾಡುತ್ತದೆ. ಮೂಗಿನಿಂದ ಸೋರುವುದು, ಮೂಗುಕಟ್ಟುವುದು, ಕೆಮ್ಮಲು, ಜ್ವರ, ಕಣ್ಣಿನ ಆರ್ದ್ರ ಚರ್ಮದ (conjunctiva) ಹೆಚ್ಚಾದ ಒತ್ತಡ ಮತ್ತು ಅದರಿಂದ ಕಣ್ಣೀರು ಬರುವುದು- ಈ ಖಾಯಿಲೆಯ ಲಕ್ಷಣಗಳು. ಒಮ್ಮೊಮ್ಮೆ ಇದರ ಜೊತೆಗೆ ಕಿವಿನೋವೂ ಬರುವುದುಂಟು. ಏಕೆಂದರೆ ಗಂಟಲಕುಹರ ಮೂಗು, ಕಿವಿ, ಬಾಯಿ ಮತ್ತು ಧ್ವನಿಪೆಟ್ಟಿಗೆಗಳ ದ್ವಾರ ಸಂಬಂಧವುಳ್ಳದ್ದಾಗಿರುತ್ತದೆ. ಸಾಧಾರಣವಾಗಿ ಇದು ಒಂದು ಸರಳ ಖಾಯಿಲೆ. ಆದರೆ ಒಮ್ಮೊಮ್ಮೆ ಕೆಳನಾಳಗಳ ಉರಿಯೂತಕ್ಕೆ ತಿರುಗಬಹುದು ಮತ್ತು ನ್ಯುಮೋನಿಯ ಉಂಟಾಗಬಹುದು.

ಈ ವೈರಸುಗಳ ವಿರುದ್ಧದ ಯಾವುದೇ ಔಷಧಿ ಇರುವುದಿಲ್ಲ. ಹಾಗೂ ಸಾಮಾನ್ಯವಾಗಿ ಒಂದು ವಾರದ ಅನಂತರ ತಾನಾಗೆ ವಾಸಿಯಾಗಿ ಬಿಡುತ್ತದೆ. ಕೆಲವು ಮನೆ ಔಷಧಿಗಳಿಂದ ಈ ಸಮಯದಲ್ಲಿ ಮಗುವಿಗಿರುವ ಇರುಸು ಮುರುಸುಗಳನ್ನು ಕಡಿಮೆಮಾಡಬಹುದು. ಈ ಸಮಯದಲ್ಲಿ ಮಗುವಿಗೆ ಹೆಚ್ಚಿನ ನೀರು, ಆಹಾರದ ಆವಶ್ಯಕತೆ ಇರುತ್ತದೆ. ಆದ್ದರಿಂದ ಕಾದಾರಿಸಿದ ನೀರು, ಮತ್ತು ಸ್ವಲ್ಪ ಸ್ವಲ್ಪ ಆಹಾರವನ್ನೂ ಆಗಾಗ ಕೊಡಬೇಕು. ಆಹಾರ ಕೊಡುವುದನ್ನು ನಿಲ್ಲಿಸಬಾರದು. ಜ್ವರ ಜಾಸ್ತಿ ಇದ್ದರೆ , ಅಥವ ಮಗುವಿಗೆ ಜ್ವರದ ಸೆಳವು ಬರುವ ಸಂಭವವಿದ್ದರೆ ಪಾರಾಸಿಟಮಾಲ್ ಔಷಧಿಯನ್ನು ವೈದ್ಯರ ಸಲಹೆಯಂತೆ ಕೊಡಬೇಕು. ಮೂಗುಕಟ್ಟಿಕೊಂಡು ಉಸಿರಾಡಲು ತೊಂದರೆ ಇದ್ದರೆ ಕಾದಾರಿಸಿದ ಉಪ್ಪಿನ ನೀರಿನ ಹನಿಯನ್ನು ಒಂದೊಂದು ತೊಟ್ಟು ಮೂಗಿಗೆ ಹಾಕಿದರೆ, ಅಥವಾ ಶುಚಿಯಾದ ಒದ್ದೆ ಹತ್ತಿಯ ಬತ್ತಿಯನ್ನು ಮೂಗಿನಲ್ಲಿ ಹಾಕಿ ಸ್ವಚ್ಛ ಮಾಡಿದರೆ, ಮೂಗು ಕಟ್ಟಿರುವುದು ಬಿಟ್ಟು ಉಸಿರಾಟ ಸುಲಭವಾಗುತ್ತದೆ. ಈ ತೊಂದರೆಯ ಪರಿಹಾರಕ್ಕಾಗಿ ಕೆಲವು ಔಷಧಿಗಳು ಲಭ್ಯವಿವೆ. ಆದರೆ ಇವನ್ನು ಆದಷ್ಟು ಉಪಯೋಗಿಸದಿರುವುದು ಉತ್ತಮ. ಇವುಗಳಿಂದ ಶೀಘ್ರ ಪರಿಹಾರವೇನೋ ಸಿಕ್ಕುತ್ತದೆ. ಆದರೆ ಪದೇ ಪದೇ ಉಪಯೋಗಿಸಿದರೆ ಪುನಃ ಅದೇ ತೊಂದರೆ ಮರುಕಳಿಸುತ್ತದೆ. ಮತ್ತು ಮಗುವಿಗೆ ಅದು ರೂಢಿಯಾಗಿ ಬಿಡುತ್ತದೆ.

ಗಂಟಲು ಉರಿ ಇದ್ದರೆ ಬೆಚ್ಚಗಿನ ಉಪ್ಪು ನೀರಿನಿಂದ ಗಂಟಲು ಮುಕ್ಕಳಿಸಿದರೆ ಕಡಿಮೆಯಾಗುತ್ತದೆ. ಬೆಚ್ಚಗಿನ ನೀರು, ಅಥವಾ ತುಳಸಿ ಎಲೆ, ಹಸಿ ಶುಂಠಿ, ಜೇನುತುಪ್ಪ ಹಾಕಿ ಕುದಿಸಿ ಸ್ವಲ್ಪ ತಣ್ಣಗೆ ಆರಿಸಿದ ನೀರನ್ನು ಆಗಾಗ, ಸ್ವಲ್ಪ

ಸ್ವಲ್ಪ ತಣ್ಣಗೆ ಆರಿಸಿದ ನೀರನ್ನು ಆಗಾಗ, ಸ್ವಲ್ಪ ಸ್ವಲ್ಪ ಕುಡಿಸಿದರೆ ಕೆಮ್ಮು ಕಡಿಮೆಯಾಗುತ್ತದೆ. ಇದು ಔಷಧದಂಗಡಿಗಳಲ್ಲಿ ದೊರೆಯುವ ಎಷ್ಟೋ ಕೆಮ್ಮಿನ ಔಷಧಿಗಳಿಗಿಂತ ಉತ್ತಮವಾದ, ಕೆಮ್ಮು ನಿವಾರಿಸಬಲ್ಲ ಶರಬತ್ತು.

ನೆಗಡಿ, ಕೆಮ್ಮು, ಔಷಧಿಗಳು, ಪ್ರತಿ ಜೈವಿಕಗಳ ಉಪಯೋಗದಿಂದ ಈ ಖಾಯಿಲೆಯ ಅವಧಿ ಕಡಿಮೆಯಾಗುವುದಿಲ್ಲ. ಹಾಗೂ ಈ ಹಂತದಲ್ಲಿ ಇವುಗಳ ಉಪಯೋಗ ನ್ಯುಮೋನಿಯ ಸಂಭವಿಸುವುದನ್ನು ತಡೆಯುವುದಿಲ್ಲ. ಆದರೆ ಎಷ್ಟೋವೇಳೆ ಈ ಸಿರಪ್ ಔಷಧಿಗಳಲ್ಲಿ ನಿದ್ದೆ ಬರುವಂತಹ ಗುಣವಿದ್ದು, ಮಗೂಗೆ ತೂಕಡಿಕೆಯಿಂದಾಗಿ ಆಹಾರ, ನೀರು ಸರಿಯಾಗಿ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ ಈ ಖಾಯಿಲೆಯ ಮಕ್ಕಳಿಗೆ ಮನೇ ಔಷಧ ಗಳೇ ಹೆಚ್ಚು ಉಪಯುಕ್ತವಾದವು.

ಕೆಲವು ಸಲ ಇದು ನ್ಯುಮಾನಿಯ ಖಾಯಿಲೆಗೆ ತಿರುಗಬಹುದಾದ್ದರಿಂದ, ಮಗುವಿನ ಉಸಿರಾಟದ ಬಗ್ಗೆ ವಿಶೇಷ ಗಮನವಿಟ್ಟಿರಬೇಕು. ನ್ಯುಮೋನಿಯ ಚಿಹ್ನೆಗಳು ಕಂಡು ಬಂದಲ್ಲಿ ವಿಳಂಬ ಮಾಡದೇ ವೈದ್ಯರಿಗೆ ಮಗುವನ್ನು ತೋರಿಸಬೇಕು.

ಗಂಟಲು ಕುಹರದ ಉರಿಯೂತ

ಗಂಟಲಿನಲ್ಲಿ ಈ ಕುಹರವಲ್ಲದೇ, ಇಕ್ಕೆಡೆಗಳಲ್ಲಿ ಗಲಗ್ರಂಥಿಗಳೂ ಇರುತ್ತವೆ. ಆದ್ದರಿಂದ ಈ ಉರಿಊತದಲ್ಲಿ, ಸಾಮಾನ್ಯವಾಗಿ ಗಲಗ್ರಂಥಿಗಳ ಉರಿಯೂತ ಬರಬಹುದು. ಹಾಗೂ ನೆಗಡಿ, ಸ್ವಲ್ಪ ಮಟ್ಟಿಗೆ ಧ್ವನಿಪೆಟ್ಟಿಗೆ ಉರಿಯೂತ, ಅದರ ಕೆಳನಾಳದ ಉರಿಯೂತ ಕೂಡ ಇದರ ಜೊತೆಗೆ ಬರಬಹುದು. ಅದರಿಂದಲೇ ಗಂಟಲು ನೋವು ಬಂದಾಗ ಧ್ವನಿ ಬದಲಾಯಿಸುತ್ತದೆ.

ಈ ಖಾಯಿಲೆ ಶೇ ೬೫ರಷ್ಟು ಭಾಗ ವೈರಸುಗಳಿಂದಲೂ, ಶೇ ೩೦ ಭಾಗದಷ್ಟು ಬ್ಯಾಕ್ಟೀರಿಯಾಗಳಿಂದಲೂ ಉಂಟಾಗುತ್ತದೆ. ವೈರಸುಗಳಿಂದ ಉಂಟಾಗುವ ಉರಿಯೂತವು ಅಷ್ಟು ಅಪಾಯಕಾರಿಯಲ್ಲ. ೫-೬ ದಿನಗಳಿದ್ದು ವಾಸಿಯಾಗುತ್ತದೆ. ಆದರೆ ಬ್ಯಾಕ್ಟೀರಿಯಾದಿಂದ ಬರುವ ಉರಿಯೂತದಲ್ಲಿ ಕೆಲವು ತೊಡಕುಗಳುಂಟಾಗಬಹುದು. 'A' ವರ್ಗದ ಬೀಟಾ ಹೇಮೊಲಿಟಿಕ್ ಸ್ಟ್ರೆಪ್ಟೋಕಾಕ್ಕೈ ಎಂಬ ಬ್ಯಾಕ್ಟೀರಿಯಾದಿಂದ ಉರಿಯೂತ ಉಂಟಾದ ಮಕ್ಕಳಿಗೆ ಮುಂದೆ 'ಸಂಧಿವಾತ ಜ್ವರ' (rheumatic fever) ಬರಬಹುದು.

ಖಾಯಿಲೆಯ ಲಕ್ಷಣಗಳು ಮತ್ತು ತೊಡಕುಗಳು:

ಈ ಉರಿಯೂತವಿರುವ ಮಕ್ಕಳಲ್ಲಿ ಜ್ವರ, ಗಂಟಲು ಉರಿ, ನುಂಗುವಾಗ ನೋವು, ಕಣ್ಣೀರು ಬರುವುದು, ಮೂಗಿನಿಂದ ನೀರು ಸುರಿಯುವುದು ಸಾಮಾನ್ಯವಾಗಿ ಇರುತ್ತದೆ. ಕೆಲವು ಸಲ ಗಲಗ್ರಂಥಿಗಳು ಊದಿಕೊಂಡು, ಅದರ ಮೇಲೆ, ಅಂಗಳು ಮತ್ತು ಗಂಟಲು ಕುಹರದ ಮೇಲೆ ಬಿಳಿ ಬಣ್ಣದ ಸ್ರಾವವಿರಬಹುದು. ಇದರ ಪರಿಣಾಮವಾಗಿ ಕುತ್ತಿಗೆಯಲ್ಲಿರುವ ದುಗ್ಧರಸಗ್ರಂಥಿಗಳು ಊದಿಕೊಂಡು ನೋವನ್ನುಂಟು ಮಾಡಬಹುದು. ವೈರಸಿನಿಂದಾಗುವ ಉರಿಯೂತಗಳಲ್ಲಿ ಅಷ್ಟಾಗಿ ತೊಡಕುಂಟಾಗುವುದಿಲ್ಲ. ಆದರೆ ಬ್ಯಾಕ್ಟೀರಿಯಾದಿಂದ ಉಂಟಾಗುವ ಉರಿಯೂತಕ್ಕೆ ತಕ್ಕ ಔಷಧೋಪಚಾರವಿಲ್ಲದೇ ಇದ್ದರೆ ತೊಡಕುಂಟಾಗುತ್ತದೆ. ಇದರಿಂದ ಗಂಟಲು ಕುಹರದ ಹಿಂದೆ, ಗಲಗ್ರಂಥಿಯ ಸುತ್ತಲೂ ಕುರುವಾಗಬಹುದು. ಇದರಿಂದ ಮಗುವಿಗೆ ಅತಿ ಹೆಚ್ಚಿನ ಜ್ವರ, ನುಂಗಲು ಅತ್ಯಂತ ತೊಂದರೆ, ಗಂಟಲು ಊತ ಬರಬಹುದು. ಅಲ್ಲದೆ ಸಂಧಿವಾತಜ್ವರ ಬಂದು ಮಕ್ಕಳ ಹೃದಯದ ಖಾಯಿಲೆಗೆ ಇದು ಕಾರಣವಾಗುವ ಸಂಭವವಿದೆ.

ಈ ಉರಿಯೂತ ಬಂದಿರುವ ಮಗುವಿನಲ್ಲಿ, ಇದು ಬಂದಿರುವುದು ವೈರಸಿನಿಂದಲೋ ಬ್ಯಾಕ್ಟೀರಿಯಾದಿಂದಲೋ ಎಂದು ಬರಿಯ ರೋಗ ಲಕ್ಷಣಗಳಿಂದಲೇ ನಿರ್ಣಯಿಸುವುದು ಸುಲಭವಲ್ಲ. ಕಾರಣ ಪತ್ತೆ ಹಚ್ಚುವುದಕ್ಕಾಗಿ

ಪರೀಕ್ಷೆಗಳನ್ನು ಮಾಡಬೇಕಾಗುತ್ತದೆ.

ಚಿಕಿತ್ಸೆ :

ಉರಿಯೂತದ ಲಕ್ಷಣಗಳು ಸಾಧಾರಣ ವಾಗಿದ್ದರೆ, ಜ್ವರಕ್ಕೆ ಗಂಟಲು ನೋವಿಗೆ ಪಾರಾಸಿಟಮಾಲ್ ಔಷಧಿಕೊಟ್ಟು ಮಗುವಿನ ನೀರು, ಆಹಾರದ ಪೂರೈಕೆಯನ್ನು ಗಮನಿಸಿ, ಮಗುವಿಗೆ ವಿಶ್ರಾಂತಿ ಕೊಟ್ಟರೆ ೫-೬ ದಿನಗಳಲ್ಲಿ ಗುಣವುಂಟಾಗುತ್ತದೆ.

ಜ್ವರ, ಗಂಟಲುನೋವು, ಹೆಚ್ಚಾಗಿದ್ದರೆ, ದುಗ್ಧರಸಗ್ರಂಥಿಗಳು ಊದಿದ್ದರೆ ತಕ್ಷಣ ವೈದ್ಯರಿಗೆ ತೋರಿಸಬೇಕು. ಬ್ಯಾಕ್ಟೀರಿಯಾ ದಿಂದಾದ ಉರಿಯೂತಕ್ಕೆ ಪ್ರತಿ ಜೈವಿಕ ಔಷಧಿ ವೈದ್ಯರ ಸಲಹೆಯಂತೆ ನಿರ್ದಿಷ್ಟ ಪ್ರಮಾಣ ದಲ್ಲಿ, ನಿಯಮಿತ ಕಾಲ ಪೂರ್ತಿ ಒಂದು ದಿನವೂ ತಪ್ಪಿಸದಂತೆ ಕೊಡುವುದು ಬಹು ಮುಖ್ಯ. ಇದು ಮುಂದೆ ಬರಬಹುದಾದ 'ಸಂಧಿವಾತಜ್ವರದ' ಮೊತ್ತ ಮೊದಲಿನ ರಕ್ಷಣ ಕ್ರಮವಾಗಿರುತ್ತದೆ. ಗಂಟಲು ಕುರುವಿದ್ದರೆ ಶಸ್ತ್ರಚಿಕಿತ್ಸೆ ಬೇಕಾಗುತ್ತದೆ.

ಕಿವಿಯ ಸೋಂಕು :

ಕಿವಿಗೂ, ಗಂಟಲಿಗೂ ಯೂಸ್ಟೇಷಿಯನ್ ಎಂಬ ನಾಳದ ಮೂಲಕ ಸಂಪರ್ಕವಿರುತ್ತದೆ. ಆದ್ದರಿಂದ ನೆಗಡಿ, ಕೆಮ್ಮು ಗಂಟಲು ಬೇನೆ ಬಂದಾಗ ಎಷ್ಟೋ ಬಾರಿ ಕಿವಿಯುರಿಯೂತ ಬರುವುದು ಸಾಮಾನ್ಯ. ಅವು ಇಲ್ಲದೆಯೂ ಇದು ಬರಬಹುದು. ಕಿವಿ ಉರಿಯೂತ ಎರಡು ಮೂರು ತರಹ ಬ್ಯಾಕ್ಟೀರಿಯಾಗಳಿಂದ ಉಂಟಾಗುತ್ತದೆ. ಸೋಂಕು ತಗುಲಿದಾಗ ಕಿವಿಯ ಒಳಪೊಟರೆಯ ಹಿಂಭಾಗದಲ್ಲಿ ಕೀವು ಸೇರುತ್ತದೆ. ಇದರಿಂದ ಮಗುವಿಗೆ ಅತಿಯಾದ ಕಿವಿ ನೋವು, ಜ್ವರ ಇರುಸು ಮುರುಸು ಕಾಣಿಸಿಕೊಳ್ಳುತ್ತವೆ. ಈ ಹಂತದಲ್ಲಿ ತಕ್ಕ ಚಿಕಿತ್ಸೆಯಾಗದಿದ್ದರೆ, ಒಳಪೊಟರೆಯಲ್ಲಿ ತೂತಾಗಿ ಕಿವಿಯಿಂದ ಕೀವು ಸೋರಲು ಆರಂಭವಾಗುತ್ತದೆ. ಅನಂತರ ಕಿವಿನೋವು ಕಡಿಮೆಯಾಗುತ್ತದೆ. ಒಮ್ಮೊಮ್ಮೆ ಈ ಪೊಟರೆಯ ತೂತು ತಾನಾಗಿ ವಾಸಿಯಾಗಿ ಮುಚ್ಚಿಕೊಳ್ಳುತ್ತದೆ. ಅದು ಮುಚ್ಚಿಕೊಳ್ಳದಿದ್ದರೆ ಮಗುವಿಗೆ ಆ ಕಿವಿ ಕಿವುಡಾಗುತ್ತದೆ.

ಕಿವಿಯುರಿಯೂತವನ್ನು ಅಲಕ್ಷಿಸಬಾರದು. ಶೀಘ್ರವಾಗಿ ಇದಕ್ಕೆ ಚಿಕಿತ್ಸೆ ಮಾಡಿಸುವುದು ಅತ್ಯಗತ್ಯ. ಚಿಕಿತ್ಸೆ ತಡವಾದಲ್ಲಿ, ಈ ಉರಿಯೂತ ಕಿವಿಹಿಂದರು ಮಾಸ್ಟಾಯಿಡ್ ಎಲುಬಿಗೆ ಹರಡಿ ಅಲ್ಲಿ ಕುರವಾಗಬಹುದು. ಮತ್ತು ತೀವ್ರ ಮಿದುಳು ಸೋಂಕು ಸಂಭವಿಸಬಹುದು. ಪದೇ ಪದೇ ಬರುವ ಕಿವಿಯುರಿಯೂತ ಮಕ್ಕಳಲ್ಲಿ ಕಿವುಡುತನಕ್ಕೆ ಒಂದು ಕಾರಣ ವಾಗಿದೆ.

ಕಿವಿ ನೋವು ಇರುವ ಮಕ್ಕಳನ್ನು ವೈದ್ಯರಿಗೆ ತೋರಿಸಿ ಔಷಧಿ ಕೊಡಿಸಬೇಕು. ಪಾರಸಿಟಮಾಲ್ ಔಷಧಿಯಿಂದ ನೋವು ಮತ್ತು ಜ್ವರ ಕಡಿಮೆಯಾಗುತ್ತವೆ. ಆದರೆ ಇದಕ್ಕೆ ಪ್ರತಿ ಜೈವಿಕಗಳನ್ನು ಆಗತ್ಯವಾಗಿ ಕೊಡಬೇಕಾಗುತ್ತದೆ. ಕಿವಿಗೆ ಕಡ್ಡಿ,ಪಿನ್ನು ಹಾಕುವುದು, ಕಾಸಿದ ಎಣ್ಣೆಹಾಕುವುದು, ಹತ್ತಿ ಕಿವಿಯಲ್ಲಿ ತುರುಕುವುದು ಅಪಾಯಕಾರಿ ಅಭ್ಯಾಸಗಳು. ಕಿವಿ ಸೋರುತ್ತಿದ್ದರೆ ಸ್ವಚ್ಛವಾದ ಹತ್ತಿ ಬತ್ತಿಯನ್ನು ನಯವಾಗಿ ಕಿವಿಯ ನಾಳದಲ್ಲಿಟ್ಟು ೧-೨ ನಿಮಿಷಗಳ ನಂತರ ಅದನ್ನು ತೆಗೆಯಬೇಕು. ಇದರ ತುದಿ ಕೀವಿನಿಂದ ಒದ್ದೆಯಾಗಿರುತ್ತೆ. ನಂತರ ಇನ್ನೊಂದು ಬತ್ತಿಯ ತುದಿಯನ್ನು ನಾಳದಲ್ಲಿಟ್ಟು ತೆಗೆಯಬೇಕು. ಹೀಗೆ ಒಂದಾದ ರೊಂದಂತೆ ೫-೬ ಬತ್ತಿಗಳನ್ನು ಇಟ್ಟು ತೆಗೆಯುವುದರಿಂದ ಇವು ಅಲ್ಲಿದ್ದ ಕೀವೆಲ್ಲವನ್ನೂ ಹೀರಿಕೊಳ್ಳುತ್ತವೆ. ಆದರೆ ಪುನಃ ಕೀವು ಬರುತ್ತದೆ. ಈ ರೀತಿ ದಿನಕ್ಕೆ ೨ ಬಾರಿ ಮಾಡಿದರೆ ೫-೬ ದಿನಗಳಲ್ಲಿ ಕೀವು ಸೋರುವುದು ಸಂಪೂರ್ಣವಾಗಿ ನಿಲ್ಲುತ್ತದೆ. ಕಿವಿಯೊಳಗೆ ಯಾವುದೇ ತರಹದ ತೊಟ್ಟು ಔಷಧಿ ಹಾಕಿದರೆ ಅವು ಕಿವಿಯಲ್ಲಿ ತೇವ ಉಂಟು ಮಾಡುವುದರಿಂದ, ಅವುಗಳ ಉಪಯೋಗ ಯುಕ್ತವಲ್ಲ.

ತಾಯಿಯ ಹೃದಯ

ಡಾ. ಸ.ಜ.ನಾಗಲೋಟಿಮಠ
ವೈದ್ಯಕೀಯ ನಿರ್ದೇಶಕರು
ಬ.ವಿ.ವ.ಸಂಘ, ಬಾಗಲಕೋಟೆ-೫೮೭ ೧೦೧

ತಾಯಿ ದೊಡ್ಡವಳು. ಆಕೆ ತನ್ನ ಮಕ್ಕಳ ತಪ್ಪುಗಳನ್ನು ಹೇಗೆ ಮುಚ್ಚುವಳು ಹೇಗೆ ಕ್ಷಮಿಸುವಳು ಎಂಬ ವಿಷಯ ಆಶ್ಚರ್ಯ ತರುವಂಥದು. ಅಂಥ ತಪ್ಪುಗಳನ್ನು ಬೇರೆಯವರು ಕ್ಷಮಿಸಲು ಅಸಾಧ್ಯ. ಕೆಲವು ತಾಯಂದಿರು ಮನೆತನದ ಮಾನಕ್ಕಾಗಿ ಕೆಲವು ಸಲ ತಪ್ಪುಗಳನ್ನು ನುಂಗಬಹುದು. ಹಲವು ಬಾರಿ ಮಕ್ಕಳನ್ನು ಶಿಕ್ಷಿಸಬಹುದು. ನನ್ನ ಜೀವನದಲ್ಲಿ ಕಂಡ ಎರಡು ಘಟನೆಗಳನ್ನು ಸಂಕ್ಷೇಪವಾಗಿ ಇಲ್ಲಿ ವಿವರಿಸಬೇಕೆಂದಿರುವೆ. ನನಗಂತೂ ಈ ಘಟನೆಗಳನ್ನು ಕೇಳಿದಾಗ ಆ ತಾಯಂದಿರ ಮುಂದೆ ನಾನು ಹುಡಿಯಾಗಿ ನಿಂತಿರುವೆ ಎನಿಸುವುದು.

ಘಟನೆ ಒಂದು

ಇದು ನಡೆದದ್ದು ಒಂದು ಚಿಕ್ಕ ಊರಲ್ಲಿ. ಅಲ್ಲೊಂದು ಸ್ಥಿತಿವಂತ ಮನೆತನವಿತ್ತು. ಮನೆಯ ಯಜಮಾನ ಕೋರ್ಟು ಕಾಯ್ದೆಗಳಲ್ಲಿ ಜಾಣ. ಹಲವಾರು ಜನರಿಗೆ ಸಹಾಯ ಮಾಡುತ್ತಿದ್ದ. ಯಾವಾಗಲೂ ನ್ಯಾಯಕ್ಕೆ ಜಯ ದೊರಕಿಸಿ ಕೊಡುವ ಸಾಹಸಿ. ಊರವರಿಗೆಲ್ಲ ಅವನು ಬೇಕಾದವ. ಮನೆಯ ಯಜಮಾನತಿ ಗಂಡನಿಗೆ ತಕ್ಕ ಹೆಂಡತಿ, ಆಕೆಯ ಮೈ ಬಣ್ಣ ಮುಖದ ಮೇಲಿನ ಕಳೆ, ಬಲು ಸುಂದರ ಮುಖ ಚರ್ಯೆಗಳು, ದುಂಡಗಿನ ಮೈ, ಮಧ್ಯಮ ಎತ್ತರ ಆಕೆಯನ್ನು ಲಕ್ಷ್ಮಿ ಎನಿಸುವಂತೆ ಮಾಡಿದ್ದುವು. ದಂಪತಿಗಳಿಗೆ ಮೂವರು ಗಂಡು ಮಕ್ಕಳು, ಐದು ಹೆಣ್ಣು ಮಕ್ಕಳು. ತುಂಬು ಸಂಸಾರ. ನಿಜವಾಗಿಯೂ ಆ ಮನೆ ಸ್ವರ್ಗದ ತುಕಡಿಯಾಗಿತ್ತು. ಗಂಡು ಮಕ್ಕಳು ದೊಡ್ಡವರಾಗಿ ದುಡಿಯಹತ್ತಿದರು. ಅವರೆಲ್ಲರ ಮದುವೆ ಆಗಿ ದಾಂಪತ್ಯ ಜೀವನ ಪ್ರಾರಂಭವಾಯಿತು. ಹೆಣ್ಣು ಮಕ್ಕಳೂ ಬೆಳೆದರು. ಒಬ್ಬರಿಗಿಂತ ಒಬ್ಬರು ಚೆಲುವೆಯರು ಗಂಡಿನ ಕಡೆಯವರು ಈ ಕನ್ಯಾಮಣಿಗಳನ್ನು ಕಂಡು ತಡಮಾಡದೇ ಮದುವೆ ಮುಗಿಸಿಕೊಂಡೇ ಬೇರೆ ಕಾರ್ಯ ಮಾಡುತ್ತಿದ್ದರು. ಆ ಸಹೋದರಿಯರು ತಮ್ಮ ರೂಪಕ್ಕಾಗಿ ಹೆಸರಾಗಿದ್ದರು. ನಾಲ್ಕು ಸಹೋದರಿಯರ ಮದುವೆ ಅವರಿನ್ನೂ ೧೨ ವರ್ಷ ದಾಟುವಷ್ಟರಲ್ಲಿ ಮುಗಿದು ಹೋಗಿತ್ತು. ಇವರ ತಾಯಿ-ತಂದೆಯರು ಹೆಣ್ಣುಮಕ್ಕಳು ಮೇಲೆ ಪ್ರೀತಿಯನ್ನು ತೋರಿಸುತ್ತಿದ್ದರು. ಮನೆಯಲ್ಲಿ ಅವರಿಗೆ ಯಾವ ಕೆಲಸವನ್ನೂ ತಾಯಿ ಹಚ್ಚುತ್ತಿರಲಿಲ್ಲ. ಮನೆಗೆಲಸವನ್ನು ಅವರು ಕಲಿತದ್ದು ಗಂಡನ ಮನೆಯಲ್ಲಿಯೇ. ನಾಲ್ಕೂ ಜನರು ತಮ್ಮ ತಮ್ಮ ಅತ್ತೆಯ ಮನೆಗಳಲ್ಲಿ ಸುಖವಾಗಿದ್ದರು. ಐದನೆಯ ಮಗಳ ಹೆಸರು ಪಾರ್ವತಿ . ತನ್ನ ಅಕ್ಕಂದಿರಿಗಿಂತ ಸ್ವಲ್ಪ ಕುಳ್ಳಿ ಹಾಗೂ ಕಪ್ಪು, ನೋಡಲು ಬಲು ಸುಂದರಿ ಜನರು ಅವಳನ್ನು ತ್ರಿಪುರ ಸುಂದರಿ ಎಂದೇ ಕರೆಯುತ್ತಿದ್ದರು. ಹೊಳೆಯುವ ಕಣ್ಣುಗಳ, ನೀಟಾದ ಮೂಗು, ಸುಂದರವಾಗಿದ್ದ ತೆಳು ತುಟಿಗಳು, ಮಾಟವಾದ ಗದ್ದ, ಉಬ್ಬಿದ ಕಪಾಲ, ನೀಳಕತ್ತುಗಳು ಆಕರ್ಷಣೆಯ ಕೇಂದ್ರಗಳಾಗಿದ್ದುವು. ದುಂಡು ದುಂಡಾದ ತೋಳು ಮೈಕೈ ಎಂಥವರನ್ನೂ ಆಕರ್ಷಿಸುತ್ತಿದ್ದುವು. ಚಿಕ್ಕವಳಾದ್ದರಿಂದ ಆಕೆಗೆ ಇನ್ನೂ ಪ್ರೀತಿ ಜಾಸ್ತಿ ಸಿಗುತ್ತಿತ್ತು. ಮನೆ ತುಂಬ ಓಡಾಡುತ್ತ ತಾಯಿ, ಅಕ್ಕಂದಿರು, ಅಣ್ಣಂದಿರು ಹಾಗೂ ತಂದೆಯ ಪ್ರೀತಿಯಲ್ಲಿ ತೇಲಾಡುತ್ತಿದ್ದಳು. ಈಕೆಯ ಮದುವೆಯನ್ನೂ ಆಕೆ

ಇನ್ನೂ ೮ ವರ್ಷಗಳಿರುವಾಗಲೇ ಮಾಡಿದರು. ಗಂಡನು ಕಲಿತವ. ಎತ್ತರದ ಆಸಾಮಿ ಗೌರ ವರ್ಣ ಮನೆತನದಿಂದ ಶ್ರೀಮಂತ, ಕುಡಿಮೀಸೆ. ಯಾರಾದರೂ ಅವನು ರೂಪವಂತ ಎನ್ನುತ್ತಿದ್ದರು. ಪಾರ್ವತಿ ಹಾಗೂ ಅವನ ಜತೆ ಎಲ್ಲರಿಗೂ ಸಂತಸ ತಂದಿತ್ತು. ಗಂಡನ ಮನೆಗೆ ದೊಡ್ಡವಳಾದ ಮೇಲೆ ಕಳಿಸುವುದೆಂದು ತೀರ್ಮಾನವಾಗಿತ್ತು. ಆಕೆಯ ಅಣ್ಣಂದಿರೆಲ್ಲ ಪಾರ್ವತಿಯಮೇಲೆ ಬಹಳ ಜೀವ ಇಟ್ಟಿದ್ದರು. ತಂಗಿಗೆ ಏನು ಬೇಕಾದರೂ ತಂದು ಕೊಡುತಿದ್ದರು ಮಾಡುತ್ತಿದ್ದರು. ನೆಲದ ಮೇಲೆ ಓಡಾಡಿದರೆ ಕಾಲು ಧೂಳಾಗಬಾರದೆಂದು ಎತ್ತಿಕೊಂಡೇ ಹೋಗುತ್ತಿದ್ದರು. ಆಕೆಗೂ ಅಣ್ಣಂದಿರ ಮೇಲೆ ಗರ್ವ ಹಾಗೂ ಅಭಿಮಾನ. ಪಾರ್ವತಿಯ ಹಿರಿಯ ಅಣ್ಣ ನಿಷ್ಠಾವಂತ. ಅನೇಕರಿಗೆ ಬೇಕಾದವ. ಹತ್ತಾರು ಸ್ನೇಹಿತರು ಅವನ ಮಾರ್ಗದರ್ಶನ ಪಡೆಯಲು ಮನೆಗೆ ಬರುತ್ತಿದ್ದರು. ಮನೆಗೆ ಬಂದರೆ ಮನೆಯವರನ್ನೆಲ್ಲ ಮಾತಾಡಿಸಿ ಹಿರಿಯರಿಗೆ ಗೌರವ ತೋರಿಸಿ ಹೋಗುತ್ತಿದ್ದರು. ಈ ಗೆಳೆಯರ ಗುಂಪಿನಲ್ಲಿ ಒಂದು ಕರಿಕಾಳು ಸೇರಿಕೊಂಡಿತ್ತು. ಪಾರ್ವತಿಯ ಅಣ್ಣ ಎಲ್ಲರೂ ತನ್ನಂತೆಯೇ ಗೌರವಸ್ಥರು ಎಂದು ನಂಬಿದ್ದ. ಅವನ ಮನೆಯವರೂ ಹಾಗೆಯೇ ತಿಳಿದಿದ್ದರು. ಕರಿಕಾಳು ಹುಟ್ಟಾ ದುಷ್ಟ. ಅವನ ಮನೆತನವೇ ಕೆಡುಕು ಮಾಡುವ ಬುದ್ಧಿಯದು. ಇವನ ಕಣ್ಣು ಪಾರ್ವತಿಯ ಮೇಲೆ ಬಿತ್ತು. ಅನುಕೂಲ ವೇಳೆಯನ್ನು ಉಪಯೋಗಿಸಿ ಆಕೆಗೆ ಆತ್ಮೀಯನಾದ. ಮುಗ್ಧ ಹುಡುಗಿಗೆ ಆಶೆ ಆಮಿಷ ತೋರಿಸಿ ಆಕೆ ಅವನ ಸಾಮೀಪ್ಯದಲ್ಲಿ ಉಳಿಯುವಂತೆ ಮಾಡಿಕೊಂಡ. ಗೆಳೆಯನ ಮನೆಗೆ ಬಂದರೆ ಅವನ ಮೊದಲ ಅಥವಾ ಒಂದೇ ಕಾರ್ಯ ಎಂದರೆ ಪಾರ್ವತಿಯನ್ನು ಹುಡುಕುವುದು. ಅವಳೊಡನೆ ಹರಟೆ ಹೊಡೆಯುವುದು. ಆಕೆಗೆ ಇಷ್ಟವಿರುವ ವಸ್ತುಗಳನ್ನು ಧಾರಾಳವಾಗಿ ಕೊಡುವುದು. ಅವನ ಈ ವರ್ತನೆ ಕೆಲವರಿಗೆ ಸಂಶಯ ಬರುವಂತೆ ಮಾಡಿತು. ಆದರೆ ಅಣ್ಣನ ಸ್ನೇಹಿತ ಎಂದು ಎಲ್ಲರೂ ನಿರ್ಲಕ್ಷವಮಾಡಿದರು. ಅಷ್ಟರಲ್ಲಿ ಅವನು ಒಂದು ಸೈಕಲ್ ಮೋಟಾರ್ ಖರೀದಿಸಿ ಅದರ ಮೇಲೆ ಓಡಾಡತೊಡಗಿದ. ಪಾರ್ವತಿಗೆ ಅದರ ಮೇಲೆ ಸವಾರಿ ಮಾಡಲು ಆಶೆ. ಅದನ್ನು ತೀರಿಸಿಬಿಟ್ಟ. ಬೇಕುಬೇಕಾದಾಗ ಬಂದು ಸುತ್ತಾಡಿ ಬರೋಣ ಬಾ ಎಂದು ಅವಳನ್ನು ಕರೆದುಕೊಂಡು ಹೋಗಲು ಪ್ರಾರಂಭಿಸಿದ. ಪಾರ್ವತಿಗೆ ಇದು ಖುಷಿ ಕೊಟ್ಟಿತು. ಆಕೆಯೂ ಸೈಕಲ್ ಮೋಟಾರ್ ಶಬ್ದವನ್ನೇ ಕಾಯುತ್ತಿದ್ದಳು. ಅದರ ಹಾರ್ನ್ ಕೇಳಿದರೆ ಜಿಗಿಯುತ್ತ ಹೋಗುತ್ತಿದ್ದಳು. ಮತ್ತೆ ಸುತ್ತಾಟ. ಬಹಳ ಹೊತ್ತಿನ ಮೇಲೆ ಮನೆಗೆ ಮರಳುವದು. ಈ ಸಂಗತಿ ಯಾರಿಗೂ ಗಮನಕ್ಕೆ ಬರಲಿಲ್ಲ. ಕರಿಕಾಳು ಪಾರ್ವತಿಯ ಮೇಲೆ ಕಾಮದ ಕಣ್ಣು ಹಾಕಿದ್ದ. ಮುಗ್ಧ ಬಾಲಕಿಗೆ ಕಾಮದ ರುಚಿ ತೋರಿಸಿದ್ದ. ಪ್ರತಿದಿನ ಅರ್ಧಗಂಟೆ ಮೋಟಾರ್ ಸೈಕಲ್ ಮೇಲೆ ಓಡಾಟ ಅನಂತರ ತಮ್ಮ ಮನೆಗೆ ಕರೆದೊಯ್ಯುತ್ತಿದ್ದ. ಅವರ ಮನೆಯು ದೊಡ್ಡದು. ಒಂದೊಂದು ಕೊಠಡಿ ಖಾಲಿ ಇರುತ್ತಿದ್ದುವು. ಅಂಥ ಕೊಠಡಿಗಳು ಇವರಿಗೆ ಅನುಕೂಲವಾದುವು. ಪಾರ್ವತಿ ಮೈನೆರೆದಳು. ಸುದ್ದಿ ಎಲ್ಲರಿಗೂ ತಲುಪಿತು. ಎಲ್ಲರೂ ಖುಷಿಯಾದರು ದೊಡ್ಡ ಕಾರ್ಯಕ್ರಮ ಮಾಡಿದರು. ಏಳು ದಿನ ಸಂಭ್ರಮ ಆಚರಿಸಿದರು. ಕರಿಕಾಳು ಓಡಾಡಿದ್ದು ಪಾರ್ವತಿಯ ಪ್ರೀತಿ ಪಡೆಯಲು, ಎಲ್ಲವನ್ನೂ ಮಾಡಿದ್ದೇ ಮಾಡಿದ್ದು ಉಳಿದವರಿಗೆಲ್ಲ ಅವನು ಮಾಡುವುದು ಸೋದರ ಭಾವವೆಂದೇ ತಿಳುವಳಿಕೆ. ಆದರೆ ಕರಿಕಾಳು ಕಾಮದಲ್ಲಿ ನೆನೆಯುತ್ತಿದ್ದ. ಬರಬರುತ್ತ ಅವನು

ಪಾರ್ವತಿಯ ಮನೆಯಲ್ಲಿಯೇ ಉಳಿಯ ತೊಡಗಿದ. ಅವನೂ ಒಬ್ಬ ಸೋದರ ಎಂದು ಮನೆಯವರು ತಿಳಿದರು. ನಡೆದದ್ದೇ ಬೇರೆ. ಪಾರ್ವತಿಯ ಮನೆಯಲ್ಲಿ ಆಟ್ಟವಿತ್ತು. ಏನಾದರೂ ನೆವ ಮಾಡಿ ಇಬ್ಬರೂ ಅಲ್ಲಿ ಕಲೆಯುತ್ತಿದ್ದರು. ಕಾಮ ಅವರನ್ನು ಹುಚ್ಚರನ್ನಾಗಿಸಿತ್ತು.

ಒಂದು ದಿನ ಪಾರ್ವತಿ ಗಂಡನ ಮನೆಗೆ ಹೋದಳು. ಅವಳನ್ನು ಕಳುಹಿಸಲು ನಾಲ್ಕಾರು ಜನ ಹೋದರು. ಅವರೊಡನೆ ಬೇಡ ಬೇಡ ಎಂದರೂ ಕರಿಕಾಳು ಹೊಕ್ಕಿತು. ಅತ್ತೆಯ ಮನೆಯನ್ನು ನೋಡಿ ಮಾತಾಡಿ ಬಂದ. ಪಾರ್ವತಿ ಮದುವೆಯಾದ ಗಂಡನನ್ನು ಸೇರದಂತೆ ಮಾಡಲು ಪ್ರಯತ್ನಿಸಿದ. ಕರಿಕಾಳು ನಿಜವಾಗಿ ಕುರೂಪಿ. ಬಣ್ಣ ಇದ್ದಲಿ ಗಿಂತ ಕಪ್ಪು ಚಿಕ್ಕ ಮುಖ, ನರಿಯಂಥ ಕಣ್ಣು ಅವನ ಮುಖವನ್ನು ಕಂಡರೆ ಉಗುಳು ವಂತಾಗುತ್ತಿತ್ತು. ಪಾರ್ವತಿಯ ಗಂಡ ರೂಪ ವಂತ ಎತ್ತರದ ಆಳು ಸುಶಿಕ್ಷಿತ, ಆದರೂ ಅವನ ಮೋಡಿ ಅವಳನ್ನು ಆವರಿಸಿತ್ತು. ನಿಂತರೂ ಕೂತರೂ ಕರಿಕಾಳನ್ನೇ ನೆನೆಯುತ್ತಿತ್ತು. ಅವನೊಡನೆ ಆಡಿದ ಕಾಮಕೇಳಿಗಳು ಅವಳನು ಹುಚ್ಚಳನ್ನಾಗಿಸುತ್ತಿದ್ದುವು. ಗಂಡ ನೊಡನೆ ಕಟ್ಟಿಗೆಯ ಕಂಬವಾಗುತ್ತಿದ್ದಳು. ಪಾರ್ವತಿ ಸೌಖ್ಯವಾಗಿರುವಳೋ ಇಲ್ಲವೋ ಎಂದು ತಿಳಿಯಲು ಈಕೆಯ ಗಂಡನ ಮನೆಗೆ ಬರತೊಡಗಿದ. ಗಂಡನ ಮನೆಯವರೆಲ್ಲ ಹೊಲದಲ್ಲಿ ದುಡಿಯುವ ಸಮಯ ನೋಡಿ ಮನೆಯೊಳಗೆ ಸೇರ ತೊಡಗಿದ್ದ ಪಾರ್ವತಿ ಆತನ ಬಲೆಗೆ ಸಂಪೂರ್ಣ ಬಿದ್ದಿದ್ದಳು. ಅತ್ತೆಯ ಮನೆಯಲ್ಲಿಯೇ ಅವರ ಕಾಮಕೇಳಿ ಪ್ರಾರಂಭವಾಯಿತು. ಸುತ್ತಲಿನ ಜನರಲ್ಲಿ ಗುಸು ಗುಸು ಶುರುವಾಯಿತು. ಅತ್ತೆಯ ಕಿವಿಯನ್ನು ತಲುಪಿತು. ಒಂದು ಸಲ ಅತ್ತೆ ಮನೆಯಲ್ಲಿ ಅಡಗಿ ಕುಳಿತಳು. ಕರಿಕಾಳು ಬೆಕ್ಕಿನಂತೆ ಕಾಲಿಟ್ಟಿತು. ಕಾಮಕೇಳಿ ಪ್ರಾರಂಭ ವಾಯಿತು. ಜನರು ಮನೆಹೊಕ್ಕು ಕರಿಕಾಳನ್ನು ಹಿಡಿದರು. ಪಾರ್ವತಿಗೆ ಮಾನಭಂಗವಾಯಿತು. ಅವಳು ಮೂಕಳಾದಳು ಕರಿಕಾಳನ್ನು ಬೈಯ್ದರು. ಆದರೆ ಅವನು ಭಯಪಡಲಿಲ್ಲ. ಹೌದು ಆಕೆ ಅವನಿಗೆ ಬೇಕು ಎಂದೇ ಒದರಿದ. ಆಕೆ ಎಲ್ಲಿಯೇ ಇರಲಿ ಆಕೆಯ ದೇಹ ಸುಖ ತನಗೆ ಬೇಕೇ ಬೇಕು ಎಂದ. ಯಾರಾದರೂ ಅಡ್ಡಬಂದರೆ ಅವರನ್ನು ಕೊಲೆ ಮಾಡುವೆ ಎಂದು ಹೆದರಿಸಿದ.

ಈ ಘಟನೆ ಗಂಡನ ಮನೆಯವರ ಮಾನವನ್ನು ರಾಡಿಯಲ್ಲಿ ಅದ್ದಿತು. ಎಲ್ಲರೂ ಪಾರ್ವತಿಯನ್ನು ಬೈಯ್ದರು. ಆಕೆಯೂ ಕಿವುಡಿಯಂತೆ ನಟಿಸಿದಳು. ಜನ ರೊಚ್ಚಿ ಗೆದ್ದರು. ತಮ್ಮ ಊರಿನ ಮಾನವೇ ಹೋಗುವ ದೆಂದರು. ಕಾರಣ ಆಕೆಯನ್ನು ತವರು ಮನೆಗೆ ಕಳುಹಿಸುವುದೆಂದು ನಿಶ್ಚಯಿಸಿದರು. ಕರಿಕಾಳಿಗೂ ಪಾರ್ವತಿಗೂ ಅದೇ ಬೇಕಾಗಿತ್ತು. ಈ ಸುದ್ದಿ ತವರು ಮನೆಗೆ ತಲುಪಿತು. ಅವರೂ ಮುಖ ತಗ್ಗಿಸಿದರು. ಅಣ್ಣಂದಿರು ಮುದ್ದುತಂಗಿ ಪಾರ್ವತಿ ಅಂಥವಳಲ್ಲ ಎಂದರು. ನಮ್ಮ ಮನೆಯಲ್ಲಿ ಇದು ಸಾಧ್ಯವಿಲ್ಲ ಎಂದು ಕೂಗಾಡಿದರು. ಮನೆಯಲ್ಲಿಯ ಅಣ್ಣಂದಿರ ಹೆಂಡಿರುಗಳೆಲ್ಲ ರೇಗಿದರು. ತಂದೆ ದುಃಖಿಸಿ ದರು ಸಂಬಂಧಿಕರಲ್ಲಿ ಕೆಲವರು ಹಿಯಾಳಿಸಿ ದರು. ಹಾಗೂ ಬೆಂಕಿಯಾದರು ಉಳಿದವರು ಬಾಯಿ ಹೊಲಿದುಕೊಂಡರು.

ಅಣ್ಣಂದಿರೆಲ್ಲ ಮುಖ ಕೆಳಗೆ ಹಾಕಿದರು. ತಂದೆ ಅಳಹತ್ತಿದ. ಅಣ್ಣಂದಿರ ಹೆಂಡಂದಿರೆಲ್ಲ ಛೀ ಥೂ ಎಂದರು. ಓಣಿಯ ಹಿರಿಯರಿಗೂ ಇದು ನುಂಗಲಾರದ ಪ್ರಮಾದವೆನಿಸಿತು. ಹಿರಿಯರೊಬ್ಬರು 'ಇದು ನಿಜವೇನು?' ಎಂದು ಕೇಳಿದರು ಪಾರ್ವತಿ ಯಾವುದೇ

ಉದ್ವೇಗವಿಲ್ಲದೆ 'ಹೌದು' ಎಂದು ಸಮ್ಮತಿಸಿದಳು. ಆಗ ಇಡೀ ಜಗತ್ತೇ ಮುಳುಗಬಹುದು ಎನಿಸಿತು. ಅಲ್ಲಿಯ ಹಿರಿಯರಿಗೆ. ಗಂಡನ ಮನೆಯವರು ಪಾರ್ವತಿಯ ಮನೆಯರಿಗೆ ನಮಸ್ಕರಿಸಿ ನಿಮ್ಮ ಮಗಳನ್ನು ಸುರಕ್ಷಿತವಾಗಿ ತಲಪಿಸಿರುವೆವು ಎಂದು ಹೇಳಿದರು. ಮನೆಯಿಂದ ಎದ್ದು ಹೋದರು. ಮನೆಯಲ್ಲಿ ಶ್ಮಶಾನ ಮೌನ. ತಂದೆ ಕುಸಿದು ಕುಳಿತರು. ಅಣ್ಣಂದಿರು ಕುದಿಯತೊಡಗಿದರು. ತಂಗಿಯ ಪಾದಗಳು ಧೂಳು ಆಗಬಾರದೆಂದು ಎತ್ತಿದ ಅಣ್ಣಂದಿರು ಆಕೆ ಈಗಿಂದೀಗಲೇ ಸತ್ತು ಹೋಗಲೆಂದರು. ಅಣ್ಣಂದಿರ ಹೆಂಡಿರು ಅಪಮಾನದಿಂದ ಕುದಿದರು. ಕರಿಕಾಳು ಮತ್ತೆ ಮನೆಗೆ ಬಂದರೆ ಹೇಗೆ? ಎಂದರು ಆಕೆಯನ್ನು, ಬಿಟ್ಟು ನಮ್ಮನ್ನು ಅವನು ಹಿಡಿದರೆ ಏನು ಮಾಡುವುದೆಂದರು. ಓಣಿಯವರೆಲ್ಲ ಮೂಕರಾದರು. ''ನಡೆದದ್ದು ನಡೆದು ಹೋಗಿದೆ ಇನ್ನು ಮುಂದೆಯಾದರೂ ಕರಿಕಾಳಿನ ಸಂಗ ಬಿಡು ಎಂದರು. ಪಾರ್ವತಿ ಮಾತಾಡಲಿಲ್ಲ. ಒತ್ತಾಯಿಸಿದರು. ಆಕೆ ಕೊನೆಗೆ ಹೇಳಿದಳು ''ನಾನು ಕರಿಕಾಳಿನ ಜೊತೆಗೇ ಇರುವವಳು'' ಎಂದಳು. ''ಸರಿಯಾಗಿ ವಿಚಾರಿಸಿ ಮಾತಾಡು ಮೂರ್ಖಳಂತೆ ಮಾತಾಡಬೇಡ. ಇದು ಮನೆಯ ಗೌರವದ ಪ್ರಶ್ನೆ. ಊರಲ್ಲಿ ನಾವಾರೂ ತಲೆ ಎತ್ತದಂತೆ ಮಾಡಿರುವೆ. ಇಷ್ಟಾದರೂ ನಿನಗೆ ಬುದ್ಧಿ ಬರಲಿಲ್ಲ. ನಾವೆಲ್ಲ ಅಪಮಾನದಿಂದ ಸಾಯುವುದೊಂದೇ ಮಾರ್ಗ ಎಂದರು. ಪಾರ್ವತಿಯ ತಂದೆ ಹೇಳಿದರು ಒಂದು ವಾರ ಎಲ್ಲರೂ ಸುಮ್ಮನಿರಿ. ಒಂದು ವಾರದ ಬಳಿಕ ಮತ್ತೆ ಚರ್ಚಿಸೋಣ'' ಅವರ ಮಾತಿಗೆ ಬೆಲೆ ಕೊಟ್ಟು ಎಲ್ಲರು ತಮ್ಮ ತಮ್ಮ ಕೆಲಸಕ್ಕೆ ಹೋದರು.

ಒಂದು ವಾರದ ಅವಧಿ ಮುಗಿಯಿತು ಚರ್ಚೆಯಾಗಲಿಲ್ಲ. ಎರಡು ವಾರಗಳಾದುವು. ಅಷ್ಟರಲ್ಲಿ ಪಾರ್ವತಿ ಕರಿಕಾಳಿನೊಡನೆ ಹೊರಹೋದ ಸಂಗತಿ ಎಲ್ಲರಿಗೂ ತಿಳಿದಿತ್ತು. ಒಂದು ತಿಂಗಳಾಯಿತು ಕರಿಕಾಳು ತನ್ನ ಸೈಕಲ್ ಮೋಟಾರ್ ಮೇಲೆ ನೇರವಾಗಿ ಮನೆಗೆ ಬಂದು ಪಾರ್ವತಿಯನ್ನು ಹೊರಗೆ ಕರೆದುಕೊಂಡು ಹೋಗಲು ಪ್ರಾರಂಭಿಸಿದ್ದ. ಇದೆಲ್ಲ ನುಂಗಲಾರದ ತುತ್ತಾಯಿತು. ಸಹಿಸಲಾರದ ಸಂಕಟವಾಯಿತು. ತಂದೆಗೆ ಪಾರ್ಶ್ವವಾಯು ಹೊಡೆಯಿತು. ಒಂದು ವಾರದಲ್ಲಿ ಅವರು ಮಡಿದರು. ಇನ್ನು ವೇಳೆ ಕಳೆಯುವುದು ಸರಿಯಲ್ಲ ಎಂದು ಎಲ್ಲ ಅಣ್ಣಂದಿರು ಕೂಡಿದರು. ಅಣ್ಣಂದಿರ ಹೆಂಡಿರು ಕುದಿಕುದಿದು ಉಕ್ಕುತ್ತಿದ್ದರು. ಪಾರ್ವತಿ ಹಾಗೂ ಅವಳ ತಾಯಿ ಬಂದು ನಡುಮನೆಯಲ್ಲಿ ಕುಳಿತರು. ಅಣ್ಣಂದಿರು ಪರಿಸ್ಥಿತಿಯನ್ನು ವಿವರಿಸಿದರು. ಪೇಟೆಯಲ್ಲಿ ಜನ ಏನೇನು ಮಾತಾಡುತ್ತಿರುವರು ಎಂದು ಹೇಳಿದರು. ಪಾರ್ವತಿಯ ನಡತೆ ಬಹಳ ವಿಪರೀತವಾಗಿದೆ ಎಂದರು. ಆದರೆ ಕರಿಕಾಳು ಅವಳನ್ನು ತಮ್ಮ ಮನೆಗೆ ಕರೆದೊಯ್ಯಬೇಕಲ್ಲ! ಕರಿಕಾಳನ್ನು ಯಾರು ಕೇಳುವುದು . ಯಾರೂ ಅವನನ್ನು ಮಾತಾಡಿಸಲು ಸಿದ್ಧರಿಲ್ಲ. ಅವನೇನೂ ಹಿರಿಯ ಅಣ್ಣನ ಸ್ನೇಹಿತ ಇದ್ದ. ಈಗ ಅದು ಬದಲಾಗಿದೆ. ಅವನು ಇಂಥ ಮನೆಮುರುಕತನ ಎಸಗುವನು ಎಂಬುದನ್ನು ಊಹಿಸಲೂ ಅಸಾಧ್ಯವಾಗಿತ್ತು. ತನ್ನ ತಪ್ಪಿನ ಸಲುವಾಗಿ ಅವನು ಎಲ್ಲರ ಗಲ್ಲ ಗಲ್ಲ ಬಡಿದುಕೊಂಡ. ಕರಿಕಾಳನಿಗೆ ಮನೆಗೆ ಬರಲು ಸವಲತ್ತು ಕೊಟ್ಟದ್ದು ಮಹಾ ಅಪರಾಧ ಎಂದು ಉಳಿದ ಸಹೋದರರ ಕಾಲಿಗೆ ನಮಸ್ಕರಿಸಲು ಹೋದಾಗ ಎಲ್ಲರೂ ಹಿರಿಯ ಅಣ್ಣನನ್ನು ತಡೆದು ಅದು ನಮ್ಮೆಲ್ಲರ ತಪ್ಪು ಎಂದು ಹೇಳಿದರು. ಈಗ ಪಾರ್ವತಿಗೆ ಹೇಳಿದರು ಈಗಿಂದ ಈಗಲೇ ನೀನು ಮನೆ ಬಿಟ್ಟು ಹೊರಡು ಎಂದು ಗರ್ಜಿಸಿದರು. ಪಾರ್ವತಿ ಕಿವುಡಿಯಂತೆ ಕುಳಿತಿದ್ದಳು. ಆಕೆ ಎಲ್ಲಿಗೆ ಹೋಗಬೇಕು ಎಂಬುದನ್ನು ಯಾರೂ ವಿಚಾರಿಸಲಿಲ್ಲ. ಆಕೆಗೂ

ತಿಳಿಯದು . ಮಾಡಿದ್ದು ತಪ್ಪಾಗಿದೆ ಎಂದು ಅರಿವಿತ್ತು .ಆದರೂ ಆಕೆಗೆ ಒಲವು ಕರಿಕಾಳು ಕಡೆಗೆ ಇತ್ತು. ಪಾರ್ವತಿ ತಾಯಿಯ ಮುಖ ನೋಡಿದಳು. ತಾಯಿ ಗಂಡು ಮಕ್ಕಳ ಕಡೆಗೆ ನೋಡಿ ತೀರ್ಮಾನ ನಾಳೆ ತೆಗೆದು ಕೊಳ್ಳೋಣ ಎಂದಳು. ಎಲ್ಲರೂ ಚದುರಿದರು. ತಾಯಿ ಹಾಗೂ ಮಗಳು ಒಂದು ಕೋಣೆಗೆ ಸೇರಿದರು. ಕೆಲಹೊತ್ತಿನವರೆಗೆ ಮೌನವಾಗಿ ಕುಳಿತಿದ್ದರು. ತಾಯಿ ಕೇಳಿದಳು, ''ಪಾರ್ವತಿ ಈಗ ಏನು ಮಾಡುವುದು?'' ನೀನು ಏನು ಹೇಳುವಿ? ಆಗ ಪಾರ್ವತಿ ಅಳುತ್ತ ಹೇಳಿದಳು, ''ಯವ್ವಾ ನನಗ ಏನ ಆಗೇತಿ ಗೊತ್ತಿಲ್ಲ. ನಾನು ಕರಿಕಾಳುವಿಗೆ ಸೋತಿರುವೆ ಬದುಕಿದರೆ ಅವನ ಸಂಗಡ ಬದುಕುವೆ ನನಗೆ ಅವನನ್ನು ಬಿಡುವದು ಸಾಧ್ಯವಿಲ್ಲ. ಇಲ್ಲದೆ ಹೋದರೆ ನಾನು ಸಾಯುತ್ತೇನೆ''. ಪಾರ್ವತಿಯ ಅಳು ಜೋರಾಯಿತು ತಾಯಿ ಸುಮ್ಮನೆ ಕುಳಿತಳು. ಮರುದಿನ ಬಂತು ಎಲ್ಲ ಅಣ್ಣಂದಿರು ನಡುಮನೆಯಲ್ಲಿ ಸೇರಿದರು, ತಾಯಿ ಒಬ್ಬಳೇ ಬಂದಳು. ಮಕ್ಕಳಿಗೆ ಹಾಗೂ ಸೊಸೆಯಂದಿರಿಗೆ ಹೇಳಿದಳು ''ನೋಡ್ರೆ ಪಾರ್ವತಿ ತಪ್ಪಿರುವಳು. ಆಕೆಗೆ ಏನು ಆಗಿದೆ ಎಂಬುದೇ ತಿಳಿಯ ವಲ್ಲದು . ಕರಿಕಾಳು ಅವಳನ್ನು ಹುಚ್ಚಿಯಂತೆ ಮಾಡಿರುವನು. ಅವಳನ್ನು ಮನೆಯಲ್ಲಿ ಇಟ್ಟುಕೊಂಡು ಬಾಳಲು ನಿಮಗೆ ಸಾಧ್ಯವಿಲ್ಲ. ನಿಮ್ಮ ಹೆಂಡತಿಯರಿಗೆ ಇದು ಅಶಕ್ಯ ಇನ್ನೊಂದು ಕಡೆಗೆ ಪಾರ್ವತಿ ಇನ್ನು ಸಣ್ಣ ಹುಡುಗಿ. ಅವಳನ್ನು ಮನೆಬಿಟ್ಟು ಹೊರಗೆ ಓಡಿಸಿದರೆ ನಿಮ್ಮ ಗೆಳೆಯ ಕರಿಕಾಳು ಅವಳನ್ನು ಎಲ್ಲಿಗೆ ತರುತ್ತಾನೆ ಹೇಳಲು ಸಾಧ್ಯವಿಲ್ಲ. ಅವಳನ್ನು ನಾನು ರಕ್ಷಿಸಲೇಬೇಕು. ದುರ್ದೈವ ದಿಂದ ನಿಮ್ಮ ತಂದೆಯೂ ತೀರಿಕೊಂಡರು. ನನಗೆ ದುಡಿಯಲು ಬರುವುದಿಲ್ಲ. ನನ್ನ ಹೊಟ್ಟೆಗೆ ಮುಂಜಾನೆ ಒಂದು ಸಂಜೆಗೆ ಒಂದು ರೊಟ್ಟಿ ಕೊಡಿರಿ. ಅದರಲ್ಲಿ ಅರ್ಧ ನಾನು ತಿಂದು ಉಳಿದ ಅರ್ಧವನ್ನು ನನ್ನ ಮಗಳಿಗೆ ತಿನಿಸುವೆ. ನಾನು ಜೀವಿಸಿರುವವರೆಗೆ ಅವಳನ್ನು ಕಾಪಾಡುವೆ ನಾನು ಸತ್ತನಂತರ ದೇವರು ಏನು ಮಾಡುವನೋ ಹಾಗಾಗಲಿ. ಕಾರಣ ಈ ಮನೆಯನ್ನು ನಾಲ್ಕು ಭಾಗಗಳಲ್ಲಿ ವಿಭಾಗಿಸಿರಿ. ನನಗೆ ಒಂದು ಭಾಗವನ್ನು ಕೊಟ್ಟು ಇರಲು ಅನುಮತಿ ಕೊಡಿರಿ'' ಎಂದು ದುಃಖಿಸುತ್ತ ನೆಲಕ್ಕೆ ಬಿದ್ದಳು. ಸಹೋದರರಿಗೆಲ್ಲ ವಿಚಿತ್ರ ಎನಿಸಿತು. ಪಾರ್ವತಿ ಇಷ್ಟೆಲ್ಲ ಹೊಲಸು ಮಾಡಿದಳು ಮಾನವಂತರ ಮನೆಯನ್ನು ಹಾಳು ಮಾಡಿದಳು. ತಂದೆಯ ಜೀವವನ್ನೇ ನುಂಗಿದಳು, ಒಳ್ಳೆಯ ಗಂಡನನ್ನು ಬಿಟ್ಟು ಕರಿಕಾಳನೊಡನೆ ಓಡಾಡುತ್ತಾಳೆ. ಆದರೂ ತಮ್ಮ ತಾಯಿ ಪಾರ್ವತಿಯನ್ನೇ ಬೆಂಬಲಿಸಿದಳಲ್ಲ ಗಂಡು ಮಕ್ಕಳು ನೋಡುತ್ತಿರುವ ನೋಟವೇ ಈ ಪ್ರಶ್ನೆಗಳನ್ನು ಕೇಳುವಂತಿತ್ತು. ತಾಯಿ ಮತ್ತೆ ಹೇಳಿದಳು ''ನಾಳೆ ಒಂದು ವೇಳೆ ನಿಮ್ಮ ಮಗಳೇ ಇಂಥ ಕೆಲಸ ಮಾಡಿದರೆ ಏನು ಮಾಡಿವಿರಿ? '' ಅಣ್ಣಂದಿರು ಅಲ್ಲಿಯೇ ಕಡಿದು ಹಾಕುವೆ ಎಂದರು ತಾಯಿ ಮಾತಾಡದೇ ತನ್ನ ಕೊಠಡಿಗೆ ಹೋದಳು.

ಮನೆ ನಾಲ್ಕು ಭಾಗವಾಯಿತು. ಒಂದು ಭಾಗದಲ್ಲಿ ತಾಯಿ ಮಗಳೊಡನೆ ವಾಸಿಸು ತ್ತಿದ್ದಳು. ಕರಿಕಾಳು ಹಾಗೂ ಪಾರ್ವತಿ ತಮ್ಮ ಗುಂಗಿನಲ್ಲಿದ್ದಾರೆ. ಮಗಳು ಮಾಡಿದ ತಪ್ಪನ್ನು ಇಡೀ ಜಗತ್ತೇ ಕ್ಷಮಿಸಲಿಲ್ಲ. ಕ್ಷಮಿಸಲು ಸಾಧ್ಯವಿಲ್ಲ, ಆದರೆ ತಾಯಿಯ ಹೃದಯ ಮಾಡಿದ ತಪ್ಪನ್ನು ಕ್ಷಮಿಸಿತು. ಏನೇ ಆಗಲಿ ಮಗಳು ಸುಖದಿಂದ ಜೀವಿಸಲಿ ಎಂದು ಆ ಪತಿತಳೊಡನೆ ವಾಸಿಸುತ್ತಿದ್ದಾಳೆ ಎಲ್ಲ ಅಣ್ಣಂದಿರೂ ಪಾರ್ವತಿಯಿಂದ ದೂರ ಉಳಿದಿದ್ದಾರೆ. ಮಾತು ನಿಲ್ಲಿಸಿದ್ದಾರೆ. ಆಕೆಯ ಮುಖವನ್ನೂ ನೋಡುವದಿಲ್ಲ. ಆದರೆ ತಮ್ಮ ತಾಯಿಯೊಡನೆ

ಮೊದಲಿನ ಸಲಿಗೆಯನ್ನೇ ಉಳಿಸಿಕೊಂಡಿದ್ದಾರೆ. ಅದೇ ಮಮತೆಯನ್ನು ಬೆಳೆಸಿದ್ದಾರೆ.

ಕರಿಕಾಳು ಪಾರ್ವತಿಯನ್ನು ಮನಬಂದಂತೆ ಬಳಸುತ್ತಿದ್ದ. ಆಗೊಮ್ಮೆ ಈಗೊಮ್ಮೆ ಅಷ್ಟಿಷ್ಟು ಹಣ ಕೊಡುತ್ತಿದ್ದ. ಸೀರೆ, ಚಪ್ಪಲಿ, ಚಿಕ್ಕಪುಟ್ಟ ಒಡವೆ ಕೊಡಿಸುತ್ತಿದ್ದ. ಊರಲ್ಲಿ ಬೇರೆ ಒಂದು ಕೊಠಡಿ ಮಾಡಿದ. ನಿತ್ಯ ಪಾರ್ವತಿಯನ್ನು ಅಲ್ಲಿಗೆ ಒಯ್ಯುತ್ತಿದ್ದ. ನಾಲ್ಕಾರು ತಾಸು ಅವರು ಅಲ್ಲಿರುತ್ತಿದ್ದರು. ಪಾರ್ವತಿಯ ಚೆಲುವು ಮಾಸತೊಡಗಿತು. ಅವನು ಕೊಡುವ ಹಣ ಕಡಿಮೆ ಆಯಿತು. ಹೊಟ್ಟೆಗೆ ಕೂಲಿನಾಲಿ ಮಾಡಬೇಕಾಯಿತು. ಕಟ್ಟಿಗೆ ಆರಿಸಲು ಹೋಗಬೇಕಾಯಿತು. ರೊಟ್ಟಿ ಮಾರಬೇಕಾಯಿತು. ಆಕೆಯ ಚೆಲುವು ಪೂರ್ಣ ಒಣಗಿತು. ಕರಿಕಾಳು ಪಾರ್ವತಿಯ ರುಚಿಯನ್ನು ಸವೆದಿದ್ದ. ಈಗ ಅವಳು ಅವನಿಗೆ ಹಳಸಿದ ಅನ್ನದಂತಾದಳು. ಬಡಿಯಲು ಪ್ರಾರಂಭಿಸಿದ. ಬಡಿಯಲು ಬಡಿಗೆ, ಕಲ್ಲು, ಬೆಲ್ಟು ಉಪಯೋಗಿಸಿದ. ಕಾಮ ಬೇಕಾದರೆ ಅವಳ ಮನೆ ಹೊಕ್ಕು ಎಳೆದು ಒಯ್ಯುತ್ತಿದ್ದ ಬೇಗನೆ ಬರದಿದ್ದರೆ ಒದೆಯುತ್ತಿದ್ದ.

ತಾಯಿ ಮುದ್ದೆಯಾಗಿ ಕೂಡ್ರುತ್ತಿದ್ದಳು, ''ನೋಡ್ರಿ ನನ್ನ ಮಗಳನ್ನು ಸರಿಯಾಗಿ ನೋಡ್ರೆಪಾ'' ಎಂದು ಯಾಚಿಸುತ್ತಿದ್ದಳು. ಮಗಳು ಮರಳುವವರೆಗೆ ಅಳುತ್ತ ಕೂಡ್ರುತ್ತಿದ್ದಳು. ಬರುವುದು ತಡವಾದರೆ ನೋಡಲೆಂದು ಅವರಿದ್ದ ಕಡೆ ಓಡುತ್ತಿದ್ದಳು. ಕರಿಕಾಳು ತಾಯಿಗೆ ಎಚ್ಚರಿಸಿದ ''ನಿನ್ನನ್ನು ಕೊಚ್ಚಿ ಹಾಕುವೆ'' ಎಂದ. ಪಾರ್ವತಿಗೆ ಇನ್ನೂ ಮಂಕು. ಒಂದು ಸಲ ಪಾರ್ವತಿಯನ್ನು ಹೊಡೆದು ಬೆಂಗಳೂರಿಗೆ ಒಯ್ದ. ತಾಯಿಗೆ ಜೀವವೇ ಹೋದಂತೆ ಆಗಿತ್ತು. ಆಕೆ ಈಗ ಯಾರಿಗೆ ಹೇಳಬೇಕು. ಎಲ್ಲ ಅಣ್ಣಂದಿರು ಈ ವಿಷಯದ ಬಗ್ಗೆ ರೋಸಿ ಹೋಗಿದ್ದರು. ಒಬ್ಬ ಅಣ್ಣನಂತೂ ಅವಮಾನ ತಾಳಲಾರದೇ ಆತ್ಮಹತ್ಯೆ ಮಾಡಿಕೊಂಡ.

ಪಾರ್ವತಿಯ ತಾಯಿ ಮಗಳೊಡನೆ ಬದುಕಿದ್ದಾಳೆ ಪಾರ್ವತಿಯನ್ನು ಪ್ರೀತಿಸುತ್ತಾಳೆ ''ನೀನು ಸುಖವಾಗಿರು'' ಎನ್ನುತ್ತಾಳೆ . ಸಮಾಜದಲ್ಲಿ ತನ್ನನ್ನು ಹೇಗೆ ನೋಡುತ್ತದೆ ಎಂಬುದು ಆಕೆಗೆ ತಿಳಿದಿದೆ. ಆಕೆ ಮಾನವಂತರ ಬಾಳು ಬಾಳಿದಾಕೆ ಉಳಿದ ಹೆಣ್ಣುಮಕ್ಕಳೂ ಮಾನವಂತರು ಅವರೆಲ್ಲರಿಗೆ ಮಕ್ಕಳಾಗಿವೆ. ಆದರೆ ಪಾರ್ವತಿಯ ಬಾಳು ಹೀಗೆ ಆಳುತ್ತಾಳೆ. ಒಬ್ಬಳೇ ಕಣ್ಣೀರು ಹಾಕುತ್ತಾಳೆ ಮಗಳಿಗೆ ಉಪಚರಿಸುತ್ತಾಳೆ. ''ಏನು ಮಾಡುವದು ಕೂಸು ತೊಡಿಮ್ಯಾಲ ಹೇತರ ಕೂಸ ಹೊಲಸಂದು ಚೆಲ್ಲಾಕ ಬರತೈತೇನ? ಎಷ್ಟಾದರು ನನ್ನ ಮಗಳು ನಾನು ರಕ್ಷಣಾ ಮಾಡಲಿಲ್ಲ ಆಂದರ ಹೆಂಗ?'' ಎನ್ನುತ್ತಾಳೆ.

ಘಟನೆ ಎರಡು

ಈ ಸಂಗತಿ ಜರಗಿದ್ದು ಓರ್ವ ವೈದ್ಯರ ಜೀವನದಲ್ಲಿ .ಅವರ ಹೆಸರು ಮಲ್ಲಪ್ಪ. ಈತ ಬಸಗೌಡರ ಒಬ್ಬನೆ ಮಗ. ನೋಡಲು ಆಕರ್ಷಕ ವ್ಯಕ್ತಿತ್ವ. ತಮ್ಮ ಊರಿನ ಶಾಲೆಯಲ್ಲಿ ಜಾಣ ವಿದ್ಯಾದಾನ ಎಂದು ಹೆಸರು ಮಾಡಿದ್ದ. ಎಸ್.ಎಸ್.ಎಲ್.ಸಿ.ಯಲ್ಲಿ ಒಳ್ಳೆಯ ಗುಣ ಸಂಪಾದಿಸಿದ. ಕಾಲೇಜಿನಲ್ಲಿಯೂ ಒಳ್ಳೆಯ ವಿದ್ಯಾರ್ಥಿ ಎಂದು ಅನಿಸಿಕೊಂಡ . ಅವನಿಗೆ ಮೆಡಿಕಲ್ ಕಾಲೇಜಿನಲ್ಲಿಯೂ ಸೀಟು ಸಿಕ್ಕಿತು. ಎಲ್ಲಿಯೂ ಸೋಲದೆ ಎಮ್.ಬಿ.ಬಿ.ಎಸ್ ಪರೀಕ್ಷೆ ಪಾಸಾದ . ಸರಕಾರಿ ಸೇವೆಗೆ ಸೇರಿದ ಒಳ್ಳೆಯ ವೈದ್ಯನೆಂದು ಹೆಸರುಮಾಡಿದ. ದೊಡ್ಡ ದೊಡ್ಡ ಶಸ್ತ್ರ ಚಿಕಿತ್ಸೆ ಮಾಡುತ್ತ ಪ್ರಸಿದ್ಧವಾದ, ಗಳಿಕೆ ಸಾಕಷ್ಟು ಆಯಿತು. ಅವರೊಡನೆ ಸೇವೆ ಸಲ್ಲಿಸುತ್ತಿದ್ದ ಓರ್ವ ಸಹೋದ್ಯೋಗಿ ಡಾ.ಮಲ್ಲಪ್ಪನಿಗೆ ಒತ್ತಾಯ ಮಾಡಿ ಕುಡಿಯುವ ಚಟವನ್ನು ಕಲಿಸಿದರು. ಪ್ರಾರಂಭದಲ್ಲಿ ಕುಡಿತ ರಾತ್ರಿ ಮಾತ್ರ ನಡೆಯುತ್ತಿತ್ತು. ಬರಬರುತ್ತ ಕುಡಿತ

ಹಗಲು ಹೊತ್ತಿನಲ್ಲಿ ಕಾಣಿಸತೊಡಗಿತು. ಒಂದೊಂದು ಸಲ ಮಿತಿ ಮೀರುತ್ತಿತ್ತು. ರೋಗಿಗಳೇ ಡಾ:ಮಲ್ಲಪ್ಪನನ್ನು ಸಂಭಾಳಿಸ ಬೇಕಾಗುತ್ತಿತ್ತು. ಆಟೊರಿಕ್ಷಾದವರಂತೂ ನಿತ್ಯ ಇವರ ಸೇವೆ ಮಾಡಬೇಕಾಯಿತು. ಪ್ರಸಿದ್ಧಿ ಕುಸಿದು ಬಿದ್ದಿತು. ಕುಪ್ರಸಿದ್ಧಿ ಮೇಲೇರ ತೊಡಗಿತು. ಸಹೋದ್ಯೋಗಿಗಳು ಡಾ: ಮಲ್ಲಪ್ಪನನ್ನು ದೂರಿಡತೊಡಗಿದರು. ಆಸ್ಪತ್ರೆಯ ಸಿಬ್ಬಂದಿ ಡಾ:ಮಲ್ಲಪ್ಪನ ಸ್ಥಿತಿ ಕಂಡು ಮರುಗಿದರು. ಕೆಲವರಂತೂ ದ್ವೇಷಿಸ ತೊಡಗಿದರು. ಊರಿನ ಜನರು ಸರಕಾರಕ್ಕೆ ಈ ವಿಷಯ ತಿಳಿಸಿದರು. ಮೇಲಿನ ಅಧಿಕಾರಿಗಳು ಬಂದು ಛೀಮಾರಿ ಹಾಕಿದರು. ಎಚ್ಚರಿಕೆ ಕೊಟ್ಟರು. ಒಂದೆರಡು ಸಲ ಡಾ:ಮಲ್ಲಪ್ಪನನ್ನು ಅವಮಾನತ್ತು ಮಾಡಿದರು. ಡಾ: ಮಲ್ಲಪ್ಪ ಬೆಂಗಳೂರಿಗೆ ಹೋಗಿ ಹಣ ಸುರುವಿ ನೌಕರಿ ಮುಂದುವರಿಯುವಂತೆ ಮಾಡಿಕೊಂಡು ಬಂದರು. ಇಂಥ ತೊಡಕುಗಳು ಬಂದಾಗ ಡಾ:ಮಲ್ಲಪ್ಪ ಒಂದು ಎರಡು ವಾರಗಳವರೆಗೆ ಕುಡಿತ ಬಿಡುತ್ತಿದ್ದ. ಜನರಿಗೆ ಸೋಜಿಗ ಎನಿಸುತ್ತಿತ್ತು. ಒಳ್ಳೆಯದಾಯಿತು ಎಂದು ಸಮಾಧಾನ ಪಡುತ್ತಿದ್ದರು. ಮತ್ತೆ ಅದೇ ಹಾಡು ಮನೆಯಲ್ಲಿ ಹೆಂಡತಿ ಮಕ್ಕಳು ಹೇಸಿಕೊಂಡರು ಯಾವ ಸಂಬಂಧಿಕರೂ ಸನಿಹ ಬರಲಿಲ್ಲ.

ಡಾ : ಮಲ್ಲಪ್ಪನ ಸ್ನೇಹಿತರು ಸೋತರು. ಕೊನೆಗೆ ಮಲ್ಲಪ್ಪನ ತಾಯಿಯೇ ಇದನ್ನು ನಿಯಂತ್ರಿಸಲು ಸಾಧ್ಯವೆಂದು ನಿರ್ಣಯಿಸಿದರು. ಅದಕ್ಕೆ ಇಬ್ಬರು ಸ್ನೇಹಿತರನ್ನು ಮುಂದು ಮಾಡಿದರು. ಈ ಸ್ನೇಹಿತರು ಡಾ:ಮಲ್ಲಪ್ಪನ ಮನೆಗೆ ಹೋಗಿ ತಾಯಿಯ ಮುಂದೆ ವಿವರಿಸಿದರು. ಮಲ್ಲಪ್ಪ ಸುಧಾರಿಸಲು ತಾಯಿಯ ಎಚ್ಚರಿಕೆ ಅವಶ್ಯವೆಂದು ತಿಳಿಸಿದರು. ಅವರು ಹೇಳಿದ ಮಾತುಗಳು ಎಲ್ಲರನ್ನೂ ಕರಗಿಸಿದುವು. ಮಲ್ಲಪ್ಪನ ವರ್ತನೆಯ ಬಗ್ಗೆ ರೋಸಿ ಹೋದರು. ಇಷ್ಟೆಲ್ಲ ಕೇಳಿದ ತಾಯಿ ಕಣ್ಣೀರು ಸುರಿಸಿದಳು. ಮರುಕಪಟ್ಟಳು ಬಂದ ಸ್ನೇಹಿತರಿಗೆ ಆದರ ಉಪಚಾರ ಮಾಡಿದಳು. ಅವರು ಮರಳಿ ತಮ್ಮ ಊರುಗಳಿಗೆ ಹೋದರು.

ಸಂಜೆಗೆ ಡಾ: ಮಲ್ಲಪ್ಪನ ತಾಯಿಯನ್ನು ಭೇಟಿಯಾದವರೊಬ್ಬರು ಕೇಳಿದರು. ''ಏನು ಅಜ್ಜಿ? ಮಗನ ಸುದ್ದಿ ಭಾಳ ದೊಡ್ಡದಾತು, ನೀ ಅರೆ ಹೇಳು . ಬುದ್ಧಿ ಕಲಿಸು. ಮನುಷ್ಯ ಇಷ್ಟು ಕೆಡಬಾರದು.'' ಅಜ್ಜಿ ಸುಮ್ಮನೇ ಕುಳಿತಿತ್ತು. ಕಣ್ಣೀರು ಸುರಿಸುತಿತ್ತು. ಸ್ವಲ್ಪ ಸಮಯದ ಅನಂತರ ಹೇಳಿತು, ''ನನ್ನ ಮಗ ಭಾಳ ಛಲೋ ಅದಾನು ಭಾಳ ಶ್ಯಾಣ್ಯಾ ಅದಾನು ಇನ್ನ ಏನ ಸ್ವಲ್ಪ ವ್ಯಸನಿ ಆಗ್ಯಾನು''.

ಎಲ್ಲರಿಗೂ ಬೇಸರವಾದ ಡಾ:ಮಲ್ಲಪ್ಪ ಅವನ ತಾಯಿಗೆ ತಾಯಿಯ ಹೃದಯಕ್ಕೆ ಮಾತ್ರ 'ಭಾಳ ಛಲೋ ಆದರೆ ಸ್ವಲ್ಪ ವ್ಯಸನಿ'

ನೀರೇ ನಮ್ಮ ಜೀವ

ಡಾ: ಕೋಡೀರ. ಅ. ಕುಶಾಲಪ್ಪ
ಪ್ರಾದೇಶಿಕ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ನಿವೃತ್ತ),
೬೬೬, ಮೂರನೆಯ ಕ್ರಾಸ್, ಒಂದನೆಯ ಬ್ಲಾಕ್,
ರಾಮಕೃಷ್ಣ ನಗರ, ಮೈಸೂರು-೫೭೦ ೦೨೩

ವಾತಾವರಣದಲ್ಲಿರುವ ಆಮ್ಲಜನಕವನ್ನು ಬಿಟ್ಟರೆ, ಭೂಮಿಯಲ್ಲಿರುವ ನೀರೇ ನಮ್ಮ ಬದುಕಿಗೆ ಬೇಕಾದ ಅತಿ ಮುಖ್ಯ ವಸ್ತು. ವಾಯು ಅಂದರೆ ಆಮ್ಲಜನಕ ಸಿಗದೆ ಹೋದರೆ, ನಾವು ಉಸಿರಾಡಲು ಆಗದೆ ಮೂರೇ ನಿಮಿಷದಲ್ಲಿ, ಹಾಗೆಯೇ, ಕುಡಿಯಲು ನೀರು ಸಿಗದೆ ಹೋದರೆ, ಮೂರೇ ದಿನಗಳಲ್ಲಿ ಮಡಿಯುತ್ತೇವೆ.

ನಾವು ನೀರಿನ ಬಳಕೆಯಲ್ಲಿ ಎಚ್ಚರ ತಪ್ಪಿದರೆ ಮುಂದೊಂದು ದಿನ ಉಪಯೋಗಿಸಲು ಉತ್ತಮ ನೀರು ಸಿಗದೆ ಸಾಯುವ ಪರಿಸ್ಥಿತಿ ಬರಬಹುದು. ಭೂಮಿಯಲ್ಲಿರುವ ನೀರಿನ ಶೇ.೯೭.೨ ರಷ್ಟು ನೀರು ಉಪ್ಪಿನಿಂದ (ಲವಣ) ಕೂಡಿದ್ದು, ಸಮುದ್ರ ಮತ್ತು ಸಾಗರಗಳಲ್ಲಿವೆ. ಅವನ್ನು ನಾವು ಉಪಯೋಗಿಸಲಾಗುವುದಿಲ್ಲ. ಶೇ.೨.೨ ರಷ್ಟು ನೀರು ಹಿಮವಾಗಿ ಬೆಟ್ಟಗುಡ್ಡಗಳನ್ನು ಆವರಿಸಿವೆ. ಬರೇ ಶೇ.೦.೬ರಷ್ಟು ಮಾತ್ರ ನೀರು ಸಿಹಿಯಾಗಿದ್ದು ಉಪಯೋಗಕ್ಕೆ ದೊರೆಯುತ್ತದೆ. ಈ ನೀರನ್ನು ತಾಳ್ಮೆ ಕಾಳಜಿ ವಹಿಸಿ, ಜಾಗರೂಕತೆ ಯಿಂದ, ಸದಾ ಸಿಗುವಂತೆ ಬಳಸಿದರೆ, ಈಗಿರುವ ಎಲ್ಲ ಪ್ರಾಣಿ, ಪಕ್ಷಿ, ಗಿಡ, ಮರ, ಮನುಷ್ಯರಿಗೂ ಸಾಕು.

ಆದರೆ ಈಗಲೇ ಸಾಧಾರಣ ೨೦ ಕೋಟಿಯಷ್ಟು ಜನ ಕುಡಿಯಲು ಒಳ್ಳೆ ನೀರು ಸಿಗದೆ ಚಡಪಡಿಸುತ್ತಿದ್ದಾರೆ. ಇವರಲ್ಲಿ ಹೆಚ್ಚಿನವರು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ, ಮಳೆ ಕಡಿಮೆ ಬೀಳುವ ಪ್ರದೇಶಗಳವರಾಗಿರುತ್ತಾರೆ. ಒಬ್ಬೊಬ್ಬರಿಗೆ ಪ್ರತಿದಿನ ಸಾಧಾರಣ ೪೦ ರಿಂದ ೬೦ ಲೀಟರ್ ನೀರಾದರೂ ಬೇಕಾಗುತ್ತದೆ. ಆದರೆ ಒಬ್ಬೊಬ್ಬರಿಗೆ ವರ್ಷಕ್ಕೆ ಈ ಲಭ್ಯವಾಗುತ್ತಿರುವ ೧೨೫೦ ಘ.ಮೀ. ನೀರು, ಇಸವಿ ೨೦೫೦ರ ವೇಳೆಗೆ ಸುಮಾರು ೭೬೦ ಘ.ಮೀ.ಗೆ ಇಳಿಯುಬಹುದೆಂದು ಅಂದಾಜು ಮಾಡಿದ್ದಾರೆ. ಇದರಿಂದಲೂ ಅಭಿವೃದ್ಧಿ ಹೊಂದುತ್ತಿರುವ ಭಾರತದಂಥ ರಾಷ್ಟ್ರಗಳ ಮೇಲೆ ಮತ್ತೆ ಅಘಾತ ಕಡೆಯಲಿದೆ.

ನಮ್ಮ ರಾಷ್ಟ್ರ ನೀರಿನ ಮೂಲಕ ಬರುವ ಕಾಯಿಲೆಯನ್ನು ತಡೆಗಟ್ಟಲು, ವರ್ಷಕ್ಕೆ ೩೬,೬೦೦ಕೋಟಿ ರೂಪಾಯಿಗಳಷ್ಟನ್ನು ಖರ್ಚುಮಾಡುತ್ತಿದೆಯೆಂದು ತಿಳಿದು ಬಂದಿದೆ. ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಸುಮಾರು ೫೦ ಲಕ್ಷ ಮಕ್ಕಳು ಪ್ರತಿ ವರ್ಷಕ್ಕೆ ನೀರಿನಿಂದ ಬರುವ ಕಾಯಿಲೆಯಿಂದ ಸಾಯುತ್ತಾರೆ ಎಂದು ವರದಿಮಾಡಿದೆ. ನಮ್ಮ ರಾಷ್ಟ್ರ ದಲ್ಲಿ ಬರೇ ಶೇ. ೭ರಷ್ಟು ಜನಸಂಖ್ಯೆ ಮಾತ್ರ ಒಳಚರಂಡಿ ಆವೃತ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದಾರೆ. ಆದ್ದರಿಂದ ನೀರು ನಾನಾ ರೀತಿಯಲ್ಲಿ ಮಲಿನವಾಗುತ್ತಿದೆ. ದಿನೇ ದಿನೇ ನೀರಿನ ಮಲಿನತೆ ಹೆಚ್ಚಾಗುತ್ತಿದೆಯಲ್ಲದೆ, ಅದನ್ನು ತಡೆಯಲು ನಾವು ಇನ್ನೂ ಜಾಗೃತ ರಾಗಿಲ್ಲ.

ನೀರಿನ ಮಲಿನತೆಗೆ ಮುಖ್ಯ ಕಾರಣಗಳೆಂದರೆ, ನಮ್ಮ ದೈನಂದಿನ ಜೀವನದ ರೀತಿ ಹಾಗೂ ನಾವು ನೀರನ್ನು ಬಳಸುವ ಬಗ್ಗೆ ಇರುವ ನಿರ್ಲಕ್ಷ್ಯ. ಮೈಸೂರು ಜಿಲ್ಲೆಯಲ್ಲಿ ಬೀಳುವ ವಾರ್ಷಿಕ ಮಳೆ ಸುಮಾರು ೭೫೦ ರಿಂದ ೮೦೦ ಮಿ.ಮಿಟರುಗಳು. ಅಂದರೆ ಮಳೆ ನೀರನ್ನು ಹರಿಯಲು ಬಿಡದೆ, ಬಿದ್ದಲ್ಲೇ ನಿಲ್ಲುವಂತೆ

ಮಾಡಿದರೆ, ಆ ಪ್ರದೇಶವು ಕೆರೆಯಂತಾಗಿ, ನೀರಿನಮಟ್ಟವು ೭೫೦ ರಿಂದ ೮೦೦ ಮಿ.ಮಿ. ರಷ್ಟು ಎತ್ತರದಲ್ಲಿ ಸಂಗ್ರಹವಾಗುತ್ತದೆ. ಮಳೆಯ ರೂಪದಲ್ಲಿ ಬೀಳುವ ನೀರನ್ನು ನಾವು ಸರಿಯಾಗಿ, ಕ್ರಮಪ್ರಕಾರ ಬಳಕೆ ಮಾಡಿಕೊಂಡರೆ, ನಮ್ಮ ಹಾಗೂ ಇತರ ಪ್ರಾಣಿ ಪಕ್ಷಿ ಗಿಡ ಮರಗಳ ಬಳಕೆಗೆ ಬೇಕಾದಷ್ಟಾಗುತ್ತದೆ. ಆದರೆ ನಾವು ಮಳೆ ನೀರನ್ನು ತಡೆಹಿಡಿಯುವ ಯಾವ ಕಾರ್ಯಕ್ರಮವನ್ನೂ ನಿಗದಿತ ರೀತಿಯಲ್ಲಿ ಮಾಡುತ್ತಿಲ್ಲ.

ಭೂಮಿಯು ಹದವಾಗಿದ್ದರೆ, ಮಳೆನೀರು ಸಾವಧಾನವಾಗಿ ಭೂಮಿಯಲ್ಲಿ ಇಂಗಿ, ಅಂತರ್ಜಲವನ್ನು ಹೆಚ್ಚಿಸುತ್ತದೆ. ಇದರಿಂದ ಕೊಳವೆಬಾವಿ, ತೆರೆದ ಬಾವಿ, ಕೆರೆ ಕುಂಟೆಗಳಲ್ಲಿ ನೀರು ಹೆಚ್ಚುವುದಲ್ಲದೆ, ಸದಾಕಾಲ ಅಥವಾ ಹೆಚ್ಚಿನ ಕಾಲ ನೀರಿರುವಂತೆ ಮಾಡುತ್ತದೆ. ಭೂಮಿಯು ಸಿಮೆಂಟಿನಂತೆ ಗಟ್ಟಿಯಾಗಿ ಅಥವಾ ಬಹಳ ಇಳಿಜಾರಾಗಿದ್ದರೆ, ಮಳೆನೀರು ಬಿದ್ದೊಡನೆ, ಭೂಮಿಯಲ್ಲಿ ಇಂಗದೆ, ಸರಾಗವಾಗಿ ಹರಿದುಹೋಗಿ, ಕೆರೆ ನದಿಗಳಲ್ಲಿ, ನೆರೆಬರುವಂತೆ ಮಾಡುವುದಲ್ಲದೆ, ಇದರಿಂದ ಬೆಳೆ, ತೋಟ, ಜಮೀನು, ಮನೆಮಠಗಳು ನಾಶವಾಗುವ ಸಂಭವವೂ ಉಂಟು. ಗಿಡ ಮರಗಳಿದ್ದರೆ, ಅವುಗಳ ಬೇರುಗಳು ಭೂಮಿಯೊಳಕ್ಕೆ ಹೋಗಿ ಹರಡಿ, ಮರಗಿಡಗಳ ಎಲೆ, ಹೂ, ಕಾಯಿ, ಕಸಕಡ್ಡಿಗಳು ಭೂಮಿಗೆ ಬಿದ್ದು, ಕೊಳೆತು, ಮಣ್ಣನ್ನು ಫಲವತ್ತಾಗಿಯೂ, ಹಸನಾಗಿಯೂ ಇರುವಂತೆ ಮಾಡುತ್ತವೆ. ಇದರಿಂದ ನೀರು, ಹೆಚ್ಚಾಗಿ ಇಂಗಲೂ ಅನುಕೂಲವಾಗುತ್ತದೆ. ಆದ್ದರಿಂದ, ನಾವು ಎಲ್ಲೆಲ್ಲಿ ಖಾಲಿ ಜಾಗ, ಬರಡು ಜಾಗವಿದೆಯೋ, ಅಲ್ಲಲ್ಲಿ ಗಿಡಮರಗಳನ್ನು ಬೆಳೆಸುವ ಕಾರ್ಯದಲ್ಲಿ ತೊಡಗಬೇಕು.

ಗಿಡ ಮರಗಳಿಂದ ಕೂಡಿದ ಅರಣ್ಯ ಪ್ರದೇಶವೂ, ಒಂದು ದೊಡ್ಡ ಅಡ್ಡಕಟ್ಟೆಯಂತೆ ಅಥವಾ ಆಣೆಕಟ್ಟೆಯಂತೆ ನೀರನ್ನು ಭೂಮಿಯಲ್ಲಿ ಇಂಗಿಸಿ, ಶೇಖರಿಸಿಡಲು ಸಹಾಯ ಮಾಡುತ್ತದೆ. ನದಿ, ಕೊಳ್ಳಗಳಲ್ಲಿ ಅಡ್ಡ ಅಲ್ಲಲ್ಲಿ ಸಣ್ಣ ಸಣ್ಣ ಕಟ್ಟೆ ಕಟ್ಟಿ ನೀರನ್ನು ತಡೆದು ಭೂಮಿಯಲ್ಲಿ ಇಂಗುವಂತೆ ಮಾಡಿದರೆ ಹೆಚ್ಚು ಇಂಗುವಿಕೆಯಿಂದ, ಅಂತರ್ಜಲಗಳ ಅಭಿವೃದ್ಧಿಯೂ ಆಗುತ್ತದೆ. ಕೃಷಿಭೂಮಿಯನ್ನು ಸಮತಟ್ಟು ಮಾಡುವುದರಿಂದ ನೀರಿನ ಹರಿಯುವಿಕೆ ಮತ್ತು ಮಣ್ಣಿನ ಸವಕಳಿಯನ್ನು ತಡೆಯಬಹುದು. ಆದ್ದರಿಂದಲೇ ನಮ್ಮ ಸರ್ಕಾರವು ಎಲ್ಲ ಕಡೆ ಈಗ "ಜಲಾನಯನ ಪ್ರದೇಶ ಅಭಿವೃದ್ಧಿ" ಎಂಬ ಕಾರ್ಯಕ್ರಮವನ್ನು ತ್ವರಿತಗತಿಯಲ್ಲಿ ಅನುಷ್ಠಾನಕ್ಕೆ ತಂದಿದೆ. ಇದರಲ್ಲಿಗ್ರಾಮಸ್ಥರು ಹಾಗೂ ರೈತರು ಭಾಗಿಗಳಾಗಿ ಪೂರ್ಣ ಜಲಾನಯನವನ್ನು ಅಭಿವೃದ್ಧಿಗೊಳಿಸಬೇಕಾಗಿದೆ. ಮಳೆನೀರನ್ನು ಚರಂಡಿಯಲ್ಲಿ ಹರಿಯಲು ಏರ್ಪಡಿಸಿ ಪಕ್ಕದ ಕೆರೆ, ಜವುಗು ಪ್ರದೇಶ, ನಾಲೆ, ನದಿಗಳಿಗೆ ಹರಿಯುವಂತೆ ಮಾಡಬೇಕು, ಒಳಚರಂಡಿಗಳಲ್ಲಿ ಹರಿಯದಂತೆ ನೋಡಿಕೊಳ್ಳಬೇಕು. ಸರ್ಕಾರದ ಆದೇಶದಂತೆ ೪೦'×೬೦' ಯ ಮನೆ ನಿವೇಶನದಲ್ಲಿ ೨ ಮರ, ೫೦'×೮೦' ನಿವೇಶನದಲ್ಲಿ ೪ ಮರ ಹಾಗೂ ಒಂದು ಹೆಕ್ಟೇರಿನಲ್ಲಿ ೪೦ ಮರಗಳು ಇರುವಂತೆ ಕಡ್ಡಾಯವಾಗಿ ಗಿಡ ಮರಗಳನ್ನು ನೆಟ್ಟು ಬೆಳೆಸಬೇಕು.

ಪಟ್ಟಣಗಳಲ್ಲಿ ಈಗ ನೀರಿಗಾಗಿ ಆಗುವ ಪರದಾಟವನ್ನು ನಾವು ನೋಡುತ್ತಿದ್ದೇವೆ. ಹಿಂದಿನ ಕಾಲದಲ್ಲಿ ಗ್ರಾಮ ಹಾಗೂ ಪಟ್ಟಣಗಳಲ್ಲಿ ಮನೆಗೊಂದು ಬಾವಿ ಇರುತ್ತಿತ್ತು. ನೀರಿಗೆ ಯಾವ ಅನಾನುಕೂಲತೆಯೂ ಇರಲಿಲ್ಲ. ಈಗ ಪಟ್ಟಣಗಳ ಅಭಿವೃದ್ಧಿಯಿಂದ,

ಮನೆಗಳು ಸಣ್ಣ ಸಣ್ಣ ನಿವೇಶನಗಳಲ್ಲಿ ಇರುವುದರಿಂದ, ಸರ್ಕಾರವೇ ನೀರನ್ನು ಒದಗಿಸುವ ಜವಾಬ್ದಾರಿ ಹೊತ್ತಿದೆ. ಆದರೂ ಜನರ ಸಹಕಾರ ಅಗತ್ಯ. ನಮ್ಮ ಜನಸಂಖ್ಯೆ ಜಾಸ್ತಿಯಾಗಿ ಸರ್ಕಾರ ನೀರನ್ನು ಒದಗಿಸುವ ಕ್ರಮ ಕುಂಠಿತಗೊಂಡಿದೆ. ನಾವು ಈಗ ನೀರಿನ ಮಿತಬಳಕೆ ಹಾಗೂ ಮರುಬಳಕೆಯ ಕಡೆ ಹೆಚ್ಚಿನ ಗಮನ ಕೊಡಬೇಕು. ನೀರು ಪೋಲಾಗುವುದನ್ನು ತಪ್ಪಿಸಬೇಕು. ಕೊಳವೆ ಬಾವಿ ತೋಡಲು ಸರ್ಕಾರ ಕಟ್ಟುನಿಟ್ಟಾದ ನಿಯಮಗಳನ್ನು ತಂದಿದ್ದರೂ ನೀರಿನ ಅಭಾವದಿಂದ ಎಲ್ಲ ಕಡೆ ಕೊಳವೆ ಬಾವಿಗಳು ತಲೆ ಎತ್ತಿ ಅಂತರ್ಜಲವು ನಾಶವಾಗುವಂತೆ ಮಾಡುತ್ತಿದ್ದಾರೆ. ಒಮ್ಮೆ ಅಂತರ್ಜಲದ ಮಟ್ಟ ಕೆಳಗೆ ಹೋದರೆ, ಕೊಳವೆ ಬಾವಿಗಳಲ್ಲಿ ನೀರು ಬತ್ತಿ ಈ ಬಾವಿಗಳು ನಿಷ್ಪ್ರಯೋಜಕವಾಗುತ್ತವೆ. ಆಗ ದೂರದ ಪ್ರದೇಶಗಳಿಂದ ಕೊಳವೆ ಮೂಲಕ ನೀರನ್ನು ನಿಗದಿತ ವೇಳೆಯಲ್ಲಿ ಆಗ ಮಾತ್ರ ಜನರಿಗೆ ಸರಬರಾಜು ಮಾಡಬೇಕಾಗುತ್ತದೆ.

ಮಳೆನೀರು ಮೇಲು ಚಾವಣಿಯ ಮೇಲೆ ಬಿದ್ದಾಗ, ಅದನ್ನು ಮನೆಯ ಪಕ್ಕದಲ್ಲಿ ಶೇಖರಿಸುವ ವ್ಯವಸ್ಥೆಯಾಗಬೇಕು. ಕೊಳವೆ ಬಾವಿ, ಕೆರೆ, ತೆರೆದ ಬಾವಿ, ನದಿಗಳಿಗೆ ನಾಲೆ ಮೂಲಕ ಹೆಚ್ಚುವರಿ ಮಳೆ ನೀರನ್ನು ಒಯ್ದು ಸಂಗ್ರಹಿಸುವ ಅನುಕೂಲತೆ ಇರಬೇಕು. ಜಮೀನಿನ ಬದುಗಳಲ್ಲಿ ಗಿಡಮರಗಳನ್ನು ನೆಟ್ಟು ನೀರು ಮತ್ತು ಮಣ್ಣನ್ನು ಕಾಪಾಡುವಂತೆ ಮಾಡಬೇಕು. ರಾಜಸ್ಥಾನ, ಗುಜರಾತ್ ಮೊದಲಾದ ರಾಜ್ಯಗಳಲ್ಲಿ, ಮಳೆನೀರನ್ನು ಗುಂಡಿ ತೋಡಿ, ಶೇಖರಿಸಿಕೊಂಡು, ಬೇಸಿಗೆ ಕಾಲದಲ್ಲಿ ಉಪಯೋಗಿಸುವ ವ್ಯವಸ್ಥೆ, ಎಲ್ಲ ಗ್ರಾಮಗಳಲ್ಲಿಯೂ ಇದೆ. ಇದರಿಂದ ಅವರು ಬರಗಾಲದಲ್ಲೂ ಬದುಕುವ ಅನುಕೂಲತೆ ಕಲ್ಪಿಸಿಕೊಂಡಿದ್ದಾರೆ. ಜನರಿಗೆ ಕುಡಿಯುವ ನೀರನ್ನು ಒದಗಿಸಲು ಸರ್ಕಾರವು ಈಗ ''ರಾಜೀವಗಾಂಧಿ ಕುಡಿಯುವ ನೀರಿನ ಯೋಜನೆ'' ಯನ್ನು ರಾಷ್ಟ್ರಾದ್ಯಂತ ಹಮ್ಮಿಕೊಂಡಿದೆ. ಸರ್ಕಾರದ ಇಂಥ ಕಾರ್ಯಕ್ರಮಗಳಲ್ಲಿ ಜನರು ಭಾಗಿಯಾಗಿ, ಜವಾಬ್ದಾರಿಯುತ ಕಾರ್ಯಕ್ರಮಗಳಿಗೆ ಸಂಪೂರ್ಣ ಬೆಂಬಲ ಸೂಚಿಸಬೇಕು, ಮತ್ತು ನೀರನ್ನು ಕ್ರಮಬದ್ಧವಾಗಿ ಬಳಸಬೇಕು.



ಮರೆಯಲಾರದ ಹುಣ್ಣಿಮೆ

ಸುಮತಿ ಪಾಂಗಾಳ
೨೦೨, ಮಾನಸ ಅಪಾರ್ಟ್‌ಮೆಂಟ್
ಲೋಬೋಲೇನ್, ಬೆಂದೂರು
ಮಂಗಳೂರು-೫೭೫ ೦೦೨

ಮಂತ್ರಿ ಮಾಗಧರ ಆಗಮನವಿಲ್ಲ. ಮೈಕಾಸುರನ ಆರ್ಭಟವಿಲ್ಲ. ಆಶ್ಚರ್ಯಕರ ವೆಂಬಂತೆ ನಿಗದಿತ ಸಮಯದಲ್ಲೇ ನಡೆದ ಸಮಾರಂಭ. ಹೊರಗಿನವರ ದೃಷ್ಟಿಯಲ್ಲಿ ಅದೊಂದು ಸರಳ ಕಾರ್ಯಕ್ರಮವಾದರೂ ಮಾನವೀಯ ದೃಷ್ಟಿಯಲ್ಲಿ ಅತಿ ಮಹತ್ತರ ವಾದುದು. ''ಅಂಧಮಿತ್ರ''ಕ್ಕೆ ರಾಜಣ್ಣ ಕೊಡುಗೆಯಾಗಿ ನೀಡಿದ ಸಭಾಭವನವನ್ನು ಉದ್ಘಾಟಿಸಲಿದ್ದರು, ಪ್ರಖ್ಯಾತ ನೇತ್ರ ತಜ್ಞ ಡಾ. ಪ್ರಕಾಶರು, ರಾಜಣ್ಣ 'ಅಂಧಮಿತ್ರ'ದ ಪರಮಭಕ್ತ ಮಾತ್ರವಲ್ಲ ಹೆಸರಾಂತ ನ್ಯಾಯವಾದಿ ಕೂಡ. ವೇದಿಕೆಯ ಮೇಲೆ ಎಲ್ಲರೊಂದಿಗೇ ಕುಳಿತಿದ್ದ ಅಕ್ಕಯ್ಯನವರ ಮನಸ್ಸು ಹತ್ತು ವರ್ಷಗಳಷ್ಟು ಹಿಂದಕ್ಕೆ ಸರಿಯಿತು...

ಹಿಂದಿನ ದಿನವಷ್ಟೆ ಬೇಸಿಗೆಯ ಪ್ರಥಮ ಮಳೆ ಬಿದ್ದಿದ್ದು ಅದರ ತಂಪು ಹೂಗಳ ಕಂಪಿನೊಂದಿಗೆ ಬೆರೆತು ವಾತಾವರಣ ಆಹ್ಲಾದಕರ ವಾಗಿತ್ತು. ಅಂತೆಯೇ ಅಕ್ಕಯ್ಯನವರ ಮನಸ್ಸು ಕೂಡ ಪ್ರಕೃತಿಯ ಸೌಂದರ್ಯಕ್ಕೆ ಮನಸೋತು ಎಲ್ಲ ಯೋಚನೆಗಳನ್ನು ಮರೆತು ಪಶ್ಚಿಮ ದಿಕ್ಕನ್ನು ಸೇರುತ್ತಿದ್ದ ಸೂರ್ಯನನ್ನೇ ತದೇಕ ಚಿತ್ತದಿಂದ ನೋಡುತ್ತಿದ್ದರು.

ಅಷ್ಟರಲ್ಲಿ ಹತ್ತಿರದಿಂದಲೇ 'ನಮಸ್ತೆ ಮೇಡಂ' ಎಂಬ ಧ್ವನಿ ಕೇಳಿ ತಿರುಗುವಷ್ಟರಲ್ಲಿ ಹೆಣ್ಣೊಬ್ಬಳು ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದಳು. ಹುಡುಗಿ ಸುಂದರಿಯೂ ಆಗಿದ್ದಳು. ಹೆದರಿದಂತೆ ತೋರುತ್ತಿದ್ದುದರಿಂದ ಮತ್ತಷ್ಟು ಆಕರ್ಷಣೀಯವಾಗಿ ಕಂಡಳು.

'ಯಾರು ನೀನು? ನನ್ನಿಂದೇನಾಗ ಬೇಕು? ಎಂದಾಗ ಆಕೆ 'ನನ್ನನ್ನು ರಕ್ಷಿಸೋದು ನಿಮ್ಮ ಕೈಯಲ್ಲಿದೆ. ನೀವು ನೇತ್ರದಾನವನ್ನು ಸ್ವೀಕರಿಸುವಿರಲ್ಲವೇ ? ಈಗಲೇ ದಾನ ಮಾಡುವೆ'.

ಈಕೆ ಎಲ್ಲೋ ಮನೆಯಿಂದ ತಪ್ಪಿಸಿಕೊಂಡು ಬಂದಿರಬೇಕು. ಇಲ್ಲವೇ ಮೊದಲು ಚೆನ್ನಾಗಿ ಬಾಳಿಕೊಂಡಿದ್ದವಳು ಯಾವುದೋ ಕಷ್ಟದಲ್ಲಿ ಸಿಲುಕಿರಬೇಕು.. ಒಂದು ಕ್ಷಣ ಯೋಚಿಸಿ, ಇಷ್ಟೊಂದು ಭಾವೋದ್ವೇಗಕ್ಕೆ ಒಳಗಾಗುವುದು ಒಳ್ಳೆಯದಲ್ಲ ಮಗೂ, ವ್ಯಕ್ತಿ ಸತ್ತಾಗ, ಆ ವ್ಯಕ್ತಿ ಮೊದಲೇ ಕಣ್ಣುಗಳನ್ನು ದಾನವಾಗಿ ಇತ್ತಿದ್ದರೆ ಮಾತ್ರ ಸ್ವೀಕರಿಸುತ್ತೇವೆ. ಅದೂ ಅವರು ಪ್ರೌಢರಾಗಿದ್ದು ವಾರೀಸುದಾರರ ಒಪ್ಪಿಗೆಯಿದ್ದರೆ ಮಾತ್ರ. ನಿನ್ನ ತಂದೆ... ತಾಯಿ..?

'ನಮ್ಮ ತಂದೆಯವರು ತೀರಿ ಹೋಗಿ ಎರಡು ತಿಂಗಳಾಯಿತಷ್ಟೆ. ನಮ್ಮಮ್ಮ ಇಲ್ಲಿಗೆ ಬರುವ ಸ್ಥಿತಿಯಲ್ಲಿಲ್ಲ.

''ನಿಮ್ಮ ಮನೆ ಎಲ್ಲಿದೆ ಮಗೂ? ನಿನ್ನೊಂದಿಗೆ ನಾನೂ ಬರಬಹುದೇ?.. ಎಂದಾಗ,

''ಹೌದೆ! ಇಲ್ಲಿಂದ ಹತ್ತೇ ನಿಮಿಷಗಳ ಹಾದಿ''.. ಎಂದು ಇಬ್ಬರೂ ಹೊರಟು ಮಾತನಾಡುತ್ತಾ ಮನೆ ತಲಪುವುದರೊಳಗೆ ಆಕೆಗೆ ನಾಲ್ಕು ಜನ ತಂಗಿಯರು ಇರುವುದಾಗಿಯೂ ತಿಳಿಯಿತು. ಮನೆಯ ಜಗಲಿಯಲ್ಲಿ ಕುಳಿತು ಮಗಳಿಗಾಗಿ ಕಾಯುತ್ತಿದ್ದ ಸುನಂದಮ್ಮ ಮಗಳೊಂದಿಗೆ ಇನ್ಯಾರೋ ಬರುತ್ತಿರುವುದನ್ನು ನೋಡಿ ಆಶ್ಚರ್ಯ ಪಡಲು ಅಕ್ಕಯ್ಯನವರೇ, ಮಾತು ಮೊದಲು ತೊಡಗಿದರು.

''ನನ್ನನ್ನು ಎಲ್ಲರೂ ಅಕ್ಕಯ್ಯ ಎಂದು ಕರೆಯುತ್ತಾರೆ. ನಿಮ್ಮ ಆಶಾ ಇವತ್ತು ನಮ್ಮಲ್ಲಿಗೆ ಬಂದಿದ್ದಳು.....

''ಅಂದರೆ ಆಶಾ ನಿಮಗೆ ಎಲ್ಲ ವಿಚಾರಗಳನ್ನು ಹೇಳಿರಬೇಕಲ್ಲವೆ? ಈಗ ಮದುವೆಯಾಗಿ ಗಂಡನೊಂದಿಗೆ ಸಂತಸದಿಂದ

ಇರಬೇಕಾದವಳು ನಮ್ಮೆಲ್ಲರಿಗಾಗಿ ದುಡಿಯುತ್ತಿದ್ದಾಳೆ'....

'ಅಮ್ಮ ..ಹೊಸದಾಗಿ ನಮ್ಮ ಮನೆಗೆ ಬಂದವರಿಗೆ ಕುಡಿಯಲು ಏನಾದರೂ ಕೊಡದೆ ನಮ್ಮ ಮನೆಯ ಕಷ್ಟಗಳ ಸರಮಾಲೆಯನ್ನೇ ಬಿಚ್ಚುತ್ತಿಯಲ್ಲ''?... ಎನ್ನಲು ಅಕ್ಕಯ್ಯನವರು

''ಹೋಗು ಮಗೂ ನೀನೇ ಕಾಫಿ ಮಾಡಿ ತರುವಿಯಂತೆ''...ಎಂದು ಒಳಗೆ ಕಳುಹಿಸಿ.

''ಅಮ್ಮ .. ನಮ್ಮ ಸಂಸ್ಥೆ ಅಂಧರಿಗೆ ಸಹಾಯ ಮಾಡುವಂಥಾದ್ದು. ನಿಮ್ಮ ಮನೆಯವರಿಗೆ ಯಾವ ತರದ ಸಹಾಯ ಮಾಡಬೇಕೋ ಅರಿಯೆ''..

''ನಮ್ಮ ಅವಸ್ಥೆ ಯಾರಿಗೂ ಬರಬಾರದು. ಆಶಾಳ ತಂದೆ ಇದ್ದಾಗ ಬಡವರಾದರೂ ಇದ್ದುದರಲ್ಲಿ ಸುಖವಾಗಿಯೇ ಇದ್ದೆವು. ಕಣ್ಣಿಲ್ಲದ ಅಂಧರಿಗಿಂತಲೂ ಕಣ್ಣಿದ್ದ ಮದಾಂಧರ ಕಣ್ಣುಗಳಿಂದ ದೂರವಾಗಲೆಂದೇ ಅವರು ಹೊರಟು ಹೋದರಮ್ಮ. ಇವರು ಹೋದ ದಿನ.. ನಿಮಗೆ ಬೇಸರವಲ್ಲ ತಾನೇ?''.. ಎಂದು ನಿಧಾನಿಸಲು,''ಬೇಸರವಿರುತ್ತಿದ್ದರೆ ಆಶಾ ನಮ್ಮಲ್ಲಿಗೆ ಬಂದ ಕೂಡಲೇ ನಾನಾಗಿಯೇ ಇಲ್ಲಿಗೆ ಬರುತ್ತಿದ್ದೆನೇ? ಹೇಳಿಯಮ್ಮ...?''

'' ಆ ದಿನ .. ಆ ದಿನ ನಮ್ಮ ಜೀವನದ ಕರಾಳ ದಿನ.ಇವರು ಮನೆಗೆ ಬರುತ್ಲೆ.. ಆಯಾಸದಿಂದ,

''ಲೇ ಸುನಂದಿ ಬೇಗ ತಣ್ಣಗಿನ ಒಂದ್ಲೋಟ ನೀರು ಕೊಡೇ'' ಎಂದು ಬಾಗಿಲಿಗೊರಗಿ ಕುಳಿತು ಬಿಟ್ಟರು. ನೊಂದ ಮನಸ್ಸು, ಸೋತ ದೇಹ, ಎರಡಕ್ಕೂ ವಿಶ್ರಾಂತಿ ಬೇಕಾಗಿತ್ತು. ಆದರೆ ಆಗಿನ ಆ ಸ್ಥಿತಿಯಲ್ಲಿ ನಮಗೆ ಅದು ಸಾಧ್ಯವಿರಲಿಲ್ಲ. ನಾನೇ ಕೇಳಿದೆ..

''ಇದೇನೂಂದ್ರೆ ಒಳಗೆ ಹೊಕ್ಕುತ್ಲೇ ಸಾ.. ಸೂ... ಅಂತ.. ಹುಷಾರಿದ್ದೀರಿ ತಾನೇ'' ಎಂದು ಗಾಬರಿಯಿಂದ ಹಣೆ ಮುಟ್ಟಿ ನೋಡಿದೆ.

''ನೋಡಿ ಈ ಹೊತ್ತು ನಮ್ಮ ಆಶಾಳನ್ನು ನೋಡಲು ಶೀನು ಯಾವುದೋ ಒಂದು ಒಳ್ಳೆ 'ಪಾರ್ಟೀ'ನ ಕರ್ಕೊಂಡು ಬರ್ತಾನಂತೆ. ಸಂಜೆಯ ಏರ್ಪಾಡಿಗಾಗಿ ಏನೇನು ಸಾಮಾನು ಬೇಕು ಎಲ್ಲ ಪಟ್ಟಿ ಬರೆದು ಕೊಡು.

''ಹುಡುಗನಿಗೆ ಏನು ಕೆಲಸ? ವಿದ್ಯೆ ಎಂತದ್ದು? ಮನೆತನ, ಊರು.. ಎಂದು ನಾನು ಕೇಳಲು,

''ಅಲ್ವೆ... ಒಟ್ಟೊಟ್ಟಿಗೆ ಅಷ್ಟೊಂದು ಪ್ರಶ್ನೆಗಳನ್ನ ಹಾಕ್ತಾ ಹೋದ್ರೆ ಪಟ್ಟನೆ ಉತ್ತರಿಸಲು ನಾನೇನು'ಕಂಪ್ಯೂಟರ್ರೆ'?''..ಎಂದು ನಗಿಸಿದರೂ ಸಾಮಾನು ತರೋ ಗಡಿಬಿಡೀಲಿ ಪಟ್ಟಿ ಹಿಡ್ಕೊಂಡು ಮಧ್ಯಾಹ್ನದ ಕಡು ಬಿಸಲಲ್ಲಿ ಹೊರಟು ಬಿಟ್ಟರು.

ಮತ್ತೆ ವಸಂತ ಬಂದಾಗ ದೂರದಲ್ಲಿ ಕೋಗಿಲೆಯು ಗಾನ ಕೇಳಿಸಿದಂತೆ, ನವಿಲು ನರ್ತಿಸಿದಂತೆ... ಮನೆಯವರ ಮನಸ್ಸಿನಲ್ಲಿಯೂ ಈ ಸಾರಿ ಹುಡುಗ ಒಪ್ಪಿಯಾನೆ.. ಎಂದು ದೂರದ ಆಶೆ ಮೊಳೆಯಿತು!

ಆದರೆ ಹುಡುಗನ ವಿದ್ಯೆ, ಅಂತಸ್ತು, ಉದ್ಯೋಗ, ವ್ಯಕ್ತಿತ್ವ, ಇದಕ್ಕೆ ಸರಿಯಾಗಿ ಬೆಳ್ಳಿ, ಚಿನ್ನ, ವಜ್ರ, ಸ್ಕೂಟರು, ಕಾರು, ಮನೆ, ಬಂಗ್ಲೆ ಕೊಡ್ತೋರಿರುವಾಗ ನಮ್ಮಂಥವರ ಮಕ್ಕಳನ್ನು ಯಾರಮ್ಮ ಕೇಳ್ತಾರೆ? ಬಡವರ ಮನೆಯ ಅಂದವಾದ ಹುಡುಗೀರು ಅಂದ್ರೆ ಕಾಡ್ನಲ್ಲಿ ಸೌರಭ ಬೀರಿ ಅರಳುವ ಪುಷ್ಪಗಳು ತಾಯಿ. ಅದೂ.. ಒಂದೇ.. ಎರಡೇ?.. ಐದೂ ಹುಡುಗೀರೆ...''

''ನೋಡಿ ಸುನಂದಮ್ಮ...ಮಕ್ಳು ಕೇಳಿಸ್ಕೊಂಡ್ರೆ ಬೇಸರ ಮಾಡಿಕೊಳ್ತಾರೆ.. ಸುಮ್ನಿರಿ'' ಎಂದರು ಅಕ್ಕಯ್ಯ

ಅಷ್ಟರಲ್ಲಿ ಆಶಾ ಕಾಫಿಯೊಂದಿಗೆ ಹೊರಗೆ ಬಂದವಳೇ,

''ಏನಮ್ಮಾ ಹೇಳಿದ್ದನ್ನೇ ಎಷ್ಟು ಸಾರಿ ಹೇಳ್ತೀಯಾ? ಹ್ಯಾಗೂ ನನಗೊಂದು ಕೆಲ್ಸಾಂತ ಸಿಗ್ತಲ್ಲ? ಇನ್ನು ಸುಮ್ನಿರು'' .. ಎಂದು ಕಾಫಿ

ಕೊಟ್ಟು ಪುನಃ ಒಳಗೇ ನಡೆದಳು. ಸುನಂದಮ್ಮ ಮುಂದುವರಿಸಿ, ''ಹೂಂ.. ಹೀಗೆ ಹಲವು ಹುಡುಗ್ರು ಬಂದೂ ಬಂದೂ ನೋಡಿ ಹೋದ್ರು. ಒಂದು ಹುಡುಗ ಆಶಾಳನ್ನ ತುಂಬ ಮೆಚ್ಚಿ ಬಿಟ್ಟಿದ್ದಾಂತ ತೋರುತ್ತೆ. ಹುಡುಗನ ತಂದೆ ನಮ್ಗೆ ಇನ್ನೇನೂ ಬೇಡಾ. ನೆಂಟರಿಷ್ಟರನ್ನು ಮದುವೆಗೆ ಕರೆದು ಕೊಂಡು ಬರಲು ಬಸ್ಸಿಗಾಗಿ ಹತ್ತು ಸಾವಿರ ರುಪ್ಯಾ ಕೊಡಲೇ ಬೇಕೆಂದು ಪಟ್ಟು ಹಿಡಿದಿದ್ದಕ್ಕೆ ಇವ್ರು ಒಪ್ಪಿದ್ರು.. ಅಲ್ಲಿ ನೋಡಿ, ಮದುವೆ ಮನೆ ಚಪ್ಪರಕ್ಕಾಗಿ ತೆಗೆಯಿಸಿದ ಹೊಂಡಗಳು ಅಂಗಳದಲ್ಲಿ ಇನ್ನೂ ಹಾಗೇ ಇವೆ. ಮದುವೆಗೆಂದು ಮಾಡಿದ ಅಡುಗೆ...'' ಎಂದು ಬಿಕ್ಕಳಿಸಿದರು ಮುಂದುವರಿಸಿ,...

''ಹೊರಗಡೆ ವಾಲಗ ಕೇಳ್ತಿತ್ತು. ಒಳಗಡೆ ನಮ್ಮವ್ರಿಗೂ ವರನ ತಂದೆಗೂ ಕೊಡ್ಬೋ ದುಡ್ಡಿನ ವಿಚಾರ ಬಿಸಿ ಬಿಸಿ ಚರ್ಚೆ ನಡೀತಾ ಇದ್ದಿರ್ಬೇಕು.''

''ಅಲ್ರೀ.. ಬರೀ ಹತ್ತು ಸಾವಿರ ಸಮಯಕ್ಕೆ ಸರಿಯಾಗಿ ಕೊಡ್ಬೋಕಾಗದವ್ರು ನೀವು ಎಂಥ ಅಲ್ಪ ಮನುಷ್ಯಾಂತ. ಇದ್ರ ಬದ್ಲು ಹಾಳು ಬಾವಿಗಾದ್ರೂ..'' ಎಂದು ಉಮ್ಮಳಿಸಿ ಬರುತ್ತಿದ್ದ ದುಃಖವನ್ನು ತಡೆಯದಾದರು ಸುನಂದಮ್ಮ.

ಅಕ್ಕಯ್ಯನವರು ''ಛೀ ಛಿ ಇವರೂ ಒಬ್ಬ ಮನುಷ್ಯರೇಂತಾ...?'' ಅಷ್ಟು ಮಾತ್ರವಲ್ಲ ಮಗನ ಹತ್ತಿರ ಬಂದು,

''ಏ ಬಿಚ್ಚೋ ಬಾಸಿಂಗಾನಾ.. ನಡ್ಯೋ ಎಂದು ಅಬ್ಬರಿಸಿ, ತಮ್ಮೊಂದಿಗೆ ಬಂದಿದ್ದ ಇತರರನ್ನು ಎಬ್ಬಿಸಿಕೊಂಡು ಬಂದ ಬಸ್ಸಿನಲ್ಲಿಯೇ ಹೋಗಿಯೇ ಬಿಟ್ರು ಹಿಂದಕ್ಕೆ ತಮ್ಮೂರಿಗೆ''

''ಮದುವೆ ಖರ್ಚು ಬೆಳೀತಿದ್ದಂತೆ ಒಮ್ಮೆಗೇ ಹತ್ತುಸಾವಿರ ಜೋಡಿಸೋದು ಕಷ್ಟವಾಗಿ, ಒಂದೇ ಒಂದು ತಿಂಗಳ ಅವಧಿ ಕೇಳಿದ್ದು ದೊಡ್ಡ ತಪ್ಪೆ? .. ಇವ್ರು ಅವಮಾನ ತಾಳಲಾರ್ದೆ.. ಎಲ್ರನ್ನೂ ಬಿಟ್ಬಿಟ್ಟು ವರನ ತಂದೆಯ ಮಾತನ್ನು ನಿಜ ಮಾಡಿಯೇ ಬಿಟ್ರಲ್ಲ...'' ಎಂದು.. ದುಃಖ ತಡೆದುಕೊಂಡು ಬಿಕ್ಕಳಿಸಿದರು. ಮುಂದುವರಿಸುತ್ತಾ''ಇವರ ವಿದ್ಯಾರ್ಥಿ ಆಗಿದ್ದವರೊಬ್ಬರು ಪುಣ್ಯಾತ್ಮ ಬ್ಯಾಂಕಿನ ಅಧ್ಯಕ್ಷರಾಗಿರೋದ್ರಿಂದ ಅವ್ರ ಬ್ಯಾಂಕಿನಲ್ಲಿ ಆಶಾಳಿಗೊಂದು ಕೆಲಸ ಕೊಟ್ರಮ್ಮ. ಮನೆ ನಡಿತಾ ಇದೆ. ಮನ ಮಾತ್ರ ಬಿಕೋ ಅನ್ತಿದೆ. ಇದ್ರ ಎಡೇಲಿ ನಿನ್ನೆ ಆಶಾ ಈ ಪತ್ರಾನ ನನ್ಗಿಲಿಟ್ಟು''...

''ನಿನ್ನ ನಿರ್ಧಾರವನ್ನು... ಅಂದರೆ ಒಪ್ಪಿಗೆಯನ್ನು ... ನಾಳೆಯೇ ತಿಳಿಸಬೇಕೂಂತ ಕೇಳಿದ್ಲು''... ಎಂದು, ಎದ್ದು ಹೋಗಿ ಅಲ್ಲೇ ಪಡಸಾಲೆಯ ಗೋಡೆಯ ಕಪಾಟಿನಲ್ಲಿರಿಸಿದ ಪತ್ರವನ್ನು ಅಕ್ಕಯ್ಯನವರ ಕೈಯಲ್ಲಿರಿಸಿದರು ಸುನಂದಮ್ಮ.

ಕೈಯಲ್ಲಿರಿಸಿದ ಪತ್ರದ ಮೇಲೆ ಬರೆದ ವಿಳಾಸವನ್ನು ಗಮನಿಸಿದವರೇ , ಅದನ್ನು ಮನಸ್ಸಿನಲ್ಲಿಯೇ ಓದಿದರವರು.

ಪ್ರೀತಿಯ ಗೆಳತಿ ಆಶಾ,

ನನ್ನ ಪತ್ರ ನೋಡಿ ನಿನಗೆ ಆಶ್ಚರ್ಯವಾಗ ಬಹುದಲ್ಲವೆ? ತಪ್ಪಿದ್ದರೆ ಕ್ಷಮಿಸಿರಿ. ನಾನು ಅಂಧನೆಂದು ನೀವು ಈಗಾಗಲೇ ಅರಿತಿರುವಿರಿ ನಾನು ಬಿ.ಎ.ಕಲಿಯುತ್ತಿದ್ದಾಗ ಸ್ಕೂಟರು ಅಪಘಾತವಾಗಿ ಕಣ್ಣುಗಳಿಗೆ ಪೆಟ್ಟಾದುದರಿಂದ ಹೀಗಾಯಿತು. ಆಮೇಲೆ ಬ್ರೈಲ್‌ಲಿಪಿಯನ್ನು ಕಲಿತೆ ಈ ವರ್ಷ ಎಮ್.ಎ., ಯಲ್.ಯಲ್.ಬಿ., ವರೆಗೂ ತಲಪಿದ್ದು ನಿಮಗೆ ತಿಳಿದಿರಬಹುದು. ಬೇರೆಯವರು ಹೇಳುವಂತೆ ''ಟೈಪು''ಕೂಡಾ ಮಾಡಬಲ್ಲೆ. ಮೊನ್ನೆ ನೇತ್ರ ತಜ್ಞರಲ್ಲಿಗೆ ಹೋದಾಗ ಅವರು ಕೋರ್ನಿಯಲ್ ಗ್ರಾಫ್ಟಿಂಗ್ ಶಸ್ತ್ರಚಿಕಿತ್ಸೆಯಿಂದ ಖಂಡಿತವಾಗಿಯೂ ದೃಷ್ಟಿಯನ್ನು ಮರಳಿ ಪಡೆಯುವೆನೆಂದು ಭರವಸೆ ಯಿತ್ತಿರುವರು. ಬ್ಯಾಂಕಿನಲ್ಲಿ ನಾನು ಮಾಡೋ ಕೆಲಸಗಳನ್ನು ನೀವೂ ಗಮನಿಸಿರಬೇಕು.

ಒಂದು ವೇಳೆ ದೃಷ್ಟಿಯ ಪುನಃಶ್ಚೇತನ ವಾದರೆ...ನಿಮ್ಮನ್ನು ಕಣ್ಣು ತುಂಬ ನೋಡ

ಬಹುದಲ್ಲ.. ಆಮೇಲೆ ಆಶಾ.. ನೀವು ನನ್ನ ಬಾಳಪಥದ ಆಶಾದೀಪವಾಗಬಲ್ಲಿರಾ? ಚೆನ್ನಾಗಿ ಯೋಚಿಸಿ, ವಾರದೊಳಗೆ ಉತ್ತರ ತಿಳಿಸಿರಿ. ಉತ್ತರ ನಕಾರಾತ್ಮಕವಾದರೂ ನಾವಿಬ್ಬರೂ ಗೆಳೆಯರೇ ಎಂಬುದನ್ನು ಮರೆಯದಿರಿ. ನಿಮ್ಮ ಕಷ್ಟಗಳಿಗೆ ಆಗಾಗ ನೆರವಾಗುತ್ತಿದ್ದುದು ನನ್ನ ಸ್ವಾರ್ಥಕ್ಕೇ ಎಂದು ಅನ್ಯಥಾ ಭಾವಿಸಬೇಡಿರಿ.

ನಿಮ್ಮವನೇ
ರಾಜ

ಪತ್ರ ಓದಿ ಅಕ್ಕಯ್ಯನವರು...''ಹುಡುಗ ಬಹಳ ಬುದ್ಧಿವಂತ. ನಮ್ಮ ಸಂಸ್ಥೆಯಲ್ಲಿ ಅಂಥರಿಗೆ ಹಲವು ತರದ ಸಹಾಯ ಮಾಡುತ್ತೇವಲ್ಲ? ಅದಕ್ಕಾಗಿ ಆರುವರ್ಷಗಳ ಕಾಲ ನಮ್ಮೊಂದಿಗಿದ್ದ ಅವನಿಗೋಸ್ಕರವೋ ಎಂಬಂತೆ ವೃದ್ಧರೊಬ್ಬರು ದೃಷ್ಟಿ ದಾನವನ್ನು ಮಾಡಿದ್ದು, ಕೆಲವೇ ದಿನಗಳಲ್ಲಿ ಇಹಲೋಕ ವನ್ನು ತ್ಯಜಿಸಿ ಹೋಗುವಷ್ಟು ಭಯಂಕರ ಖಾಯಿಲೆಯಿಂದ ನರಳುತ್ತಿದ್ದಾರೆ. ಕಣ್ಣಿನ ಕಸಿ ಮಾಡುವ ಶಸ್ತ್ರ ಚಿಕಿತ್ಸೆಗೆ ಈ ಕಣ್ಣುಗಳೂ ಹೊರತಾಗಿಲ್ಲ. ಹಾ.. ಈಗ ..ಗೊತ್ತಾಯ್ತು ಆಶಾ ನಮ್ಮಲ್ಲಿಗೆ ಬಂದ ಕಾರಣ.''

''ಆಶಾ ಒಳಗೆ ಕುಳಿತು ಏನು ಮಾಡುತ್ತಿಯಮ್ಮ. ಬಾ ಮಗೂ,'' ... ಎಂದು ಕರೆದಾಗ ಆಶಾ ಹೊರಬಂದಳು.

''ನಮ್ಮ ರಾಜಣ್ಣನಿಗಾಗಿ ನಿನ್ನ ಒಂದು ಕಣ್ಣನ್ನು ಇಂದೇ ದಾನವೀಯಲು ಹೊರಟಿದ್ದಿಯಲ್ಲವೆ? ಅದಕ್ಕೆ ಬದಲಾಗಿ ಅವನ ಹೃದಯವನ್ನೇ ಕದ್ದಿಯಲ್ಲ? ನೋಡು ಮಗೂ ಸತ್ತವರ ಕಣ್ಣುಗಳನ್ನು ಅದೂ ಅವ್ರು ಮೊದಲೇ ದಾನವಿತ್ತಿದ್ದರೆ ಮಾತ್ರವೇ ಸ್ವೀಕರಿಸುತ್ತೇವೆ ಹೊರತು ಜೀವಂತವಾಗಿರುವವರ ಕಣ್ಣುಗಳನ್ನಲ್ಲ. ರಾಜಣ್ಣನಿಗೆ ಶಸ್ತ್ರಕ್ರಿಯೆಮಾಡೋದಂತೂ ನಿಜವಾಗಿದೆ. ಅವನಿಗೆ ದೃಷ್ಟಿ ಬಂದರೆ ಅವನ ಬದುಕೇ ಉಜ್ವಲ. ದೇವರ ಗೂಡಿನಲ್ಲಿ ಆಶಾ ಹಚ್ಚಿರಿಸಿದ ದೀಪ ಮುಂದೆ ಬರಲಿರುವ ಶುಭ ಸಂಕೇತದ ಚಿಹ್ನೆಯಾಗಿ ಉರಿಯುತ್ತಿತ್ತು''...

ಆ ದಿನ.. ಅವನಿಗೆ ಶಸ್ತ್ರ ಚಿಕಿತ್ಸೆಯಾಗಿ... ಕೆಲವು ದಿನಗಳ ಬಳಿಕ .. ರಾಜಣ್ಣ ಹಲವು ವರ್ಷಗಳ ಮೇಲೆ ಮತ್ತೆ ಬೆಳಕು ಕಂಡಾಗ 'ಅಂಧಮಿತ್ರ'ದಲ್ಲಿ ಪಾಯಸ, ಸಿಹಿತಿಂಡಿಯ ಅಡುಗೆ ಮಾಡಲಾಗಿತ್ತು. ಹುಣ್ಣಿಮೆಯ ದಿನವಾದ ಅಂದು ಪ್ರಕೃತಿಯೂ ಎಲ್ಲ ಯೋಚನೆಗಳನ್ನು ಮರೆತು ಸೌಂದರ್ಯಕ್ಕೆ ಪ್ರಾಧಾನ್ಯವಿತ್ತಿತ್ತು. ರಾಜಣ್ಣನೊಂದಿಗೇ ಇಡೀ 'ಅಂಧಮಿತ್ರ' ಹುಣ್ಣಿಮೆಯ ಬೆಳಕನ್ನು ಸವಿಯಿತು.

ನಿರ್ವಾಹಕಿ ''ಈಗ ಅಕ್ಕಯ್ಯನವರು ಮಾತನಾಡಲಿದ್ದಾರೆ''..ಎಂದಾಗ ಅವರ ಯೋಚನಾ ಲಹರಿಗೆ ಅಡ್ಡಿಯಾಯಿತು. ಆನಂದ ತುಂದಿಲರಾಗಿ ಮಾತು ಹೊರಡದಾಯಿತುಅವರಿಂದ.

ಎದ್ದು ನಿಂತು, ''ಸಭಾಸದರೇ ಅಂಗವಿಕಲರ ಬದುಕು ಸ್ನೇಹಪರ ಸಂಬಂಧಗಳು ದೊರೆತರೆ ಹೇಗೆ ಅರ್ಥಪೂರ್ಣವಾಗುವುದು ಎಂಬುದನ್ನು ನೋಡಿದಿರಿ. ರಾಜಣ್ಣನ ಬಾಳಿಗೆ ದೀಪ ಬೆಳಗಿದವರು ಅವರ ಮಡದಿ ಶ್ರೀಮತಿ ಆಶಾರವರು....

ರಾಜಣ್ಣ ದಾನವಾಗಿತ್ತ ಸಭಾಗೃಹದ ಉದ್ಘಾಟನೆಯನ್ನು ಮೂಕಪ್ರೇಕ್ಷಕಿಯಾಗಿ ಆತನ ಸನಿಹದಲ್ಲಿಯೇ ನಿಂತು ನೋಡುತ್ತಿದ್ದ ಆಶಾಳ ಮುಖದಲ್ಲಿ ತೃಪ್ತಿ ಸಾರ್ಥಕ್ಯದ ಭಾವ ಹೊರಹೊಮ್ಮುತ್ತಿತ್ತು.

ಕೂಸಿಗೆ ಹೊಸನೋಟ

ಟಿ.ವಿ. ಅನ್ನಪೂರ್ಣಮ್ಮ
೭೩. ಆರನೆಯ ಅಡ್ಡರಸ್ತೆ
ಬೈರಸಂದ್ರ, ಒಂದನೆಯ ಬ್ಲಾಕ್
ಪೂರ್ವ, ಜಯನಗರ,
ಬೆಂಗಳೂರು-೫೬೦೦೧೧

ಬೆನ್ನಿ ಚ್ಯೂಯಂಗ್, ತನ್ನ ಕಂದನ ನಿದ್ದೆ ಕೆಡಿಸಬಾರದೆಂದು ಚಿಂತಿಸುತ್ತಾ ತನ್ನ ಕೈಗಳನ್ನೂರಿಕೊಂಡು ಪ್ರವೇಶ ಕೊಠಡಿಯ ಮೂಲಕ ಮಗು ಮಲಗಿದ್ದ ಕೋಣೆಗೆ ಹೋದ. ಆದರೆ ಆತ ಕದ ತೆರೆದಾಗ ಅದು ತುಸು ಸದ್ದು ಮಾಡಿತು. ಕಿಟ್ಟಿ ಎಚ್ಚೆತ್ತು ತನ್ನ ತಲೆ ಎತ್ತಿದಳು

ಹೊಸಲು ದಾಟಿದ ಚ್ಯೂಯಂಗ್ ಒಂದು ಅದ್ಭುತ ದೃಶ್ಯ ಕಂಡು ಅಲ್ಲೇ ನಿಂತ. ಪ್ರವೇಶ ಕೊಠಡಿಯಿಂದ ಬೆಳಕು ಹಿಂದಕ್ಕೆ ಮಗುವಿನ ಕಣ್ಣುಗಳ ಮೇಲೆ ಪ್ರತಿಫಲಿಸಿ ಅವು ಕನ್ನಡಿಗಳೋ ಎಂದೆನಿಸಿದುವು. ಆತ ತನ್ನ ಹೆಂಡತಿ ಚು ಸೊ-ಹಿಂಗ್‌ಳನ್ನು ತತ್‌ಕ್ಷಣ ಕರೆದ, ''ಬೇಗ ಬಾ, ಕಿಟ್ಟಿಯ ಕಣ್ಣುಗಳು ಬೆಕ್ಕಿನ ಕಣ್ಣುಗಳಂತಿವೆ.''

ಹಾಂಗ್‌ಕಾಂಗ್‌ನ ಫೈರ್‌ಮನ್ ಹಾಗೂ ಬ್ಯಾಂಕಿನಲ್ಲಿ ಟೆಲ್ಲರ್ ಆಗಿದ್ದ ಅವನ ಹೆಂಡತಿಗೆ ಮುಂದಿನ ಎರಡು ದಿನಗಳು ಮಸುಕು ಮಸುಕಾಗಿದ್ದುವು. ತಮ್ಮ ಮೂರು ವರ್ಷ ವಯಸ್ಸಿನ ಫಿಯೋನಾಳನ್ನು ನೋಡಿಕೊಳ್ಳಲು ಒಬ್ಬಾಕೆಯನ್ನು ಕಂಡುಕೊಂಡ ನಂತರ ಆ ಕಿರಿವಯಸ್ಸಿನ ಹೆತ್ತವರು ಕಿಟ್ಟಿಯನ್ನು ಕಂಬಳಿಯಲ್ಲಿ ಸುತ್ತಿ ಟ್ಯಾಕ್ಸಿಯಲ್ಲಿ ಆಸ್ಪತ್ರೆಗೆ ಹೋದರು. ತುರ್ತು ಚಿಕಿತ್ಸಾ ಕೊಠಡಿ ಯಲ್ಲಿ ವೈದ್ಯರು ಹೇಳಿದ್ದನ್ನು ಗಮನವಿಟ್ಟು ಕೇಳಿದ ಚ್ಯೂಯಂಗ್ ಚಿಂತಿತನಾದ.

ಮರುದಿನ ಕಣ್ಣಿನ ಆಸ್ಪತ್ರೆಯಲ್ಲಿ ತಜ್ಞವೈದ್ಯ ಸ್ಪಷ್ಟವಾಗಿ ಹೇಳಿದ, ''ನಿಮ್ಮ ಮಗಳ ಎರಡು ಕಣ್ಣುಗಳಲ್ಲೂ ಅರ್ಬುದ ರೋಗ ವಿದೆ.''

''ಹಾಗಾಗಲು ಸಾಧ್ಯವೇ ಇಲ್ಲ. ಆಕೆ ಒಂದು ಆರೋಗ್ಯಕರ ಮಗು'', ಚ್ಯೂಯಂಗ್ ಉತ್ತರಿಸಿದ.

ಆ ವಿಶೇಷ ತಜ್ಞ ಸ್ಪಷ್ಟವಾಗಿ ಹೇಳಿದ, ''ಇದರಲ್ಲೇನೂ ತಪ್ಪಿಲ್ಲ. ಆಕೆಯ ಎಡಕಣ್ಣನ್ನು ಕೂಡಲೇ ತೆಗೆಯಬೇಕು. ಬಲಗಣ್ಣಿನಲ್ಲಿ ಸ್ವಲ್ಪ ದೃಷ್ಟಿಯನ್ನು ಉಳಿಸಲು ಪ್ರಯತ್ನಿಸಬಹುದು.''

ಚ್ಯೂಯಂಗ್ ತನಗೆ ಇನ್ನೊಬ್ಬರ ಸಲಹೆ ಬೇಕಾಗಿದೆ ಎಂದು ಕೊಂಡ.

ಮತ್ತೊಬ್ಬ ತಜ್ಞನೂ ಈ ರೋಗ ನಿದಾನವನ್ನು ಸಮರ್ಥಿಸಿದ. ಉಂಟಾಗುವ ಪ್ರತಿಬಿಂಬವನ್ನು ಸ್ವೀಕರಿಸಿ, ಅದನ್ನು ಕಣ್ಣಿನ ನರದ ಮೂಲಕ ಮಿದುಳಿಗೆ ತಲುಪಿಸುವ ಕಣ್ಣಿನ ಒಳಪದರದ ದೃಷ್ಟಿಪಟಲದಲ್ಲಿ ಕಿಟ್ಟಿಗೆ ಅಹಿತಕರ ಅರ್ಬುದ ರೋಗವಿದೆ. ಒಡನೆ ಆಕೆಗೆ ಶಸ್ತ್ರಚಿಕಿತ್ಸೆ ಮಾಡಬೇಕು.

ಮಾರನೆಯ ದಿನ ಶಸ್ತ್ರಚಿಕಿತ್ಸೆ ಮಾಡಲಾಯಿತು. ಮಗುವಿನ ಪರಿಸ್ಥಿತಿ ವೈದ್ಯರ ಕಡೆಗೆ ವಾಲುತ್ತಿರುವುದನ್ನು ನೋಡಿದಾಗ ಚ್ಯೂಯಂಗ್‌ಗೆ ತಾನು ತೆಗೆದುಕೊಳ್ಳಬೇಕಾದ ನಿರ್ಣಯ ಇದೊಂದೇ ಎನಿಸಿತು. ಆದರೂ ಆತನ ಮನಸ್ಸಿನಲ್ಲಿ ಒಂದು ಅನುಮಾನ ಕಾಡುತ್ತಿತ್ತು. ಹಿಂದೆ ಒಮ್ಮೆ ಆರೋಗ್ಯಕ್ಕೆ ಸಂಬಂಧಪಟ್ಟ ಒಂದು ತುರ್ತು

ಏಪ್ರಿಲ್ ೨೦೦೧ರ ರೀಡರ್ಸ್ ಡೈಜಸ್ಟ್‌ನಲ್ಲಿ ಪ್ರಕಟವಾದ ಮಾರ್ಕ್ ಲರ್ನರ್ ರವರ ''ಬೆನ್ನಿ ಚ್ಯೂಯಾಂಗ್ಸ್ ಗ್ರೇಟೆಸ್ಟ್ ರೆಸ್ಕ್ಯೂ'' ಎಂಬ ಲೇಖನದ ಭಾವಾನುವಾದ

ಸಂದರ್ಭದಲ್ಲಿ ಆತ ವೈದ್ಯರಲ್ಲಿ ನಂಬಿಕೆ ಇರಿಸಿದ್ದ ಆದರೂ ಆತ ಒಂದು ಕಾಲು ಕಳೆದುಕೊಳ್ಳ ಬೇಕಾಯಿತು.

೧೯೮೩ನೇ ಇಸವಿ ಸೆಪ್ಟೆಂಬರ್ ೨೦ ರಂದು ಬೆಳಿಗ್ಗೆ ಹಾಂಗ್‌ಕಾಂಗ್‌ನ ಅಗ್ನಿಶಾಮಕ ದಳದವರು,ಅವರ ಕಾನೂನು ರಹಿತ ವಾಸಸ್ಥಾನ ವನ್ನು ತಲಪಿದಾಗ ತೀವ್ರವಾಗಿ ಬೀಸಿದ ಪ್ರಚಂಡ ಬಿರುಗಾಳಿ ಅವರ ಆ ವಾಸಸ್ಥಾನದ ಮೂಲಕ ಟನ್ನುಗಟ್ಟಲೆ ಮಣ್ಣನ್ನು ತೊಳೆದು ಕೊಂಡು ಹೋಗಿತ್ತು. ಬೆನ್ನಿ ಚ್ಯೂಯಂಗ್ ಮತ್ತು ವೈಲ್ಯೂಂಗ್ ಸೇರಿ ಬಲಿಪಶುಗಳನ್ನು ಹುಡುಕಲಾರಂಭಿಸಿದರು.

ಮುಂದುವರಿಯುತ್ತ ಹೋದಂತೆ ಕೊಚ್ಚೆ ಹೆಚ್ಚಾಗುತ್ತ ಆತಂಕ ಹೆಚ್ಚಾಯಿತು. ಕಾಂಕ್ರೀಟಿನ ಹಾಗೂ ಮರದ ಚೂರುಗಳು ಮಧ್ಯೆ ಸಹಾಯಕ್ಕಾಗಿ ಚೀರಿದ ಒಂದು ಆರ್ತನಾದ ಕೇಳಿಸಿತು, ಒಂದು ಗುಡಿಸಲಿನ ಪಾಳು ಭೂಮಿಯಲ್ಲಿ ಸಿಕ್ಕಿ ಹಾಕಿಕೊಂಡಿದ್ದ ವೃದ್ಧೆಯ ಧ್ವನಿ ಅದಾಗಿತ್ತು.

ಮಳೆ ಮತ್ತು ಗಾಳಿಗೆ ಎದುರಾಗಿ ಹೋರಾಡುತ್ತ ಚ್ಯೂಯಂಗ್ ಮತ್ತು ಅವನ ಸಹೋದ್ಯೋಗಿ, ಆ ಹೆಂಗಸನ್ನು ಒಂದು ಸುರಕ್ಷಿತ ಸ್ಥಳಕ್ಕೆ ಕೊಂಡೊಯ್ದರು. ಪರ್ವತಗಳ ಕಡೆ ಮೇಲ್ಭಾಗಕ್ಕೆ ಅರ್ಧದಾರಿ ಹೋದಾಗ ಇನ್ನೊಬ್ಬ ಅಗ್ನಿಶಾಮಕ ದಳ ಸಿಬ್ಬಂದಿ ಕೂಗಿದ.''ಆಕೆಯನ್ನು ನನಗೊಪ್ಪಿಸು''.

ಆ ಹೆಂಗಸನ್ನು ಒಪ್ಪಿಸಿದ ಕೆಲವೇ ಕ್ಷಣಗಳಲ್ಲಿ ಚ್ಯೂಯಂಗ್ ಭಯದಿಂದ ಕೂಡಿದ ಒಂದು ಚೀರುವಿಕೆಯನ್ನು ಕೇಳಿದ. ''ಓಡು,ಓಡು, ಭೂಕಂಪವಾಗುತ್ತಿದೆ''.

ಆದರೆ ಓಡಲು ಸಮಯವೇ ಸಿಗಲಿಲ್ಲ. ಒಂದು ಕ್ಷಣದಲ್ಲಿ ಒಂದು ಉಬ್ಬರದ ಮಣ್ಣಿನ ಅಲೆ ಆತನ ಕಾಲುಗಳನ್ನು ಮಣ್ಣಿನ ಮಧ್ಯೆ ಸೆಳೆದುಕೊಂಡು ಹೋಯಿತು. ಆತ ಸಮುದ್ರ ದೊಳಕ್ಕೆ ಎಳೆದುಕೊಂಡು ಹೋದಂತೆ ಕಾಂಕ್ರೀಟಿನ ಚಪ್ಪಡಿ ಹಾಗೂ ಮರದ ಹಲಗೆ ಆತನ ಶರೀರಕ್ಕೆ ಅಪ್ಪಳಿಸಿದುವು.

ದಡ ೩ಮೀಟರಿನಷ್ಟು ದೂರವಿತ್ತು. ಆದರೆ ಚ್ಯೂಯಂಗ್ ಒಂದು ಭಾರವಾದ ಸಿಮೆಂಟಿನ ಚಪ್ಪಡಿಗೆ ಸಿಕ್ಕಿಹಾಕಿಕೊಂಡುಬಿಟ್ಟ. ಬಲಿಷ್ಠ ಉಕ್ಕಿನ ಸಲಾಕಿ ಆತನ ಮೊಣಕಾಲಿನ ಕೆಳಭಾಗಕ್ಕೆ ಚುಚ್ಚಿಕೊಂಡಿತು. ಬಾಯೊಳಗಿನ ಮಣ್ಣು ಮಿಶ್ರಿತ ನೀರನ್ನು ನುಂಗುತ್ತ ಅಲೆಗಳ ಮೇಲೆ ತಲೆಯೆತ್ತಲು ಆತ ಹೋರಾಡುತ್ತಲೇ ಇದ್ದ.

ಆತನ ಜೊತೆ ಬೆಂಕಿ ಆರಿಸಲು ನಿಯಮಿತ ರಾದ ಕೆಲಸಗಾರರು ದಡದಿಂದ ವಿಸ್ತರಿಸುತ್ತಾ ಒಂದು ಮಾನವ ಸರಪಣಿಯನ್ನು ನಿರ್ಮಿಸಿ ದರು. ಒಬ್ಬಾತ ಆತನಿಗೆ ಉಸಿರಾಡಲು ಒಂದು ರಬ್ಬರಿನ ಕೊಳವೆಯನ್ನು ಕೊಟ್ಟ. ಇತರರು ಆತನನ್ನು ಗಡಾರಿಯಿಂದ (ಹಾರೆಗೋಲು) ಮುಕ್ತಗೊಳಿಸಲು ಬಲುವಾಗಿ ಪ್ರಯತ್ನಿಸಿದರು. ಅಂತೂ ಬಿಡುಗಡೆಗೊಂಡಾಗ ಚ್ಯೂಯಂಗ್‌ಗೆ ಅತೀವವೇದನೆಯಾದದ್ದು ನೆನಪಿತ್ತು. ಆಂಬ್ಯುಲೆನ್ಸಿ ನಲ್ಲಿ ಆತನನ್ನು ಕರೆದೊಯ್ಯಲಾಯಿತು.

ಹಲವು ಗಂಟೆಗಳ ತರುವಾಯ ಆತ ಮರಳು ಮತ್ತು ಮಣ್ಣನ್ನು ಉಗಿಯುತ್ತ ಕೆಮ್ಮುತ್ತ ಎಚ್ಚರಗೊಂಡ. ಒಬ್ಬ ವೈದ್ಯ ಚ್ಯೂಯಂಗ್‌ನಿಗೆ ಕಾಲ್ಬೆರಳುಗಳನ್ನು ಕದಲಿಸಲು ಸಾಧ್ಯವೇ ಎಂದು ಕೇಳಿದ. ಚ್ಯೂಯಂಗ್ ಹತ್ತು ಬೆರಳುಗಳನ್ನೂ ಚಲಿಸಲು ಪ್ರಯತ್ನಪಟ್ಟ.

ಏನೇ ಆದರೂ ಮಾರನೆಯದಿನ ಅರ್ಬುದ ರೋಗ ಕಾಣಿಸಿಕೊಂಡಿತು. ಚ್ಯೂಯಂಗ್‌ನನ್ನು ತೀವ್ರ ನಿಗಾದಲ್ಲಿಡಲಾಯಿತು. ರೋಗದ ಸೋಂಕನ್ನು ದೂರಮಾಡಲು ಎರಡು ವಾರಗಳು ಹೋರಾಡಲಾಯಿತು. ಆದರೆ ಯಾವ ಉಪಯೋಗವೂ ಆಗಲಿಲ್ಲ.

ಪ್ರಾಣವನ್ನುಳಿಸಬೇಕಾದರೆ ಆತನ ಕಾಲನ್ನು ಕತ್ತರಿಸಬೇಕಾಗುವುದೆಂದು ಒಬ್ಬ ವೈದ್ಯರು ಹೇಳಿದರು. ಸಾಧ್ಯವಾದಷ್ಟು ಶೀಘ್ರ ವಾಗಿ ಶಸ್ತ್ರಚಿಕಿತ್ಸೆ ಮಾಡಬೇಕಾಗಿತ್ತು.

ಚ್ಯೂಯಂಗ್ ದಿಗ್ಭ್ರಮೆಗೊಂಡ ಪ್ರಾರಂಭ ದಲ್ಲಿ ವೈದ್ಯರ ನಿರ್ಣಯವನ್ನು ಆತ ತಿರಸ್ಕರಿಸಿದ. ಆದರೆ ಮಾರನೆಯ ದಿನ ವೈದ್ಯರು ಮೊಣಕಾಲಿನ ಕೆಳಗಿನ ಆತನ ಎಡಗಾಲನ್ನು ಕತ್ತರಿಸಿಬಿಟ್ಟರು. ಇನ್ನೂ ಏಳು ಶಸ್ತ್ರಚಿಕಿತ್ಸೆಗಳನ್ನು ಮಾಡಲಾಯಿತು. ಆರು ತಿಂಗಳುಗಳ ಬಳಿಕ ತನ್ನ ಕೆಲಸವನ್ನು ವಹಿಸಿಕೊಂಡ ಆತನಿಗೆ ಮೇಜಿನ ಮುಂದೆ ಕುಳಿತು ಮಾಡುವ ಕೆಲಸವನ್ನು ಕೊಡಲಾಯಿತು.

ಚ್ಯೂಯಾಂಗ್ ಆದಷ್ಟು ಉತ್ತಮ ರೀತಿ ಯಲ್ಲಿ ಜೀವನಕ್ಕೆ ಹೊಂದಿಕೊಳ್ಳುತ್ತಾ ಕೃತಕ ಕಾಲಿನ ಸಹಾಯದಿಂದ ನಡೆಯುವುದನ್ನು ಕಲಿತ. ಚೂಳ ಪ್ರೀತಿ ಹಾಗೂ ಫಿಯೋನ ಮತ್ತು ಕಿಟ್ಟಿಯ ಜನ್ಮದಿಂದ ಆತ ಉತ್ಸಾಹ ಪಡೆದುಕೊಂಡ. ಆದರೂ ಸಂದೇಹ ಆತನನ್ನು ಕಾಡುತ್ತಲೇ ಇತ್ತು. ಆತನ ಕಾಲನ್ನು ಉಳಿಸಲು ವೈದ್ಯರು ಸಾಕಷ್ಟು ಪ್ರಯತ್ನ ಪಟ್ಟರೇ? ಅವರು ಹೇಳಿದ್ದನ್ನು ಆತ ಒಪ್ಪಿಕೊಳ್ಳಬೇಕಾಗಿತ್ತೇ?

ನಾಲ್ಕು ವರ್ಷಗಳ ತರುವಾಯ ಈ ಸಂದೇಹಗಳು ಪುನಃ ತಲೆಯೆತ್ತಿದುವು. ಶಸ್ತ್ರ ಚಿಕಿತ್ಸೆಯಿಂದ ಕಿಟ್ಟಿ ಗುಣಮುಖಳಾದಳು. ಆದರೆ ಕಣ್ಣಿನ ಮೇಲೆ ಕಟ್ಟಿದ್ದ ಬ್ಯಾಂಡೇಜಿ ನೊಂದಿಗೆ ಆಕೆಯ ದೃಷ್ಟಿ ತಿರುಚಿಕೊಂಡಿತ್ತು. ವೈದ್ಯರು ಆಕೆಯ ಇನ್ನೊಂದು ಕಣ್ಣನ್ನು ರಕ್ಷಿಸಲಾರ ದಾದರೇ? ಚ್ಯೂಯಾಂಗ್ ಸ್ತಂಭಿತನಾದ.

ಆಸ್ಪತ್ರೆಯ ಲಿಫ್ಟಿನ ಹತ್ತಿರ ಆತನ ಪುನಃರ್ನಿವಾಸಕ್ಕೆ ಸಹಾಯ ಮಾಡಿದ್ದ ಶರೀರ ವಿಜ್ಞಾನ ಚಿಕಿತ್ಸಕಳಾದ ಕರೋಲ್ ಕ್ರಾಸ್‌ಬೈನನ್ನು ಸಂಧಿಸಿದ. ಆಕೆ ವಿವರಿಸಿದಳು, ಕಿಟ್ಟಿಯ ಇನ್ನೊಂದು ಕಣ್ಣಿನಲ್ಲಿ ಕೇವಲ ಶೇಕಡ ಹತ್ತರಷ್ಟು ದೃಷ್ಟಿ ಮಾತ್ರ ಉಳಿಯುವುದೆಂದು ಅವರು ಹೇಳುತ್ತಾರೆ.''

ಕ್ರಾಸ್‌ಬೈ ಸಹಾಯ ಹಸ್ತ ನೀಡಿದಳು. ಅವಳು ವಿವರಿಸಿದಳು. ''ಬಹುಶಃ ಇವಕ್ಕೆ ಇನ್ನೂ ಬೇರೆ ಚಿಕಿತ್ಸೆಗಳಿವೆ.''

ಕ್ರಾಸ್ ಬೈ ಲಂಡನ್ನಿನಲ್ಲಿದ್ದ ಕಣ್ಣಿನ ಆಸ್ಪತ್ರೆ ಮೂರ್‌ಫೀಲ್ಡ್‌ಗೆ ಕರೆಕೊಟ್ಟಳು. ಅವರು ಮಗುವನ್ನು ಕರೆದುಕೊಂಡು ಹೋಗುವ ರೆಂದೂ ಆದರೆ ಸಾಧ್ಯವಾದಷ್ಟು ಶ್ರೀಘ್ರವಾಗಿ ಆಕೆಯನ್ನು ಪರೀಕ್ಷಿಸಬೇಕಾಗಿದೆಯೆಂದರು.

ಚ್ಯೂಯಾಂಗ್ ಲಂಡನ್ನಿನಲ್ಲಿದ್ದ ದೂರದ ಸಂಬಂಧಿಗಳನ್ನು ಸಂಪರ್ಕಿದ. ಅವರು ಚ್ಯೂಯಾಂಗ್ ಆತನ ಹೆಂಡತಿ ಮತ್ತು ಮಗಳಿಗೆ ತಮ್ಮಲ್ಲಿ ವಸತಿ ಸೌಕರ್ಯ ಮಾಡಿಕೊಡು ವರೇ?

ಜುಲಿಯ ಟಾಂಗ್ ಪುಯಿಯಿಂಗ್ ತನ್ನ ಗಂಡನಿಗೆ ಹೇಳಿದಳು''ನಮಗೆ ಅವರ ಪರಿಚಯವಿಲ್ಲ'' ಆದರೆ ಅವರು ಕುಟುಂಬ ದವರು. ನಾವು ಸಹಾಯ ಮಾಡಬೇಕು.''

ಹಾಗಾಗಿ ಶಸ್ತ್ರಚಿಕಿತ್ಸೆಯಾದ ಎರಡು ದಿನಗಳ ನಂತರ ಲಂಡನ್ನಿಗೆ ಹೋಗುವ ಬ್ರಿಟಿಷ್ ಏರ್‌ವೇಸ್ ವಿಮಾನವನ್ನು ಚ್ಯೂಯಾಂಗ್, ಚೂ ಮತ್ತು ಕಿಟ್ಟಿ ಹತ್ತಿದರು.

ಮೂರ್‌ಫೀಲ್ಡ್ ಆಸ್ಪತ್ರೆಯಲ್ಲಿ ನೇತ್ರ ಚಿಕಿತ್ಸಕ ಜಾನ್ ಹಂಗರ್ ಫೋರ್ಡ್, ಕಿಟ್ಟಿಯ ಬಲ ದೃಷ್ಟಿಪಟಲದಲ್ಲಿ ನಾಲ್ಕು ಮಾರಕ ದುರ್ಮಾಂಸದ ಗೆಡ್ಡೆಗಳಿರುವ ಸ್ಥಾನ ಆಕೆಯ ಕಣ್ಣಿನ ದೃಷ್ಟಿಗೆ ಇನ್ನೂ ಬಾಧಿಸಿಲ್ಲ ಎಂಬುದನ್ನು ಗಮನಿಸಿದರು.

ಆತ ತಿಳಿಸಿದ ''ನನಗೆ ಸಂತೋಷ ಸಮಾಚಾರ ಸಿಕ್ಕಿದೆ'' ನಿಮ್ಮ ಮಗಳು ತನ್ನ ಬಲಗಣ್ಣಿನಲ್ಲಿ ಶೇಕಡ ೯೦ರಷ್ಟು ದೃಷ್ಟಿಯನ್ನು ಉಳಿಸಿಕೊಳ್ಳಬಹುದು.''

ಚ್ಯೂಯಾಂಗ್‌ನ ಹೃದಯ ತೀವ್ರವಾಗಿ ಹೊಡೆದುಕೊಳ್ಳುತ್ತಿತ್ತು. ಈಗ ಅದು ಹೆಚ್ಚೂ ಕಡಿಮೆ ನಿಂತಿತು. ತೀವ್ರ ನಿರಾಶೆಯಿಂದ ಮೌನವಾಗಿದ್ದ ಆತನ ಹೆಂಡತಿ ಉತ್ಸಾಹ ಗೊಂಡಳು.

ಇದುವರೆಗೂ ಹಾಂಗ್‌ಕಾಂಗ್‌ನಲ್ಲಿ ಪ್ರಾಪ್ತವಲ್ಲದ, ಅರ್ಬುದ ರೋಗದ ಕಣ ಗಳನ್ನು ಕೊಲ್ಲುವ ಹಾಗೂ ದುರ್ಮಾಂಸದ ಗೆಡ್ಡೆಗಳನ್ನು ಕುಗ್ಗಿಸುವ ಒಂದು ಹೊಸ ತಂತ್ರವನ್ನುಪಯೋಗಿಸುವುದಾಗಿ ವಿವರಿಸಿ ದನು. ಲೆನ್ಸ್‌ನ್ನು ಕಾಪಾಡುವ ವಿಕಿರಣ ಚಿಕಿತ್ಸೆ, ಉಳಿದ ತಂತ್ರಗಳಿಗಿಂತ ಕಡಿಮೆ ವೇಗದಲ್ಲಿ ಒಳಕ್ಕೆ ನುಗ್ಗುವುದು. ಆದ್ದರಿಂದ ಕಿಟ್ಟಿಯ ದೃಷ್ಟಿಗೆ ಯಾವ ಅಪಾಯವೂ ಇರುವುದಿಲ್ಲ.

ಕಿಟ್ಟಿಯ ತಲೆಯನ್ನು ಅಲ್ಲಾಡದಂತೆ ಹಿಡಿದುಕೊಳ್ಳಲು ಆಧಾರಕೊಡುವ ಒಂದು ಎರಕದ ಅಚ್ಚನ್ನು ತಂತ್ರಜ್ಞರು ನಿರ್ಮಿಸುವರು. ಆಗ ಅರ್ಬುದ ರೋಗದ ಕಣಗಳನ್ನು ಕೊಲ್ಲುವ ಹಾಗೂ ದುರ್ಮಾಂಸದ ಗೆಡ್ಡೆ ಗಳನ್ನು ಕುಗ್ಗಿಸುವ ಎರಡು ನಿಮಿಷದ ವಿಕಿರಣ ಚಿಕಿತ್ಸೆಯ ಒಂದು ಸ್ಥಿತಿಗಾಗಿ ಸ್ಪರ್ಶಜ್ಞಾನವಿಲ್ಲ ದಂತೆ ಮಾಡಲಾಗುವುದು. ಈ ಕಾರ್ಯ ವಿಧಾನವನ್ನು ಕ್ರಮಾನುಗತವಾಗಿ ಇಪ್ಪತ್ತು ದಿನಗಳ ಕಾಲ ಪುನರಾವೃತ್ತಿ ಮಾಡ ಬೇಕಾಗುವುದು.

ಹಾಂಗ್‌ಕಾಂಗ್‌ನ ನಿವಾಸಿಗಳಾದ್ದರಿಂದ ಬ್ರಿಟನ್ನಿನಲ್ಲಿ ಚ್ಯೂಯಾಂಗ್ ವೈದ್ಯಕೀಯ ಲಾಭ ಪಡೆಯುವ ಅರ್ಹತೆ ಪಡೆದಿರಲಿಲ್ಲ. ಆದರೆ ಕಿಟ್ಟಿಯನ್ನು ಬೆಳಿಗ್ಗೆ ಆಸ್ಪತ್ರೆಗೆ ಕರೆತಂದು ಮಧ್ಯಾಹ್ನ ಟಾಂಗ್‌ನ ಮನೆಗೆ ಹಿಂತಿರುಗುತ್ತಿರುವುದರಿಂದ ಅವರು ಖರ್ಚನ್ನು ಕಡಿಮೆ ಮಾಡಬಲ್ಲವರಾಗಿದ್ದರು.

''ವೈದ್ಯರೇ ಧನ್ಯವಾದಗಳು'' ಇಷ್ಟು ಮಾತ್ರ ಚ್ಯೂಯಾಂಗ್ ಹೇಳಬಲ್ಲವನಾದ. ಚೂಳ ಮುಗುಳ್ನಗೆಯಿಂದ ಕಛೇರಿಯಲ್ಲಿ ಉತ್ಸಾಹ ತುಂಬಿತು.

ಕಿಟ್ಟಿಯ ಬಲಗಣ್ಣಿಗೆ ಕಣ್ಣಿನ ಔಷಧಿಯನ್ನು ಹಾಕುತ್ತಾ, ಕೃತಕವಾದ ಎಡಗಣ್ಣನ್ನು ಕ್ರಮೇಣ ಒಪ್ಪಿಕೊಳ್ಳುವಂತೆ ಆಕೆಯನ್ನು ಅಣಿಗೊಳಿಸುತ್ತಾ ಕಿಟ್ಟಿಯ ಪ್ರಗತಿಯನ್ನು ಹಾಂಗ್‌ಕಾಂಗ್‌ನಲ್ಲಿ ಚ್ಯೂಯಾಂಗ್ ಮತ್ತು ಚೂ ಬಹಳ ಎಚ್ಚರಿಕೆ ಯಿಂದ ನೋಡಿಕೊಂಡರು. ಅನಂತರ ಕಿಟ್ಟಿಯ ಮೊದಲ ನಾಲ್ಕು ತಿಂಗಳ ಪರೀಕ್ಷೆಯಲ್ಲಿ, ಹಾಂಗ್‌ಕಾಂಗ್‌ನ ಒಬ್ಬ ವೈದ್ಯ ದುರ್ಮಾಂಸದ ಗೆಡ್ಡೆಗಳು ಕಾರ್ಯಶೀಲವಾಗಿವೆಯೆಂದೂ ನಿರ್ಣಯಿಸಿದ ಕಟ್ಟಕಡೆಗೂ ಆಕೆ ತನ್ನ ದೃಷ್ಟಿ ಯನ್ನು ಕಳೆದುಕೊಳ್ಳಬಹುದು.

ಚ್ಯೂಯಾಂಗ್ ಇದನ್ನು ಸಂಪೂರ್ಣವಾಗಿ ನಂಬಲಿಲ್ಲ. ತತ್‌ಕ್ಷಣವೇ ಲಂಡನ್ನನ್ನು ದೂರವಾಣಿ ಮೂಲಕ ಸಂಪರ್ಕಿಸಿದ. ಡಾ. ಹಂಗರ್‌ಫೋರ್ಡ್ ಸಹ ಸಂದೇಹಾಸ್ಪದವಾಗಿಯೇ ಇದ್ದರು. ಚಿಕಿತ್ಸೆಯ ತರುವಾಯ ಕಾಣಿಸಿ ಕೊಳ್ಳುವ ಅರ್ಬುದ ರೋಗದ ದುರ್ಮಾಂಸದ ಗೆಡ್ಡೆ ಗಳಲ್ಲಿ ಉಂಟಾಗುವ ಸೂಕ್ಷ್ಮ ಪರಿವರ್ತನೆ ಗಳ ಬಗ್ಗೆ ಪರಿಚಯವಿಲ್ಲದ ವೈದ್ಯರು ರೋಗ ನಿದಾನದಲ್ಲಿ ತಪ್ಪು ಮಾಡಬಹುದೆಂದು ಆತ ತಿಳಿದಿದ್ದ.

''ನೀವು ಕಿಟ್ಟಿಯನ್ನು ಹಿಂದಕ್ಕೆ ಕರೆದು ಕೊಂಡು ಬರಬೇಕು. ನಾನು ಆಕೆಯನ್ನು ನೋಡಬೇಕು'' ಡಾ. ಹಂಗರ್‌ಫೋರ್ಡ್‌ನ ಪರೀಕ್ಷೆ ಆತನ ಆಲೋಚನೆಯನ್ನು ಸಮರ್ಥಿಸಿತು. ಆಕೆ ಆರೋಗ್ಯವಾಗಿದ್ದಳು. ಹಾಂಗ್‌ಕಾಂಗ್‌ನ ವೈದ್ಯರುಗಳಿಗೆ ವಿವರಣೆಗಳನ್ನು ನೀಡುತ್ತ ಒಂದು ಪತ್ರ ಬರೆದನು. ಕಿಟ್ಟಿ ಚ್ಯೂಯಾಂಗ್ ಎದುರಿಸಬೇಕಾಗಿದ್ದ ಅಂತಿಮ ಕಠಿಣ ಪರೀಕ್ಷೆ ಇದಾಗಿತ್ತು.

ಪ್ರೀತಿಸುವ ಕುಟುಂಬದ ಅಪ್ಪುಗೆಯಲ್ಲಿ

ಕಿಟ್ಟಿ ವರ್ಚಸ್ಸುಳ್ಳ ಮಗುವಾಗಿ ಬೆಳೆದಳು. ತನ್ನ ಅಕ್ಕ ಫಿಯೋನಾ ಹಾಗೂ ತಮ್ಮ ಈಮನ್‌ನನ್ನು ಇಷ್ಟಪಟ್ಟಳು. ಈಜು ಮತ್ತು ಹೊರಾಂಗಣದ ಆಟಗಳನ್ನು ಆನಂದಿಸಿದಳು. ಆದರೆ ಆಕೆಯ ತಂದೆಯ ಅಸಹಾಯಕತೆ, ಆತನಿಗೆ ಇನ್ನೂ ಅಡ್ಡಿ ಆತಂಕಗಳನ್ನು ಅನುಭವಿಸಬೇಕಾಗುವುದೆಂಬುದನ್ನು ಕಲಿಸಿತು.

ಸಾಕಷ್ಟು ಶೀಘ್ರವಾಗಿಯೇ ಅವು ತಲೆಯೆತ್ತಿದುವು. ಕಿಟ್ಟಿ ದೂರು ಹೇಳಲಾರಂಭಿಸಿದಳು, ''ಅಪ್ಪಾ, ಶಾಲೆಯ ಕೆಲಮಕ್ಕಳು ನನ್ನೊಡನೆ ಆಡಲು ಇಷ್ಟಪಡುವುದಿಲ್ಲ.''

ಆತ ಆಕೆಗೆ ಶಾಂತವಾಗಿ ಹೇಳಿದ ''ನಾನು ಒಂದು ಕಾಲನ್ನು ಕಳೆದುಕೊಂಡಿದ್ದೇನೆಂಬುದು ನಿನಗೆ ಗೊತ್ತು. ನನ್ನ ಅನೇಕ ಸ್ನೇಹಿತರಿಗೆ ಅದು ಪ್ರಮುಖ ವಿಷಯವಾಗಿರಲಿಲ್ಲ. ಆದರೆ ಕೆಲವರು ನನ್ನ ಜೊತೆಯಲ್ಲಿ ಹಿತಕರವಾಗಿರಲಿಲ್ಲ. ಅದು ಅವರಿಗೆ ಒಂದು ಸಮಸ್ಯೆಯಾಗಿತ್ತು. ನಾನು ಕೆಲ ಹೊಸ ಸ್ನೇಹಿತರನ್ನು ಮಾಡಿಕೊಂಡೆ. ನೀನೂ ಸಹ ಹಾಗೇ ಮಾಡಬಹುದು.''

ಈ ಮಾತುಗಳು ಆ ಚಿಕ್ಕ ಹುಡುಗಿಯನ್ನು ಪ್ರೋತ್ಸಾಹಿಸುವುದರ ಜೊತೆಗೆ, ತಂದೆಯ ಕಾರ್ಯಗಳು, ಇನ್ನೂ ಹೆಚ್ಚು ವಿಷಯಗಳನ್ನು ಸಮರ್ಥಿಸಿದುವು. ಚ್ಯೂಯಾಂಗ್ ಕಟಕಟೆ ಇರುವ ಗಾಲಿಕುರ್ಚಿಯನ್ನು ತೆಗೆದುಕೊಂಡ. ಅಂಗವಿಕಲರಿಗಾಗಿ ಇರುವ ಈ ಜನಪ್ರಿಯ ಆಟದಲ್ಲಿ ವಿವಿಧ ಶ್ರೇಣಿಗಳ ಮೂಲಕ ಪ್ರಗತಿ ಹೊಂದಲಾರಂಭಿಸಿದ.

ಕಿಟ್ಟಿಗೆ ಒಂಭತ್ತು ವರ್ಷವಾಗಿದ್ದಾಗ, ಆಕೆ ತನ್ನ ತಂದೆಯ ಚಿತ್ರ ಹಾಂಗ್‌ಕಾಂಗಿನ ಸಮಾಚಾರ ಪತ್ರಿಕೆಗಳ ಮುಖಪುಟದಲ್ಲಿ ರಾರಾಜಿಸಿದ್ದನ್ನು ನೋಡಿ, ರೋಮಾಂಚನಗೊಂಡಳು. ಅಟ್ಲಾಂಟಾದಲ್ಲಿ ನಡೆದ ಪಾರಾಲಂಪಿಕ್ ಆಟಗಳಲ್ಲಿ ಅಭೂತಪೂರ್ವ ನಾಲ್ಕು ಚಿನ್ನದ ಪದಕಗಳನ್ನು ಆತ ಗೆದ್ದಿದ್ದ.

ಎರಡು ವರ್ಷಗಳ ನಂತರ ೧೯೯೮ರಲ್ಲಿ ಆಕೆಯ ತಂದೆ , ನಗಾನೋ ಆಟಗಳಿಗಾಗಿ ಒಲಂಪಿಕ್ ಪಂಜನ್ನು ಹಚ್ಚುವ ಜ್ವಾಲೆಯನ್ನು ತೆಗೆದುಕೊಂಡು ಹೋಗಲು ಸಹಾಯ ಮಾಡಿದ್ದನ್ನು ಆಕೆ ನಿರೀಕ್ಷಿಸಿದಳು. ''ಆತ ಹೇಳಿದ''ನಾನು ಸಾಧಿಸಬಲ್ಲೆನಾದರೆ, ನೀನು ಏನುಬೇಕಾದರೂ ಮಾಡಬಲ್ಲೆ.''

ಯಾರೋ ಅಪರಿಚಿತರನ್ನು ಉಳಿಸುವಾಗ ತನ್ನ ಒಂದು ಕಾಲು ಕಳೆದುಕೊಂಡುದಕ್ಕೆ ಒಮ್ಮೆ ಬೆನ್ನಿ ಚ್ಯೂಯಾಂಗ್ ಅಸಮಾಧಾನಗೊಂಡಿದ್ದ. ಆದರೆ ಆ ದುಃಖದ ಘಟನೆ ಅಪಾಯದ ಕ್ಷಣಗಳಲ್ಲಿ ಕಿಟ್ಟಿಗೆ ಸಹಾಯಮಾಡಲು ತನ್ನನ್ನು ಸಜ್ಜುಗೊಳಿಸಿತೆಂದು ಆತನಿಗೆ ಅನಿಸಿತು.

ತಮ್ಮಿಬ್ಬರ ಜೀವನ ಗತಿಯನ್ನೇ ಬದಲಿಸಿದ ಬಗ್ಗೆ ಅಚ್ಚರಿಪಡುತ್ತ ಆತ ಇಂದು ಹೇಳುತ್ತಾನೆ''ಏನು ಮಾಡಬೇಕೆಂಬುದೇ ನನಗೆ ಗೊತ್ತಾಗುತ್ತಿರಲಿಲ್ಲ.''

ಪುಸ್ತಕ ಪರಿಚಯ ಮತ್ತು ಪುಸ್ತಕ ವಿಮರ್ಶೆ

ಜಿನಮನ: ಲೇಖಕರು, ಡಾ.ಹೆಚ್.ಎ. ಪಾರ್ಶ್ವನಾಥ್, ನಿತಿನ್ ಪ್ರಕಾಶನ, 'ಸೋನಿಯಾ', ೬೨, ೩ನೆಯ ಕ್ರಾಸ್, ಕುರುಬರಹಳ್ಳಿ, ಮೈಸೂರು-೫೭೦ ೦೧೧, ಬೆಲೆ: ರೂ. ೪೫.

ಪ್ರಸ್ತುತ ಅವಗಾಹನೆಯಲ್ಲಿರುವ ಕೃತಿ 'ಜಿನಮನ' ಕರ್ನಾಟಕ, ಭಾರತ ಮತ್ತು ಅಂತಾರಾಷ್ಟ್ರೀಯ ನೆಲೆಯಲ್ಲಿ ಜೈನಧರ್ಮದ ಅನುಯಾಯಿಗಳ ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡಿದ ಕೃತಿ. ಇದರಲ್ಲಿ ಜೈನಧರ್ಮದ ಪ್ರಭಾವನೆಯನ್ನು ಕುರಿತ ವಿವರಗಳಿವೆ. ಶಿಲ್ಪ, ವಾಸ್ತುಶಿಲ್ಪ, ಸಾಹಿತ್ಯ ಮತ್ತ ಶಾಸನಾಧಾರಿತ ಸಂಗತಿಗಳು ಎಡೆಪಡೆದಿವೆ. ಇವು ಜೈನಧರ್ಮಿಯರ ನೆಲೆ ಬೆಲೆಗಳನ್ನು ಗುರುತಿಸುವಲ್ಲಿ ಪೂರಕವಾಗಿವೆ.

ದಶಕಗಳಿಗೂ ಮೀರಿ ಈ ಕೃತಿಯ ರಚನೆಗಾಗಿ ತಮ್ಮ ಶ್ರಮವನ್ನು ಡಾ. ಹೆಚ್.ಎ. ಪಾರ್ಶ್ವನಾಥ್‌ರವರು ಮೀಸಲಿರಿಸಿದ್ದಾರೆ. ವೃತ್ತಿಯಲ್ಲಿ ರೋಗ ನಿದಾನ ತಜ್ಞರಾಗಿರುವ ಶ್ರೀಯುತರು ಸಮಾಜದ ನೋವನ್ನು ಈ ಕೃತಿಯ ಮೂಲಕ ನಿವಾರಿಸಿದ್ದಾರೆ. ತಮ್ಮ ಬಿಡುವಿನ ವೇಳೆಯನ್ನು ಜೈನ ನೆಲೆಗಳನ್ನು ಕಣ್ಣಾರೆ ಕಾಣುವುದಕ್ಕಾಗಿ ಮೂಡುಪಿಟ್ಟು, ಹೋದಲ್ಲೆಲ್ಲ ಧರ್ಮಪ್ರಭಾವನೆಯನ್ನು ಮಾಡಿದ್ದಾರೆ. ಭಾರತವೆ ಅಲ್ಲದೆ ವಿದೇಶಗಳಲ್ಲಿಯೂ ಈ ಕುರಿತು ಅಧ್ಯಯನ ವನ್ನು ನಡೆಸಿದ್ದಾರೆ. ಆ ಕಾರಣವಾಗಿಯೆ ಇಲ್ಲಿರುವ ಮಾಹಿತಿಗಳು ಪ್ರಥಮ ಮಾಹಿತಿಗಳಾಗಿವೆ. ಈ ಕೃತಿಯಲ್ಲಿ ನಿರ್ದಿಷ್ಟವೂ ನಿರ್ದುಷ್ಟವೂ ಆದ ಭಾಷೆಬಳಕೆಯಾಗಿದೆ. ಸಂಸ್ಕೃತಿಯ ಪುನರುತ್ಥಾನದ ಕಳಕಳಿ. ಸಮರಸ ಭಾವದ ಸುಂದರ ಪರಿಕಲ್ಪನೆಗಳು ಮೇಲಾಗಿ ಅವರ ಪರಿವ್ರಾಜಕ ಮನೋಧರ್ಮ ಎದ್ದು ಕಾಣುತ್ತದೆ.

ಜಿನರಾತ್ರಿ ಪ್ರಬಂಧ ಜಿನಮನ ಕೃತಿಯ ಮೊದಲ ಪ್ರಬಂಧ. ಹಿಂದೂ ಧರ್ಮಿಯರು ಆಚರಿಸುವ ಶಿವನ ಜನನದ ಸಂಗತಿ ಮತ್ತು ಜೈನರು ಆಚರಿಸುವ ಶ್ರೀಆದಿನಾಥ ತೀರ್ಥಂಕರರ ನಿರ್ವಾಣದ ಸಂಗತಿಗಳನ್ನು ಕುರಿತು ಇಲ್ಲಿ ವಿವೇಚಿಸಲಾಗಿದೆ. ''ಕೈಲಾಸೇ ಪರ್ವತೇ ರಮ್ಯೇ ವೃಷಭೋದಯ ಜಿನೇಶ್ವರಃ ಚ ಕಾರ ಸ್ವಾವತಾರಂತ ಸರ್ವಜ್ಞಃ ಸರ್ವಗಃ ಶಿವಃ'' ಎನ್ನುವ ಪ್ರಭಾಸ ಪುರಾಣದ ಶ್ಲೋಕವನ್ನು ಉದ್ಧರಿಸಿ ಶ್ರೀವೃಷಭನಾಥನನ್ನು ಶಿವನೆಂದು ಉಲ್ಲೇಖಿಸಿರುವುದು ಗಮನಾರ್ಹ ಎಂದು ಹೇಳಿರುವಲ್ಲಿ ಧರ್ಮಸಹಿಷ್ಣುತೆಯೆದ್ದು ಕಾಣುತ್ತದೆ.

ಪರ್ವಗಳ ರಾಜಯೆಂದು ಪ್ರಸಿದ್ಧವಾಗಿರುವ, ಪರ್ಯೂಷಣ ಪರ್ವವೆಂದು ನಾಮಾಂತರವುಳ್ಳ ದಶಲಕ್ಷಣ ಪರ್ವವು ಜೈನಧರ್ಮಿಯರಿಗೆ ಮಾತ್ರ ಮೀಸಲಾಗಬೇಕಿಲ್ಲ ಎಂದು ಹೇಳಿರುವುದು ಅವರ ವಿಶಾಲ ಮನೋಧರ್ಮವನ್ನು ಪ್ರತಿಬಿಂಬಿಸುತ್ತದೆ.

ಮೈಸೂರು ಪ್ರಾಕ್ತನ ಇಲಾಖೆಯ ವರದಿಗಳಲ್ಲಿ ಪ್ರಾಸಂಗಿಕವಾಗಿ ಕೆಲವು ವಿವರಗಳು ದೊರೆಯುವುದನ್ನು ಬಿಟ್ಟರೆ ನಮ್ಮಲ್ಲಿ ಶಿಲ್ಪಶಾಸ್ತ್ರದ ಅಭ್ಯಾಸ ಅಷ್ಟಾಗಿ ನಡೆದಿಲ್ಲ. ಜಿನಮನ ಗ್ರಂಥದಲ್ಲಿ ಯಕ್ಷಿ ಶ್ರೀಕೂಷ್ಮಾಂಡಿನಿ ದೇವಿ ಪ್ರಬಂಧ ಅಂತಹ ಒಂದು ಪ್ರಯತ್ನ. ನೇಮಿನಾಥನ ಯಕ್ಷ ಎನ್ನುವ ವಿವರಗಳು, ಆಕೆ ಪಡೆದಿರುವ ನಾಮಾಂತರಗಳು, ಐತಿಹಾಸಿಕ ಮತ್ತು ಜಾನಪದೀಯ ಸಂಗತಿಗಳನ್ನು ಕುರಿತು ವಿವರಿಸಿದ್ದಾರೆ. ಸಂಕಷ್ಟ ನಿವಾರಿಣಿಯೂ ಉಪಸರ್ಗ ನಿವಾರಿಣಿಯೂ ಆದ ದೇವಿಯನ್ನು ಪ್ರಾಕೃತದಲ್ಲಿ ''ಗುಮ್ಮಡಿ'' ಎಂದು ಕರೆಯಲಾಗುತ್ತದೆ ಎನ್ನುವ ಆಧಾರದ ಮೇಲೆ ಹೇಳುವುದಾದರೆ ಗುಮ್ಮಡಿ-ಗಮ್ಮಟ-ಗೊಮ್ಮಟ ಆಗಿರಬಹುದು ಎನ್ನುವುದುಂಟು.

ಡಾ. ಹೆಚ್.ಎ. ಪಾರ್ಶ್ವನಾಥ್ ಅವರು ಕೂಷ್ಮಾಂಡಿನಿ ಶಿಲ್ಪದ ಬಗ್ಗೆ ಕೊಡುವ ವಿವರಗಳು ಹೀಗಿವೆ-''ಸುವರ್ಣ ಕೂಷ್ಮಾಂಡಿನಿ

ದೇವಿಯ ಶಿಲ್ಪಾ ಕಲಾ ಸೊಬಗನ್ನು ಕರ್ನಾಟಕದ ವಿವಿಧೆಡೆಗಳಲ್ಲಿ ದರ್ಶಿಸಬಹುದು. ಸರ್ವೇ ಸಾಮಾನ್ಯವಾಗಿ ಆಸೀನಳಾಗಿರುವ ದೇವಿಯು ದ್ವಿಭುಜೆಯಾಗಿ ಚೂಪಾದ ಉಗುರುಗಳನ್ನುಳ್ಳ ಎಡಗೈಯಲ್ಲಿ ಹಣಬೆ ಮತ್ತು ಬಲಗೈಯಲ್ಲಿ ಬಳೆಗಳನ್ನು ಹಿಡಿದಿರುವಳಲ್ಲದೆ ಮತ್ತೆ ಕೆಲವು ಶಿಲ್ಪಗಳಲ್ಲಿ ಅಭಯಹಸ್ತ ಹೊಂದಿ ಸುಖ ಪ್ರದಾಯಿನಿಯಾಗಿ ಹೂಗೊಂಚಲೊಂದನ್ನು ಹೊಂದಿರುವಳು. ಕಿರೀಟಧಾರಿಣಿಯಾಗಿ ಕಂಠ ಹಾಗೂ ವಕ್ಷಸ್ಥಳಗಳಲ್ಲಿ ಸರ್ವಾಭರಣ ಪುಷ್ಪ ಸುಶೋಭಿತಳಾಗಿರುವಳು. ಸಿಂಹವಾಹಿನಿಯಾಗಿ ಕಣ್ಮನ ಹೃದ್ಯಳಾಗಿರುವಳು ''(೨೧) ಇಂತಹ ಶಿಲ್ಪ ಶಾಸ್ತ್ರಸಂಬಂಧಿ ವಿವರಗಳೇ ಅಲ್ಲದೆ ಆ ಶಿಲ್ಪಗಳು ಇರುವ ಸ್ಥಳಗಳನ್ನು ಗುರುತಿಸಿದ್ದಾರೆ. ಜ್ವಾಲಾಮಾಲಿನಿ ಮತ್ತು ಪದ್ಮಾವತಿಯಕ್ಷಿಯರ ಉಲ್ಲೇಖವೂ ಈ ಪ್ರಬಂಧದಲ್ಲಿರುವುದು ಗಮನಾರ್ಹ.

ಇಪ್ಪತ್ತೆರಡನೆಯ ತೀರ್ಥಂಕರ ನೇಮಿನಾಥ ಜಿನ ಮತ್ತು ಶ್ರೀಕೃಷ್ಣನ ಸಂಬಂಧವನ್ನು ಕುರಿತು ವಿವೇಚಿಸುತ್ತದೆ. ಜೈನಧರ್ಮ ಮತ್ತು ಶ್ರೀಕೃಷ್ಣ ಎನ್ನುವ ಪ್ರಬಂಧ. ಶ್ರಾವಣ ಕೃಷ್ಣ ಪಕ್ಷ ಅಷ್ಟಮಿ ಮಂಗಳವಾರ ರೋಹಿಣೀ ನಕ್ಷತ್ರದಲ್ಲಿ ಜನಿಸಿದ ಕೃಷ್ಣನು ಭಾಗವಹಿಸಿದ ಮಹಾಭಾರತ ಯುದ್ಧಕ್ರಿ.ಪೂ.೩೧೩೯ರಲ್ಲ ನಡೆಯಿತೆಂದು ತಿಳಿಸಿ ವಿಷ್ಣು ಪುರಾಣದ ಆಧಾರದಿಂದ ಶ್ರೀಕೃಷ್ಣನು ಕಲಿಯುಗದ ಆರಂಭದ ದಿನ ಪರಂಧಾಮುವನ್ನು ಹೊಂದಿದನೆನ್ನುವ ವಿವರಗಳನ್ನು ಈ ಪ್ರಬಂಧ ಹೊಂದಿದೆ.

ಶ್ರೀಕೃಷ್ಣನ ಚರಿತ್ರೆ, ಶ್ರೀನೇಮಿನಾಥ ತೀರ್ಥಂಕರನ ಚರಿತ್ರೆಯೊಂದಿಗೆ ಮಿಳಿತವಾಗಿದ್ದು ಒಂದು ಸಾವಿರ ವರ್ಷಗಳಲ್ಲಿ ರಚಿತವಾಗಿರುವ ಜೈನಧರ್ಮದ ಕೃತಿಗಳಲ್ಲಿ ಪಡಿಮೂಡಿದೆ. ಶ್ರೀಕೃಷ್ಣನ ಬಾಲಲೀಲೆಯ ವಿವರಗಳು, ಯೌವನದ ವಿವರಗಳು, ಆತನು ನಡೆಸಿದ ರಾಜಕಾರಣದ ವಿವರಗಳು ಇಲ್ಲಿ ಕಂಡು ಬರುತ್ತವೆ.

ನೇಮಿನಾಥನಿಗೆ ಸಮುದ್ರ ವಿಜಯನು ಪ್ರಾಚೀನಗೀತೆಯನ್ನು ಬೋಧಿಸಿದನು. ಅದನ್ನು ನೇಮಿನಾಥ ಅರ್ಧಮಾಗಧಿ ಭಾಷೆಯಲ್ಲಿ ಶ್ರೀಕೃಷ್ಣನಿಗೆ ಬೋಧಿಸಿದನು. ಅದನ್ನು ಶ್ರೀಕೃಷ್ಣ ರಣರಂಗ ಮಧ್ಯೆ ವಿಷಣ್ಣನಾಗಿದ್ದ ಅರ್ಜುನನಿಗೆ ಬೋಧಿಸಿದನು. ಅದು ಭಗವದ್ಗೀತೆಯೆಂದು ಪ್ರಸಿದ್ಧವಾಯಿತು ಎನ್ನುವ ಅಂಶ ಇಲ್ಲಿ ಕಂಡುಬರುತ್ತದೆ.

ಚಾವುಂಡರಾಯನ ವಾಸ್ತುಶಿಲ್ಪಸಾಧನೆ ಎನ್ನುವ ಲೇಖನದಲ್ಲಿ ೧೪ ಮಾರ್ಚ್ ೯೮೧ ರಂದು ಬೆಳಗಿನಜಾವ ಪ್ರತಿಷ್ಠಾಪನೆಗೊಂಡ ಶ್ರವಣಬೆಳಗೊಳದ ಲೋಕೋತ್ತರ ಮೂರ್ತಿ ಗೋಮ್ಮಟೇಶ್ವರನ ಶಿಲ್ಪದ ವಿವರಗಳನ್ನು ನೀಡಿದ್ದು ೫೮ '೮' ಎತ್ತರದ ಬಾಹುಬಲಿಯ ಶಿಲ್ಪ ''ಬಿರಿದ ಕಮಲಪುಷ್ಪದ ಮೇಲೆ ಕಾಯೋತ್ಸರ್ಗದಲ್ಲಿ ನಿಂತು ತಪಗೈಯ್ಯುತ್ತಿರುವ ವಿರಾಗಿಯ ಮಂಡಿಯವರೆವಿಗೆ ಬೆಳೆದ ಹುತ್ತಗಳು, ಅವುಗಳಿಂದ ಹೊರಚಾಚಿದ ಘಟಸರ್ಪಗಳು , ಬಲಿಷ್ಠ ತೊಡೆಗಳು ಮತ್ತು ನಿಡುದೋಳುಗಳನ್ನು ಬಳಸಿ ಭುಜದವರೆವಿಗೆ ಹಬ್ಬಿರುವ ಮಾಧವೀಲತೆ, ಹರವಾದ ವಕ್ಷಸ್ಥಳ, ಧೀರ ಗಂಭೀರ ಮುಖ ಮುದ್ರೆ, ತಿದ್ದಿ ತೀಡಿದ ಗಲ್ಲ, ನಾಸಿಕ, ಕದಪುಗಳು, ಮುಂದುಟಿಗಳು, ಕಣ್ಣುಗಳು, ಹುಬ್ಬುಗಳು, ವಿಶಾಲವಾದ ನೊಸಲು, ಕಿವಿಗಳು, ಗುಂಗುರು ಗುಂಗೂರಾದ ಕೂದಲುಗಳು ಮತ್ತು ಮಹಾಸಂಯಮಿಯ ಮಂದಹಾಸ ನೋಟಕರನ್ನು ಕೆಲಕಾಲ ಮಂತ್ರ ಮುಗ್ಧಗೊಳಿಸುತ್ತವೆ. ಕಾಮದೇವನ ದಿಗಂಬರತ್ವದ ಸೌಂದರ್ಯವು ಸಾಕಾರಗೊಂಡಿದೆ.'' (೩೧) ಡಾ.ಹೆಚ್.ಎ. ಪಾರ್ಶ್ವನಾಥ್ ಅವರು ಮತ್ತು ಭಾವುಕ ಭಕ್ತರು. ಕಣ್ಣಾರೆ ಕಂಡು ಸಾರ್ಥಕಗೊಂಡ ಬಾಹುಬಲಿಯ ಮೂರ್ತಿಯನ್ನು ಇದಕ್ಕಿಂತ ಸ್ಫುಟವಾಗಿ ವರ್ಣಿಸಲು ಸಾಧ್ಯವಿಲ್ಲವಾಗಿದೆ. ''ಕಾಮದೇವನ ದಿಗಂಬರತ್ವದ

ಸೌಂದರ್ಯವು ಸಾಕಾರಗೊಂಡಿದೆ'' ಎನ್ನುವ ಮಾತು ಅತ್ಯಂತ ಮಹತ್ವದ್ದಾಗಿದೆ. ಇದಲ್ಲದೆ ಶ್ರೀತ್ಯಾಗದ ಬ್ರಹ್ಮದೇವರಕಂಬ, ಶ್ರೀಚಾವುಂಡ ರಾಯ ಬಸದಿ ಮತ್ತು ಚಾವುಂಡರಾಯನ ವೆಂದು ಭಾವಿಸಲಾದ ಕುದುರೆ ಸವಾರನ ಉಬ್ಬು ಚಿತ್ರದ ವಿವರಗಳು ಕೂಡ ಇಲ್ಲಿವೆ.

ಧರ್ಮಶಾಸ್ತ್ರದ ನೆಲೆ ವೀಡು ಏಚಿಗನಹಳ್ಳಿ ಎನ್ನುವ ಲೇಖನವು ನಂಜನಗೂಡು ತಾಲ್ಲೂಕಿನ ಕಪಿಲಾನದಿಯ ಎಡದಂಡೆಯ ಮೇಲಿರುವ ಪ್ರಾಚೀನ ಕಾರವುರ ಇಂದಿನ ಏಚಿಗನಹಳ್ಳಿಯ ವಿವರಗಳನ್ನು ಒಳಗೊಂಡಿದೆ.

ಕಾಯೋರ್ತ್ಸರ್ಗ ಮೂರ್ತಿಗಳಾದ ಶ್ರೀಪಾರ್ಶ್ವನಾಥ ಮತ್ತು ಶ್ರೀಸುಪಾರೀಸ್ವನಾಥ ತೀರ್ಥಂಕರರ ಮೂರ್ತಿಗಳು ಮತ್ತು ಪ್ರಸಿದ್ಧ ನಾದ ಯಕ್ಷ ಕೂಗೋಬ್ರಹ್ಮನ ವಿಗ್ರಹ ಕೂಡ ಅಲ್ಲಿವೆ. ದೇವಾಲಯದ ಎಡಗಡೆ ಬಾಗಿಲಿ ನಲ್ಲಿರುವ ೨೩.೧೧.೧೩೭೬ರ ಶಾಸನವು ೨೩-೧೧-೧೩೭೬ಮೇಘಚಂದ್ರರು ಮುಕ್ತಿಗೆ ಸಂದ ವಿಚಾರವನ್ನು ತಿಳಿಸುತ್ತದೆ. ಅವರ ಪರೋಕ್ಷ ವಿನಯವಾಗಿ ನಿಲ್ಲಿಸಿದ ಈ ನಿಷಿಧಿ ಶಾಸನದಲ್ಲಿ ಕ್ರಿ.ಶ. ೧೩೫೨ರಲ್ಲಿ ಧರ್ಮನಾಥ ಪುರಾಣ ವನ್ನು ಬರೆದ ಬಾಹುಬಲಿಪಂಡಿತನ ಉಬ್ಬು ಶಿಲ್ಪನಾಮಾಂಕಿತದಿಂದ ಒಡಗೂಡಿರ ವುದಲ್ಲದೆ ಧರ್ಮನಾಥ ಪುರಾಣದ ಮೂರು ಪದ್ಯಗಳನ್ನು ಕೂಡ ಅಳವಡಿಸಿರುವುದು ಗಮನಾರ್ಹವಾದ ವಿಚಾರ. ಈ ಬಗ್ಗೆ ಡಾ.ಹೆಚ್.ಎ. ಪಾರ್ಶ್ವನಾಥ್ ಅವರು ಬರೆದಿರುವ ಪ್ರಬಂಧ ವಿದ್ವತ್ತಿನಿಂದ ಕೂಡಿದೆ.

ಜೈನಕೇಂದ್ರ ಚಿಕ್ಕಹನಸೋಗೆ ಕೃಷ್ಣರಾಜನಗರ ತಾಲ್ಲೂಕಿಗೆ ಸೇರಿದೆ. ಚಂಗಾಳ್ವ ದೊರೆಗಳು ಇಲ್ಲಿನ ಧಾರ್ಮಿಕ ಚಟುವಟಿಕೆಗಳಿಗೆ ಆಶ್ರಯದಾತರಾಗಿದ್ದರು. ಕುಂಡಕುಂದಾನ್ವಯ ದೇಶೀಯ ಗಣಪುಸ್ತಕ ಗಚ್ಛಕ್ಕೆ ಚಿಕ್ಕಹನಸೋಗೆ ಮೂಲ ನೆಲೆಯಾಗಿದ್ದಿತು. ಇಲ್ಲಿ ಶ್ರೀ ವೃಷಭನಾಥ ತೀರ್ಥಂಕರನ ಬಸದಿ ಇದ್ದು ಇನ್ನೂ ೬೪ ಬಸದಿಗಳಿದ್ದುದಾಗಿ ತಿಳಿದು ಬರುತ್ತದೆ.

ಡಾ.ಹೆಚ್.ಎ. ಪಾರ್ಶ್ವನಾಥ್ ಅವರು ಆದಿನಾಥ ತೀರ್ಥಂಕರನ ಬಸದಿಯ ಬಗ್ಗೆ ಕೊಡುವ ವಿವರಗಳು ಹೀಗಿವೆ- ''ದೇಗುಲದ ರಚನಾ ವಿನ್ಯಾಸವು ಅನುಪಮವಾದ ಚಾಲುಕ್ಯ ಮತ್ತು ಹೊಯ್ಸಳ ಶೈಲಿಗಳ ಸಂಗಮವಾಗಿರು ವುದು. ಇದರ ಭಿತ್ತಿಗಳು , ಸ್ತಂಭಗಳು ಮತ್ತು ಮೇಲ್ಛಾವಣಿಗಳು ಕಣಶಿಲೆಯಲ್ಲಿದ್ದರೂ ವಿಗ್ರಹಗಳು ಮತ್ತು ದ್ವಾರಗಳು ಬಳಪದ ಕಲ್ಲಿನಿಂದ ನಿರ್ಮಾಣಗೊಂಡಿವೆ. ಶ್ರೀನೇಮಿನಾಥ ವಿಗ್ರಹದ ಮುಕ್ಕೊಡೆ ಮುರುಟಿ ಹೋಗಿದೆ. ಶಾಂತಿನಾಥ ಮತ್ತು ಆದಿನಾಥ ಮೂರ್ತಿಗಳು ಅಲಂಕೃತ ತೋರಣಗಳು ಹಾಗೂ ಸಿಂಹಪೀಠ ಗಳನ್ನು ಹೊಂದಿವೆ. ಸುಖನಾಸಿ-ನವರಂಗದ ನಡುವಿನ ದ್ವಾರಗಳು ಬಹುಕಲಾತ್ಮಕ ಪಟ್ಟಿಕೆ ಗಳಿಂದ ಕೂಡಿವೆ. ಅರಳಿದ ಪುಷ್ಪ ಯಕ್ಷರು ಮತ್ತು ಸಿಂಹರು ಕೆತ್ತನೆಗಳು ಆಕರ್ಷಣೀಯ ವಾಗಿವೆ. (೪೨)ಈ ಬಗೆಯ ಅನೇಕ ಸಂಗತಿ ಗಳು ಈ ಕೃತಿಯಲ್ಲಿ ಮಾಲೆ ಮಾಲೆಯಾಗಿ ಬಂದಿದೆ. ಜೈನದೇವಾಲಯಗಳ ದುಸ್ಥಿತಿಯ ಬಗ್ಗೆ ಲೇಖಕರ ಕಳಕಳಿ ಜೀರ್ಣೋದ್ಧಾರಗಳ ಬಗೆಗಿನ ಹರ್ಷವನ್ನು ಅಲ್ಲಲ್ಲಿ ವ್ಯಕ್ತವಾಗುತ್ತದೆ.

ಬಸ್ತಿಹಳ್ಳಿಯ ಗೊಮ್ಮಟ ಲೇಖನದಲ್ಲಿ ಮಂಡ್ಯಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕಿನ ಬಸ್ತಿ ಹಳ್ಳಿಯಲ್ಲಿರುವ ೧೪ಅಡಿ ಗೊಮ್ಮಟನ ವಿವರ ವಿದೆ. ಇಲ್ಲಿ ಕ್ರಿ.ಶ.೧೧೪೭ರ ಶಾಸನಗಳು ಲಭಿಸಿವೆ. ಚಾಮರಾಜನಗರದ ಶ್ರೀವಿಜಯ ಪಾರ್ಶ್ವನಾಥದೇಗುಲ ಕಟ್ಟಿಸಿದ ವಿಷ್ಣುವರ್ಧನನ ಆಪ್ತಮಹಾಪ್ರಧಾನ ಪುಣಿಸಮಯ್ಯ ಈ ವಿಗ್ರಹವನ್ನು ಪ್ರತಿಷ್ಠಾಪಿಸಿದ ಸಂಗತಿಯನ್ನು ಹೇಳಿ, ಇಂದು ಆ ಪ್ರದೇಶದ ದುಸ್ಥಿತಿಗಾಗಿ ಮರುಗಿದ್ದಾರೆ. ಕಲ್ಯಾಣ ಚಾಲುಕ್ಯ ಸಾಮ್ರಾಜ್ಯದ ಆಳ್ವಿಕೆಯಲ್ಲಿ ಅನುಪಮ ಕಲಾಸಿರಿ ವಂತಿಕೆ ಯಿಂದ ಜೈನಧರ್ಮವು ಹುಬ್ಬಳ್ಳಿಯ

ಸುತ್ತಮುತ್ತಲ ಭೂಪ್ರದೇಶದಲ್ಲಿ ಬಹು ಉಚ್ಛ್ರಾಯಸ್ಥಿತಿಯಲ್ಲಿದ್ದುದನ್ನು ಹುಬ್ಬಳ್ಳಿಯ ಜಿನಾಲಯಗಳು ಲೇಖನ ಮತ್ತು ಧಾರವಾಡ-ಗದಗ-ಹಾವೇರಿ ಜಿಲ್ಲೆಗಳ ಜೈನ ನೆಲೆಗಳು ಎನ್ನುವ ಲೇಖನಗಳಲ್ಲಿ ತಿಳಿಸಿದ್ದಾರೆ. ಎಲೆಯ ಪೂರ್ವದ ಹಳ್ಳಿ ಕ್ರಮೇಣವಾಗಿ ಹುಬ್ಬಳ್ಳಿಯಾಯಿತು ಎನ್ನುವ ಸೂಚನೆಯೂ ಇಲ್ಲಿದೆ.

ಹಳೆಹುಬ್ಬಳ್ಳಿಯ ಕೃಷ್ಣಪುರ ಗ್ರಾಮ ಪ್ರದೇಶದಲ್ಲಿರುವ ಶ್ರೀ ಅನಂತನಾಥ ಬಸದಿ ೯೦೦ ವರ್ಷಗಳಷ್ಟು ಹಳೆಯದು.''ಸನಿಹದ ಹೆಗ್ಗೇರಿ ದೊಡ್ಡಕೆರೆಯಲ್ಲಿ ದೊರೆತ ತಳಸೇರಿದ ಜಿನಬಿಂಬಗಳು ಪ್ರಸ್ತುತಮಂದಿರವು ವೈತಾಳಲು ಕಾರಣವಾಯಿತು.'' ಎನ್ನುವ ವಿವರ ಲಭ್ಯವಾಗುತ್ತೆ. ಇದಲ್ಲದೆ ಅಕ್ಕಿಪೇಟೆ ಪಾರ್ಶ್ವನಾಥ; ಹೊಸ ಹುಬ್ಬಳ್ಳಿ ಕಂಚುಗಾರ ಓಣಿ ಆದಿನಾಥ ಬಸದಿಯ ವಿವರವನ್ನು ತಿಳಿಸಿ ಅಲ್ಲಿರುವ ಕರಿಶಿಲೆಯ ಶ್ರೀಜ್ವಾಲಾಮಾಲಿನಿ ವಿಗ್ರಹವನ್ನು ಹಳೇ ಹುಬ್ಬಳ್ಳಿಯ ಕಿಲ್ಲೆ ಬಸದಿಯಿಂದ ತಂದ ಸಂಗತಿಯನ್ನು ದಾಖಲಿಸಿದ್ದಾರೆ. ಮಹಾವೀರ ಪೇಟೆಯಲ್ಲಿರುವ ಕೌಲಬಸದಿ ಅಥವಾ ಶಾಂತಿನಾಥ ಬಸದಿ, ಮೂರುಸಾವಿರ ಮಠದ ಸಮೀಪವಿರುವ ಚಂದ್ರನಾಥ ಬಸದಿ ಮತ್ತು ಹುಬ್ಬಳ್ಳಿ ನಗರದಲ್ಲಿರುವ ಶ್ವೇತಾಂಬರ ಬಸದಿಗಳ ವಿವರಗಳು ಇಲ್ಲಿ ಲಭ್ಯವಾಗುತ್ತವೆ.

ಧಾರವಾಡ-ಗದಗ-ಹಾವೇರಿ ಜಿಲ್ಲೆಗಳ ಜೈನನೆಲೆಗಳು ಎನ್ನುವ ಪ್ರಬಂಧದಲ್ಲಿ ಕಾಲಕ್ರಮೇಣ ಕಾಲಗರ್ಭದಲ್ಲಿ ಅಡಗಿ ಹೋಗುತ್ತಿರುವ ಬಸದಿಗಳು ಮತ್ತು ಧರ್ಮ ದೀಪಕರ ಆಸ್ಥೆಯಿಂದ ಪುನರುಜ್ಜೀವನ ಗೊಳ್ಳುತ್ತಿರುವ ವಿವರಗಳಿವೆ. ಅಮ್ಮಿನ ಬಾವಿ, ನವಿಲೂರು, ಮುಗುದ, ಛಬ್ಬಿ(ಶೋಭನ ಪುರ),ಅದರಗುಂಚಿ, ಬುಡರಸಿಂಗಿ, ಸಿರಗುಪ್ಪ ಮಿಶ್ರೀಕೋಟಿ, ಕಲಘಟಗಿ, ಗದಗ, ತಡಕೋಡು, ಕೊಟಬಾಗಿ, ಲೋಕೂರ, ಹುಬ್ಬಳ್ಳಿ, ವರೂರು, ಹಾವೇರಿ, ಧಾರವಾಡ, ಲಕ್ಕುಂಡಿ, ಕಳಸಾಪುರ, ಡಂಬಳ, ನರಗುಂದ, ಕೊಣ್ಣೂರು, ಉಪ್ಪಿನ ಬೆಟಗೇರಿ, ಕುನ್ನೂರು, ದುಂಡಸಿ, ಶೀಲವಂತ ಸೋಮಪುರ, ಹೊಸೂರು, ಕರಿಗುದರಿ, ಕೋಳೂರು, ಅರಟಾಳ, ಲಕ್ಷ್ಮೇಶ್ವರ, ಹರ್ಲಾಪುರ, ಬನ್ನಿಕೊಪ್ಪ, ನಿಟಗಿನ ಕೊಪ್ಪ, ಬಾಳಂಬೀಡು, ಗುತ್ತಲ, ಪಡೇಸೂರು, ಬಾನಗಿತ್ತಿ ಗುಡಿಹಾಳ, ತಂಬೂರ, ಕೋಟ ಮಚಗಿ, ನರೇಗಲ್, ಅಣ್ಣಿಗೇರಿ, ಸೊರಟೂರು, ಚಿಂಚಲಿ, ಹೊಂಬಳ, ಮುಳಗುಂದ, ಸಂಗೂರು, ಮುತ್ತಗಿ, ಆಡೂರು, ಕಮಡೊಳ್ಳಿ, ಭುಳ್ಳಪ್ಪನ ಕೊಪ್ಪದ ಬಸದಿಗಳಿವೆ. ಇದರಲ್ಲಿ ಬರುವ ವಿವರಗಳು ಎಲ್ಲಿಯೋ ಕೂತು ಬರೆದ ನೆಳಲು ಪಹಣಿಗಳಲ್ಲ. ಅಲ್ಲಿ ಹೋಗಿಕಂಡು , ಕೇಳಿ ಸಾಹಿತ್ಯಿಕ ಮತ್ತು ಶಾಸನಾಧಾರಗಳನ್ನು ಲಕ್ಷಿಸಿ ಬರೆದ ಬರೆಹಗಳು ಅವು. ಆ ಕಾರಣ ವಾಗಿ ಅಣ್ಣಿಗೇರಿಯನ್ನು ಕುರಿತು ಬರೆಯು ವಾಗ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯವೆನ್ನುವ ಪಂಪಭಾರತ ಬರೆದ ಪಂಪನ ವಂಶಜರಾದ ಅಬ್ಬಣಾಬ್ಬೆ ಮತ್ತು ಭೀಮಪಯ್ಯರ ವಿವರಗಳು ಮತ್ತು ಅವನ ತಮ್ಮ ಗಂಗಾಧರಂ ಶಾಸನದ ಕರ್ತೃಜಿನವಲ್ಲಭನ ವಿವರಗಳು ಬಂದಿವೆ. ಮುಳಗುಂದವನ್ನು ಕುರಿತ ಬರೆಯು ವಾಗ ಧರ್ಮಾಮೃತದ ಕರ್ತೃ ನಯಸೇನನ ವಿವರಗಳು ಮತ್ತು ನರಗುಂದ ವನ್ನು ಪ್ರಸ್ತಾಪಿಸುವಾಗ ಜಾತಕತಿಲಕ ಮತ್ತು ಸಂಸ್ಕೃತ ಚಂದ್ರಪ್ರಭ ಚರಿತ್ರೆ ಬರೆದ ಶ್ರೀ ಧರಾಚಾರ್ಯರ ವಿವರಗಳು ಮಿಳಿತವಾಗಿರು ವುದನ್ನು ನೋಡಬಹುದು.

ಜಿನಮನದ ಶಿರೋರತ್ನಪ್ರಾಯವಾದ ಪ್ರಬಂಧ ವಿದೇಶಗಳಲ್ಲಿ ಜೈನಧರ್ಮ. ಅತ್ಯಮೂಲ್ಯವಾದ ಈ ಪ್ರಬಂಧದಲ್ಲಿ ಪ್ರಾಚೀನ ಕಾಲದಿಂದಲೂ ವಿದೇಶಗಳಲ್ಲಿ ಪ್ರಭಾವ ಬೀರಿದ್ದ ಜೈನಧರ್ಮದ ನೆಲೆಗಳನ್ನು ಗುರುತಿಸಿದ್ದಾರೆ. ರಷ್ಯಾದೇಶದ ಲೆನಿನ್‌ಗ್ರಾಡ್, ಮತ್ತು ತಾಷ್ಕೆಂಟ್ ಪ್ರದೇಶಗಳಲ್ಲಿ ಪ್ರಾಚೀನ ಜೈನಧರ್ಮದ ನೆಲೆಗಳನ್ನು ಗುರುತಿಸಲಾಗಿದೆ.

ರಷ್ಯಾ ದೇಶದ ಬುಡಕಟ್ಟು ಜನಾಂಗ ಅಹಿಂಸಾ ಜೀವನ ಮತ್ತು ತ್ಯಾಗ ಜೀವನಗಳನ್ನು ನಡೆಸುತ್ತಿದ್ದುದು ಗಮನಾರ್ಹ ಸಂಗತಿ. ಅವರು ನೇಗಿಲಿಗೆ ಎತ್ತುಗಳನ್ನು ಕಟ್ಟಿ ಉಳುಮೆ ಮಾಡದೆ, ತಾವೇ ನೇಗಿಲಿಗೆ ಹೆಗಲು ಕೊಟ್ಟು ಉಳುಮೆ ಮಾಡುವ ಮಾಹಿತಿ ಮಹತ್ವದ್ದಾಗಿದೆ.

ಕ್ರಿ.ಶ. ೧೭೬೧ರ ಹೊತ್ತಿಗೆ ಜರ್ಮನರು ಜೈನಧರ್ಮದ ಅಧ್ಯಯನವನ್ನು ಆರಂಭಿಸಿದರು. ಅದರ ಮುಂದುವರಿಕೆಯಾಗಿ ಜರ್ಮನಿಯಲ್ಲಿ ಇಂದು ೧೭ ಜೈನ ಅಧ್ಯಯನ ಪೀಠಗಳಿವೆ.

ಕರ್ನಲ್ ಮೆಕೆನ್ಸಿ, ಕೀಲ್‌ಹಾರ್ನ್, ವಿಂಟರ್ ನಿಟ್ಜ್, ಹರ್ಮನ್ ಯಾಕೊಬಿ, ಇ.ವಿಂಡಿಷ್, ಜೇಮ್ಸ್ ಫರ್ಗುಸನ್, ಸ್ಮಿತ್‌ವಿನ್ಸೆಂಟ್, ಹೋಮೆರ್ ಮತ್ತು ಶ್ರೀಮತಿ ಸ್ಟೀವನ್‌ಸನ್ ಸಿಂಕ್ಲೇರ್ ಮೊದಲಾದ ಘನ ವಿದೇಶಿ ವಿದ್ವಾಂಸರು ಜೈನಧರ್ಮವನ್ನು ಕುರಿತು ಕೃತಿಗಳನ್ನು ರಚಿಸಿದ್ದಾರೆ. ವಿದೇಶಗಳ ವಿಶ್ವವಿದ್ಯಾನಿಲಯಗಳಲ್ಲಿ ಇಂದಿಗೂ ಜೈನ ಧರ್ಮದ ಅಧ್ಯಯನ ನಡೆದು ಬರುತ್ತಿದೆ.

ಜೈನಶಿಲ್ಪ, ವಾಸ್ತುಶಿಲ್ಪಮತ್ತು ಚಿತ್ರಕಲೆಗಳ ಸಂಗ್ರಹಗಳು ಸ್ವಿಟ್ಜರ್‌ಲೆಂಡ್, ಇಂಗ್ಲೆಂಡ್, ಪೂರ್ವಜರ್ಮನಿ, ಅಮೆರಿಕ, ಡೆನ್ಮಾರ್ಕ್‌ಗಳಲ್ಲಿವೆ. ಹೊರದೇಶಗಳಲ್ಲಿ ದಿಗಂಬರ, ಶ್ವೇತಾಂಬರ, ಸ್ಥಾನಿಕ ವಾಸಿ, ತೇರಾಪಂಥಿ, ಓಸ್ವಾಲ್ ಮೊದಲಾದ ಜೈನಪಂಗಡಗಳ ಪೂಜಾಮಂದಿರಗಳಿದ್ದು ನಿತ್ಯಪೂಜೆ ಮತ್ತು ಧರ್ಮಪ್ರಭಾವನೆಗಳನ್ನು ಮುಂದುವರಿಸಿಕೊಂಡು ಹೋಗುತ್ತಿವೆ.

ಅಂತಾರಾಷ್ಟ್ರೀಯ ಜೈನ ಸಮ್ಮೇಳನಗಳು ನಡೆದಿವೆ. ಅವುಗಳಲ್ಲಿ ಶ್ರವಣಬೆಳಗೊಳದ ಕರ್ಮಯೋಗಿ ಶ್ರೀ ಚಾರುಕೀರ್ತಿಭಟ್ಟಾರಕರು, ಮೂಡಬಿದರೆಯ ಜ್ಞಾನಯೋಗಿ ಶ್ರೀಚಾರುಕೀರ್ತಿ ಭಟ್ಟಾರಕರು, ಕೊಲ್ಹಾಪುರದ ಶ್ರೀ ಲಕ್ಷ್ಮೀಸೇನ ಭಟ್ಟಾರಕರು, ಧರ್ಮಸ್ಥಳದ ವೀರೇಂದ್ರಹೆಗಡೆಯವರು ಶ್ರವಣಬೆಳಗೊಳದ ಧರ್ಮಾಧಿಕಾರಿಗಳು ಶ್ರೀಸಿ.ಬಿ.ಎಂ. ಚಂದ್ರಯ್ಯನವರು, ಡಾ.ಹಂಪ. ನಾಗರಾಜಯ್ಯನವರು ಪ್ರೋತ್ಸಾಹಿಸಿದ್ದಾರೆ. ಆಯಾಕಾಲಕ್ಕೆ ಅನುಗುಣವಾಗಿ ಧರ್ಮ ಪ್ರಭಾವನೆ ಮಾಡಿದ್ದಾರೆ. ಅದರ ಪರಿಣಾಮ ಎಷ್ಟಾಗಿದೆಯೆಂದರೆ ಶ್ರೀ ಸಿ.ಬಿ.ಎಂ. ಚಂದ್ರಯ್ಯನವರಿಗೆ ಹೊನಲೂಲು ಹವಾಯ್ ನಗರದಿಂದ ೨೫.೭.೧೯೭೨ ರಂದು ಶ್ರೀಮತಿ ಲಿಯೋನಾ ಸ್ಮಿತ್ ಕ್ರೆಮ್ಸ‌ರ್ ಅವರು ಬರೆದ ಪತ್ರದಲ್ಲಿ ''ತಾನು ಜೈನ ಧರ್ಮದ ತತ್ವಗಳನ್ನು ನಿಷ್ಠೆಯಿಂದ ಪಾಲಿಸುತ್ತಿರುವುದಾಗಿಯೂ ಮತ್ತು ವಾರಕ್ಕೆ ಒಂದು ದಿನ ನೀರನ್ನು ಹೊರತಾಗಿ ಮತ್ತೇನನ್ನೂ ಸೇವಿಸದೆ ಉಪವಾಸ ವ್ರತವನ್ನು ಕೈಗೊಳ್ಳುತ್ತಿರುವುದಾಗಿಯೂ''(೧೦೭) ತಿಳಿಸಿದ್ದಾರೆ. ಇಂದಿಗೂ ಜೈನಧರ್ಮ ವಿದೇಶಗಳಲ್ಲಿ ಪ್ರಸ್ತುತವಾಗಿರುವುದನ್ನು ಎತ್ತಿತೋರಿಸುತ್ತದೆ.

ಅತಿಶಯದ ಮಹನೀಯ ಶ್ರೀಸಿ.ಬಿ.ಎಂ. ಚಂದ್ರಯ್ಯವನರು ಮತ್ತು ಅಸೀಮಧರ್ಮ ದೀಪಕ ಶ್ರೀಮದನ ಕೇಸರಿಯವರ ಬಗೆಗಿನ ವ್ಯಕ್ತಿ ಚಿತ್ರ, ಆ ಮಹನೀಯರ ಜೈನಧರ್ಮದ ಪ್ರವರ್ಧನೆಗೆ ಸಮಾಜದ ಉದ್ಧಾರಕ್ಕೆ ಸಲ್ಲಿಸಿದ ಸೇವೆಯನ್ನು ಪ್ರಸ್ತುತಪಡಿಸುತ್ತದೆ. ಡಾ.ಹೆಚ್.ಎ.ಪಾರ್ಶ್ವನಾಥ್ ಅವರು ಈ ಮಹನೀಯರಿಂದ ಪಡೆದ ಪ್ರೇರಣೆಯ ವಿವರಗಳೂ ಇಲ್ಲಿವೆ.

ಕಿರೀಟ ಅಷ್ಟದಳಾಕಾರದ ೧೪೦ ಪುಟಗಳ ಈ ಜಿನಮನ ಕೃತಿಯಲ್ಲಿ ಅಡಕವಾಗಿರುವ ಸಂಗತಿಗಳು, ಅನಾವರಣಗೊಂಡಿರುವ ಮಾಹಿತಿಗಳು ಅದ್ಭುತವಾಗಿವೆ. ಇದರ ಪ್ರಯೋಜನ ಪಡೆದುಕೊಳ್ಳುವ ಕರ್ತವ್ಯಭಾರ ಸಹೃದಯರ ಮೇಲಿದೆ ಹಾಗಾದಾಗ ಡಾ.ಹೆಚ್.ಎ. ಪಾರ್ಶ್ವನಾಥ್ ಅವರ ಶ್ರಮ ಸಾರ್ಥಕವಾಗುತ್ತದೆ. ಅವರಿಗೆ ಶುಭಾಶಂಸನೆಗಳು.

ಜಿ.ಜಿ.ಮಂಜುನಾಥನ್
'ಗಂಧಕುಟಿ',೪ನೇ ಕ್ರಾಸ್,೧೨ನೇ
ಮೇನ್ ಕುವೆಂಪುನಗರ, ಮೈಸೂರು

ಹಿಂದಿಮೂಲ: ಮೈಥಿಲೀಶರಣಗುಪ್ತ; ಅನುವಾದಕಿ: ಶಶಿಕಲಾ ಸುಬ್ಬಣ್ಣ, ಪ್ರಕಾಶಕರು: ಸಂವಹನ ೧೨/೧ಎ, ಈವನಿಂಗ್ ಬಜಾರ್‌ಹಿಂಭಾಗ, ಶಿವರಾಂಪೇಟೆ, ಮೈಸೂರು-೧, ಬೆಲೆ: ರೂ. ೬೦

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹುಡುಕುವ ಕಾರ್ಯ ಸತತವಾಗಿ ಸಾಗುತ್ತಲೇ ಇದೆ. ಈ ಹುಡುಕುವಿಕೆಯಲ್ಲಿ ಎಲೆಮರೆಯಕಾಯಿಯಂತಹ ಎಷ್ಟೋ ಚೇತನಗಳು ಗೋಚರವಾಗಿವೆ. ಅಂಥ ಚೇತನಗಳ ಸಾಲಿನಲ್ಲಿ ''ಯಶೋಧರಾ'' ಪ್ರಮುಖಳು.

ಮೈಥಿಲೀಶರಣಗುಪ್ತರ, ಹಿಂದಿಯ ಯಶೋಧರಾ ಕಾವ್ಯವನ್ನು ಶ್ರೀಮತಿ ಶಶಿಕಲಾ ಸುಬ್ಬಣ್ಣನವರು ಯಶಸ್ವಿಯಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಮೈಥಿಲೀಶರಣಗುಪ್ತರ ಕೈಯಲ್ಲಿ ಸತ್ಕಾರ ಪಡೆದ ಯಶೋಧರಾ, ಶಶಿಕಲಾ ಸುಬ್ಬಣ್ಣನವರ ಕೈಯಲ್ಲಿ ಸಾಕ್ಷಾತ್ಕಾರ ಪಡೆದುಕೊಂಡಿದೆ. ಕಾವ್ಯವನ್ನು, ಕಾವ್ಯಾಂಶಕ್ಕೆ ದಕ್ಕೆಯಾಗದ ರೀತಿಯಲ್ಲಿ ಕಾವ್ಯದ ರೂಪದಲ್ಲಿಯೇ ತಂದುಕೊಡುವಲ್ಲಿನ ಅನುವಾದಕಿಯ ಪರಿಶ್ರಮ ಸುತ್ತ್ಯರ್ಹವಾದುದು.

ಒಟ್ಟು ಹದಿನೆಂಟು ವಿಭಾಗಕ್ರಮಗಳಲ್ಲಿ ಸಿದ್ಧಾರ್ಥ ಯಶೋಧರೆ-ರಾಹುಲ ಹಾಗೂ ಪರಿವಾರದ ಚಿತ್ರಣ ಧಾರೆಧಾರೆಯಾಗಿ ಹರಿದಿದೆ. ಸಿದ್ಧಾರ್ಥ ವೈರಾಗ್ಯಹೊಂದಿ, ಸಂಸಾರವನ್ನು ತ್ಯಜಿಸಿ ಪ್ರಿಯಪತ್ನಿ ಯಶೋಧರೆ, ಕರುಳುಬಳ್ಳಿ ಕುಡಿ ರಾಹುಲ, ವೈಭೋಗದ ರಾಜ್ಯ, ಸರ್ವಸ್ವವನ್ನೂ ಅನಾಥವಾಗಿಸಿ ತಪಸ್ಸಿಗೆ ತೆರಳಿದ ನಂತರ, ಅರಮನೆಯಲ್ಲಿ ನೋವಿನ ಖನಿಯಾಗಿ ಉಳಿದ ಯಶೋಧರೆಯೇ ಈ ಕಾವ್ಯದ ಕಥಾವಸ್ತು.

ಒಂದೆಡೆ ಪತಿಯಿಂದ ದೂರವಾದ ವಿರಹಮಯ ಯಾತನೆ, ಮತ್ತೊಂದೆಡೆ ಪತಿಯೇ ಹೊರಿಸಿಹೋಗಿರುವ ಸುತನ ಜವಾಬ್ದಾರಿ. ಇವುಗಳ ನಡುವೆ ಪತಿಯ ತಪಸ್ಸಿನ ಶ್ರೇಯಸ್ಸಿಗಾಗಿ ವ್ರತ-ತಪಗಳು. ಒಂದೊಂದು ಸನ್ನಿವೇಶವೂ ಅನುಭವದ ಅಭಿವ್ಯಕ್ತಿಯಂತೆ ಮೈದಾಳಿವೆ. ಲೇಖಕರು ಯಶೋಧರಳ ಸ್ಥಾನದಲ್ಲಿ ನಿಂತು, ಯಶಸ್ವಿಯಾಗಿ ಭಾವನೆಗಳ ಭಾವವನ್ನು ಅಭಿವ್ಯಕ್ತಿಸಿದ್ದಾರೆ. ಬುದ್ಧನ ವೈರಾಗ್ಯ ಚಿತ್ರಣದಲ್ಲಿ ಬಂದಿರುವ ಪದ್ಯವಾದ

ಮರಣಿಸಲೆಂದೇ ಜಗವು ಬದುಕಿದೆ!
ಸಂಭ್ರಮದಿ ಈ ರಂಧ್ರಯುಕ್ತ ಶರೀರ
ತುಂಬಿಯೂ ಒಳಗೆ ಕೊರೆಯಾಗಿದೆ- (ಪು.೪)

ಇಲ್ಲಿ ಬಂದಿರುವ ರಂಧ್ರ, ಕೊರೆ ಹೀಗೆ ಮುಂತಾದ ಪದಗಳು, ಹಣ್ಣು-ತರಕಾರಿಗಳನ್ನು ರೆಫ್ರೀಜರೇಟರ್ ಕೆಡದಂತೆ ಕಾಪಾಡುವ ತೆರದಲ್ಲಿ, ಕಾವ್ಯದ ಕಾವ್ಯತ್ವವನ್ನು ಉಳಿಸಿಕೊಳ್ಳುವಲ್ಲಿ ತೇರ್ಗಡೆಯಾಗಿವೆ. ಕಾವ್ಯವನ್ನು ಗದ್ಯದಲ್ಲಿ ಅನುವಾದಿಸುವುದು ಸರಳ. ಆದರೆ ಕಾವ್ಯಭಾಷೆಯಲ್ಲಿಯೇ ತರುವುದು ಭಗೀರಥ ಗಂಗೆ ತಂದಷ್ಟೇ ತ್ರಾಸದಾಯಕವಾದುದು. ಪ್ರಾಸವನ್ನು ಕೂಡ ಮೂಲದಂತೆಯೇ ತಂದಿರುವುದು ಅನುವಾದಕಿಯ ಶಬ್ದ ಶ್ರೀಮಂತಿಕೆಯ ದ್ಯೋತಕವಾಗಿದೆ. ಯಶೋಧರಾಳಂಥ ಸಾಧ್ವೀಮಣಿಯನ್ನು ಅನುವಾದಿಸಿ ಸಹೃದಯರ ಹೃದಯ ಸಿಂಹಾಸನದಲ್ಲಿ ಪ್ರತಿಷ್ಠಾಪಿಸಿದ ಕೀರ್ತಿಗೆ ಭಾಜನರಾದವರು ಶ್ರೀಮತಿ ಶಶಿಕಲಾ ಸುಬ್ಬಣ್ಣನವರು.

ನಾಟಕಕಾರ ಮೈಥಿಲೀಶರಣಗುಪ್ತ ಈ ಕೃತಿಯಲ್ಲಿ ಓದುಗರ ಹಲವಾರು ಪ್ರಶ್ನೆಗಳನ್ನು ರಾಹುಲ- ಯಶೋಧರೆಯಿಂದ ಎತ್ತಿದ್ದಾರೆ.

ಸಿದ್ಧಿಗಾಗಿ ಹೋದರೆನ್ನ ಸ್ವಾಮಿ, ಇದು ಗೌರವದ ಸಂಗತಿ,
ಕದ್ದು ಕದ್ದು ಹೋದರೆನ್ನ ಸ್ವಾಮಿ, ಇದೇ ದುಃಖ ಎನಗತಿ (ಪು-೧೫)
ಕಳಿಸುತ್ತಿದ್ದೆ ಅವರ ಸಿಂಗರಿಸಿ
ತಾನೇ ಹೋದರೆನ್ನ ಅವಮಾನಿಸಿ

ಯುದ್ಧಕ್ಕೇ ಸಾವು-ನೋವು ಶಂಕಿಸದೆ ಶುಭಹಾರೈಸಿ ಕಳುಹಿಸಲು ಸಿದ್ಧವಾಗಿದ್ದಂಥ ಸತಿಗೆ, ಹೇಳದೆ ಕೇಳದೆ ಹೋಗಿದ್ದು ಎಲ್ಲರಿಗೂ ಬರುವ ಪ್ರಶ್ನೆ. ಅವನ ಈ ವರ್ತನೆ ಯಶೋಧರೆಗೆ ಮಾಡಿದ ಅವಮಾನವಾಗಿದೆ. ಇಲ್ಲಿ ಅವಳ ಸೂಕ್ಷ್ಮ ಭಾವನೆ ಬಹಳ ನವುರಾಗಿ ವ್ಯಕ್ತಗೊಂಡಿದೆ.

ಗೌತಮಿ- ಯಶೋಧರಾ ಇವರೀರ್ವರ

ಸಂಭಾಷಣೆಯು ತುಂಬಾ ಅರ್ಥವತ್ತಾಗಿದೆ. ಗೌತಮಿ ಪ್ರಶ್ನಿಸುವಂತೆ,

ಗೌತಮಿ: ನಿಷ್ಕರುಣಿ ಪುರುಷರ ಕೈಹಿಡಿದ, ನಮ್ಮಂಥ ಅಬಲೆಯರ ಹಣೆಬರಹ ಅಳುವುದೇ ತಾನೇ.

ಯಶೋಧರಾ: ಅರೆ, ನೀನು ಅವರನೆಂತು ನಿರ್ದಯಿ ಎನ್ನುವೆ. ಅವರಂತೂ ಕೀಟ, ಪತಂಗದ ದುಃಖವನ್ನೂ ನೋಡಲಾರರು.

ಗೌತಮಿ : ಅದಕೆಂದೇ ನಮಗೆಲ್ಲಾ ಇಷ್ಟೊಂದು ದುಃಖಕೊಟ್ಟು ಹೋಗಿರುವರೇ?

ಯಶೋಧರಾ : ಇಲ್ಲ, ಅವರು ತಮ್ಮ ದುಃಖದಲ್ಲಿ ನಮ್ಮನ್ನೆಲ್ಲಾ ಸಹಭಾಗಿಗಳನ್ನಾಗಿ ಮಾಡಿ, ನಿಜವಾದ ಆತ್ಮೀಯತೆಯನ್ನು ಮೆರೆದಿರುವುರು. ನಮ್ಮೆಲ್ಲರ ನಿಜವಾದ ಸುಖವನ್ನರಸಲೆಂದೇ ಹೋಗಿರುವರವರು

ಇಲ್ಲಿ ಯಶೋಧರಾ ಒಂದೆಡೆ ಅವಮಾನವಾದದಕ್ಕೆ ನಿಂದಿಸಿದರೂ ಕೂಡ ಎಲ್ಲಿಯೂ ಗೌತಮನನ್ನು (ಸಿದ್ಧಾರ್ಥ) ಬಿಟ್ಟುಕೊಡುವುದಿಲ್ಲ. ಇದೇ ನಮ್ಮ ಭಾರತೀಯನಾರಿಯ ಹಿರಿಯಗುಣ. ಎಂತಹ ಕೆಟ್ಟಗಂಡನನ್ನೂ ಸಾಕ್ಷಾತ್ ದೇವರೆಂದು ಪೂಜಿಸುವುದು. ಆದ್ದರಿಂದಲೇ ಅವಳಿನ್ನೂ ಅಬಲೆಯಾಗಿರುವುದು.

ರಾಹುಲ ತಂದೆಯನ್ನು ಪ್ರಶ್ನಿಸಲು ಹೊರಡಲನುವಾಗುತ್ತಾನೆ. ಆ ಸಂದರ್ಭದಲ್ಲಿ ತಾಯಿಗೆ ಹೇಳುತ್ತಾನೆ.

''ಅಮ್ಮಾ, ನೀ ಕಂಥಕನ ಸಿದ್ಧಗೊಳಿಸು ಸಾಕು, ಈಗಲೇ ಅದನೇರಿ ಧಾವಿಸುವೆನು, ಮುಕ್ತಿ ದೊಡ್ಡವಳೇ, ಇಲ್ಲಾ ನನ್ನಮ್ಮನೇ, ಎಂದು ತಂದೆಯನು ಕೇಳುವೆನು''(ಪು-೯೯) ಎಂದು.

''ಮನೆಗೆದ್ದು ಮಾರು ಗೆಲ್ಲು'' ಎಂಬ ಗಾದೆ ಈ ಸಂದರ್ಭಕ್ಕೆ ಅತ್ಯಂತ ಉಚಿತವಾಗಿ ಸಲ್ಲುತ್ತದೆ. ಗಂಡನನ್ನೆ ನಂಬಿ ಬಂದಿರುವ ಹೆಂಡತಿ, ದೇಹ ಹಂಚಿಕೊಂಡು ಹುಟ್ಟಿದ ಮಗುವನ್ನು ಗೆಲ್ಲದವನು, ಮುಕ್ತಿ ಗೆಲ್ಲಲು ಹೋಗಿರುವುದು, ಎಂಥವರಿಗಾದರೂ ಹುಟ್ಟುವ ಪ್ರಶ್ನೆ. ಇಂಥ ಪ್ರಶ್ನೆಗಳನ್ನು ಇಲ್ಲಿ ತಂದಿರುವುದು ನಾಟಕಕಾರರ ವಿಮರ್ಶನಾ ಪ್ರಜ್ಞೆಗೆ ಸಾಕ್ಷಿಯಾಗಿದೆ.

ಯಶೋಧರೆಯು ನೋವಿನಲ್ಲಿ, ವೇದನೆಯಲ್ಲಿ ಹೇಳುವ ಮಾತುಗಳಾದ ''ಮಲಗಿಕೊಂಡಿದ್ದ ನಾವು - ಕಳೆದುಕೊಂಡೇ ಎದ್ದೆವು'' (ಪು-೪೦) ಎಂಬ. ಈ ವಾಕ್ಯವು ಇಡೀ ನಾಟಕದ ಧ್ವನಿಯಾಗಿದೆ. ಕತ್ತಲೆಯಲ್ಲಿ ಕಳೆದುಕೊಂಡ ಬಾಳಿನ ಬೆಳಕನ್ನು ಅರಸಿ, ರೋದಿಸುವ ಯಶೋಧರೆಯ ದುಃಖದ ಪರಮಾವಧಿಯನ್ನು ಈ ವಾಕ್ಯ ಧ್ವನಿಸುತ್ತದೆ.

ಇಷ್ಟೆಲ್ಲಾ ನೊಂದ ಬೆಂದ ಗೋಪೆ, ಯಶೋಧರೆ ಸಿದ್ಧಿಪಡೆದು ಬಂದ ಬುದ್ಧದೇವ ಯಶೋಧರೆಯನ್ನು ಕುರಿತು ಹೇಳುವ

''ನನ್ನ ಬಳಿ ನಿನಗೆಣೆಯಾದ
ಅನ್ಯ ಸುಕುಮಾರಿ ಯಾರು?'' (ಪು-೧೨೬)

ಎಂಬ ಒಂದೇ ಮಾತಿಗೆ ಕರಗಿ ನೀರಾಗಿ ಅವನ ಪದತಲದಲ್ಲಿ ನಿಂತುಬಿಟ್ಟಿದ್ದಾಳೆ. ಅವಳೆಲ್ಲಾ ನೋವು ನಿರಾಶೆಗಳು ಮಾಯವಾಗಿ ಕೃತಕೃತ್ಯಳಾದ ಭಾವ ಉಕ್ಕಿಹರಿದಿದೆ.

ಒಟ್ಟಾರೆಯಾಗಿ ಯಶೋಧರಾ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸೇರಿದ ವಿಶಿಷ್ಟ ಕೃತಿ. ಇಂಥ ಒಂದು ಅತ್ಯಮೂಲ್ಯ ಗ್ರಂಥವನ್ನು ಕನ್ನಡಕ್ಕೆ ತಂದದ್ದು ಶಶಿಕಲಾರವರ ಆಯ್ಕೆಯ ನೈಪುಣ್ಯತೆಯನ್ನು ತೋರಿಸುತ್ತದೆ. ಆಯ್ಕೆ ಮಾಡಿದ ವಸ್ತುವನ್ನು ಎಲ್ಲೂ ಮುಗ್ಗರಿಸದಂತೆ, ಐಬಾಗದಂತೆ ಯಥೋಚಿತವಾಗಿ ಅನುವಾದಿಸಿರುವ ಪರಿ ಇನ್ನಷ್ಟು ಕೃತಿಗಳನ್ನು ಅವರಿಂದ ಅಪೇಕ್ಷಿಸುವಂತೆ ಮಾಡಿದೆ. ಓದುಗರ ಈ ಅಪೇಕ್ಷೆ ಈಡೇರುತ್ತದೆಂದು ಆಶಿಸೋಣ.

ಡಾ. ಎನ್. ಕೆ. ಲೋಲಾಕ್ಷಿ
ಮೈಸೂರು

ಕಾರ್ಯಕಾರಿ ಸಮಿತಿ ಸದಸ್ಯರುಗಳು :

ಸರ್ವಶ್ರೀಗಳಾದ :

ಹೆಚ್. ಭಾಸ್ಕರ್, ಅಧ್ಯಕ್ಷರು ಮತ್ತು ಮೈಸೂರು ವಿಭಾಗಾಧಿಕಾರಿಗಳು

ವೈ. ಎನ್. ಶಂಕರೇಗೌಡ, ಖಜಾಂಚಿ

ಎಸ್. ಮಾದೇಗೌಡ

ವೈ. ಎಂ. ಚಂದ್ರು

ಕೆ. ಎಂ. ಚನ್ನೇಗೌಡ

ಮಹದೇವಯ್ಯ

ಆರ್. ಜಯರಾಮ

ಎಚ್. ಎಸ್. ನಂಜಪ್ಪ

ಎಸ್. ಮಂಚಯ್ಯ

ಕೆ. ಜಿ. ಚನ್ನಕೇಶವ

ಶ್ರೀಮತಿ ಕಮಲ ಸಿ. ಹೆಗಡೆ

ನಿರ್ದೇಶಕರು, ಲೋಕ ಶಿಕ್ಷಣ ನಿರ್ದೇಶನಾಲಯ

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ

ಅಭಿವೃದ್ಧಿ ಕಮೀಷನರ್

ಶ್ರೀರಂಗರಾಜು, ಪ್ರಧಾನ ಕಾರ್ಯದರ್ಶಿ

ಮುದ್ರಣ ಮತ್ತು ಪ್ರಕಟಣೆ : ಕ. ರಾ. ವ. ಶಿ. ಸಮಿತಿ, ಮೈಸೂರು-೫೭೦ ೦೦೬
ದೂರವಾಣಿ ಸಂಖ್ಯೆ : ೫೧೧ ೮೭೫

ವಯಸ್ಕರ ಶಿಕ್ಷಣ ಸಮಿತಿಯ ಪ್ರಕಟಣೆಗಳು

ನೀವು ಓದಲೇಬೇಕಾದ ಪುಸ್ತಕಗಳು....

ಶರಣ ಚರಿತಾಮೃತ

ಸಣ್ಣ ಕತೆಗಳು ೧೩೮ :(ಸತ್ಯಕ್ಕೆ ಬೆಲೆ ಕೊಟ್ಟ ಗೆಳೆಯರು)

ನಾಗರಿಕತೆಯ ಇತಿಹಾಸ

ಸಂಪಾದಕೀಯ ಸಂಕಲನ

ಕಾರಂತ ದರ್ಶನ

ಸ್ವಾಮಿ ವಿವೇಕಾನಂದ

ನನ್ನೂರು

ನಳಚರಿತ್ರೆ ಸಂಗ್ರಹ

ಯುದ್ಧ ಮತ್ತು ಶಾಂತಿ : ಭಾಗ ೧, ೨, ಮತ್ತು ೩

ನಕ್ಷತ್ರ ವೀಕ್ಷಣೆ

ಕರ್ನಾಟಕ ಹವಾಸೂಚಿ

ಪ್ರಥಮ ಚಿಕಿತ್ಸೆ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು ತರಿಸಿ ಓದಿರಿ